

ಅಧ್ಯಕ್ಷ

ರ್ಯಾಂಗ್ಲರ ಶ್ರೀ ಡಿ. ಸಿ. ಪಾವಟೆ,

ವ್ಹಾಯಿಸ್ ಚಾನ್ಸಲರ್

ಕರ್ನಾಟಕ ಯುನಿವ್ಹರ್ಸಿಟಿ,

ಧಾರವಾಡ.



ಸ್ವಾಗತಾಧ್ಯಕ್ಷ

ಶ್ರೀಮಂತ ಎಂ. ಬಿ. ಕಾಡಾದಿ, M. P.

ವಜ್ರಮಹೋತ್ಸವ ಸಮಿತಿ,


ಸೊಲ್ಲಾಪೂರ.

ಪ್ರಧಾನ ಕಾರ್ಯದರ್ಶಿ,

ಶ್ರೀ ರಾಜಶೇಖರ ಮಡಕಿ.

ಸೊಲ್ಲಾಪೂರ.

266.4
266.4 / 9539
ಅರಿವೆ: ಗುರು
ಕ್ರಮಾಂಕ .........
ನಗರ
ಬೆಳಗಾವಿ-10



ಶಿವಾನುಭವದಲ್ಲಿ ಲೀನರಾದ ಮಹಾಶಿವಯೋಗಿಗಳವರು.



ಶಿವಯೋಗಿಗಳ
ಸೇವಾ ನಿರತರಾದ
**ಶಿದ್ದನಗೌಡರು ಪಾಟೀಲ**
**ದಿಂಡವಾರ.**




ಶಿವಯೋಗಿಗಳ
ಸದಾ ಸೇವಾ ತತ್ಪರರಾದ
**ಶಂಕರಶಾಸ್ತ್ರಿಗಳವರು ಹಿರೇಮಠ**
**ಮಸೂತಿ.**



ಶಿವಯೋಗಿಗಳ
ಸೇವಾ ನಿರತರಾದ
**ಅಪ್ಪನಗೌಡರು**
**ಮಸೂತಿ.**


ಕೆಳಗಿನ ಪುಟಗಳಲ್ಲಿಯ ಮಾನ್ಯಮಹಾಶಯರು

**ವಜ್ರಮಹೋತ್ಸವದ ಕಾರ್ಯಕಾರಿ ಮಂಡಳದ ಪದಾಧಿಕಾರಿಗಳು ವ ಸದಸ್ಯರು.**



ಶ್ರೀರಾಜೇಸಾಹೇಬ ಜಗದೇವರಾವ
ದೇಶಮುಖ. ಕಲ್ಲೂರ.


★



ಶ್ರೀ ಜಿ. ಬಿ. ಮೊಂಚ
M. A, B. T I. E. C.
ಪ್ರಿನ್ಸಿಪಾಲರು,
ಎಚ್.ಎಸ್. ಟ್ರೇ. ಕಾಲೇಜ, ಲಚ್ಯಾಣ



ಶ್ರೀ ವಿರುಪಾಕ್ಷಪ್ಪಣ್ಣಾ
ಭಾವಿ
ಸೋಲಾಪೂರ.



ಶ್ರೀ ಬಾಬುರಾವ ಚಾಕೋತೆ
ಸೋಲಾಪೂರ.


★




**ಕವಿ ಕುಮಾರ ಕೋಠಾವಳೆ**
ಸಹಸಂಪಾದಕ-ಸಮಾಚಾರ, ಸೋಲಾಪೂರ.



ಶ್ರೀ ಕಲ್ಲಪ್ಪಣ್ಣ ಹೊನರಾವ
ಸೋಲಾಪೂರ.




ಶ್ರೀ ಶಿವಶಂಕರೆಪ್ಪಾ ಅಪ್ಪಾ ಲಂಗರೆ
ಸೋಲಾಪೂರ.




ಶ್ರೀ ಶಂಕರರಾವ ಕೋತಲಿ
ಸೋಲಾಪೂರ.

★ ★ ★



ಶ್ರೀ ಶರಣಪ್ಪಗೌಡರು ಪಾಟೀಲ
ಬೂದಿಹಾಳ



ಶ್ರೀ ಶಿದರಾಮಪ್ಪಗೌಡರು ಪಾಟೀಲ
ಲಚ್ಯಾಣ.



ಶ್ರೀ ಶಿದರಾಮಪ್ಪಣ್ಣಾ
ಅಜನಾಳಕರ, ಸೋಲಾಪೂರ.



ಶ್ರೀ ಶಿದರಾಮಪ್ಪ ತಂಬಾಕೆ,
ಕಿರಾಣಿ ಮರ್ಚಂಟ, ಸೋಲಾಪೂರ.




ಶ್ರೀ ಮುಕ್ತಪ್ಪ ಶಿದ್ದಪ್ಪ ಮೆಂಗಾಣೆ,
ಸೋಲಾಪೂರ.



ಶ್ರೀ ಆರ್. ಕೆ. ದುಲಂಗೆ, ವಕೀಲಸಾಹೇಬ
ಸೋಲಾಪೂರ.



ಶ್ರೀ ಗುರಬಸಪ್ಪ ವಿರಭದ್ರಪ್ಪ
ಥಳಂಗೆ. ಸೋಲಾಪೂರ.



ಶ್ರೀ ಶಿವಪ್ಪಾ ಶಿದರಾಮಪ್ಪಾ ಸಾಬಳೆ,
ಸೋಲಾಪೂರ.



ಶ್ರೀ ಶ್ರೀಶೈಲಪ್ಪ ಲಬ್ಬಾ,
ಕಿರಾಣಿ ಮರ್ಚಂಟ,
ಸೋಲಾಪೂರ.



ಶ್ರೀ ಬಾಬುರಾವ ಕಾವಳೆ,
ಸೋಲಾಪೂರ.

★



ಡಾ॥ ಎಚ್. ಸಿದ್ಧನಾಥ,
ಸೋಲಾಪೂರ.



ಶ್ರೀ ಆಡವೆಪ್ಪ ಶಿವಶಂಕರೆಪ್ಪ ಲಿಂಗಶೆಟ್ಟಿ,
ಲೋಖಂಡಾಚೆ ವ್ಯಾಪಾರಿ, ಸೋಲಾಪೂರ.



ಶ್ರೀ ಬಂಡೆಪ್ಪಾ ಉಪ್ಪಿನ
ಸೋಲಾಪೂರ.



ಶ್ರೀ ಗುಂಡಪ್ಪ ದುಲಂಗೆ
ಸೋಲಾಪೂರ.



ಶ್ರೀ ನಾಗಪ್ಪಾ ಸದಲಾಪೂರಕರ,
ಇಲೆಕ್ಟ್ರಿಕ್ ಕಂಪನಿ, ಸೋಲಾಪೂರ.



ಶ್ರೀ ಭೀಮಾಶಂಕರ ಮುಜಗುಂಡ
ಸೋಲಾಪೂರ.




ಶ್ರೀ ಎಸ್. ಬಿ. ನೆಲ್ಲಗಿ.
ಸೋಲಾಪೂರ.



ಭೋಜಪ್ಪ ಶಿವಲಿಂಗಪ್ಪ ಮಹಿಂದರಗಿಕರ,
ಕಾಪಡಾಚೆ ವ್ಯಾಪಾರಿ, ಸೋಲಾಪೂರ.




ಎಚ್. ಎಸ್. ಭೂಸದ,
ಸೋಲಾಪೂರ.



ಶಿವಗುಂಡಪ್ಪ ಜಿಗಜಿನ್ನಿ,
ಸೋಲಾಪೂರ.




ಶ್ರೀ ಸಿ. ಎಚ್. ಅನಂತಪೂರ.
ವಿಜಾಪೂರ.



ಶ್ರೀ ಎ. ಡಿ. ಮಠ ಹಲಸಂಗಿ
ವಿಜಾಪೂರ.



ಶ್ರೀ ಎಚ್ ಎಸ್ ತಾಳೀಕೋಟಿ
ವಿಜಾಪೂರ.



ಶ್ರೀ ಎಚ್. ಎಂ. ತರನಳ್ಳಿ
ವಿಜಾಪೂರ.



ವಿಚಾರಮಗ್ನರಾಗಿ ಶ್ರೀ ಬಂಥನಾಳ ಶಿವಯೋಗಿಗಳವರು.



ಉಲ್ಲಾಸಭರಿತರಾಗಿ ಶ್ರೀ ಬಂಥನಾಳ ಶಿವಯೋಗಿಗಳವರು.




★ ಹಂಸಭಾವಿ ಅಖಿಲಭಾರತ ಶಿವಾನುಭವ ಸಮ್ಮೇಲನದ ಅಧ್ಯಕ್ಷಸ್ಥಾನಕ್ಕೆ ಸ್ವಾಗತಿಸಿದ ಉತ್ಸವ. ★

ಶ್ರೀ ಮ. ನಿ. ಪ್ರ. ಸ್ವ. ಮಹಾಲಿಂಗಸ್ವಾಮಿಗಳು ವಿರಕ್ತಮಠ
M·A· ನ್ಯಾಯವೇದಾಂತಾಚಾರ್ಯ, ದುಧನಿ.



ಮಹಾಸನ್ನಿಧಿ ಕಾರ್ಯದಲ್ಲಿ ಸದಾ ಸಹಕಾರಿಗಳು.

ಶ್ರೀ ಮ. ನಿ. ಪ್ರ. ಸ್ವ. ದಯಾನಂದಸ್ವಾಮಿಗಳು
ಯರನಾಳ, ಉಕ್ಕಲಿ
M·A· ಪ್ರೊಫೆಸರ ಕಾಮರ್ಸ ಕಾಲೇಜ, ವಿಜಾಪೂರ.



ಮಹಾ ಸನ್ನಿಧಿಕಾರ್ಯದಲ್ಲಿ ಸದಾ ಸಹಕಾರಿಗಳು.

ಶ್ರೀಮದ್ವನಲಿಂಗ ಚಕ್ರವರ್ತಿಗಳಾದ
**ಪಟ್ಟಾಧ್ಯಕ್ಷ ಶ್ರೀ ಶಾಂತವೀರಸ್ವಾಮಿಗಳು ಬಬಲೇಶ್ವರ.**




ಮಹಾ ಸನ್ನಿಧಿಯ ಕಾರ್ಯಗಳಲ್ಲಿ ಯಾವಾಗಲೂ ಸಹಕಾರಿಗಳು


ಶ್ರೀಮದ್ವನಲಿಂಗ ಚಕ್ರವರ್ತಿಗಳ
**ಶಿವಯೋಗೀಶ್ವರ ಪಟ್ಟಾಧ್ಯಕ್ಷರು ತಡವಲಗಾ. ಜಿ. ವಿಜಾಪುರ**




ಮಹಾ ಸನ್ನಿಧಿಯ ಕಾರ್ಯಗಳಲ್ಲಿ ಯಾವಾಗಲೂ ಸಹಕಾರಿಗಳು.




ಶಿವಯೋಗದಲ್ಲಿದ್ದ
ಶ್ರೀ ಮ. ನಿ. ಪ್ರ. ಸ್ವ. ಬಂಥನಾಳ ಮಹಾಶಿವಯೋಗಿಗಳವರು.



ಅಶ್ವಾರೂಢರಾಗಿ,
ಬಂಥನಾಳ ಮಹಾ ಶಿವಯೋಗಿಗಳವರು,




ದಿನಾಂಕ ೧೪-೯-೧೯೫೧ ಕ್ಕೆ ವಿಜಯಕಾಲೇಜ ವಿಜ್ಞಾನಮಂದಿರದ ಅಧಾರ ಶಿಲಾಸ್ಥಾಪನೆಯ ಕಾಲಕ್ಕೆ
ಆಗಮಿಸಿದ ಜಯಚಾಮರಾಜೇಂದ್ರ ಒಡೆಯರು ಮಹಾಸನ್ನಿಧಿಯೊಡನೆ.




ವಿಜಾಪುರದಲ್ಲಿ
ಮಹಾಸನ್ನಿಧಿಯ ದರ್ಶನಕ್ಕಾಗಿ ಜನರಲ್ ಕರಿಯಪ್ಪನವರು ಬಂದಾಗ್ಗೆ



೭೭೦ ಅಮರಗಣಾಧೀಶ್ವರರ ಮಂಟಪ ಪೂಜಾ ಮಹೋತ್ಸವದಲ್ಲಿ ಕುಳಿತ
ಮಹಾಸ್ವಾಮಿಗಳವರ ಸಮೂಹ.



ದಿನಾಂಕ ೧೭-೮-೧೯೫೧ಕ್ಕೆ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್
ಅಧ್ಯಕ್ಷರಾದ ಪುರುಷೋತ್ತಮದಾಸ ಟಂಡನ್ನರವರು
ಮಃಹಾಸನ್ನಿಧಿಯೊಡನೆ ವಿಜಯಕಾಲೇಜ ಕಟ್ಟಡದ ಶಂಕುಸ್ಥಾಪನೆ
ನೆರವೇರಿಸುವದು.




ಕೇದಾರ ಯಾತ್ರೆಗೆ ದಯಮಾಡಿಸಿದಾಗ ಋಷಿಕೇತದಲ್ಲಿ
ಶ್ರೀ ಶಿವಾನಂದ ಸರಸ್ವತಿಯರೊಡನೆ.

ಶ್ರೀ ಶ್ರೀ ೭೭೦ ಲಿಂಗ ಪ್ರತಿಷ್ಠಾಪನೆಯ ಮಂದಿರದ ವ್ಯವಸ್ಥೆಗಾಗಿ
೨೮ ಯಕರೆ ಜಮೀನು ದಾನವಾಗಿ ಕೊಟ್ಟ




ದಾನಶೂರ ವೀರಮಹಿಳೆ ಶಿವಶರಣೆ
**ಸಿದ್ದಮ್ಮನವರು ಗೌಡತಿ ಚಟ್ಟರಕಿ**



ಸತ್ ಶಿಷ್ಯರಾದ ಪೂಜ್ಯ ಬಸವಲಿಂಗ
ಗಿರಿಜಾಮಾತೆಯವರು ಕಮರಿಮಠ, ಹಿರೇರೂಗಿ.



ಪ್ರಯಾಗತಾಯಿಯವರು ಕನ್ನಾಳ
ಸೋಲಾಪೂರ



ಶ್ರೀಮತಿ ಪಾರ್ವತಿಬಾಯಿ ಮಲಕಪ್ಪನವರು
ಕೋರಿ, ವಿಜಾಪುರ

ಧಾರವಾಡ
೧೭-೫-೧೯೬೨

ಮಾನ್ಯರೆ,

ನಿಮ್ಮ ದಿ. ೧೧-೫-೬೨ರ ಕಾಗದ ತಲುಪಿದೆ. ಪೂಜ್ಯ ಶ್ರೀ ಬಂಥನಾಳ ಶಿವಯೋಗಿಗಳ ವಜ್ರ ಮಹೋತ್ಸವವು ಶ್ರೀ ಸಿದ್ಧರಾಮೇಶ್ವರನ ಪವಿತ್ರಸ್ಥಾನವಾದ ಸೊಲ್ಲಾಪೂರದಲ್ಲಿ ನಡೆಯಲಿರುವುದನ್ನು ತಿಳಿದು ಅತ್ಯಂತ ಸಂತೋಷವಾಯಿತು. ಈ ಮಹಾಕಾರ್ಯದ ಹೊಣೆಯನ್ನು ಹೊತ್ತು ನಡೆಸುತ್ತಿರುವ ಶ್ರೀಯುತ ಎಮ್. ಬಿ. ಕಾಡಾದಿಯವರನ್ನೂ ಹಾಗೂ ಅವರ ನೆರವಿಗರನ್ನೂ ನಾನು ಅಭಿನಂದಿಸುತ್ತೇನೆ.

ಅದೇಕಾಲಕ್ಕೆ ಶ್ರೀ ಶಿವಯೋಗಿಗಳ ಸನ್ನಿಧಾನದಲ್ಲಿ ಗ್ರಂಥಸಮರ್ಪಣೆಯ ಶುಭಕಾರ್ಯವೂ ನಡೆಯುತ್ತಿರುವದು ಸ್ತುತ್ಯವಾಗಿದೆ. ಸಮಾಜದ ಏಳ್ಗೆಗಾಗಿ, ತನ್ಮೂಲಕ ಮಾನವಜನಾಂಗದ ಉನ್ನತಿಗಾಗಿ ಮಹಾಸ್ವಾಮಿಗಳವರು ಮಾಡಿದ ಹಾಗೂ ಮಾಡುತ್ತಿರುವ ಕಾರ್ಯ ಅಮೋಘವಾಗಿದೆ. ಶಿಕ್ಷಣ ಪ್ರಸಾರದಿಂದಲೇ ಜನತೆಯ ಉದ್ಧಾರ ಎಂಬುದು ಅವರ ಮಂತ್ರವಾಗಿದೆ. ಅದಕ್ಕೆ ತಕ್ಕಂತೆ ಅವರು ವಿಜಾಪುರದ ವಿಜಯಕಾಲೇಜನ್ನೂ, ಇನ್ನಿತರ ಅನೇಕ ಶಿಕ್ಷಣಸಂಸ್ಥೆಗಳನ್ನೂ ಕಟ್ಟಿ ತೋರಿಸಿರುವದೇ ಸಾಕ್ಷಿಯಾಗಿದೆ. ಸಾಮಾನ್ಯ ಜನತೆಯಲ್ಲಿ ಧರ್ಮಜಾಗ್ರತಿಯನ್ನುಂಟುಮಾಡಲು ಅವರು ವಿವಿಧರೀತಿಯಿಂದ ಪ್ರಯತ್ನಿಸುತ್ತಿರುವದು ಪ್ರಶಂಶನೀಯವಾಗಿದೆ ವಿಜಾಪುರದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ನೆರವೇರಿದ ೭೭೦ ಅಮರಗಣಂಗಳ ಪೂಜೆ ಹಾಗೂ ಲಿಂಗಪ್ರತಿಷ್ಠಾಪನೆ–ಇದೇ ಮೊದಲಾದ ಇನ್ನೂ ಅನೇಕ ಸಂಗತಿಗಳು ಅವರ ಕಾರ್ಯಶಕ್ತಿಯ ಅದ್ಭುತದ್ಯೋತಕವಾಗಿವೆ.

ಉತ್ತರೋತ್ತರ ಕರ್ನಾಟಕದ ಜನತೆಯಲ್ಲಿ ಅವರ ಬಗ್ಗೆ ಇರುವ ಭಕ್ತಿ,ಗೌರವ, ಆದರಗಳಿಗೆ ತಕ್ಕಂತೆ ಈ ಸಮಾರಂಭಗಳು ಯಶಸ್ವಿಯಾಗಿ ನೆರವೇರಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಶ್ರೀಗಳವರ ಆಯುರಾರೋಗ್ಯ ಸಂವರ್ಧನೆಗೊಂಡು ಅವರಿಂದ ಇನ್ನೂ ಹೆಚ್ಚಿನ ಸಮಾಜಕಲ್ಯಾಣ ಕಾರ್ಯಗಳು ನಡೆಯುವಂತಾಗಲೆಂದು ನಾನು ಪ್ರಾರ್ಥಿಸುತ್ತೇನೆ. ಇಂತು

ಸಂಪಾದಕರು
ವಜ್ರಮಹೋತ್ಸವ ಗ್ರಂಥಪ್ರಕಾಶನ
ವಿಜಾಪುರ.

ತಮ್ಮ
ರಾ. ಚಿಂ. ಪಾವಟೆ.
ಉಪಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ.

**ಶ್ರೀ ಶಾಂತವೀರಮಹಾಸ್ವಾಮಿಗಳವರು**
**ಸುಕ್ಷೇತ್ರ ಹರಳೀಶ್ವರ ಆಶ್ರಮ**
**ಶೇಗುಣಶಿ.**

ಪೋಷ್ಟ:- ಮಮದಾಪೂರ
ಜಿಲ್ಹಾ:— ವಿಜಾಪೂರ
ತಾ. ೧೭-೫-೧೯೬೨.

ಶ್ರೀಮಾನ್ ಸದಾಶಿವ M. ತೆನಿಹಳ್ಳಿ- ಶ್ರೀ ಬಂಥನಾಳ ಶಿವಯೋಗಿಶ್ವರ, ಷಷ್ಠ್ಯಬ್ಧಿ ಗ್ರಂಥ ಪ್ರಕಾಶನ ಸಂಪಾದಕ ಇವರಿಗೆ—

ಮಂಗಲಾಶೀರ್ವಾದಗಳು.

ಮಹಾಶಯರೇ, ನಿಮ್ಮ ಪತ್ರ ಮುಟ್ಟಿ ಮನಸ್ಸಿಗೆ ಆನಂದವಾಯಿತು. ಈ ಜಾಗೃತ ೨೦ನೇ ಶತಮಾನದ ಸಮಾಜ ಜೀವನಕ್ಕೆ, ಧರ್ಮ ಜೀವನಕ್ಕೆ, ಹೊಂದಿಕೊಂಡು ಹೋಗುವ ವಿಚಾರ ಸರಣಿಯುಳ್ಳ ಮಾಹಾನುಭಾವರನ್ನು ಸೃಷ್ಟಿದೇವಿಯು ಸಕಾಲಕ್ಕೆ ಒದಗಿಸಿಕೊಟ್ಟಿದ್ದಾಳೆ. ಅವತರಿಸಿದ ಆ ಮಹಾನುಭಾವರಾದ ಪೂಜ್ಯ ಬಂಥನಾಳ ಶಿವಯೋಗಿಗಳ ಷಷ್ಠ್ಯಬ್ಧಿ ವಜ್ರಮಹೋತ್ಸವವು ಯಶಸ್ವಿಯಾಗಿ ದೇವಪ್ರೀಯವಾಗಿ, ಸಮಾಜಪ್ರೀಯವಾಗಿ ಜರುಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಪೂಜ್ಯ ಮಹಾಸ್ವಾಮಿಗಳವರಿಂದ ಈ ಷಷ್ಠ್ಯಬ್ಧಿಯಲ್ಲಿಯೇ ಶಾಲೆ, ಹಾಯಸ್ಕೂಲು, ಕಾಲೇಜುಗಳು, ಸರ್ವತೋಮುಖವಾಗಿ ಜನ್ಮವೆತ್ತಿದುವಲ್ಲದೇ ಮಹಾಸ್ವಾಮಿಗಳವರ ಪ್ರಭಾವದಿಂದ ಧರ್ಮವಿದೂರರಲ್ಲಿ ಧರ್ಮಬುದ್ಧಿಯೂ, ಸಡಿಲಾದ ಸಮಾಜದ ಅಂತಃಸ್ಥಿನಲ್ಲಿ ಭವ್ರವಾದ ಒಕ್ಕಟ್ಟೊ ಮೈದಾಳಿ ಸರ್ವತೋಮುಖವಾಗಿ ಬೆಳೆದುನಿಂತಿರುವ ಈ ಬಾಹ್ಯಾಭ್ಯಂತರ ಈ ಸಂಪತ್ತು ಮಹಾಸ್ವಾಮಿಗಳವರ ಪ್ರಭಾವಲಯದೊಳಗಿನದೆಂದು ನಾನು ಧಾರಳವಾಗಿ ಹೇಳುತ್ತೇನೆ.

ಇಂಥ ಮಹಾಸ್ವಾಮಿಗಳು ಪೂರ್ಣ ಶತಾಯುಷಿಗಳಾಗಿ ಬಾಳಲೆಂದು ನಾನು ಹಾರೈಸುವೆನಲ್ಲದೆ ಇಂಥ ಸಮಾಜದ ಮಹಾಕಾರ್ಯಗಳು ಅನಂತಮುಖವಾಗಿ ನಾಡಿನ ಮೂಲೆ ಮೂಲೆಗೂ ಹರಿದಾಡಲಿ ಅಂತಾ ನಾನು ಭಗವಂತನನ್ನು ಪ್ರಾರ್ಥಿಸುವೆನು. ಇಂತಿ ಆಶೀರ್ವಾದಗಳು.

—ಶಾಂತವೀರಸ್ವಾಮಿ.

## "ತ್ರತ್ತದೇವಾವಗಚ್ಛತ್ವಂ ಮಮತೇಜೋಽಂಶ ಸಂಭವಂ"

ಸಮಾಜದ ಅಥವಾ ದೇಶದ ಕಲ್ಯಾಣಕ್ಕಾಗಿ ಮತ್ತು ಧರ್ಮದ ಪ್ರಗತಿಗಾಗಿ ಬಹುಕಾಲದವರೆಗೆ ತಮ್ಮ ತಪಃಶಕ್ತಿಯನ್ನೂ ತ್ರಿಕರಣಗಳನ್ನು ಯಾರು ವಿನಿಯೋಗಿಸುವರೋ ಆ ಮಹಾನುಭಾವರಲ್ಲಿ ಪರಮಾತ್ಮನ ಅಂಶವಿದೆಯೆಂದು ಗೀತೆಯು ಹೇಳುವದು. ಅದರಂತೆ ಶ್ರೀ ಬಂಥನಾಳ ಶಿವಯೋಗಿಗಳವರು ಸಮಾಜದ ಅಥವಾ ನಾಡಿನ ಕಲ್ಯಾಣಕ್ಕಾಗಿ ತಮ್ಮ ಅಮೂಲ್ಯವಾದ ಆಯುಷ್ಯವನ್ನು ಸವಿಸುತ್ತಿರುವದು ಅವರ ಮನ್ನಣೆಗೆ ಕಾರಣವಾಗುವದು. ಶಿವಯೋಗಿಗಳವರು ದೇಶೋದ್ಧಾರಕ್ಕಾಗಿ ಅನೇಕ ಹಾಯಸ್ಕೂಲ ಕಾಲೇಜಗಳನ್ನು ಕಟ್ಟಿದರು. ಪುರಾಣ ಪ್ರವಚನಗಳಿಂದ ಸಮಾಜದಲ್ಲಿ ಅಪೂರ್ವ ಪ್ರಗತಿಯನ್ನುಂಟ.ಮಾಡಿದರು. ಇದು ಅಲ್ಲದೆ ಅಮರಗಣಂಗಳ ಪೂಜೆ ಮೊದಲಾದ ಅನೇಕ ಧಾರ್ಮಿಕ ಕಾರ್ಯಗಳನ್ನು ಮಾಡಿದರು. ಆ ಮಹಾ ಶಿವಯೋಗಿಗಳವರ ವಜ್ರಮಹೋತ್ಸವವನ್ನು ಸೊಲ್ಲಾಪೂರ ಮಹಾಜನಗಳು ಅತ್ಯಂತ ವಿಜೃಂಭಣೆಯಿಂದ ನೆರವೇರಿಸುವ ವಿಷಯವು ಸಮಾಜಕ್ಕೆ ಆನಂದವನ್ನುಂಟು ಮಾಡಿದೆ. ಇದರಿಂದ ಅವರ ಜನಸೇವಾಕಾರ್ಯವು ವ್ಯಕ್ತವಾಗುವದೆಂದು ನಿಶ್ಚಯವಾಗಿ ಹೇಳಬಹುದು.

ಸಮಾಜದಲ್ಲಿ ತಾಂಡವನೃತ್ಯವಾಡುವ ಅಜ್ಞಾನ, ಅನಾಚಾರಗಳನ್ನು ನಿರ್ಮೂಲವಾಗಿ ಮಾಡುವ ಕಾರ್ಯವು ಪೀಠಾಧಿಪತಿಗಳ ಪವಿತ್ರ ಕರ್ತವ್ಯವಾಗಿರುವದು. ಇದು ನಿರಂತರವಾಗಿ ನಡೆಯದಿದ್ದರೆ ಈ ಕಾಲದಲ್ಲಿ ಸಮಾಜದ ಧರ್ಮಪ್ರವೃತ್ತಿಯು ನಷ್ಟವಾಗುವದು. ಕಾರಣ ಧರ್ಮಾಧಿಕಾರಿಗಳು ಎಚ್ಚರಹೊಂದಲೇಬೇಕು.

ಈ ಹಿಂದೆ ಬಸವಾದಿಪ್ರಮಥರು ಮತ್ತು ಆಚಾರ್ಯರು ಅವತರಿಸಿ ಸಮಾಜದಲ್ಲಿ ಅಂಟಿರುವ ಕೊಳೆಯನ್ನು ತೊಳೆದು ಸಮಾಜೋದ್ಧಾರವನ್ನು ಮಾಡಿದರು. ನಂತರ ಪೂಜ್ಯ ಲಿಂ. ಹಾನಗಲ್ಲ ಮಹಾಸ್ವಾಮಿಗಳವರು ಅತ್ಯಂತ ಕೀಳಸ್ಥಿತಿಗೆ ಬಂದಿರುವ ಸಮಾಜವನ್ನುದ್ಧರಿಸಿದರು. ಹೀಗೆ ಉನ್ನತಿಯ ಪರಂಪರೆಯು ಬಂದಿರುವದು.

ಈಗ ಶ್ರೀ ಮ. ಪ್ರ. ಬಂಥನಾಳ ಶಿವಯೋಗಿಗಳವರು ಮೊದಲಾದ ಮಹಾಸ್ವಾಮಿಗಳವರು ಸಮಾಜೋದ್ಧಾರದ ಪವಿತ್ರ ಕಾರ್ಯವನ್ನು ಕೈಕೊಂಡಿರುವದು ಸಂತೋಷ್ಷದಾಯಕವು.

ಪೂಜ್ಯ ಶಿವಯೋಗಿಗಳ ತೂಕದ ಬೆಳ್ಳಿಯನ್ನು ಅವರಿಗೆ ಅರ್ಪಿಸಿ ಸೊಲ್ಲಾಪೂರ ಮಹಾಜನಗಳು ವಜ್ರಮಹೋತ್ಸವವನ್ನು ಜರಗಿಸುವ ದೊಡ್ಡ ಉದ್ದೇಶವನ್ನಿಟ್ಟುಕೊಂಡಿದ್ದು ಸರಿಯಷ್ಟೆ? ಅದರೊಡನೆ ಸಮಾಜದಲ್ಲಿ ತಲೆದೋರುವ ಪರಸ್ಪರ ದ್ವೇಷ ಅಸೂಯೆ ಅನೀತಿ ಕೀಳುಮೇಲೆಂಬ ಭಾವ ಮೊದಲಾದ ಕೊಳೆಯನ್ನು ಸಮಾಜವು ತಗೆದೊಗೆದು ಸುಮನಸವೆಂಬ ಪುಷ್ಪವನ್ನು ಅರ್ಪಿಸಿದರೆ ನಿಜವಾದ ಉತ್ಸವವಾಗುವದು ಎಂದು ಆಶಿಸುವೆವು.

—ಶ್ರೀ ಮ. ಪ್ರ. ಹಾನಗಲ್ಲ ಮಹಾಸ್ವಾಮಿಗಳವರು,
ಧಾರವಾಡ.

## ❋ ಶುಭಸಂದೇಶ. ❋

**ಶ್ರೀ ಎಮ್. ಬಿ. ಕಾಡಾದಿ, ಎಮ್. ಪಿ. ಸೋಲಾಪೂರ**

ಸ್ವಾಗತ ಸಮಿತಿಯ ಅಧ್ಯಕ್ಷರು, ಶ್ರೀ ಬಂಥನಾಳ ಶಿವಯೋಗೀಶ್ವರ ಡಾಯಮಂಡ ಜುಬಲಿ–

**ಮಹನೀಯರೇ,**

ಶ್ರೀ ನಿ.ಪ್ರ.ಸ್ವ. ಶ್ರೀ ಬಂಥನಾಳ ಶಿವಯೋಗೀಶ್ವರರ ವಜ್ರಮಹೋತ್ಸವವನ್ನು ಶ್ರೀ ಸಿದ್ಧರಾಮೇಶ್ವರ ಜನ್ಮಸ್ಥಳವಾದ ಸೊನ್ನಲಾಪುರದಲ್ಲಿ ಆಚರಿಸುವದು ಕನ್ನಡಿಗರಾದ ನಮಗೆ ಹೆಮ್ಮೆಯ ವಿಷಯವಾಗಿದೆ. ಶ್ರೀ ಬಂಥನಾಳ ಶಿವಯೋಗೀಶ್ವರರು ಓರ್ವ ಅಪ್ರಾಕೃತ ಶಿವಯೋಗಿಗಳೆಂದು ನಂಬಿಕೊಂಡವರಲ್ಲಿ ನಾನೂ ಒಬ್ಬ ಭಕ್ತ, ೧೯೫೪ ನೇಯ ಡಿಶಂಬರ ೧೦ ನೇಯ ತಾರೀಖಿನ ದಿವಸ ಶ್ರೀ ಶ್ರೀ ೭೭೦ ಮಂಟಪ ಪೂಜೆಯು, ಅದರಂತೆ ೧೯೬೧ ನೇಯ ಫೆಬ್ರುವರಿ ೧೫ ನೇಯ ತಾರೀಖಿನ ದಿನ ಶ್ರೀ ಶ್ರೀ ೭೭೦ ಲಿಂಗಪ್ರತಿಷ್ಠಾಪನೆಯಂಥ ಮಹಾ ಸಮಾರಂಭಗಳು ಶ್ರೀ ಶಿವಯೋಗೀಶ್ವರರ ಸನ್ನಿಧಾನದಲ್ಲಿ ಜರುಗಿದವು. ೧೨ ನೇಯ ಶತಮಾನದ ಶಿವಶರಣರು ಮಾಡಿದ ಸಾಂಸ್ಕೃತಿಕ ಕ್ರಾಂತಿಯನ್ನು ಇಂದಿನ ೨೦ ನೇಯ ಶತಮಾನದ ಜನತೆಯ ಸ್ಮರಣಕ್ಕೆ ತಂದುಕೊಟ್ಟು ನೈತಿಕ ಜೀವನಕ್ಕೆ ಮಾರ್ಗದರ್ಶನ ಮಾಡಿಕೊಟ್ಟ ಧೀರ ಶಿವಯೋಗಿಗಳವರು. ವಿಜಯಪುರದಲ್ಲಿ ವಿಜಯಾ ಕಾಲೇಜ ಸ್ಥಾಪನೆ ಮಾಡಿ ಸಮಾಜದ ಎಲ್ಲ ವರ್ಗದ ವಿದ್ಯಾರ್ಥಿಗಳನ್ನು ಉದ್ಧಾರ ಮಾಡಿದ ಶ್ರೇಯವು ಶ್ರೀ ಶ್ರೀ ಶಿವಯೋಗಿಗಳವರ ಪಾಲಿನದು.

ವಿದ್ಯಾದಾನ, ಅನ್ನದಾನ ಸಂಸ್ಕೃತಿಯ ದಾನಗಳ ತ್ರಿವೇಣಿ ಸಂಗಮವು ಮಹಾಶಿವಯೋಗಿಗಳವರ ಹೃದಯದಿಂದ ಝರಿಯಾಗಿ ಪುಟಿದು ನಾಡಿನ ಎಲ್ಲ ಕಡೆಗೂ ಕಾಲುವೆಗಳಾಗಿ ಹರಿದಿದೆ. ಇಂಥ ಪುಣ್ಯಪುರುಷರ ವಜ್ರಮಹೋತ್ಸವವನ್ನು ಆಚರಿಸುವ ಎಲ್ಲ ಭಕ್ತರೂ ಭಾಗ್ಯವಂತರೆಂದು ನಾನು ಬಗೆಯುತ್ತೇನೆ.

**ವಿಜಾಪುರ**
**ತಾರೀಖು ೨೫-೬-೧೯೬೨**

**ಶ್ರೀ ಆರ್. ಎಸ್. ನಾವದಗಿ,**
**ಎಮ್. ಎಲ್. ಎ. ವಿಜಾಪುರ**

## "ಆತ್ಮ ನಿವೇದನೆ"

**"ಶ್ರೀ ಬಂಥನಾಳ ಶಿವಯೋಗೀಶ್ವರರ ಸನ್ನಿಧಾನದಿಂದ ನಮಗೆ ದೊರೆತ ಆತ್ಮ ಸಂಪತ್ತು."**

ಕಳೆದ ಹತ್ತಿಪ್ಪತ್ತು ವರುಷಗಳಿಂದ ಶ್ರೀ ಶಿವಯೋಗಿಗಳವರ ಸಾನ್ನಿಧ್ಯದಲ್ಲಿದ್ದುಕೊಂಡು ಸನ್ನಿಧಿಯಿಂದ ದೊರೆತ ಆತ್ಮಾನುಸಂಧಾನದ ರಸಪಾನವನ್ನು ಅನ್ಯರಿಗೂ ಮುಟ್ಟಿಸುವ ಉದ್ದೇಶದಿಂದ ನಮ್ಮೀ ರಸಯಾತ್ರೆಯನ್ನು ಕೈಕೊಳ್ಳಬೇಕಾಗಿದೆ

**'ಜೀವನದ ಮೂಲವೆಲ್ಲಿದೆ ?"**

ಸತ್ ಶಕ್ತಿಗೂ ಚೈತನ್ಯಕ್ಕೂ ಅಭಿನ್ನನಿಮಿತ್ತ ಉಪಾದಾನ ಕಾರಣವಿರುವದರಿಂದ ಪರಮಾತ್ಮನು ಅಭಿನ್ನ ಸ್ವರೂಪದಿಂದ ಎಲ್ಲ ವಸ್ತುಗಳಲ್ಲಿ ಕೂಡಿಕೊಂಡಿರುವನು. ಸತ್ಯ ಶಕ್ತಿಯು ಪ್ರಕೃತಿಯಾಗಿ ಚಿತ್ತನು ಪುರುಷನಾಗಿ ಈ ವಿಶ್ವದ ವ್ಯವಹಾರಕ್ಕೆ ಕಾರಣವಾಯಿತು ಸತ್‌ವು ವಿಕೃತಿರೂಪ ತಾಳಿ ದ್ವೈತ ವೆನಿಸಿಕೊಂಡರೂ ಅದ್ವೈತಕ್ಕೆ ಚ್ಯುತಿಬಾರದಂತೆ ಪ್ರಕೃತಿಯ ವ್ಯವಹಾರ ನಡೆದಿರುವದು. ಸತ್ ಚಿತ್ ಆನಂದಗಳು ಪರಸ್ಪರ ಪೋಷಕವಾಗಿ ಕೂಡಿಕೊಂಡಿರುವವು ಸೂರ್ಯ ಮತ್ತು ಸೂರ್ಯಕಾಂತ ಹರಳಿನ ಸಂಯೋಗದಿಂದ ಅಗ್ನಿಯು ಉತ್ಪನ್ನವಾಗುವದು. ಅಗ್ನಿಯನ್ನು ಉತ್ಪನ್ನ ಮಾಡುವ ಭಾವ ಸೂರ್ಯನಲ್ಲಿಯೂ ಇಲ್ಲ. ಅದರಂತೆ ಸೂರ್ಯಕಾಂತ ಹರಳಿನಲ್ಲಿಯೂ ಇಲ್ಲ. ಆದರೂ ಅವುಗಳ ಕೂಡುವಿಕೆಯಿಂದ ಸ್ವಾಭಾವಿಕವಾಗಿ ಬೆಂಕಿಯು ಉತ್ಪನ್ನವಾಯಿತು. ಅದರಂತೆ ಪ್ರಕೃತಿಯಲ್ಲಿಯೂ ಪುರುಷನಲ್ಲಿಯೂ ಜಗತ್ತನ್ನು ಹುಟ್ಟಿಸಬೇಕೆಂಬ ಹೇತುವು ಇಲ್ಲದಿದ್ದರೂ ಅವರೀರ್ವರ ಮಿಲನದಿಂದ ಸ್ವಾಭಾವಿಕವಾಗಿಯೇ ಈ ಜಗತ್ತು ಹುಟ್ಟಿತು. ಒಂದೇ ಹಲವಾಗಿ ದ್ವೈತವೆನಿಸಿತು. ಹಲವೇ ಒಂದಾಗಿ ಅದ್ವೈತವೆನಿಸಿತು. ವ್ಯವಹಾರಿಕ ರೂಪದಿಂದ ದ್ವೈತವೆನಿಸುವದು. ಪ್ರಕೃತಿಯ ಉಪಾದಿಗಳು ಅನೇಕವಿರುವರಿಂದ ಅಂತಃಕರಣಗಳು ಅನೇಕವಾಗಿ ಬೇರಬೇರೆಯಾಗಿ ತೋರಿದವು.

ಮೂಲ ಪ್ರಕೃತಿ ಮೂಲ ಪುರುಷರಿಂದಲೇ ಹೆಣುಗಂಡುಗಳಾಗಿ ಮುಂದೆ ವಿಕಾಸವಾಗುತ್ತ ಜೀವಕೋಟಿಯು ಬೆಳೆಯಿತು ಮೂಲಪ್ರಕೃತಿಯಿಂದ ಮೊದಲು ಆಕಾಶ ವಾಯು ಅಗ್ನಿ ನೀರು ಭೂಮಿಗಳುತ್ಪನ್ನವಾದವು. ಭೂಮಿಯಿಂದ ಔಷಧಿಗಳು ಔಷಧಿಯಿಂದ ಅನ್ನ ಉತ್ಪನ್ನವಾಯಿತು. ಅನ್ನವೇ ಏಳು ಭಾಗಗಳಾಗಿ ಏಳು ದಿನದಲ್ಲಿ ಅನುಕ್ರಮದಿಂದ ರಕ್ತ ಮಾಂಸ ಮೇದಸ್ಸು ನರ ಎಲವು 'ಮೇದ್ಯರೇತಸ್ಸಾಗಿ ಪುರುಷನಲ್ಲಿ ಉತ್ಪನ್ನವಾಯಿತು ಅದರಂತೆ ಪ್ರಕೃತಿಯಲ್ಲಿ ಇದೇ ಕ್ರಮದಿಂದ ರಕ್ತ ರೂಪಿಂದ ರುಧಿರ ಉತ್ಪನ್ನವಾಯಿತು

ಪಂಚ ಮಹಾಭೂತಗಳ ವಿಕೃತಿಯಿಂದಲೂ ಕರ್ಮಪರಿಪಾಕದಿಂದಲೂ ಜೀವನ ಪಿಂಡ ರೇತದೊಡನೆ ತಯಾರಾಗಿ ರತಿ ಸುಖದಿಂದ ಸ್ತ್ರೀಯರ ಉದರದಲ್ಲಿ ನಿಲ್ಲುವದು. ಆತ್ಮನಾಗಲಿ ಜೀವನಾ

ಗಲಿ ಹೆಂಣೂ ಅಲ್ಲ, ಗಂಡೂ ಅಲ್ಲ, ಕರ್ಮಫಲದಿಂದ ಹೆಂಣು ಗಂಡಾಗುವದು. ಸ್ತ್ರೀ ಉದರದಲ್ಲಿ ಉದರಾಗ್ನಿಯಿಂದ ಬೇಯದೇ ಸುರಕ್ಷಿತವಾಗಿದ್ದುಕೊಂಡು ಐದನೆಯ ದಿನಕ್ಕೆ ಬೊಬ್ಬಳಿಕೆ ಏಳನೇ ದಿನಕ್ಕೆ ಫೇನದಾಕೃತಿ, ಹದಿನೈದು ದಿನಕ್ಕೆ ವಂಡದಾಕೃತಿ ಒಂದು ತಿಂಗಳಿಗೆ ಶಿರ ಎರಡು ತಿಂಗಳಿಗೆ ಬಾಹುಗಳು ಮೂರು ತಿಂಗಳಿಗೆ ಉದರ ನಾಲ್ಕು ತಿಂಗಳಿಗೆ ಪಾದಾದಿ ಸರ್ವಾಂಗಗಳು ಐದು ತಿಂಗಳಲ್ಲಿ ರೋಮಗಳು ಆರು ತಿಂಗಳಲ್ಲಿ ಎಲವು ಏಳನೇಯ ತಿಂಗಳಲ್ಲಿ ಚೇತನೆಯ ಭಾವದೊಡಗೂಡಿ ಪ್ರಾಣಾದಿ ಪದಗಳು ಉತ್ಪನ್ನವಾಗುವವು. ಎಂಟನೆಯ ಒಂಭತ್ತನೆಯ ತಿಂಗಳಿಗೆ ಚೇತನೆಯ ಭಾವದೊಡಗೂಡಿ ಪ್ರಾಣಾದಿಪದಗಳು ಉತ್ಪನ್ನವಾಗುವವು. ಎಂಟನೆಯ ಒಂಭತ್ತನೆಯ ತಿಂಗಳಲ್ಲಿ ಹಿಂದಿನ ಜನ್ಮದಲ್ಲಿ ಅನುಭವಿಸಿದ್ದು ಇಂದಿನ ಗರ್ಭಾವಸ್ಥೆಯ ಅನುಭವ ಮತ್ತು ಮುಂದಿನ ಹೇಯವಾದ ಕಷ್ಟಜೀವನವನ್ನು ನೆನೆದುಕೊಂಡು ಕೊರಗುವದು. ಈ ರೀತಿ ತ್ರಿವೇಣಿ ಸಂಗಮದ ಸೆಳವಿನಲ್ಲಿ ಸಿಕ್ಕ ಆತ್ಮನ ಅಣುವೇ ಜೀವನಾಗಿ ಸ್ತ್ರೀಯ ಗರ್ಭದಿಂದ ಹೊರಬರುವದು. ಇಲ್ಲಿ ಇನ್ನೊಂದು ಸಂಗತಿಯನ್ನು ನೆನಪಿನಲ್ಲಿಡಬೇಕಾಗಿದೆ ಮೂರನೆಯ ತಿಂಗಳಲ್ಲಿ ಅಪಾನ ವಾಯುವು ಸ್ತ್ರೀಯ ಗರ್ಭಕೋಶದಲ್ಲಿ ಸಂಚರಿಸಿದಾಗ ಪಿಂಡವು ಇಬ್ಭಾಗವಾಗುವದು. ಆಗ ಅವಳಿಜವಳಿ ಮಕ್ಕಳಾಗುವವು

## "ಜೀವನದ ಪಂಚಕೋಶಗಳು"

ಈ ಜೀವನವು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯವೆಂಬ ಐದು ಕೋಶಗಳಿಂದ ಕೂಡಿಕೊಂಡಿರುವದು. ಅನ್ನದ ವಿಕಾರದಿಂದ ಅನ್ನಮಯಕೋಶವು ವಾಯುವಿನ ವಿಕಾರದಿಂದ ಪ್ರಾಣಮಯಕೋಶವೂ, ಇಂದ್ರಿಯಗಳ ವಿಕಾರದಿಂದ ಮನೋಮಯಕೋಶವು ಉತ್ಪನ್ನವಾಗುವವು. ಬುದ್ಧಿಯೇ ವಿಜ್ಞಾನಮಯ ಕೋಶವೆನಿಸುದು. ಇಡಿಯಾಗಿ ತೋರುವ ವಿಶ್ವ ಪ್ರಪಂಚವನ್ನು ಬಿಡಿಬಿಡಿಯಾಗಿ ತೋರಿಸುವದಕ್ಕೆ ವಿಜ್ಞಾನವೆಂಬ ಹೆಸರು ಕರೆಯಲ್ಪಟ್ಟಿರುವದು. ವಿಜ್ಞಾನಮಯ ಕೋಶವನ್ನು, ದಾಟಿ ಬುದ್ಧಿಯ ಆಚೆಗೆ ಆನಂದಮಯಕೋಶವು ಇರುವದು.

ಅನ್ನಮಯಕೋಶದಲ್ಲಿ ಸ್ಥಿತಿ, ಮನೋಮಯದಲ್ಲಿ ಸಂಶಯಾತ್ಮಕ ಭಾವ, ಪ್ರಾಣಮಯದಲ್ಲಿ ಚೇಷ್ಟೆ ಅಥವಾ ಚಲನೆ, ಇವುಗಳನ್ನು ಕಾಣಬಹುದು. ವಿಜ್ಞಾನಮಯದಲ್ಲಿ ಬುದ್ಧಿಶಕ್ತಿಯು ಇರುವದು. ಅದು ಒಳಿತುಕೆಡಕುಗಳೆರಡನ್ನೂ ನಿಶ್ಚಯಮಾಡುವದು. ಮನಸ್ಸಿನ ಹೊಯ್ದಾಟವನ್ನೂ ನಿಲ್ಲಿಸಿ ನಿಶ್ಚಯಮಾಡುವದೇ ಬುದ್ಧಿ ತತ್ತ್ವದ ಲಕ್ಷಣವು. ಆದರೆ ವ್ಯವಸಾಯಾತ್ಮಕ ಬುದ್ಧಿಗೆ ಮಾತ್ರ ಆತ್ಮ ಒಂದೇ ಕಾಣುವದು. ರೂಪ ರಸ ಗಂಧಾದಿಗಳಿಗೆ ಅಂಟಿಕೊಳ್ಳದ ಬುದ್ಧಿಯು ಸ್ಥಿತಪ್ರಜ್ಞನ ಸ್ಥಿತಿಯಲ್ಲಿ ಬರುವದು. ಪಂಚ ವಿಷಯಾದಿ ಆನಂದಗಳಿಂದ ಕೂಡಿಕೊಂಡಿರುವದೇ ಆನಂದಮಯ ಕೋಶವೆನಿಸುವದು. ಜೀವನು ಒಂದೊಂದು ಕೋಶಗಳಲ್ಲಿ ಒಂದೊಂದು ಭ್ರಾಂತಿಯಿಂದ ಕೂಡಿಕೊಂಡಿರುವನು. ಈ ಐದು ತತ್ತ್ವಗಳನ್ನು ದಾಟಿದ ಮೇಲೆಯೇ ಆತ್ಮತತ್ತ್ವದ ಅಭ್ಯಾಸ ಸುರುವು ಆಗುವದು. ಆತ್ಮನಿಂದ ಆನಂದಮಯಕೋಶ ಆನಂದಮಯಕೋಶದಿಂದ ವಿಜ್ಞಾನಮಯಕೋಶ, ವಿಜ್ಞಾನ



ಮಯಕೋಶದಿಂದ ಮನೋಮಯಕೋಶ, ಮನೋಮಯಕೋಶದಿಂದ ಪ್ರಾಣಮಯಕೋಶ, ಪ್ರಾಣಮಯಕೋಶದಿಂದ ಅನ್ನಮಯಕೋಶ, ಹೀಗೆ ಮೇಲಿನಿಂದ ಕೆಳಗೆ ಕೆಳಗಿನಿಂದ ಮೇಲೆ ಐದುಕೋಶಗಳು ಪರಸ್ಪರ ಅವಲಂಬಿಗಳಾಗಿರುವವು.

## " ಸಮಾಧಿಯನ್ನು ಸಾಧಿಸುವ ಪೂರ್ವ ತಯಾರಿಯು "

ಸಮಾಧಿಯನ್ನು, ಸಾಧಿಸಲಿಕ್ಕೆ ಪವಿತ್ರವಾದ ಉದ್ದೇಶಬೇಕು. ಅದರಂತೆ ಕಾಲನಿರ್ಣವೂ ಬೇಕು. ಅಧ್ಯಾತ್ಮಿಕ ಆದಿದೈವಿಕ ಆದಿಭೌತಿಕಗಳು ಸಮಾಧಿಪುರುಷನಿಗೆ ಅನುಕೂಲವಾಗಿರಬೇಕು. ನಿಸರ್ಗದತ್ತವಾದ ಪ್ರಶಾಂತ ಸ್ಥಲ ಮತ್ತು ಅತಿ ಉಷ್ಣ ಅತಿ ಶೀತವಿರದೇ ಸಮಶೀತೋಷ್ಣ ಪ್ರದೇಶವಿರಬೇಕು ಇದು ಆದಿಭೌತಿಕ ಸಹಾಯವೆನ್ನುವರು. ಸೂರ್ಯ ಚಂದ್ರ ಮತ್ತು ಇಂದ್ರಾದಿ ದೇವತೆಗಳ ಆಶಿರ್ವಾದವು ಬೇಕು. ಇದು ಆದಿದೈವಿಕ ಸಹಾಯವೆನ್ನುವರು. ಸಾಧಕನಲ್ಲಿ ಆತ್ಮಾನುಸಂಧಾನದ ಬಲವಿರಬೇಕು. ಇದು ಆಧ್ಯಾತ್ಮಿಕ ಸಹಾಯವೆನಿಸುವದು. ಪರ್ವತ ಶಿಖರದ ನಿಸರ್ಗ ಸೌಂದರ್ಯದಲ್ಲಿ ಪುಣ್ಯತೀರ್ಥಂಗಳಲ್ಲಿ ಸಮುದ್ರ ತಟಾಕ, ಶಿವಗೃಹ ಆಕಳು ನಿಲ್ಲುವ ಸ್ಥಳ, ಇವುಗಳು ಪವಿತ್ರ ಸ್ಥಳಗಳೆಂದು ತಿಳಿಯಬೇಕು ಇಂಥ ನಿಸರ್ಗದ ಮಧ್ಯದಲ್ಲಿದ್ದುಕೊಂಡು ಸಮಾಧಿಯನ್ನು ಸಾಧಿಸುವದು ಉತ್ತಮ ಪಕ್ಷವು. ಅದು ಶಕ್ಯವಿರದ ಪಕ್ಷದಲ್ಲಿ ಅದಕ್ಕಾಗಿ ನಿರ್ಮಿಸಿಕೊಂಡ ಮನೆಯ ಒಂದು ಕೋಣೆಯಲ್ಲಿ ಸಮಾಧಿಸ್ಥನಾಗಬೇಕು ವಿಶ್ವಾದ್ಯಂತ ನಮ್ಮ ಭಾರತ ದೇಶವು ಸಮಾಧಿ ಸಾಧನೆಗೆ ಪವಿತ್ರದೇಶವೆಂದು ಗಣಿಸಲ್ಪಟ್ಟಿರುವದು.

ಸಮಾಧಿಯನ್ನು ಸಾಧಿತಲಿಕ್ಕೆ ಪವಿತ್ರವಾದ ದೇಶಗಳಂತೆ, ಕಾಲವೂ ಮಹತ್ವದ್ದಿರುವದು. ಪೂರ್ವರಾತ್ರಿಯಲ್ಲಿ ನಿದ್ರೆಯ ಸುಖವಿರುವಂತೆ ಉತ್ತರರಾತ್ರಿಯ ನಿದ್ರೆಯ ಸುಖವಿರುವದಿಲ್ಲ. ಸಾಧಕನು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು ಅರುಣೋದಯ ಹಗಲಿನ ಮಧ್ಯ ಮತ್ತು ಸೂರ್ಯಾಸ್ತಗಳು ಸಾಮಾನ್ಯವಾಗಿ ಸಮಾಧಿಯ ಕಾಲಗಳು. ಬೆಳಗಿನ ೪ ಘಂಟೆಯಿಂದ ಸೂರ್ಯೋದಯಕ್ಕಿಂತ ಮೊದಲಿನ ಕಾಲ ಬ್ರಾಹ್ಮಿಕಾಲವೆನಿಸುವದು. ಕೋಳಿಕೂಗದ ಮುನ್ನ ದಯಾಳು ದೇವನನು ನೆನೆದರೆ ಆ ದೇವನು ಆಳಿನಾಳಯ್ಯಾ " ಎಂದು ಸರ್ವಜ್ಞ ಕವಿಯು ಅರುಣೋದಯದ ವರ್ಣನೆಯನ್ನು ಮಾಡಿದ್ದಾನೆ. ಅದರಂತೆ ರಾತ್ರಿ ೯-೩೦ ರಿಂದಾ ೧೦ ಘಂಟೆಯ ವರೆಗೆ ಸಮಾಧಿಯನ್ನು ಸಾಧಿಸಿದರೆ ನಿದ್ರೆಯ ಕಾಲದಲ್ಲಿ ಶಿವಸಂಸ್ಕಾರದ ಕನಸುಗಳೇ ಬೀಳುವವು. ಇಂಥ ಸಮಯದಲ್ಲಿ ನಿಸರ್ಗದ ಕೋಲಾಹಲವು ಕಡಿಮೆಯಾಗಿ ಸ್ತಬ್ಧತೆ ಬರುವದರಿಂದ ಸಮಾಧಿಗೆ ಈ ಕಾಲಗಳು ಅನುಕೂಲ ಕಾಲವೆನಿಸುವವು.

## " ಮನೋನಿಗ್ರಹ "

ಸಮಾಧಿಯನ್ನು ಸಾಧಿಸುವ. ಈ ಮಹತ್ವ ಸಾಧನೆಯಿಂದ ಮನವು ಬುದ್ಧಿಯ ನಿಯಂತ್ರಣದಲ್ಲಿ ಬರುವದು. ತನು ಕರ್ಮೇಂದ್ರಿಯ ಮತ್ತು ಜ್ಞಾನೇಂದ್ರಿಗಳು ಕೂಡಿ ಒಂದು ಘಟಕವೆಂದು

ತಿಳಿಯಬೇಕು. ಇವೆಲ್ಲವುಗಳೂ ಮನಸ್ಸಿನ ಆಶ್ರಯದಲ್ಲಿಯೇ ನಡೆಯುವವು. ಮನವು ಇಚ್ಛಿಸಿದಾಗ ಕಣ್ಣುಗಳು ನೋಡುವವು ಕಿವಿಗಳು ಕೇಳುವವು ಅದರಂತೆ ಕರ್ಮೇಂದ್ರಿಯಗಳ ಗಮನ ಕಾರ್ಯವೂ ನಡೆಯುವದು, ನಿದ್ರೆಯಲ್ಲಿ ಮನವು ವಿಶಾಂತಿ ಹೊಂದುವದರಿಂದ ಇಂದ್ರಿಯಗಳ ಕಾರ್ಯವೂ ಕೂಡ ನಿಂತು ಹೋಗುವದು, ಆದ್ದರಿಂದ ಮನಸ್ಸಿನಿಂದಲೇ, ಇಂದ್ರಿಯಗಳು ಅಸ್ತಿತ್ವವಿರುವದೆಂಬುದು, ನಿರ್ವಿವಾದವು. ಮನವು ಶರೀರ ಮತ್ತು ಇಂದ್ರಿಯಗಳಿಗಿಂತಲೂ ಹೆಚ್ಚಿನದಿರುವದು, ನಿದ್ರೆಯಲ್ಲಿ ಮನವು ಅಡಗಿದಂತೆ ಜಾಗ್ರತದಲ್ಲಿಯೂ ಕೂಡ ಮನಸ್ಸನ್ನು ಅಂತ:ರ್ಮುಖಮಾಡಿ ಬಲವಾದ ಬುದ್ಧಿಶಕ್ತಿಯಲ್ಲಿ ಲಯಮಾಡಿಕೊಳ್ಳಬೇಕು. ಮನವು ಲಯವಾದನಂತರ ಮನವನ್ನಾಶ್ರಯಿಸಿದೆ ತನು ಇಂದ್ರಿಯಾದಿಗಳು ಮಾಡಿ ತಮ್ಮಿಂದ ತಾವೇ ಲಯವಾಗಿ ಹೋಗುವವು. ಚಂಚಲವನ್ನು ನಿರೋಧಮಾಡುವ ಶಕ್ತಿ ಬದ್ದಿ ಶಕ್ತಿಯಲ್ಲಿರುವದು, ಇದನ್ನು ಸಾಧಿಸಿದ ಮಹಾನುಭಾವನೇ ಬುದ್ಧಿವಂತನೆಂದು ನಮ್ಮ ಭಾರತೀಯ ಸಂಸ್ಕೃತಿಯ ಪರಂಪರೆ ಅದೆ.

## " ಲೋಕಸಂಗ್ರಹ ಕಾರ್ಯದ ಸಿದ್ಧತೆ "

ಜೀವನದ ವ್ಯವಹಾರವು ಕರ್ಮದಿಂದಲೇ ನಡೆಯುವದು. ಆದರೆ ಕಾರ್ಯವು ಕಾರಣದಲ್ಲಿ ತಿಳಿದರೆ ಮಾತ್ರ ಮೋಕ್ಷದ ಬಾಗಿಲು ತೆರೆಯುವದು. ಕರ್ಮಗಳು ಸಂಚಿತ ಪ್ರಾರಬ್ಧ ಆಗಾಮಿ ಕರ್ಮಗಳೆಂದು ಮೂರು ಪ್ರಕಾರದವುಗಳಿರುವವು. ಲೋಕಸಂಗ್ರಹ ಕಾರ್ಯಮಾಡುವ ಸಾಧಕನು ಆಯಾ ಕರ್ಮಗಳ ಫಲದಾಸೆಯನ್ನು ಮರ್ದನ ಮಾಡುವ ಸಾಹಿತ್ಯವನ್ನು ಕಟ್ಟಿಕೊಂಡು, ಅವುಗಳನ್ನು ಕ್ಷಯಮಾಡಿಕೊಳ್ಳುವನು. ಈ ಅವಸ್ಥೆಗೆ ಸಾಧಕನು ಬಂದಾಗ ಸತ್ವ ಗುಣವು ಪ್ರಧಾನವಾಗಿದ್ದು ಉಳಿದೆರಡು ಗೌಣಸ್ಥಾನದಲ್ಲಿರುವವು. ಆದರೂ ಅಹಂಕಾರದ ಕಳಗಳು ಬಿರುಗಾಳಿಯಂತೆ ಎದ್ದು ಬಂಡೆಬ್ಬಿಸುವವು. ಜಾತಿಕೋತಿಗಳ ತಾಕಲಾಟದಲ್ಲಿ ಕೆಡಹುವವು. ಆಗ ಸಾಧಕನು ಸತ್ವ ಗುಣದ ಪ್ರಭಾವದಿಂದ ಅವುಗಳನ್ನು ಧಬಾಯಿಸಬೇಕು. "ನೀನು ನನ್ನ ಅಂಶಜನೇ ಇರುವಿ" ಎಂಬ ಗೀತೆಯ ಉಪದೇಶವನ್ನು ಗಮನದಲ್ಲಿಟ್ಟುಕೊಳ್ಳಲೇ ಬೇಕು. ನಾವೆಲ್ಲರೂ ಆ ಭಗವಂತನ ವಂಶಜರು. ಆತನ ಮಕ್ಕಳೂ ಎಂಬ ಭಾವ ಬರುವದು ಮಹಾತ್ಮಾಗಾಂಧೀಜಿಯವರು "ಗೀತೆಯೇ ನನ್ನ ಮಾತೆಯು" ಎಂದು ಮೇಲಿಂದ ಮೇಲೆ ಅನ್ನುವ ಮಾತು ಇದೇ ಅರ್ಥವನ್ನೇ ಕೂಡಿಕೊಂಡಿರುವದು.

ಲೋಕ ಸಂಗ್ರಹ ಕಾರ್ಯದ ವಿಶಾಲತೆಯನ್ನು ಸಗುಣಯೋಗದಲ್ಲಿ ಸಂಪೂರ್ಣವಾಗಿ ಕಾಣಬಹುದು. ನಿರ್ವಿಕಲ್ಪ ಸಮಾಧಿಯಿಂದ ಹೊರಬಿದ್ದ ತತ್ವದರ್ಶಿಗೆ ಮಾತ್ರ ಲೋಕದ ಸ್ಥಿತಿಯನ್ನು ನೋಡಿ ಕರುಣೆ ಹುಟ್ಟುವದು ಅಂಥ ಭಾಗ್ಯ ಪುರುಷನು ಲೋಕದ ಜನರನ್ನು ಅಭೇದ್ಯ ದೃಷ್ಟಿಯಲ್ಲಿ ತರುವನು. ಲೋಕಸಂಗ್ರಹ ಕಾರ್ಯದ ದಯಾ ಭಾವನೆಯು ಮಾತ್ರ ಸರ್ವರಲ್ಲಿಯೂ ಬರಲಾರದು ಬ್ಯಾರಿಷ್ಟರುಗಳು ಪುಷ್ಕಳ ಜನರಿದ್ದರೂ ಲೋಕ ಸಂಗ್ರಹ ಕಾರ್ಯಮಾಡುವ ಭಾಗ್ಯವು ಮಾತ್ರ ಒಬ್ಬ ಗಾಂಧೀಜೀಯವರಿಗೆ ಬಂದಿತು. ಅದರಂತೆ ತತ್ವದರ್ಶಿಗಳಲ್ಲಿಯೂ ತನ್ಮುಷ್ಟಕ್ಕೆ ತಾವು ಕೃತಾರ್ಥರಾ



ಗುವವರೇ ಹೆಚ್ಚು. ಆದರೆ ಲೋಕದ ಜನತೆಯನ್ನು ಕರುಣೆಯಿಂದ ಕಾಣುವ ಪುಣ್ಯಪುರುಷನುಮಾತ್ರ ಲೋಕಸಂಗ್ರಹ ಕಾರ್ಯದಲ್ಲಿ ತೊಡಗುವನು. ಈ ಸಿದ್ಧಾಂತಕ್ಕನುಗುಣವಾಗಿಯೇ ಭಾರತದಲ್ಲಿ ಗುರು ಪರಂಪರೆ ಬಂದಿರುವದು.. ಅರಿತವರು ಆಚಾರವನ್ನು ಬಿಟ್ಟು ಜ್ಞಾನಪ್ರತಿಪಾದನೆ ಮಾಡಿಲ್ಲ ಜ್ಞಾನವನ್ನು ಬಿಟ್ಟು ಆಚಾರ ಪ್ರತಿಪಾದನೆ ಮಾಡಿಲ್ಲ. ಜ್ಞಾನಾಚಾರಗಳನ್ನು ಕೂಡಿಯೇ ಉಪದೇಶಮಾಡಿರುವದರಿಂದ ಲೋಕದ ಜನರಲ್ಲಿ ಆಚಾರ ಮತ್ತು ಜ್ಞಾನದ ಅಸ್ತಿತ್ವ ಉಳಿದಿರುವದು.

ಈ ರೀತಿಯಾಗಿ ನಮ್ಮ ಜೀವನದ ಮೂಲವನ್ನು ಹುಡುಕುವಾಗ ಸಾಧಕನಿಗೆ ಜೀವ, ಜಗತ್ತು, ಮತ್ತು ಈಶ್ವರುಗಳ ಜ್ಞಾನವಾಗುತ್ತ ಹೋಗುವದು ನಂತರ ಈ ಜೀವನು ಪಂಚಕೋಶಗಳನ್ನು ದಾಟ ಪರಮಾತ್ಮನಲ್ಲಿ ಒಂದಾಗುವ ರಾಜಮಾರ್ಗವನ್ನು ಹುಡುಕಿಕೊಳ್ಳುವನು. ಪಂಚಕೋಶಗಲ್ಲಿ ಕೊನೆಯದಾದ ಆನಂದಮಯ ಕೋಶವನ್ನು ದಾಟದನಂತರ ಸಾಧಕನಿಗೆ ನಿರ್ವಿಕಲ್ಪ ಸಮಾಧಿಯ ಸುಖವು ದೊರೆವುದು. ಈ ಅವಸ್ಥೆಯಲ್ಲಿ ಜೀವನು ಎಲ್ಲ ಬಂಧನಗಳಿಂದ ಬಿಡುಗಡೆಯಾಗಿ ಆತ್ಮಾನಂದದಲ್ಲಿ ತೇಲಾಡುವನು. ಇಷ್ಟಾದರೂ ಸಾಧಕನಲ್ಲಿ ಅಹಂಕಾರದ ಸೂಕ್ಷ್ಮ ಕಣಗಳು ಹುದುಗಿಕೊಂಡಿರುವದರಿಂದ, ಸಮಾಧಿಯ ಸಾಧನೆಯಿಂದ ಅವುಗಳನ್ನು ಹತ್ತಿಕ್ಕಬೇಕು. ಆಗ ಮನವು ಸಂಪೂರ್ಣವಾಗಿ ಆತ್ಮ ತತ್ವದ ಆಧೀನದಲ್ಲಿ ಬರುವದು. ಈ ಅವಸ್ಥೆಯಲ್ಲಿ ಜೀವನು ಆತ್ಮನಲ್ಲಿ ಸಮರಸವಾಗುದದರಿಂದ ಸಾಧಕನಿಗೆ ವಿಶ್ವಪ್ರಪಂಚವೇ ಪರಮಾತ್ಮಮಯವಾಗಿ ತೋರುವದು, ಇಂಥ ಧೀರ ಸಾಧಕನಿಗೆ ಮಾತ್ರ ಲೋಕಸಂಗ್ರಹಕಾರ್ಯ ಮಾಡಲಿಕ್ಕೆ ಅಧಿಕಾರವದೆ. ಅವರೇ ಸಮಾಜ ಜೀವಿಗಳು ದೇಶಭಕ್ತರು

ಶ್ರೀ ಬಂಥನಾಳ ಶಿವಯೋಗೀಶ್ವರರ ಇಡೀ ಜೀವನವೇ ಆತ್ಮಸಾಕ್ಷಾತ್ಕಾರದ ದಿವ್ಯಭೂಮಿಕೆಯಲ್ಲಿ ನಡೆದಿರುವದರಿಂದ ಅಂಥ ಪುಣ್ಯಪುರುಷರ ಉಪದೇಶದಿಂದ ಹೊರಬಿದ್ದ ಈ ಪಂಚಶೀಲ ತತ್ವಗಳನ್ನು ಬರೆಯಲಿಕ್ಕೆ ಅವರ ಸಮಕಾಲೀನ ಭಕ್ತರಾದ ನಾವು ಭಾಗ್ಯವಂತರೆಂದು ಬಗೆಯುತ್ತೇವೆ.

## ಗ್ರಂಥದ ಬಗ್ಗೆ ನಮ್ಮ ಮಾತುಗಳು

ಶ್ರೀ ಶಿವಯೋಗಿಗಳವರ ಷಷ್ಟ್ಯಬ್ದಿ ಗ್ರಂಥರಚನೆಯ ಹೊಣೆಗಾರಿಕೆಯನ್ನು ಹೊರುವ ಜವಾಬ್ದಾರಿಯು ನನ್ನಲ್ಲಿ ಇಲ್ಲವಾದರೂ ಸ್ವಾಭಾವಿಕವಾಗಿ ಬಂದದ್ದು ನನಗೆ ಇದೊಂದು ಭಾಗ್ಯದ ಕಾಲವೆಂದು ತಿಳಿಯುತ್ತೇನೆ. ಪ್ರಧಾನ ಸಂಪಾದಕರಾದ ಡಾ. ರಾ. ಬ. ಪಿ. ಜಿ, ಹಳಕಟ್ಟಿಯವರ ಮಾರ್ಗದರ್ಶನವು ನನಗೆ ದೊರೆತದ್ದರಿಂದ ಸಂಪೂರ್ಣವಾಗಿ ಅಲ್ಲದಿದ್ದರೂ ಅಲ್ಪಮಟ್ಟಿಗಾದರೂ ನನ್ನಲ್ಲಿ ಈ ಶಕ್ತಿ ಸಂಚಯವಾಯಿತು.

ಕನ್ಯಾಕುಮಾರಿಯಿಂದ, ಕಾಸ್ಮೀರ ಹಿಮಾಲಯದ ವರೆಗೂ, ಎಲ್ಲ ಜನಾಂಗದವರನ್ನು ಸಮದೃಷ್ಟಿಯಿಂದ ನೋಡುವ ಸಮದರ್ಶಿಗಳು ಶ್ರೀ ಬಂಥನಾಳ ಶಿವಯೋಗಿಗಳವರು ಎಲೆ ಹೂ ಕಾಯಿ ಹಣ್ಣುಗಳನ್ನೊಳಗೊಂಡು ವೃಕ್ಷವಿರುವಂತೆವಯೋಗಿಗಳವರ ದಿವ್ಯ ಜೀವನದಲ್ಲಿ ಶೈಕ್ಷಣಿಕ ಸಾಮಾಜಿಕ ಸಂಶೋಧನೆ, ಸಾಹಿತ್ಯಕ ಕಾರ್ಯಮಿಮಾಂಶ ಮೊದಲಾದ ಶಕ್ತಿಗಳಿಂದ ಕೂಡಿದ ದಿವ್ಯಶಕ್ತಿ ಎದ್ದು ಕಾಣುವದು. ಆದಕ್ಕನುಗುಣವಾಗಿಯೇ ನಾವು ಜಾತ್ಯಾತೀತವಾದ ಎಲ್ಲ ಲೇಖನಗಳಿಗೂ ಸ್ಥಳಕೊಡಬೇಕಾಯಿತು. "ನಡೆಯುವವನೆ ಎಡಹುವನು" ಎಂಬ ಲೋಕದ ರೂಢಿಯಂತೆ ನನ್ನ ಈ ಕಾರ್ಯದಲ್ಲಿ ಅನಂತ ತಪ್ಪುಗಳಾಗಿರಬಹುದು ಅವುಗಳನ್ನು ಕ್ಷಮಿಸುವಿರೆಂದು ನನ್ನ ಪ್ರಾರ್ಥನೆ.

ಉಪಸಂಪಾದಕರು:— **ಸದಾಶಿವ ಎಂ. ತೆನಿಹಳ್ಳಿ**

# " ಅಭಿನಂದನೆ"

ಶ್ರೀ ಬಂಥನಾಳ ಶಿವಯೋಗಿಗಳವರಂಥ ದಿವ್ಯ ವಿಭೂತಿಗಳವರ ಷಷ್ಟ್ಯಾಬ್ದಿ ಗ್ರಂಥ ರಚನೆಯ ಕಾರ್ಯಭಾರವು ನನ್ನ ಕಡೆಗೆ ಒಪ್ಪಿಸಲ್ಪಟ್ಟದ್ದು ನನಗೆ ಆನಂದದ ಜೊತೆಗೆ ಹೆಮ್ಮೆಯು ಉಕ್ಕಿ ಬಂದಿದೆ. ಶ್ರೀಗಳವರು ನಿ:ಶೀಮವಾದ ತತ್ವದರ್ಶಿಗಳು. ಆದ್ದರಿಂದ ಸೀಮಾತೀತವಾದ, ಸಾಂಸ್ಕೃತಿಕ ಲೇಖನಗಳನ್ನು ಕಲೆ ಹಾಕಿ ಪ್ರಸಿದ್ದಿಸಬೇಕಾಯಿತು. ಸಮಾಜದ ಕಾರ್ಯಕರ್ತರಲ್ಲಿ ಶಿಸ್ತಿನ ಅಭಾವವಿದ್ದ ಸಂಗತಿಯನ್ನು ಬಿಚ್ಚು ಮನಸ್ಸಿನಿಂದ ಹೇಳಬೇಕಾಗಿದೆ. ಗ್ರಂಥ ರಚನೆಯ ಕಾರ್ಯಭಾರವು ನಮ್ಮ ಕಡೆಗೆ ಬಂದಾಗ ಕೇವಲ ಒಂದು ತಿಂಗಳ ಇಪ್ಪತ್ತು ದಿವಸಗಳ ಅವಧಿಯು ಮಾತ್ರ ನಮಗೆ ಅವಕಾಶವಿತ್ತು. ಅಂದರೆ ತಾರೀಖು|| ೩೧-೫-೧೯೬೭ನೇ ಸಮಾರಂಭದ ತಾರೀಖು ನಿಶ್ಚಯ ಮಾಡಿದ ಬಗ್ಗೆ ಹೊಣೆಗಾರ ಕಾರ್ಯಕರ್ತರಿಂದ ನಮಗೆ ಸೂಚನೆ ಬಂದಿತು ಇಷ್ಟು ಕಡಿಮೆ ಅವಧಿಯಲ್ಲಿ ಒಂದುನೂರು ಪುಟಗಳಷ್ಟಾದರೂ ಗ್ರಂಥದ ಮರ್ಯಾದೆ ಇಡಬೇಕೆಂಬ ಲವಲವಿಕೆಯಿಂದ ಹೆಚ್ಚು ಕೆಲಸಗಾರರನ್ನು ಜಮಾಯಿಸಿಕೊಂಡು ಒಂದುನೂರು ಪುಟಗಳಷ್ಟು ವಿಷಯಗಳನ್ನು ಪ್ರಿಂಟು ಮಾಡಿಸಲಾಯಿತು. ಅನಿವಾರ್ಯಕಾರಣಗಳ ಮೂಲಕ ಸಮಾರಂಭದ ತಾರೀಖು ಮುಂದೆ ಬಿತ್ತು ಇಲ್ಲಿಯವರೆಗೆ ನಮಗೆ ಮಾತ್ರ ಹಣದ ಕೊರತೆ ಇರಲಿಲ್ಲ ಮುಂದೆ ಸಾಕಷ್ಟು ವೇಳೆಯ ಅವಕಾಶವು ನಮಗೆ ದೊರಕಿದರೂ ಹಣದ ಕೊರತೆಯು ನಮ್ಮ ಕೆಲಸಕ್ಕೆ ಅಡ್ಡಿಮಾಡಿತು. ಒಂದು ಕಾಲಕ್ಕೆ ವೇಳೆಯ ಅಭಾವ ಮತ್ತೊಂದು ಕಾಲಕ್ಕೆ ಹಣದ ಕೊರತೆ, ಹೀಗಾಗಿ ಗ್ರಥ ರಚನೆಯ ಬಗ್ಗೆ ನಾವು ಯೋಚಿಸಿದ ಯೋಜನೆಗಳು ಸಂಪೂರ್ಣವಾಗಿ ಕೊನೆಗಾಣಲಿಲ್ಲ. ಈ ಸಂಗತಿಯನ್ನು ನಾವು ವಿಷಾದದಿಂದ ಹೇಳಬೇಕಾಗಿದೆ

ಗ್ರಂಥ ರಚನೆಯ ಬಗ್ಗೆ ಕೆಲವು ಮಹನೀಯರ ನಿಷ್ಕಾಮ ಬುದ್ಧಿಯಿಂದ ಹಣದ ಸಹಾಯ ಮಾಡಿದರು ಅವರು ಸ್ವಲ್ಪೇಜನರಿದ್ದರೂ ಇಂಥ ಪವಿತ್ರವಾದ ಗ್ರಂಥ ಪ್ರಕಟವಾಗಲಿಕ್ಕೆ ಮುಖ್ಯ ಸಹಾಯಕರೆಂದು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ ತಮ್ಮ ಅಮೊಲ್ಯವಾದ ವೇಳೆಯನ್ನು ಖರ್ಚುಮಾಡಿ ಲೇಖನಗಳನ್ನು ಬರೆದು ಕಳಿಸಿದ ಪುಣ್ಯ ಪುರುಷರಿಗೂ . ನಾವು ಉಪಕೃತರು ಇದಲ್ಲದೆ ಹಗಲೂ ರಾತ್ರಿ ದುಡಿದು ನಿರ್ದಿಷ್ಟ ವೇಳೆಯಲ್ಲಿ ಕೆಲಸ ಮುಗಿಸಿದಕ್ಕಾಗಿ ಶ್ರೀ ಹಿತಚಿಂತಕ ಪ್ರೆಸ್ಸಿನ ಮ್ಯಾನೇಜರ ಮತ್ತು ಕೆಲಸಗಾರರು, ಅಭಿನಂದನಕ್ಕೆ ಪಾತ್ರರು ಮತ್ತು ಸಮಾರಂಭದ ಎಲ್ಲ ಭಾರವನ್ನು ವಹಿಸಿಕೊಂಡು ಕಾರ್ಯಮಾಡಿದ ಅಧ್ಯಕ್ಷ ಶ್ರೀ ಎಮ್. ಬಿ. ಕಾಡಾದಿಯವರು ಎಮ್. ಶಿ.—ಮತ್ತು ಸಮಿತಿಯ ಎಲ್ಲ ಕಾರ್ಯಕಾರೀ ಮಂಡಳಿಯ. ಸದಸ್ಯರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುವೆ.

ಡಾ||. ರಾವಬಾಹಾದ್ದೂರ. ಪಿ. ಜಿ. ಹಳಕಟ್ಟಿ,
ಬಿ. ಎ. ಎಲ್. ಎಲ್ ಬಿ.
ಪ್ರಧಾನ ಸಂಪಾದಕರು.

ವಿಜಾಪೂರ ತಾರೀಖು

# ಭಾ ವ ಸು ಮ

ಜಯತು ಜಯತು ಸಂಗನ ಬಸವೇಶಾ
ಜಯ ಜಯ ಬಂಥನಾಳ ಶಿವಯೋಗೀಶಾ
ನಯ ಭಯ ಭಕ್ತಿಯಿಂ ನುತಿಸುವೆ ಈಶಾ ||

ನೆರೆದ ವಜ್ರಮಹೋತ್ಸವದ ಈ ಸುದಿನದಿ
ಕೋರುವೆವು ನಾವು ಜಯ ಜಯ ಹರುಷದಿ
ಪರಮ ಪ್ರಭು ಸಿದ್ಧರಾಮ ಸಮ್ಮುಖದಿ ||

ಬಡವ ಬಲ್ಲಿದರೆಂಬ ಭೇದವನರಿಯದಾತ
ಕಡುಪ್ರೇಮ ಸರ್ವಧರ್ಮದಿ ಸಮದೃಷ್ಟಿಯುಳ್ಳಾತ
ನುಡಿಯಂತೆ ನಡೆಯುಳ್ಳ ವಾಳ್ಕೆ ಮಹಂತ ||

ಮಿಗಿಲಾದ ಶಿವಯೋಗ ಅಳವಡಿಸಿದ ಮೂರ್ತಿ
ಹಗಲಿರುಳು ಬಸವ ತತ್ವ ಪ್ರಸರಿಸುವ ಸ್ಫೂರ್ತಿ
ನಗು ಮುಖದ ಶಾಂತ ಮುದ್ರೆ ಪವಾಡಕೀರ್ತಿ ||

ಏಳ್ನೂರೆಪ್ಪತ್ತು ಗಣಾಧೀಶ್ವರ ಸ್ಮಾರಕ ವೆಸಗಿ
ಮೊಳಗಿಸಿ ವಿಜಯ ದುಂಧುಭಿ ಮಹಾವಿದ್ಯಾಲಯ ಸ್ಥಾಪಿಸಿ
ಬಳಲುವ ಭಕ್ತರ ಹೃದಯದಿ ಜ್ಞಾನಸುಧೆಯ ಹರಿಸಿ ||

ಶತಾಬ್ಧಿ ಉತ್ಸವ ನೋಡುವ ಹಿರಿಬಯಕೆ 'ಶಿಶು'ವಿಗೆ
ಸತತ ದಿವ್ಯಕೀರ್ತಿ ಪ್ರಭೆ ಹರಡಲಿ ದಿಗ್ದೆಸೆಗೆ
ಸಂತಸದಿ ಅರ್ಪಿಸುವೆ ಭಾವಸುಮ ಸನ್ನಿಧಿಗೆ ||

ಅರ್ಪಿಸಿದವರು:– "ಶಿಶು"
ಸೌ. ಶಶಿಕಲಾ ರಾಜಶೇಖರ ಮುಡಕಿ.
ಸೋಲಾಪೂರ.

# ದೀಪಸ್ತಂಭದ ಬೆಳಕಿನಲ್ಲಿ

ಲೇಖಕ:-ಶ್ರೀ ಕುಮಾರ ಕೋಠಾವಳೆ,
**ಸಹಸಂಪಾದಕರು:-ದೈನಿಕ ಸೋಲಾಪೂರ ಸಮಾಚಾರ. ಸೋಲಾಪೂರ.**

ಸಮಾಜಸೇವೆ, ಸಮಾಜೋದ್ಧಾರ, ದೇಶಭಕ್ತಿ ಮತ್ತು ಧರ್ಮಪ್ರಬೋಧನ ಈ ಶಬ್ದಗಳು ನೋಡಲಿಕ್ಕೆ ಅಂದಚಂದ, ನುಡಿಯಲು ಸುಲಭ ಮತ್ತು ಅರ್ಥದಿಂದ ಉಜ್ವಲವಿದ್ದರೂ ಕೂಡ, ನಡೆಗೂ ನುಡಿಗೂ ಮೇಳಗೂಡಿಸುವಾಗ್ಯೆ ಮಾತ್ರ ಬಹಳೇ ಗೊಂದಲುಂಟಾಗುವದು. ಸಂಕಟಗಳ ಪರಂಪರೆಯು, ವಿರೋಧದ ಬಿರುಗಾಳಿಯು ಏಳುವದು. ಸೇವಾಕಾರ್ಯದಲ್ಲಿ ತೊಡಗಿದವರಿಗೆ ಅನೇಕ ಸಂಕಟಗಳು ಆಡರಿ ಜೀವನವು ಸಾಕುಸಾಕಾಗಿ ಬಿಡುವಂತೆ, ಹಿತಚಿಂತಕರೆಂದು ಅಂದುಕೊಳ್ಳುವವರು ಮಾಡುವರು. ಹೀಗಿದ್ದಿರೂ ಕೂಡ "ಬಿರುಗಾಳಿಯಲ್ಲಿಯ ನಂದಾದೀಪದಂತೆ" ಸಮಾಜಕಾರ್ಯದಲ್ಲಿ ಸಮಾಜ ಸೇವಕನು, ತಾನು ಸ್ವತಃ ಉರಿದು, ಇನ್ನಿತರರಿಗೆ ಬೆಳಕನ್ನೀಯುವ ಮಹತ್ಕಾರ್ಯವನ್ನು ಮಾಡಬೇಕಾಗುವದು.

ಅನೇಕ ವರುಷಗಳ ತ್ಯಾಗ ಮತ್ತು ನಿಷ್ಠೆಯನ್ನು ನೋಡಿ, ವಿರೋಧಿಗಳ ಆಟ ಸಾಗದಂತೆ ಆದಮೇಲೆ, ವಿರೋಧವು ತಣ್ಣಗಾಗುವದು. ಯಶೋಮಂದಿರದ ಸುವರ್ಣಕಲಶ ಕಾಣಲು, ಅಹರ್ನಿಶೆ ಸೇವೆ ಸಲ್ಲಿಸಿ ತನ್ನ ನೆರಳಿಗೆ ತಾನೆ ಗೆಳಯನಾಗಿ, ಸಾಧಕನು ನಡೆದುಕೊಳ್ಳಬೇಕಾಗುತ್ತದೆ. ಹೀಗೆ ಯಶೋಮಂದಿರವನ್ನು ತಲ್ಪಿದ ಮೇಲೆ, ವಿರೋಧಿಗಳ ವಿರೋಧವು ಮಣ್ಣುಗೂಡುವದು ಮತ್ತು ಅದೇ ವಿರೋಧವು ನಂದನವನವಾಗುವದು.

ಜೀವನ ಸಂಗ್ರಾಮದಲ್ಲಿ ಯಾರು ತನ್ನು ಸರ್ವಸ್ವವನ್ನು ಅರ್ಪಿಸಿರುವರೋ ಮತ್ತು ಧರ್ಮಕಾರ್ಯದೊಡನೆ ಸಮಾಜದ ಇನ್ನಿತರ ಅಂಗಗಳು ಸಮೃದ್ಧ ವ ಸಶಕ್ತ ಮಾಡಬಯಸಿದರೋ, ತ್ಯಾಗದ ಪ್ರತೀಕವಾದ ಕ್ಯಾವಿ ಅರಿವೆಗಳನ್ನು ಧರಿಸಿ, ಮೂರ್ತಿಮಂತ ತ್ಯಾಗವನ್ನು ಜೀವನದಲ್ಲಿ ಅವತೀರ್ಣ ಮಾಡಿದರೋ ಯಾರ ನಾಮಸ್ಮರಣೆಯಿಂದ ತಲೆಯುಬಾವಗಳೋ, ಜಾತೀಯ-ಭಾಷೆಯ ವಾದಗಳಿಗೆ ಎಲ್ಲಿ ಎಡೆಯಿಲ್ಲವೋ; "ದಯವೇ ಧರ್ಮದ ಮೂಲವಯ್ಯಾ" ಈ ಮಹಾಶರಣರ ವಚನವನ್ನು ನಡೆಯಲ್ಲಿ ತಂದಿರುವರೋ; "ಆಚಾರವೇ ಸ್ವರ್ಗ ಅನಾಚಾರವೇ ನರಕ" ಎಂಬುದನ್ನು ಪ್ರತ್ಯಕ್ಷ ನಡೆದು ತೋರಿಸಿದರೋ ಅಂಥ ಅಜಾತಶತ್ರು, ಮಹಾನ್ ವಿಭೂತಿಯು ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಶ್ರೀ ಶಿವಯೋಗಿ ಸಂಗನಬಸವ ಮಹಾಸ್ವಾಮಿ ಬಂಥನಾಳ ಇವರ ವಜ್ರಮಹೋತ್ಸವವು ಸೋಲಾಪುರದಂಥ ಯೋಗಭೂಮಿಯಲ್ಲಿ ಜರಗುವದು ಕಂಡು, ಯೋಗಿ ಕುಲಚಕ್ರವರ್ತಿ ಶ್ರೀ ಸಿದ್ಧರಾಮೇಶ್ವರ ಪುಣ್ಯಭೂಮಿಯಲ್ಲಿ ಈ ವೈಭವಪೂರ್ಣವಾದ ಸಮಾರಂಭವು ಜರಗುತ್ತಿದ್ದದ್ದನ್ನು ನೋಡಿ, ಯಾವ ವೀರಶೈವರಿಗೆ ಆತ್ಮಾನಂದವಾಗಲಾರದೇ ಇದ್ದೀತು ?



ಸಮಾಜದ ರಥದ ಎರಡು ಚಕ್ರಗಳು ಗುರು ಮತ್ತು ವಿರಕ್ತರು. ಈ ಚಕ್ರಗಳು ಸಮಬಲವಾಗಿ ಸಾಗಬೇಕಾದುದು. ತಮ್ಮ ತಮ್ಮ ದೃಷ್ಟಿಯಿಂದ ಧರ್ಮಪ್ರಭಾವ ಬೀರುವದು ಮತ್ತು ಪಾರಸ್ಪರೀಕ ಸನ್ಮಾನದರ್ಶಕ ವ್ಯವಹಾರ ನಡೆಸುವದು, ಇವೆ ಸಮಾಜಕ್ಕೆ ಬಹಳೇ ಉಪಯುಕ್ತವಾಗಿವೆ. ಭಕ್ತರಿಗೆ ಯೋಗ್ಯ ಹಾದಿ ತೋರಿಸಿ ಧರ್ಮಾಚರಣವನ್ನು ಹೊಂದಿ, ಸರ್ವಸಂಗ್ರಹ ವೃತ್ತಿಯಿಂದ ಸಮಾಜೋದ್ಧಾರ ಕೈಕೊಳ್ಳುವದು ಮತ್ತು ಅದರ ಸಲುವಾಗಿ ಟೊಂಕಕಟ್ಟಿ ನಿಲ್ಲುವದು ಸಮಾಜಸೇವೆ ಈಶ ಸೇವೆ' ಎಂಬುದೇ ತಮ್ಮ ಜೀವನದ ಧ್ಯೇಯವಾಗಿರಿಸಿ, ಎಷ್ಟೋ ಗುರು ವಿರಕ್ತ ಮಹಾಸ್ವಾಮಿಗಳು, ಈಗ ಜನರ ಆದರಕ್ಕೆ ತಕ್ಕವರಾಗಿದ್ದಾರೆ. ಅವರ ಉಪದೇಶದಿಂದ ಸಮಾಜಕ್ಕೆ ಸಂಜೀವನವು ದೊರೆಯುತ್ತಿದೆ.

ಮೇಲ್ಕಾಣಿಸಿದ ಕರ್ತವ್ಯ ಬುದ್ಧಿಯಿಂದ, ಧರ್ಮಪ್ರಭಾವ ಬೀರುವ ಮಹಾನ್ ಸಾಧಕರಾದ ಶ್ರೀ ಶಿವಯೋಗಿ ಸಂಗನಬಸವ ಮಹಾಸ್ವಾಮಿಗಳು ಬಂಥನಾಳ ಇವರು ಇದ್ದಾರೆ 'ನಿಸ್ಪೃಹಸ್ಯ ತೃಣಂಜಗತ್' ಎಂಬುದೇ ಅವರ ದೃಷ್ಟಿಯು ಇದೆ. ಸರ್ವರಲ್ಲಿಯೂ ಸಮಭಾವವನ್ನು ಬೀರುವ ಒಬ್ಬ ದಾರ್ಶನಿಕರು ಅವರು ಇರುವರು. ಪ್ರವಚನದಿಂದ ಅವರ ಜ್ಞಾನಗಂಗೆಯು ಹರಿಯಲು ಹತ್ತಿತೆಂದರೆ ಸಾಮಾನ್ಯ ಜನರು ದಿಙ್ಮೂಢರಾಗಿಬಿಡುತ್ತಾರೆ ಅವರ ನಾಲಿಗೆಯ ಮೇಲೆ ಸರಸ್ವತಿಯೇ ನಿಂತು ಮಾತಾಡುವಳೋ ಏನೋ ಎಂಬಂತೆ ಭಾಸವಾಗುವದು. ನಡೆ ನುಡಿಗಳ ಸಂಗಮವು ಅವರ ಅವರ ಜೀವನದಲ್ಲಿ ಕಾಣಬರುವದು. ಸಾದಾಜೀವನ ಮತ್ತು ಉಚ್ಚ ವಿಚಾರಸರಣಿಯ ಇವುಗಳ ಮೂರ್ತಿಯೇ ಅವತರಿಸಿದಂತೆ ಸ್ವಾಮಿಗಳು ಕಾಣಬರುವರು. ಅವರ ದರ್ಶನದ ಲಾಭ ಸಿಕ್ಕವರಿಗೆ ಉಲ್ಲಾಸ ವೃತ್ತಿ ಮತ್ತು ಸದಯಾಂತಃಕರಣವು ವಿವಿಕ್ಷಿತ ಸಮಾಜಕ್ಕಾಗಿಯೇ ಇರದೆ ಭಾರತದ ಜನಸಾಮಾನ್ಯರ ಹಿತವನ್ನು ಬಯಸುವ ವಿಶಾಲ ದೃಷ್ಟಿಯು ಅವರಲ್ಲಿ ನೆಲೆಗೊಂಡಿದೆ.

ಬಂಥನಾಳ ಸ್ವಾಮಿಗಳ ವಜ್ರಮಹೋತ್ಸವದ ಕಲ್ಪನೆಯು ಹೊರಬಿದ್ದಾಕ್ಷಣವೇ ಅದು ನೋಡುನೋಡುವಷ್ಟರಲ್ಲಿ, ಎಲ್ಲಕಡೆಗೂ ಬೆಳೆಯಿತು. ಕರ್ನಾಟಕ ಮಹಾರಾಷ್ಟ್ರ ಮತ್ತು ಆಂಧ್ರ ಮುಂತಾದ ನಾಡುಗಳಿಂದ ಹಣವು ತೆರಪಿಲ್ಲದೇ ಬಂದಿತು. ಆದ್ದರಿಂದ ಅದರ ವಿನಿಯೋಗವು ಸತ್ಕಾರ್ಯಕ್ಕಾಗಿ ಆಗುವದು ನಿಶ್ಚಿತವಿದೆ. 'ಚಿನ್ನವು ಮಂಣಿನ ಸಮಾನ' ಎಂದು ಯಾರು ನಡೆದುಕೊಳ್ಳುತ್ತ ಬಂದಿರುವರೋ ಅಂಥವರ ವಜ್ರಮಹೋತ್ಸವ ಕಾರ್ಯಕ್ಕೆ ಭಕ್ತರೂ ಕೂಡಾ ಸಂಕೋಚವಿಲ್ಲದೆ 'ವಜ್ರಮಹೋತ್ಸವ ಸಮಿತಿಯ' ಕರೆಗೆ ಓಗೊಟ್ಟು, ಈ ಸಮಾರಂಭವು ಸೋಲಾಪುರದಲ್ಲಿ ನಡೆಯುವದನು ನೋಡಿದರೆ ಸೋಲಾಪುರರದ ಜನರಿಗೂ ಇದು ಭಾಗ್ಯದ ಮಾತಾಗಿದೆ.

ಶ್ರೀ ಬಂಥನಾಳ ಶಿವಯೋಗಿ ಇವರ ಸನ್ನಿಧಿಯ ಮತ್ತು ಕೃಪಾದೃಷ್ಟಿಯ ಲಾಭವು ಯಾರಿಗೆ ಲಭಿಸಿದೆಯೋ ಅಂಥವರಕೂಡ, ಕೂಡಿ ನಡೆಯುವ ಭಾಗ್ಯವು ಪ್ರಸ್ತುತ ಲೇಖಕನಿಗೆ ದೊರೆತುದಾ

ಅಖಿಲ ಭಾರತೀಯ ವೀರಶೈವ ಮಹಾಸಭೆಯ ರೌಪ್ಯಮಹೋತ್ಸವದ ಅಧಿವೇಶನ ಶ್ರೀಕ್ಷೇತ್ರ ಬಸವಕಲ್ಯಾಣದಲ್ಲಿ ೧೯೫೫ ರಲ್ಲಿ ಒಳ್ಳೇ ವಿಜೃಂಭಣೆಯಿಂದಲೂ ಜರುಗಿಸಲಾಯಿತು. ಮೈಸೂರಿನ ಅಧಿಪತಿಗಳು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಇವರ ಹಸ್ತದಿಂದ ಅಧಿವೇಶನದ ಉದ್ಘಾಟನೆಯು ಜರುಗಿತು. ಮತ್ತು ಶ್ರೀ ಬಂಥನಾಳ ಸ್ವಾಮಿಗಳವರು ಅಧಿವೇಶನದ ಅಧ್ಯಕ್ಷ ಪದವನ್ನು ಸ್ವೀಕರಿಸಿದ್ದರು. ಧರ್ಮಶಕ್ತಿ ರಾಜಶಕ್ತಿ ಗಳೆರಡೂ ಒಂದಾಗಿ ಧರ್ಮರಾಜ್ಯದ ಮೂರ್ತಿಮಂತ ಅವತಾರವನ್ನು ಸಮಾರಂಭ ತಳೆದಿತ್ತು. ಈ ಅಪೂರ್ವ ಸಮಾರಂಭವನ್ನು ನೋಡಿ "ಪುರಾತನರು ಬಂದರೋ" ಎಂಬ ಕಾಲಜ್ಞಾನದ ಅರಿವು ಉಂಟಾಗುತ್ತದೆ.

ಬಸವ ಕಲ್ಯಾಣ ಸ್ಥಳದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ರೌಪ್ಯ ಮಹೋತ್ಸವದಲ್ಲಿ, ಐತಿಹಾಸಿಕ ಅಧಿವೇಶನದ "ಕಾರ್ಯಾಲಯದ ಚಿಟಣೀಸ" ಎಂಬ ಅಧಿಕಾರದ ಜವಾಬ್ದಾರಿ ನನ್ನ ಮೇಲೆ ಇತ್ತು. ಮತ್ತು ಗುರುವಿನ ಕೃಪೆಯಿಂದ ಆ ಕಾರ್ಯವು ನಿರ್ವಿಘ್ನವಾಗಿ ಸಾಂಗವಾಯಿತು. ಕೃತಜ್ಞತೆಯನ್ನು ವ್ಯಕ್ತಮಾಡುವ ಸಮಯವೀಗ ಬಂದಿರುತ್ತದೆ.

ಬಸವ ಕಲ್ಯಾಣದಲ್ಲಿಯ ಚಿರಸ್ಮರಣೀಯ ಅಧಿವೇಶನ ಜರುಗುವ ಮುಂಚೆ ಕೆಲದಿನಗಳ ಹಿಂದೆ ವಿಜಾಪೂರದಲ್ಲಿ ೭೭೦ ಅಮರ ಗಣಂಗಳ ಮಂಟಪ ಮಂಟಪ ಮಹಾ ಪೂಜಾ ಉಂಟಾಗುವದಿತೆ ಶ್ರೀ ಸ್ವಾಮಿಗಳು ಪ್ರಯತ್ನಿಸಿ ಧರ್ಮಭಾವನೆಯನ್ನು ವ್ಯಕ್ತಗೊಳಿಸಿದ್ದಾರೆ. ವಿಜಯ ಕಾಲೇಜ ಮತ್ತು ಇತರ ಎಷ್ಟೋ ಶಿಕ್ಷಣ ಸಂಸ್ಥೆಗಳಿಗೆ ಆಧಾರಭೂತರಾಗಿ, ಸಮಾಜದಲ್ಲಿ ಜ್ಞಾನ-ವಿಜ್ಞಾನ ಪ್ರಸಾರಮಾಡುವ ಆವಶ್ಯಕ ಕಾರ್ಯವನ್ನು ಅವಿಶ್ರಾಂತ ದುಡಿದು ಮೈಮೇಲೆ ತೆಗೆದುಕೊಂಡಿದ್ದರು ಬರೇ ವೀರಶೈವ ಸಂಸ್ಥೆಗಳಲ್ಲದೆ ಇತರ ಸಮಾಜದ ಕಾರ್ಯಗಳಲ್ಲಿ ಅವರು ಹಸ್ತೆ ಪರಹಸ್ತೆ ಸಹಕಾರ್ಯವನ್ನು ನೀಡಿದರು. ಸ್ವಾಮಿಗಳು ಅಲೌಕಿಕವಾದುದನ್ನು ಏನಾದರೂ ತೋರಿಸಬೇಕು, ಮತ್ತು ಲೌಕಿಕದ ಕಡೆಗೆ ದುರ್ಲಕ್ಷಿಸಬೇಕು ಎಂದು ಕೆಲವರ ಅಭಿಪ್ರಾಯವಿರುತ್ತದೆ. ಆದರೆ ನೀರಿನೊಳಗಿಂದ-ಕೆಸರಿನೊಳಗಿಂದ ಹುಟ್ಟಿ ಬೆಳೆಯುವ ಕಮಲವು ಯಾವ ರೀತಿಯಿಂದ ಅದು ನೀರಿನೊಳಗಿಂದ ಮೇಲೆ ಅದರಂತೆ ಕೆಸರಿನೊಳಗಿಂದ ಮೇಲೆ ಬಂದರೂ ಕೂಡಾ ನೀರಿನಿಂದಲೂ ಮತ್ತು ಕೆಸರಿನಿಂದಲೂ ಅದು ಅಲಿಪ್ತವಾಗಿ ಉಳಿದು ಉನ್ನತವಾಗಿ ನಿಲ್ಲುವದೋ ಅದೇ ಪ್ರಕಾರವಾಗಿ ಲೌಕಿಕದಿಂದ ಅಲೌಕಿಕದ ಕಡೆಗೆ ಹೋಗುವದು ಇದೇ ಪುರುಷಾರ್ಥವಿರುವದು. ಯಾವ ನೀರಿನಿಂದ ನಾವು ಮೇಲೆ ಬಂದೆವೋ ಆ ನೀರಿನ ಸಂಬಂಧ ತಪ್ಪಿಸದೇ ತಾನು ನಗುವದು ಮತ್ತು ಜಗತ್ತನ್ನು ನಗಿಸುವದು ಕಮಲಕ್ಕೆ ಕರ್ತವ್ಯವೆನಿಸುವದೋ ಅದೇ ಪ್ರಕಾರವಾಗಿ ಸಮಾಜರೂಪಿ ಜಲದಿಂದ ವಿಕಸಿತವಾದನಂತರ ಅದರ ಅನ್ಯೋನ್ಯ ಸಂಬಂಧವನ್ನು ಅಬಾಧಿತವಾಗಿಟ್ಟು ಅಲೌಕಿಕದ ಸ್ವಾನಂದ ಸುಖವನ್ನು ಅನುಭವಿಸುವ ಮಹತ್ತರ ಕಠಿಣ ಕೆಲಸವನ್ನು ಶ್ರೀಗಳಿಗೆ ಮಾಡಬೇಕಾದುದು ನೋಡಿದರೆ ಬಂಗಾರವು ಐವತ್ತೆರಡು



ಸಲ ಮುಸಿಯಲ್ಲಿ ಕರಗಿಸಿ ತೆಗೆದ ಮೇಲೆ ಅದು ಶುದ್ಧ ಬಂಗಾರವಾಗಿಯೇ ಹೊರಬರುವಂತೆ ಲೌಕಿಕದಲ್ಲಿಯೇ ಸಂಚಾರವನ್ನು ಮಾಡಿದರು; ಅಲೌಕಿಕತ್ವದ ಆನಂದವನ್ನು ಅನುಭವಿಸುವದು ಯೋಗಿಗಳಿಗೆ ಸಾಧ್ಯ. ಅಂಥ ಶಿವಯೋಗಿಗಳು ಬಂಥನಾಳ ಸ್ವಾಮಿಗಳು ಇರುತ್ತಾರೆ.

ಜ್ಯೋತಿಯಿಂದ ಜ್ಯೋತಿ ಬೆಳಗುತ್ತದೆ. ಆತ್ಮಗಳಿಂದ ಆತ್ಮಗಳು ಮಾತಾಡುವವು ನಾವು ಸರ್ವಸಾಧಾರಣ ಜನರು 'ಕನ್ನಡಿ' ಎಂದು ನಮ್ಮೆದುರಿಗೆ ಆದರ್ಶವಾಗಿ ಇಟ್ಟುಕೊಳ್ಳಬೇಗಾಗಿದೆ. ಅದರಲ್ಲಿ ನಮ್ಮ ಪ್ರತಿಬಿಂಬವು ಅಂದಚಂದ ಕಾಣಬೇಕು, ಎಂಬುವದೇ, ಅಪೇಕ್ಷೆಯಾಗಿರುತ್ತದೆ. ಆ ದೃಷ್ಟಿಯಿಂದ ಸಜ್ಜನರ ಚರಿತ್ರೆಗಳ ನಿಶ್ಚಲವಾದ ದೀಪಸ್ತಂಭದ ಬೆಳಕಿನಲ್ಲಿ; ಸಮಾಜ ಸಾಗರದಲ್ಲಿ ನಡೆದಿರುವ ಜೀವನದ ಹಡಗವು ನಿರ್ವಿಘ್ನರೀತಿಯಿಂದ ದಂಡೆಗೆ ಮುಟ್ಟಿತು ಎಂದು ಆತ್ಮ ವಿಶ್ವಾಸವನ್ನು ನಂಬಿ ಶ್ರೀಗಳವರ ಚರಣಕಮಲಗಳಲ್ಲಿ ಈ ಅಲ್ಪ ಸೇವೆಯನ್ನು ಸಾದರಪಡಿಸುತ್ತೇನೆ

## ಇ ತಿ ಶಿ ವ ಮ್

ಶ್ರೀ ಮದ್ ಜಗದ್ಗುರು ಬಂಥನಾಳ ಮಹಾಶಿವಯೋಗೀಶ್ವರರ

## ಜೋಗುಳಪದಗಳು ಹಾಗೂ ವಚನಗಳು

ಲೇಖಕಿ: – ಶ್ರೀಮತಿ ಪುಣ್ಯವತಿ ರಂಗನಗೌಡ ಪಾಟೀಲ (ಗೂಗ್ಯಾಳ) ವಿಜಾಪೂರ.

[ಧಾಟಿ:- ಚಂದ್ರಹಾಸ ಸಿನೇಮಾದೊಳಗಿನ ಜೋ ಜೋ ನಂದನೆ ಜೋ ॥ ಎಂಬಂತೆ]

ಜೋ ಜೋ ಬಾಲಾ ನೀ ಜೋ ॥ ಪ ॥
ನಿತ್ಯ ನಿರಂಜನ ಜೋ, ಸತ್ಯಚಿತ್ತಾನಂದನೆ ಜೋ; ಮೃತ್ಯುಂಜಯ ಸಂಗನಬಸವೇಶನೇ ಜೋ ॥ಅ.ಪ.॥
(ಮಸೂತಿ) ಮಹಾಸತ್ಯ ಗ್ರಾಮದಲ್ಲಿ। ಗೌರಿ ಪರ್ವತೇಶರುದರದಲ್ಲಿ ಶುಭನಾಮ ಸಂವತ್ಸರ ಶ್ರಾವಣ
ಮಂಗಳವಾರ ಪ್ರಭಾತ ಪ್ರಭೆಯಂತೆ ಜೋ ॥ ೧ ॥

ಮೂರು ನವ ಮಾಸಗಳ ಸರಿಸಿ। ಮುಖದೊಳು ಮೂರು ಬಣ್ಣಗಳನ್ನೇ ಇರಿಸಿ। ಇಂದು ಶೇಖರ
ಇಂದು ಚಂದ ಕರ್ನಾಟಕದೊಳ ಅವತರಿಸಿದನೆಂದು ಜೋ ॥ ೨ ॥

ಬಂದು ಸದಮಲಾಂಗಿಯರು। ಕಂದುಗೊರಳ ನಂತಿರುವ ಕಂದನಿಗೆ। ಸಂಧಿದ ಶರಣರ ಸಂಗನ ಬಸವ
ಯ್ಯನೆಂದು ಹೆಸರಿಟ್ಟು ಕರೆದರು ಜೋ ॥ ೩ ॥

ಭಸ್ಮ ರುದ್ರಾಕ್ಷಿಗಳ ಧರಿಸಿ । ಕೊರಳೊಳು ಇಷ್ಟಲಿಂಗವನ್ನೇ ಇರಿಸಿ । ನಿಷ್ಠೆಯಿಂದಲಿ ನೀನು ಶ್ರೇಷ್ಠನಾಗುವನೆಂದು ಹಾರೈಸಿ ಹೋದರು ಜೋ ॥ ೪ ॥

ಭವ ಬಂಧನದೊಳ ಬಿದ್ದ ಭಕ್ತರನು ಹೀಗೆ ಎತ್ತಲು ನಾ ಬಂದಿರುವೆನು । ಎಂದು ಸುಂದರ ತುಂಬಿದ ತೋಳುಗಳ ಎತ್ತುತ್ತಲಾಡುವನು ಜೋ ॥ ೫ ॥

ಲಾಲಾಲಾಲಿಯು ಶ್ರೀ ಲೋಲ ಕಾಲನ ಬಾಧೆಯ ಕಳೆಯುವ ತ್ರಿಶೂಲ । ಮೂಲ ಮಂತ್ರದಲ್ಲಿ ಲೀಲೆ ಮಾಡುತ್ತಿಲಿರುವ ಚೆಲುವ ಅಲ್ಲಪುನಂತ ಬಾಲ ಜೋ ॥ ೬ ॥

ನಿನ್ನನ್ನು ಹೋಲುವರಾರು ? ಕಂದ ಮುನ್ನಿಲ್ಲ ನಿನಗೆ ॥ ಸರಿಯಾರು ಮುನ್ನ ಮೂರು ಲೋಕದೊಳ ಪನ್ನಂಗಧರನಂಥ ಚೆನ್ನಿಗನೆನ್ನಯ್ಯ ಜೋ ॥ ೭ ॥

## ವಚನಗಳು.


(೧) ಸಾಲಿನಲಿ ಕುಳ್ಳಿರಿಸಿ ಶಾಲೆಯನು ಕಲಿಸುವರವ್ವ, ಬಾರದಿರೇ ಬೆತ್ತವನು ತೋರಿಸುವರು ಅದೆಂತೆಂದರೆ ನಮ್ಮ ಹೃದಯಪಟಲದ ಮೇಲೆ ಪರಮ ಪಂಚಾಕ್ಷರವ ಬರೆದು, ಮನದಲೆಕ್ಕಣಿ ಕೆಯ ಪಿಡಿಸಿ, ಭಕ್ತಿರಸದಲ್ಲೆದ್ದಿಸಿ ತೀಡಿಸುವರು ಕಾಣವ್ವಾ – ಕಲಿಕಲಿತು ಎನ್ನಯ ಮಕ್ಕಳು ಮುಂದಾಗಲೆಂಬ ಸುಂದರ ಆಶೆ ಎನ್ನ ಅರಸಪ್ರಿಯ ಶಿವಯೋಗೀಶ್ವರನಿಗೆ ॥

(೨) ಕತ್ತಲೆಯಲಿ ಹೊನ್ನೆಯ ಹುಳವು ತಾನು ಅಧಿಕವೆಂದು ಮೆರೆಯುತಿರಲು ತಾರೆಗಳು ಬರಲು ಆದು ಕಾಣದಕ್ಕಾ, ತಾರೆಗಳು ಅಧಿಕೆನಲು ಚಂದ್ರಮನ ಉದಯಕ್ಕೆ ಮರೆಯಾದವು. ಚಂದ್ರಮನು ತನ್ನಯ ಕಾಂತಿಯಿಂ ಬೀರುತಿರಲು ನೇಸರನು ಮಿಸುಗುವಾಗ ಸರಿದನಕ್ಕಾ ಇಂತಪ್ಪ ಜ್ಞಾನ ಪ್ರಕಾಶ ಸುತ್ತುವರಿದಿರುವದು ನೋಡಾ ಎನ್ನ ಅಂಶಪ್ರಿಯ ಶಿವಯೋಗಿಶ್ವರನ ದಿವ್ಯ ಅಂಘ್ರಿಗಳಲ್ಲಿ


(೩) ಬಡವ ಬಲ್ಲದರೆಂಬ ಭೇದವರಿಯರವ್ವಾ । ಭಕ್ತರು ಅಪುದಲ್ಲೆಂದು ಒಡೆಮ ನೋಡರು । ಮಹಾತ್ಮರ ಮನಸ್ಸಿನೊಳ ಆನೆ ಆಡುಗಳು ಒಂದೇ ಕಾಣವ್ವಾ । ನನ್ನನ್ನು ಗುರುಗಳು ಕಾಣ ರೆನ್ನುವ ಹಾಗಿಲ್ಲವ್ವಾ । ಅಂತರಂಗದ ಅಂತಃಕರುಣ ನಿಷ್ಕಾಮ ಭಕ್ತಗಲ್ಲದೇ ಬಾಹ್ಯದ ಭಕ್ತಿಗೆ ಮೆಚ್ಚುವನೇ ಎನ್ನ ಅಂಶ ಪ್ರಿಯ ಶಿವಯೋಗೀಶ್ವರ.




ಸಂಪಾದಕರು
ಡಾ. ರಾ॥ ಬ॥ ಫ. ಗು. ಹಳಕಟ್ಟಿ,
ಬಿ. ಎ. ಎಲ್. ಎಲ್. ಬಿ. (ಡಿ, ಲಿಟ್.)
ವಿಜಾಪುರ.



ಉಪಸಂಪಾದಕರು
ಶ್ರೀ ಸದಾಶಿವ ಎಮ್. ತೆನಿಹಳ್ಳಿ,
ವಿಜಾಪುರ.



ಒರ್ಲೇಮೂಗಿ ಮಹಾಯಾತ್ರೆಯ ಕಾರ್ಯಕ್ರಮದ ಮಹಾಸನ್ನಿಧಿಯ
ಜಂಬೂ ಮಹೋತ್ಸವವು.





ಮಹಾ ಶಿವಯೋಗಿಗಳವರಿಂದ ಸ್ಥಾಪಿಸಲ್ಪಟ್ಟ ಅನೇಕ ವಿದ್ಯಾಲಯಗಳಲ್ಲಿ
ಒಂದಾದ ವಿಜಯಕಾಲೇಜ, ವಿಜಾಪುರ.

# ವಿಷಯಾನುಕ್ರಮಣಿಕೆ


| ಅ.ನಂ. | ವಿಷಯ | ಪುಟ |
|---|---|---|
| ೧) | ಶ್ರೀ ಮ.ನಿ.ಪ್ರ ಸ್ವ. ಸಂಗನಬಸವ ಶಿವಯೋಗಿಗಳು ಬಂಥನಾಳ ಅವರ ಚರಿತ್ರೆಯು (ಪದ್ಯ)<br>—ಶ್ರೀ ದೋ. ನಾ. ಮಾದನಶೆಟ್ಟಿ, (ಟಕ್ಕೆ) ವಿಜಾಪೂರ | ೧ |
| ೨) | ಶಿಕ್ಷಣ<br>—ಶ್ರೀ ಪಂಡಿತ ಪುಟ್ಟರಾಜ ಗವಾಯಿ ಗದಗ | ೫ |
| ೩) | ವಿಶ್ವಸ್ವಾತಂತ್ರ್ಯ ಬಯಸುವ ಮಹಾವಿಭೂತಿ ಗುರು ಸಂಗನಬಸವ ಶಿವಯೋಗಿ<br>—ಶ್ರೀ ಶಿವಶಂಕರ ಎಂ. ಹಿಳ್ಳಿ ತಡವಲಗಾ | ೯ |
| ೪) | ಶ್ರೀ ಶ್ರೀ ಸಂಗನಬಸವ ಶಿವಯೋಗಿಗಳು<br>—ಶ್ರೀ ಸಿಂಪಿ ಲಿಂಗಣ್ಣ | ೧೪ |
| ೫) | ಜೀವನದ ಧ್ಯೇಯ-ಅಧ್ಯಾತ್ಮಿಕ ವಿಕಾಸ<br>—ಶ್ರೀ ಎಂ. ವರ್ಧಮಾನ ಶಾಸ್ತ್ರಿಗಳವರು, ಸೋಲಾಪೂರ. | ೧೯ |
| ೬) | ಸಮಾಜಸೇವಾ ಪ್ರಶಸ್ತಿ<br>—ಶ್ರೀ ಎ. ಕೆ. ರಾಮೇಶ್ವರ, ದದಾಮಟ್ಟಿ | ೨೬ |
| ೭) | ಅಭಯ ಹಸ್ತ<br>—ಶ್ರೀ ಸಂಗಮೇಶ ಮ. ಬಿರಾದಾರ, ಬಿ. ಎ. (ಆನರ್ಸ) ತುಂಗಳ. | ೩೦ |
| ೮) | ಮುಕ್ತಿಸೋಪಾನ<br>—ಶ್ರೀ ಪಾ. ರಾ. ಪಾಟೀಲ, ಮುಖ್ಯ ಗುರುಗಳು ಚೊಳಚಗುಡ್ಡ | ೪೦ |
| ೯ | ಅಕ್ಕಮಹಾದೇವಿಯವರು ಪಕ್ಷಿಗಳೊಡನೆ ಮಾತನಾಡಿದರೆಂಬುವದು ನಿಜವೇ ?<br>—ಶ್ರೀ ಪಂ. ಸಿದ್ಧರಾಮೇಶ್ವರ ಕುಂಟೋಜಿಮಠ, ಸೋಲಾಪೂರ | ೪೧ |
| ೧೦) | ಭಕ್ತನ ಬೇಡಿಕೆ (ಪದ್ಯ) | ೪೪ |
| ೧೧) | ಪ್ರಪಂಚಿಗರಿಗೆ ಪಾರಮಾರ್ಥವು ಅಸಾಧ್ಯವೇ ?<br>—ಶ್ರೀ ಬಳವಂತ ಧಡೂತಿ, ಮಹಾಲಿಂಗಪೂರ | ೪೬ |
| ೧೨) | ಶ್ರೀ ಮ. ನಿ. ಪ್ರ. ಸ್ವ. ಸಂಗನಬಸವ ಶಿವಯೋಗಿಗಳವರ ವಿದ್ಯಾಭಾಂಡಾರ<br>—ಶ್ರೀ ಭೀ. ಶ್ರೀ. ಕುಲಕರ್ಣಿ, ವಿಜಾಪೂರ | ೫೦ |
| ೧೩) | ಶರಣ ಸುಖಸಂದೇಶ<br>—ನಾ. ಮ. ಸಿದ್ಧರಾಮಯ್ಯ ನಾಗರಹಾಳ | ೫೨ |

೧೪) ವೈಜನ್ವೆ [ಏಕಾಂಕ] ೫೫
—ಶ್ರೀ ನಾ. ಮ. ಬಸವರಾಜ ನಾಗರಹಾಳು.
೧೫) ಸನ್ಯಾಸಿ (ವಿರಕ್ತ) ೬೨
—ಶ್ರೀ ಶಿವಾನಂದ ಸ್ವಾಮಿಗಳು ಗವಿಮಠ, ತೆಗ್ಗಿಹಳ್ಳಿ
೧೬) ತಿರುಪತಿ ವಿಗ್ರಹದ ಬಗ್ಗೆ ಸಂಶೋಧನೆ ೬೮
—ವೀರಶೈವ ಇತಿಹಾಸ ಪ್ರವೀಣ ಶ್ರೀ ಬಿ. ಸಿ. ಶ್ರೀನಿವಾಸರಾಯರು M. A M. R. A. S.
೧೭) ಅಷ್ಟಾವರಣ (ಪದ್ಯ) ೭೦
—ಶ್ರೀ ಎಲ್. ಸಿದ್ಧಗಂಗಾದೇವರು, ಮಂಡ್ಯ
೧೮) ಸ್ವಾಮಿಗಳವರ ವೇಷಭೂಷಣ ೭೩
—ಶ್ರೀ ಗುರುಪುತ್ರ ಫ. ಹಳಕಟ್ಟಿ ವಿಜಾಪೂರ
೧೯) ಮಕ್ಕಳಿಗೆ ಭಯನಿರಸನವಾಗಬೇಕು. ೭೫
—ಶ್ರೀ ವೆಂಕಟೇಶ ಕುಲಕರ್ಣಿ, ಸಂಪಾದಕ– "ಜಾಗೃತ ಭಾರತ" ವಿಜಾಪೂರ
೨೦) ಕರ್ನಾಟಕ ಸಂಸ್ಕೃತಿ ೭೮
—ಶ್ರೀ ಪ್ರೊ. ಎಂ. ಯಾಮುನಾಚಾರ್ಯ ಎಂ. ಎ.
೨೧) ಪ್ರಭುಲಿಂಗಲೀಲೆ ೮೪
—ಶ್ರೀ ಈಶ್ವರಚಂದ್ರ ಚಿಂತಾಮಣಿ ಮುಖ್ಯ ಗುರುಗಳು ಜೈನಾಪೂರ
೨೨) ದಿವ್ಯ ಜ್ಯೋತಿ ಶ್ರೀ ಬಸವಣ್ಣನವರು ೧೦೮
—ಶ್ರೀ ಎಸ್. ಡಿ. ವೋಟಗಿ, B. A. B. Ed.
೨೩) ಲಿಂಗಪೂಜೆಯ ಪರಿಪೂರ್ಣಯೋಗ ೧೧೧
—ಶ್ರೀ ಶಿವಾನಂದ ಸ್ವಾಮಿಗಳು ಗವಿಮಠ, ತೆಗ್ಗಿಹಳ್ಳಿ.
೨೪) ಜಗದಾಧಾರಕ ಶಿವಯೋಗಿ !! ೧೨೧
—ಶ್ರೀ ಸ್ವಾಮಿ ದಯಾನಂದದೇವರು ವಿರಕ್ತಮಠ, M. A. ಯರನಾಳ
೨೫) ಸಮಾಜಸಂಗಿ ಸಂಗನಬಸವ ೧೨೬
—ಶ್ರೀ ಮ ನಿ ಪ್ರ. ಸ್ವ. ಶಾಂತಲಿಂಗ ಶಿವಯೋಗಿಗಳು ಜೇವರಗಿ
೨೬) ಧರ್ಮದ ಪೆಂಪಿನಲ್ಲಿ ಪಂಪಾಪತಿ ಶಿವಯೋಗಿಗಳು ೧೨೯
—ಶ್ರೀ ಸ್ವಾಮಿ ದಯಾನಂದದೇವರು ವಿರಕ್ತಮಠ, ಕಾಮರ್ಸ ಕಾಲೇಜ ವಿಜಾಪೂರ
೨೭) ಪಂಚಾಂಗ (ಪದ್ಯ) ೧೩೨
—ಶ್ರೀ ಲೀಲಾವತಿ ಹೋಳೀಕಟ್ಟಿ, ಮೈಂದರ್ಗಿ
೨೮) ವಕ್ತೃತ್ವ ೧೩೩
—ಶ್ರೀ ಮ. ಮಲ್ಲಪ್ಪ ಜ್ಞಾನಮಂದಿರ ಹಲಗೂರು
೨೯) ಶ್ರೀ ಬಂಥನಾಳ ಶಿವಯೋಗಿಗಳಿಗೆ ಅರ್ಪಿಸಿದ ಮಾನಪತ್ರಗಳು ೧೩೯-೧೪೩
೩೦) ಅನುಭಾವ ಕಿರಣಗಳು ೧೪೪
—ಶ್ರೀ ರಂಗನಗೌಡರು ಎಚ್. ಪಾಟೀಲ, ಗೂಗಿಹಾಳ

ನಿರ್ವಿಕಲ್ಪ ಸಮಾಧಿಯಲ್ಲಿ



ಶ್ರೀ ಬಂಥನಾಳ ಶಿವಯೋಗೀಶ್ವರರು.

ಶ್ರೀ ಮ. ನಿ. ಪ್ರ. ಸ್ವ.

# ಸಂಗನ ಬಸವ ಶಿವಯೋಗಿಗಳು ಬಂಥನಾಳ

## ಅವರ ಚರಿತ್ರೆಯು.

ಲೇಖಕರು:-ದೋ. ನಾ. ಮೂದನಶೆಟ್ಟಿ, ಅಫಜಲಪುರ (ಟಕ್ಕೆ) ವಿಜಾಪೂರ

ಶ್ರೀಗುರುವೆ । ವರಗುರುವೆ
ಮದ್ಗುರುವೆ । ಸದ್ಗುರುವೆ
ಜಗದಗಲ ಚಾರಿತ್ರ್ಯ । ಮುಗಿಲುದ್ದ ಕೀರುತಿ
ಅಗಣಿತ ತಪೋಬಲ ಮಿಗೆ ವೀರ ವಾಣಿಬಲ
ಈ ಪರಿಯ ಪೆಸರಾಂತ ಮೆಹಿಮರಂ ಪೊಗಳ
ಲೆನ್ನಳವೆ ಫಣಿಪತಿಗಸದಳ

ಸಗ್ಗದ ಮಹಿಮೆಯೆ । ಮೈತಾಳಿತೆಂಬಂತೆ
ಜಗದ ಪುಣ್ಯಂ-। ಪುರುಷರೂಪಾದಂತೆ
ಪರಶಿವನೆ ನರನಾಗಿ ಪುಟ್ಟಿ ಬಂದಂತಿಹುದು

ಬಸವ ಬಾಗೇವಾಡಿ ತಾಲೂಕಿನ ಎಸೆವ
ಮಸೂತಿಯಲ್ಲಿ
ಸದಾಚಾರ ಸಂಪನ್ನರಾಗಿ ಮೆರೆದಿಹರು
ಶ್ರೀಪರೂತಯ್ಯ ಗೌರಮ್ಮದೇವಿಯರು
ಅವರ ಭಕ್ತಿಯ ಫಲವು । ಈಶ ಶಕ್ತಿಯ ಒಲವು
ಜನರ ಭವದ ಗೆಲವು । ಶಿವಯೋಗಿಗಳ ನಿಲವು
ಅಯ್ದು ಬರಿಸವು ತುಂಬಿತಾಗಳೆ ಒಯ್ದು ಗುರುಗಳ
ಸನ್ನಿಧಿಗೆ
ಅಯ್ಯಗಳು ಬೆರಗಾಗಿ ಬಾಲನ । ಬುದ್ಧಿ ಚತುರತೆಗೆ
ಶಾಲೆಯಲಿ ಸಲೆ ಓದಿ ಕನ್ನಡ
ಮೇಲು ಪಂಕ್ತಿಗೆ ಸೇರಿದರುಗಡ
ಕಲಿಯುವದು ಜಾಣರಿಗೆ ಏನುತಡ

ಶಾಲೆಬಿಟ್ಟರು ತಮಗೆ ತಾವೆ ಓದಿ ಪಡೆದರು
ಅಮಿತ ಜ್ಞಾನವನು
ಮರಾಠಿ ಭಾಷೆಯು ನೆರೆಯ ಭಾಷೆಯವಾಗಿಹುದು
ಎಂದೆನುತ
ಅರಿತು ಭಾಷೆಯ ತಿರುಳನೆಲ್ಲವನು
ಹಿಂದಿಯನು ಒಂದುಳಿಯದೋದಿದರು-
ಆಂಗ್ಲ ಭಾಷೆಯು ಈಗ ಬೇಕಾಗಿಹುದು ಎಂದೆನುತ
ಬೇಗಬೇಗದಿ ಕಲಿತು ಬಿಟ್ಟಿಹರು
ವೇದವನೆ ಓದಿದರು ಶಾಸ್ತ್ರವೆನೆ ಶಾಸ್ತ್ರೋಕ್ತ
ಪಡಿಸಿದರು.
ಆಗಮಗಳೆಲ್ಲವನು ಸಲೆಬೇಗ ಮುಗಿಸಿಹರು.
ಇಂತಪ್ಪ ಕೀರುತಿಯ ಪುರುಷರು ಬಂಥನಾಳಕೆ
ತಕ್ಕ ಒಡೆಯರು
ಇಂತು ಬಗೆದರು ಭಕ್ತರೆಲ್ಲರು । ಬಂದು ಭಾಗ್ಯದ
ಕಾಲನಾಡಿಂಗೆ

ಕಾಮನಾ ರೂಪವನು । ಸೋಮನಾ ಶಾನಯನು
ಸಾಗರದ ಗಾಂಭೀರ್ಯ । ರವಿಯ ತೇಜವನೆ
ತಾವ್ ಧರಿಸಿಬಂದಿಹರು ಈ ಜಗದಿ

ವಾಣಿ ಮುಂಬಗುತಿಹಳು । ಲಕ್ಷ್ಮಿ ಬೆಂಬತ್ತಿಹಳು
ಸಂಗಮನು ಸಂಗಡಿಗನು।ಬಸವ ಮೈಗಾವಲಿಹನು
ಈ ಪರಿಯ ಪರಿವಾರ ಪಡೆದವಗೆ ಯಾತರದು
ಭಯವೇನು ?

ದಯೆಯು ಹೃದಯಕೆ ಇಂಬು
ಧೈರ್ಯ ಪರ್ವತ ಪ್ರಾಯ
ಭಕ್ತಿ ಬೆಳೆದಿಹುದು ರಕ್ತರಕ್ತದ ತುಂಬ

ಪರೋಪಕಾರಕ್ಕೆ ಆ ಶರೀರವೇ ಮೀಸಲು
ಭೋಗ ಭಾಗ್ಯಂಗಳಿಗೆ ಮನವೆ ಬಲುಬೇಸರು
ದೀನ ದಾರಿದ್ರ್ಯರಿಗೆ ಜೀವನವೆ ಆಸರು.
ಈ ಪರಿಯೆ ಹಿರಿದಾದ ಮಹಿಮೆಯನು ಕಂಡು.

ಕಾಮುಕಾಲ್ದೆಗೆದಿಹನು. ಭಯವು ಇವರೆಡೆಗೆ
ಬರಬಾರದೆಂದು ಅಭಯ ತೊಟ್ಟಿಹುದು
ಅದಕೆ ಭಯವಾಗಿಹುದು.

ಕಷ್ಟಕಾರ್ಪಣ್ಯಗಳು ನಿಟ್ಟುಸಿರು ಬಿಟ್ಟಿಹವು
ತೊಂದರೆಗಳಿಗೆ ಬಂದಿಹುದು ತೊಂದರೆಯು
ಸಂಕಟಗಳು ಸಿಲ್ಕಿಹವು ಸಂಕಟದಿ

ಈ ಪರಿಯ ಕೀರುತಿಯ ಕೇಳಿ ತಳಮಳಿಸಿದವು
ಆಸುರೀವೃತ್ತಿ.
ಜಗವು ಪುಟ್ಟಿಹುದಂದು ಈ ಪರಿಯ ಸೋಲು
ಎಮಗಿಲ್ಲ
ಗೆಲವು ನಮಗಾಗಿ ಬಲು ಮೀಸಲು

ಎಲ್ಲ ಆಸುರೀವೃತ್ತಿ ಒಂದೆಡೆಗೆ ಸಭೆ ಸೇರಿದವು.
ಕಾಮು ಅಧ್ಯಕ್ಷನು । ಲೋಭ ಕೋಶಾಧ್ಯಕ್ಷ
ಕ್ರೋಧ ಮದ ಸೇನಾಧಿಕಾರಿಗಳು ಮತ್ಸರಕೆ
ಮಂತ್ರಿಯ ಕೆಲಸ.

ಅನ್ಯಾಯ ಅಜ್ಞಾನ ಅಂಧತೆ ಅಸತ್ಯ
ದುರಾಚಾರ ದುರ್ಮಾರ್ಗ ದುರಾಗ್ರಹ ಇಂತಪ್ಪ
ಸೈನಿಕರ ಸಂಗಡಿಸಿದರು

ದಿಗ್ಗನೆ ನುಗ್ಗಿದರು ದಾಳಿಗಾರರು ಬೇಗ
ಬುಗ್ಗನೆ ಎದ್ದಿತು ತಪಜ್ವಾಲೆ ಆಗ.
ಕಗ್ಗನೆ ಕುಂದಿದರು ದಾಳಿಗಾರರು । ಹೇಳ
ದೋಡಿದರು.

ತಾಯಿಯೋರ್ವಳು ಬಂದಳಲ್ಲಿಗೆ ಜವುಳ ತೆಗೆಯಲ್ಕೆ.
ಕಿರಿಯ ಮಗನ ಜವುಳ ಕಾರ್ಯದಿ ಮರೆತು
ಹಿರಿಮಗಳ

ಬಾವಿ ಬಿದ್ದಳು ಸಾವಪಡೆದಳು
ನೋವು ತಾಯಿಗೆ ಜೀವಹೋದುವಕೆ

ದುಃಖಭರದಲಿ ಉಕ್ಕಿ ನಾಲಿಗೆ
ಗುರುವ ದೇವರ ಜರೆದಳಾಕ್ಷಣದಿ
ಅತಿ ದುಃಖಿಗುಂಟೇ ಬುದ್ಧಿ ಎಂಬಂತೆ

ಶೀಗಳಾಗಲೇ ಬೇಗ ಬಂದರು । ಕೇಳಲಾಗದು
ಗುರುವ ನಿಂದೆಯ
ಕೈಗಳನು ನೀಡಿದರು ಆಗಲೆ ಸತ್ತ ಶಿಸುವಿಂಗೆ
ಹೋಗಿ ಗವಿಯಲಿ ಬೇಗ ಶಿಸುವಿಗೆ ಜೀವಕೊಡಬೇ
ಕೆಂಮು ಉಸುರಿದರು

ಈ ಸುದಿನ ಮಾಡಿರ್ದ ಪುಣ್ಯವ
ಕಾಸಿಗೂ ಕಡೆಮಾಡಿ ನೀಡಿವೆ
ಶಿಸುವ ಬದುಕಿಸಬೇಕು ಎಂದರು ಅಪನು ಬಲಶಾಲಿ

ದಿಗ್ಗನೆ ಶಿಸು ಎದ್ದು ಕುಳಿತಿತು.
ಹಿಗ್ಗು ತಾಯಿಗೆ ಹೇಳ ತೀರದು
ಸಗ್ಗದಾ ಮಹಿಳೆಯರುಸುರಿದರು ಪುಷ್ಪವೃ
ಷ್ಟಿಯನು.

ನಾಡಿನ ಶಿಕ್ಷಣದ ಏಳ್ಗೆಗೆ ಇಡಿಯ ಜೀವನ
ಮುಡಿಪು ಇಟ್ಟರು.
ಎಲ್ಲ ಕಡೆಯಲಿ ಶಾಲೆ ಅಲ್ಲಲ್ಲಿ ಹಾಯಸ್ಕೂಲು

ಜಿಲ್ಹೆಯಲಿ ಮಿಗಿಲುಂಟು ವಿಜಯಕಾಲೇಜು
ಶಾಲೆ ಕಟ್ಟಡಗಳು ಮೂಲೆ ಮೂಲೆಗು ಆಗಿ.



ಗುಡಿಗೋಪುರಂಗಳು ನೋಡಿದಲ್ಲೆಲ್ಲ
ಶಾಲೆ ಕಟ್ಟಡಗಳಿಗೆ । ಗುಡಿಗೋಪುರಂಗಳಿಗೆ
ಅಡಿಗಲ್ಲ ಇಡುತಿಹರು. ಬೆಂಬಿಡದೆ ಬೆನ್ನತ್ತಿ
ಕಡೆಗಲ್ಲ ಇಡುತಿಹೆವು ಎಂದೆಡೆಗೆ

ವಿಜಯಪುರದುತ್ತರದ ಆ ದಿಬ್ಬ
೭೭೦ ಅಮರಗಣಂಗಳ ಆಗಮನದ ಹಬ್ಬ
ಸಾಹಿತಿಗಳಿಗೆ ಕವಿಗಳಿಗೆ ಆಯಿತ್ತು ಕಬ್ಬ
ವ್ಯಾಪಾರಿಗಳಿಗಾಯಿತ್ತು ಹತ್ತು ವರ್ಷದ ಲಾಭ.

ಅಂದಿನ ಆ ಭಕ್ತಿ. ಅದುವೆ ನಿಜಮುಕ್ತಿ
ಅಂದಿನ ಆ ತ್ಯಾಗ । ಅದುವೆ ಮಹಾಯಾಗ
ಅಂದಿನ ಆ ಆತಿಥ್ಯ. ಅದು ಜನ್ಮಸಾರ್ಥಕ್ಯ
ಹರಿದ ಹೊನ್ನಿನ ಹೊಳೆ ॥ ವಿಜಯಕಾಲೇಜಕ್ಕೆ ಕಳೆ

ನವ್ಯ ಆ ಮಂಟಪದ ಹಿರಿಮೆಯನು.
ದಿವ್ಯ ಸಭೆ ಮಂದಿರದ ಕೀರುತಿಯ
ಭವ್ಯ ಆ ಪರಿಷತ್ತು ಸರ್ವ ಧರ್ಮದ್ದು
ಈ ಸರಿಯ ಸೊಬಗನ್ನು ಬಣ್ಣಿಸಲು ಸಾಕು.
ಸಾವಿರದ ನಾಲಿಗೆಯ ಆದಿಶೇಷನೆಬೇಕು.

ಕರೆದುತರುವದುಯಾಕೆ । ಕಳಿಸಿ ಬರುವದು ಸಾಕು
ಇಲ್ಲಿಯೇ ಇರಲೆಂದು ನಿಶ್ಚಯಿಸಿ.
ನೆಲೆಯ ನಿಲಿಸಿಹರು ಸಲೆ ಲಿಂಗರೂಪಾಗಿ ಅಮರ
ಗಣಂಗಳಿಗೆಲ್ಲ.

ಮಾತಿನ ಮಹಿಮೆಯನು ಬಣ್ಣಿಪುದು ಬಹು ಕಷ್ಟ
ಮಾತು ಮಾಣಿಕದೊಡವೆ । ಮಾತುತಾ ಮುತ್ತಿನಾ
ಭರಣ

ಮಾತು ಸ್ಪಟಿಕದ ಮಣಿ । ಮಾತು ಚಿನ್ನದ ಖಣಿ
ಮಾತಿನಲಿ ರಸದೂಟ । ಮಾತಿನಲಿ ಚಲ್ಲಾಟ.
ಮಾತಿನಲಿ ಪಿಯೂಷ । ಮಾತಿನಲಿ ಸಂತೋಷ.

ರಣಕಹಳೆಯಂತಿರುವ ಬಲುವೀರ ವಾಣಿಯಿಂ
ಬಹು ಜನರು ರಣಧೀರರಾಗಿಹರು
ನಕ್ಕುನಗಿಸುವ ಹಾಸ್ಯ ರಸವಾಣಿಯಿಂ.

ಸಂಸಾರ ಸಾಗರದ ದುಃಖತಾ ಹರಿಯಿತ್ತು.
ಪ್ರೇಮಪೂರಿತವಾದ ಮಾತೃಮಯ ವಾಣಿಯಿಂ
ಸಂಸಾರ ಸಾಗರದಿ ಸೌಖ್ಯ ತಾ ನೆಲೆಸಿತ್ತು

ಸಿಡಿ ಮದ್ದಿನಂತಿರುವ ಕಡುಕೋಪ ವಾಣಿಯಿಂ
ಸಂಸಾರ ಸಾಗರದಿ ಸೌಖ್ಯ ತಾ ನೆಲೆಸಿತ್ತು
ಸಿಡಿಮದ್ದಿನಂತಿರುವ ಕಡುಕೋಪ ವಾಣಿಯಿಂ

ಅಡಗಿಹವು ಸಕಲ ದುರ್ಗುಣಾಂಗಳು ಎಲ್ಲ
ಹಿತವಚನದಂತಿರುವ ತತ್ವಮಯ ವಾಣಿಯಿಂ
ಅತಿಸೌಖ್ಯ ಸಂಪತ್ತು ದೊರೆತಿತ್ತು ಜೀವನದಿ

ಅನ್ನದಾನಿಗಳಾಗಿ । ಪುಣ್ಯದನಿಧಿಯಾಗಿ
ಜ್ಞಾನದಾನಿಗಳಾಗಿ । ಜನ್ಮಸಾರ್ಥಕರಾಗಿ

ದಾರಿಹೋಕರಿಗೆಲ್ಲ । ದಾರಿ ದೀಪಕರಾಗಿ
ಭವರೋಗಿಗಳಿಗೆಲ್ಲ । ದಿವ್ಯ ವೈದ್ಯರು ಆಗಿ

ಬ್ರಹ್ಮಚಾರಿಗಳಾಗಿ । ನೇಮಸಾಧಕರಾಗಿ
ಸತ್ಯಸಂಧರು ಆಗಿ । ನಿತ್ಯಪೂಜಕರಾಗಿ

ಭಕ್ತಿವಂತರು ಆಗಿ । ಭಕ್ತವತ್ಸಲರಾಗಿ
ದಯಾಭರಿತರು ಆಗಿ । ಮಾಯೆಬಿಟ್ಟವರಾಗಿ

ಪುರಾಣ ಪುರುಷರು ಆಗಿ । ಕ್ರಾಂತಿಕಾರರುಆಗಿ
ವಿಶ್ವಬಂಧುಗಳಾಗಿ । ಆಸೆ ಬಿಟ್ಟವರಾಗಿ

ಸತ್ವ ಶಾಲಿಗಳಾಗಿ । ತತ್ವಬಿಡದವರಾಗಿ
ವಿದ್ಯಾದಾನಿಗಳಾಗಿ । ಶುದ್ಧ ಜೀವಿಗಳಾಗಿ
ಧರ್ಮ ಬೋಧಕರಾಗಿ । ಕರ್ಮನಿರತರು ಆಗಿ

ಸರ್ವ ತಿಳಿದವರಾಗಿ । ಧೈರ್ಯಶಾಲಿಗಳಾಗಿ
ಬಾಳಿದರು ಭವದಲ್ಲಿ । ಬೆಳಗಿದರು ಜಗವನ್ನೆ

ಅನ್ಯಾಯ ಅಸತ್ಯಗಳ ಗೋರಿಯನೆ ತೋಡಿದರು
ಇನ್ನೇನು ಸನ್ಮಾರ್ಗ ದಾರಿಯನೆ ಮಾಡಿದರು

ಬಾಳದಾರಿಯ ಬದಿಗೆ ನೆಟ್ಟಿಹರು ಕೈಗಂಬ
ಬಾಳದಾರಿಯ ಬದಿಗೆ ಹಚ್ಚಿಹರು ಕೈದೀಪ

ನೆರಳು ಕೊಡುವ ಗಿಡಗಳಿದ್ದಿಹವು ಮುಗಿಲುದ್ದ
ದಾರಿಗರ ನೆರಳಾದುವಲ್ಲದೆಯೆ ಹಣ್ಣುಗಳು
ಸದಾಸಿದ್ಧ

ಕಳ್ಳರಿಗೆ ಸುಳ್ಳರಿಗೆ ಅಂಜಿಕೆಯು ಬಂದಿಹುದು.
ಒಳ್ಳೆಯವರಿಗಾಗಿಯೇ ಈ ಕಾಲ ಸಂಧಿಸಿತು.

ವೀರಶೈವರ ಕಣ್ಣು ಜಗದ ಜೀವರ ಪ್ರಾಣ.
ನಿಮ್ಮ ಮಹಿಮೆಯ ಫಲದಿ । ಕುಂಟ
ಕುಣಿದಾಡಿದನು.

ತಮ್ಮ ದಯೆಯ ಫಲದಿ । ಹೆಳವ ನಡೆದಾಡಿದನು.
ಮೂಕ ಮಾತಾಡಿದನು । ನಾಕ ನೆರೆಮನೆಯಾಯ್ತು

ಬೇಸರವು ಬಯಲಾಗಿ । ಸಂಸಾರ ರಸವಾಗಿ
ಕಷ್ಟ ದಾರಿದ್ರ್ಯಗಳು ನಷ್ಟವಾಗಿಹವು

ನಿಟ್ಟುಸಿರು ಬಿಟ್ಟೋಡಿ ಹೋಗಿಹವು
ದುಃಖಗಳು ದೂರಾಗಿ । ಅಕ್ಕರೆಯು ಆಸರೆಯು

ಸೊಕ್ಕುತನ ದೂರಾಗಿ । ಉಕ್ಕಿದುದು ವಿನಯರಸ
ಕಾಮು ಹಿಂದೋಡಿದನು । ಪ್ರೇಮ ಬಂದಿಳಿದಿಹನು
ತಮ್ಮ ಪುಣ್ಯದ ಫಲದಿ । ನಾಡಿನಲಿ ಶಾಂತತೆಯು
ತಮ್ಮ ಮಹಿಮೆಯ ಫಲದಿ । ನಾಡಿನಲಿ
ಸೌಖ್ಯತೆಯು

ತಮ್ಮ ದೈವದ ಫಲದಿ । ನಾಡೆಲ್ಲರಿಗೆ ಸುದೈವ
ಪರಶು ಹಸ್ತದ ಫಲದಿ । ನಾಡೆಲ್ಲರಿಗೆ ಹರುಷ

ಭಕ್ತಿಯೋಗದ ಫಲದಿ । ಜಗಕೆ ಭಕ್ತಿಯ ಬೀಜ
ಕರ್ಮಯೋಗದ ಫಲದಿ । ನಾಡೆಲ್ಲ ಕಾರ್ಮಿಕರು

ಧರ್ಮ ಬುದ್ಧಿಯ ಫಲದಿ । ನಾಡೆಲ್ಲ ಧಾರ್ಮಿಕರು.
ತಮ್ಮ ಪೂಜೆಯ ಫಲದಿ । ನಾಡೆಲ್ಲ ಪೂಜಕರು

ನಿಮ್ಮ ಸತ್ಯದ ಫಲದಿ । ನಾಡೆಲ್ಲ ಸಾತ್ವಿಕರು
ಅಮೃತವಾಣಿಯ ಫಲದಿ । ನಾಡೆಲ್ಲರಿಗೆ ಅಮೃತರಸ

ತಮ್ಮ ಸಾಧನ ಫಲದಿ । ನಾಡೆಲ್ಲ ಸಾಧಕರು
ಎಷ್ಟು ಪೇಳಿದರೇನು ಚರಿತೆಯ । ಎಷ್ಟು ಹೇಳಿದ
ಕೀರುತಿ

ಮುಗಿಯಿತೆನ್ನುವ ಮಾತು ಆಗದದು
ಅದಕೆ ಮುಗಿಸುವೆ ತೊದಲುನುಡಿಯನು

ಗುರುಚರಣದ ಪರಮದಿಾನ
ಅರಿಯಲು ಇದುವೆ ಸೌಖ್ಯದ ನಿವಾಸ

ನಿರುತ ಜನುಮಕೆ ಬೇಕು ಇಂಥ ಸಹವಾಸ
ಗುರುವಿಂಗೆ ಕುಂದಿರದ ಕೀರುತಿಯ

ಗುರುವಿಂಗೆ ಅಪರಿಮಿತ ಆಯುಷ್ಯ
ಗುರುವಿಂಗೆ ಪರಮ ಆರೋಗ್ಯವು
ಹಾರೈಸಿ ಮುಗಿಸುವೆನು ಕಿರುಲೇಖ

# ಶಿಕ್ಷಣ

ಲೇಖಕರು
ಉಭಯ ಗಾಯನಾಚಾರ್ಯ, ತ್ರಿಭಾಷಾ ಕವಿ, ಜನ್ಮಾಂಧ
**ಪಂಡಿತ ಪುಟ್ಟರಾಜ ಗವಾಯಿ, ವಿರೇಶ್ವರ ಪುಣ್ಯಾಶ್ರಮ, ಗದಗ.**

ಬಂಥನಾಳದ ಶ್ರೀ ಮ. ನಿ. ಪ್ರ ಪರಮ ಪೂಜ್ಯ ಸಂಗನ ಬಸವ ಮಹಾಸ್ವಾಮಿಗಳವರ ದಿವ್ಯ ಚರಣಕ್ಕೆ ಸಮರ್ಪಿತವಾಗುವ ಈ ಸ್ಮಾರಕ ಗ್ರಂಥವೆಂಬ ಕಮಲ ಪುಷ್ಪದ ಅನೇಕ ಪಂಡಿತವರ್ಯರ ಲೇಖಿಗಳೆಂಬ ದಳ, ಕೇಸರೆ, ನಾಳ, ಕೆಂದ, ಕರಣಿಕೆಗಳ ಮಧ್ಯದಲ್ಲಿ ನನ್ನ ಈ ಲೇಖವು ಒಂದು ಕೇಸರವೆಂದು ನಾನು ಭಾವಿಸಿದ್ದೇನೆ. ಕಮಲವು ಪೂರ್ತಿಯಾಗಿ ವಿಕಶಿತವಾಗಿ ಪ್ರಿಯವಾಗಬೇಕಾದರೆ ಆ ಕೇಸರಕ್ಕೂ ಕೂಡಾ ಆ ಕಮಲವನ್ನು ನಿರ್ಮಿಸಿದ ನಿಸರ್ಗವು ಸದವಕಾಶವನ್ನು ಕಲ್ಪಿಸಿ ಕೊಡಲೇ ಬೇಕಲ್ಲವೆ ? ಹಾಗೆಯೇ ನನ್ನ ಅಲ್ಪ ಲೇಖನಕ್ಕೆ ಅವಕಾಶ ದೊರೆತಿರಬೇಕೆಂದು ನನ್ನ ಭಾವನೆ. ಅದಕ್ಕಾಗಿ ಈ ಗ್ರಂಥ ನಿರ್ಮಾಪಕ ಸಮಿತಿಗೆ ಕೃತಜ್ಞನಾಗಿ ಈ ಲೇಖನ ಪ್ರಾರಂಭಕ್ಕಾಗಿ ಈ ಗ್ರಂಥ ನಾಯಕರಾದ ಶ್ರೀ ಶಿವಯೋಗಿಗಳವರನ್ನು ಅಭಿನಂದಿಸುವೆ. ಏಕೆಂದರೆ, ಪರಮ ಪೂಜ್ಯ ಬಂಥನಾಳದ ಮಹಾ ಸ್ವಾಮಿಗಳವರು ಶಿಕ್ಷಣದ ಕಾರ್ಯಕ್ಷೇತ್ರದಲ್ಲಿ ಕುರುಹಾಗಿ, ವಿಜಾಪುರದಲ್ಲಿ ವಿಜಯ ಮಹಾ ವಿದ್ಯಾಲಯವು ಕಂಗೊಳಿಸುತ್ತಲಿದೆ ಹಾಗೂ ಏಳನೂರೆಪ್ಪತ್ತು ಅಮರ ಗಣಂಗಳ ಪೂಜೆ, ಅಷ್ಟೇ ಅಲ್ಲದೆ ತತ್ಪೂಜ್ಯರಿಂದ ಅಲ್ಲಲ್ಲಿ ನಡೆಸಲ್ಪಡುವ ಪುರಾಣ ಪ್ರವಚನಗಳು ಜನತೆಗೆ ಸಾಕ್ಷಿಯಾಗಿವೆ. ಇದರಿಂದ ನಾವು ತಿಳಿದುಕೊಳ್ಳತಕ್ಕದ್ದಿಷ್ಟೆ, ಸಮಸ್ತ ಜಗತ್ತಿಗೇನೇ ಶಿಕ್ಷಣವು ಅಗತ್ಯವಾಗಿದೆ. ಈ ಶಿಕ್ಷಣದ ಬಲದಿಂದ ಎಂಥ ಕ್ರೂರ ಪ್ರಾಣಿಗಳನ್ನೂ ಸಹ ನಮ್ಮ ಯಿಚ್ಛಾ ಪ್ರಕಾರ ನಡೆಸಿಕೊಳ್ಳಬಹುದು. ಇಷ್ಟೇ ಅಲ್ಲ; ಅಚೇತನ ವಸ್ತುಗಳು ಕೂಡ ನಮಗೆ ಪ್ರೀಯವಾಗಬೇಕಾದರೆ ಉಚಿತವಾದ ಸಂಸ್ಕಾರ ರೂಪಿ ಶಿಕ್ಷಣವನ್ನು ಕೊಟ್ಟೇ ತೀರಬೇಕಾಗುವದು. ಅಂದ ಮೇಲೆ ಮನುಷ್ಯನಿಗೆ ಈ ಶಿಕ್ಷಣದ ಅವಶ್ಯಕತೆ ಎಷ್ಟಿದೆ ಎಂಬುದನ್ನು ವಾಚಕರೇ ಊಹಿಸತಕ್ಕದ್ದು. ಬಹಳ ಮಾತೇನು, ಈ ಶಿಕ್ಷಣದ ಪ್ರಭಾವದಿಂದಲೇ ಮನುಷ್ಯನು ದೇವನಾಗುವನು. ಅದು ತಪ್ಪಿದರೆ ಮನುಷ್ಯನು ಅಚೇತನ ವರ್ಗಕ್ಕೆ ಸೇರುವನು. ಇಂಥಾ ಪ್ರಗತಿಯ ಕಾಲದಲ್ಲಿಯೂ ಕೂಡ ಮನುಷ್ಯರು ಮನುಷ್ಯರಾಗಿ ಬೆಳಿಯಬೇಕಾದರೆ ಈ ಶಿಕ್ಷಣವು ಅವಶ್ಯವಾಗಿ ಬೇಕೇ ಬೇಕು. ಏಕೆಂದರೆ, ವಿದ್ಯಾ ಶಿಕ್ಷಣ, ನೀತಿ ಶಿಕ್ಷಣ, ಧರ್ಮ ಶಿಕ್ಷಣ ಹೀಗೆ ಶಿಕ್ಷಣವು ಮೂರು ಪ್ರಕಾರವಾಗಿದೆ. ಈ ಮೂರರಲ್ಲಿ ಯಾರು ಉತ್ತೀರ್ಣರಾಗುವರೋ ಅವರೇ ದೇವ ವರ್ಗದ ಮನುಷ್ಯರು. ರೀತಿ, ಧರ್ಮ, ತತ್ವಗಳು ನಮಗೆ ಚನ್ನಾಗಿ ತಿಳಿಯಬೇಕಾದರೆ ಮೊದಲು ನಾವು ವಿದ್ಯಾ ಶಿಕ್ಷಣದಲ್ಲಿ ಮುಂದುವರಿಯಬೇಕು. ಅದಿಲ್ಲದಿದ್ದರೆ ಮನುಷ್ಯನು ಈಗಿನ ಮನ್ವಂತರದಲ್ಲಿ ಬಾಳುವದೇ ಕಷ್ಟ. ಅದನ್ನರಿತುಕೊಂಡೇ ಜ್ಞಾನಿಗಳು ಹೀಗೆ ಸಾರಿರುವರುಃ—

ವಿಹ್ಯಾನಾಮ ನರಸ್ಯ ರೂಪಮಧಿಕಂ।
ಪ್ರಚ್ಛನ್ನ ಗುಪ್ತಂ ಧನಂ।
ವಿದ್ಯಾ ಭೋಗಕರೀ ಯಶಃ ಸುಖಕರೀ ವಿದ್ಯಾ ಗುರೂಣಾಂ ಗುರುಃ ॥
ವಿದ್ಯಾ ಬಂಧು ಜನೊ ವಿದೇಶ ಗಮನೆ।
ವಿದ್ಯಾ ಪರಾ ದೇವತಾ।
ವಿದ್ಯಾ ರಾಜಿಸು ಪೂಜ್ಯತೆ ನೆಹಧನಂ।
ವಿದ್ಯಾ ವಿಹೀನಃ ಪಶುಃ ॥

ಎಂಬ ಈ ಸುಭಾಷಿತ ಶ್ಲೋಕದಲ್ಲಿ ವಿದ್ಯೆಯ ಮಹತ್ವವು ಸಾಕಷ್ಟು ವರ್ಣಿತವಾಗಿದೆ. ಇದರ ತಾತ್ಪರ್ಯವಿಷ್ಟೆ, ಮನುಷ್ಯನಿಗೆ ಪ್ರಾಯವಾದ ರೂಪ, ದ್ರವ್ಯ, ಭೋಗ, ಕೀರ್ತಿ, ಸುಖ ಇವು ವಿದ್ಯೆಯಿಂದಲೆ ಲಭಿಸುವವಲ್ಲದೆ, ವಿದ್ಯೆಯ ಬಂಧು ಜನವು, ಶ್ರೇಷ್ಠ ದೇವತೆಯು ಹಾಗೂ ಗುರುವಿಗೂ ಗುರುವಾಗಿ, ರಾಜರಲ್ಲಿಯೂ ಕೂಡ ಮರ್ಯಾದೆಯನ್ನು ಕೊಡುತ್ತದೆ. ದ್ರವ್ಯಕ್ಕಿಂತಲೂ ಮಹಾ ಗೌರವ ಸ್ಥಾನದಲ್ಲಿರುವ ವಿದ್ಯೆಯನ್ನು ಯಾವಾತನು ಸಂಗ್ರಹಿಸಿಕೊಂಡಿಲ್ಲವೋ ಆತನು ಮನುಷ್ಯನೇ ಅಲ್ಲವೆಂದು ಈ ಪದ್ಯದ ಸಾರಾಂಶವಿದೆ. ಇದರಂತೆ ಒಬ್ಬ ಕನ್ನಡ ಕವಿಯೂ ಕೂಡ ಬಹು ಚನ್ನಾಗಿ ವರ್ಣಿಸಿದ್ದಾನೆ. ಅದೇನೆಂದರೆ;—

ಒಡಲೊಳಗಿರ್ಪುದು ವಿದ್ಯೆಯು।
ನಡೆದರೆ ತಾಂ ಭಾರವಲ್ಲ। ಕಳ್ಳರ್ ಕದಿಯರ್ ॥
ಪೊಡವಿಪಾಲರು ಮುನಿದುಕೊಳ್ಳರು।
ಒಡಹುಟ್ಟಿದವರ್ ಪಾಲನು ಬೇಡರು ಎಂದು।

ಈ ಪದ್ಯದಿಂದಲೂ ನಮಗೆ ವಿದ್ಯೆಯ ಮಹತ್ವವು ಸ್ಪಷ್ಟವಾಗಿ ತಿಳಿಯುತ್ತದೆ. ಉಪನಿಷತ್ತಿನಲ್ಲಿಯೂ ಕೂಡ ವಿದ್ಯೆಯ ಮಹತ್ವವು ವರ್ಣಿತವಾಗಿದೆ. ಉಪನಿಷತ್ಕಾರರು ಈ ವಿದ್ಯೆಯಲ್ಲಿ ಎರಡು ಭೇದ ಮಾಡಿದ್ದಾರೆ. ಅವು ಯಾವವೆಂದರೆ:— (೧) ಪರಾವಿದ್ಯೆ (೨) ಅಪರಾ ವಿದ್ಯೆ. ಪರಾವಿದ್ಯೆಯಂದರೆ ಲೌಕಿಕ ವಿದ್ಯೆಯು. ಅಪರಾ ವಿದ್ಯೆಯಂದರೆ ಅಲೌಕಿಕ ವಿದ್ಯೆಯು. ಇದಕ್ಕೆ ಸದ್ವಿದ್ಯೆ, ಪಾರಮಾರ್ಥ ವಿದ್ಯೆ, ಆತ್ಮವಿದ್ಯೆ ಇತ್ಯಾದಿ ಅನೇಕ ನಾಮಗಳು ಕೂಡಾ ಪ್ರಸಿದ್ಧವಾಗಿವೆ. ಲೌಕಿಕ ವಿದ್ಯೆಯಾದರು ಈ ಪಾರಮಾರ್ಥವಿದ್ಯೆಗೆ ಸಾಧನವಾಗಿದೆ. ಪಾರಮಾರ್ಥ ವಿದ್ಯೆಯು ಪರಮಾತ್ಮನ ಸಾಕ್ಷಾತ್ಕಾರಕ್ಕು ಹಾಗೂ ಜಿವಾತ್ಮ ಪರಮಾತ್ಮರ ಏಕತ್ವ ಸಾಧನೆಗೂ ಕಾರಣವಾಗಿದೆ. ಅಂತೆ ಈಶಾ ವಾಶ್ಯೋಪನಿಷತ್ತು ಹೀಗೆ ಸಾರಿರುವದು.

ಅವಿದ್ಯೆಯಾ ಮೃತ್ಯುನ್ ತೀರ್ತ್ವಾ।
ವಿದ್ಯೆಯಾನ್ ಅಮೃತಮಶ್ರುಂತೆ ॥

ಅಂದಂತೆ ಸತ್ಕರ್ಮದಿಂದ ಮೃತ್ಯುವನ್ನುದಾಟ ವಿದ್ಯೆಯಿಂದ (ಜ್ಞಾನದಿಂದ) ಮೋಕ್ಷವನ್ನು ಪಡೆಯುತ್ತಾನೆ. ಮೋಕ್ಷವೆಂದರೆ ನಿತ್ಯಾನಂದ ಇದರಿಂದ ಶಿಕ್ಷಣದ ಅಗತ್ಯವು ಮನುಷ್ಯನಿಗೆ ಎಷ್ಟಿದೆಯೆಂಬುದನ್ನು ವಾಚಕರೆ ಅರಿತು ಕೊಳ್ಳಬೇಕು. ಕೆಲವರು ಈ ಆತ್ಮ ವಿದ್ಯೆಯನ್ನು ಅಲಕ್ಷಿಸಿ ತಾವು ಕಲಿತ ಲೌಕಕ



ವಿದ್ಯೆಗಳನ್ನು ಜೀವನದ ಸಾಧನೆಗಾಗಿಯೆ ಉಪಯೋಗಿಸಿಕೊಳ್ಳುತ್ತಾರೆ. ಇದು ಶುದ್ಧ ತಪ್ಪುದು ಕೇವಲ ಜೀವನೋಪಕಾಯಕ್ಕಾಗಿಯೆ ಆದರೆ ವಿದ್ಯೆಯನ್ನೇನು ಕಲಿಯುವದೇನು ಅಗತ್ಯವಿಲ್ಲ. ಏಕೆಂದರೆ ಪಶುಪಕ್ಷ್ಯಾದಿಗಳು ತಮ್ಮ ಜೀವನಕ್ಕಾಗಿ ವಿದ್ಯೆಯನ್ನೇನು ಕಲಿತಿರುವದಿಲ್ಲ. ಇದನ್ನರಿತುಕೊಂಡೆ ನಮ್ಮ ಪೂರ್ವಜರು ತಾವು ಕಲಿತ ಎಲ್ಲ ಲೌಕಿಕ ವಿದ್ಯೆಗಳನ್ನು ಆತ್ಮ ಸಾಕ್ಷಾತ್ಕಾರಕ್ಕಾಗಿಯೇ ಉಪಯೋಗಿಸಿಕೊಂಡಿರುವರು. ಉದಾಹರಣೆಗಾಗಿಃ- ಮಗ್ಗಿ ಮಾಯಿದೇವರು, ನಿಜಗುಣ ಶಿವಯೋಗಿಗಳು, ಸರ್ಪ–ಭೂಷಣ ಶಿವಯೋಗಿಗಳು; ಮಹಾಂತ ಶಿವಯೋಗಿಗಳು, ಬಸವೇಶ್ವರಾದಿ ಶರಣರು ಹಾಗೂ ಇತರರು ಬರೆದ ಗ್ರಂಥಗಳು ನಮಗೆ ಸಾಕ್ಷಿಯಾಗಿವೆ. ಈ ವಿಷಯವನ್ನು ಬಸವಣ್ಣನವರ ಒಂದು ವಚನದಿಂದ ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಅದಾವದೆಂದರೆಃ—

ಓದಿದರೇನು ಕೇಳಿದರೇನು, ಓದಿತ್ತು ಕಾಣಿರೋ ಶುಕವು।
ಶಿವಪಥ, ಶಿವಜ್ಞಾನ ವಿಲ್ಲದನ್ನಕ್ಕರ।
ಓದಿದರೇನು ಕೇಳಿದರೇನು।
ಓದಿದ ಫಲ ನಮ್ಮ ಕೂಡಲ ಸಂಗಮ।
ಶರಣ ಮಾದಾರ ಚನ್ನಯ್ಯನಿಗಾಯಿತು.

ಇನ್ನೂ ಒಂದು ವಚನದಲ್ಲಿ ಅವರೇ ಹೀಗೆ ಹೇಳುತ್ತಾರೆ.

ಮಾತು ಬಲ್ಲಾತ ಜಾಣನಲ್ಲ ಗೀತವಬಲ್ಲಾತ ಜಾಣನೆಲ್ಲ।
ಜಾಣನು ಆತ ಜಾಣನು ಲಿಂಗವನೆರೆ ನಂಬಿದಾತ ಜಾಣನು.
ಜಂಗಮಕ್ಕೆ ಸಲಿಸುವಾತ ಜಾಣನು ನಮ್ಮ ಕೂಡಲ ಸಂಗನ ಶರಣನು ॥

ಇಂಥ ಜಾಣತನವನ್ನು ಸಂಪಾದಿಸುವದಕ್ಕಾಗಿಯೇ ನಾವು ಲೌಕಿಕ ವಿದ್ಯೆಯನ್ನು ಕಲಿಯಬೇಕು. ಇನ್ನು ಸುಲಭವಾಗಿ ಸಾಧಿಸಬೇಕಾದರೆ ನೈತಿಕ ಶಿಕ್ಷಣವು ಅತ್ಯಗತ್ಯವಿದೆ. ಈ ನೈತಿಕ ಶಿಕ್ಷಣವು ಶೈಸವಾವಸ್ಥೆಯಲ್ಲಿ ಮನೆಯಲ್ಲಿಯೇ ಪ್ರಾರಂಭವಾಗುವದು. ಈ ನೈತಿಕ ಶಿಕ್ಷಣದ ಮಹತ್ವದಿಂದ ಮನುಷ್ಯನು ಅಂತರಂಗ ಬಹಿರಂಗಗಳು ಶುದ್ಧವಾಗಿ ಪರಮಾತ್ಮನ ಕೃಪೆಯು ಇಹು ತೀವ್ರವಾಗಿ ಸಂಪಾದಿಸುವನು. ಇದಕ್ಕೆ ಶ್ರೀಬಸವಣ್ಣನವರ ವಚನವೇ ಪ್ರಮಾಣ.

ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ ಮುನಿಯಬೇಡ
ಅನ್ಯರಿಗಸಯ್ಯಪಡಬೇಡ ಇತರರ ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ ಇದೇ ನಮ್ಮ ಕೂಡಲಸಂಗನೊಲಿಸುವಪರಿ.

ಇದಕ್ಕೆ ಶ್ರೀ ಮಹಾತ್ಮಾ ಗಾಂಧೀಜಿಯವರು ಪಂಚಶೀಲ ತತ್ವವೆಂದು ಒಪ್ಪಿಕೊಂಡಿರುವರು. ಅಹಿಂಸಾ, ಸತ್ಯ, ಅಸ್ತೆಯ, ಬ್ರಹ್ಮಚರ್ಯ, ಅಪರಿಗ್ರಹ ಈ ಪಂಚಶೀಲ ತತ್ವಗಳು ಶಿಕ್ಷಣವಿಲ್ಲದೆ ಹೇಗೆ ಸಾಧ್ಯವಾಗುವವು? ಅಲ್ಲದೆ ನೈತಿಕ ಶಿಕ್ಷಣವಿಲ್ಲದ ಮನುಷ್ಯನು ಭೂಮಿಯ ಮೇಲೆ ಬಾಳುವದಾದರೂ ಹೇಗೆ ಸಾಧ್ಯ? ಅವನ ವಿದ್ಯೆ, ಅವನ ಸಂಪತ್ತು, ಅವನ ಓಜಸ್ಸು, ತೇಜಸ್ಸು ಎಲ್ಲವೂ ವ್ಯರ್ಥ.

ವಾಗಿ ಹೋಗುವವು. ಇದಕ್ಕೆ ಉದಾಹರಣವಾಗಿ ರಾವಣ, ಬಾಣಾಸುರ, ಬಲಚಕ್ರವರ್ತಿ ಮೊದಲಾದವರ ಚರಿತ್ರೆಗಳು ಹೇರಳವಾಗಿಸಿಗುತ್ತವೆ. ಅವನ್ನು ಅರಿತುಕೊಂಡು ನಾವು ನೀತಿವಿಧರಾಗಿ ಅದರಂತೆ ಆಚರಿಸಿದರೆ ನಮ್ಮ ಬಾಳವು ಸಾರ್ಥಕವಾಗುವದು. ನೀತಿಯಿಲ್ಲದ ವಿದ್ಯೆಯು ತಂತಿಯಿಲ್ಲದ ವೀಣೆಯಿಂತೆ ನಿರೂಪಯೋಗಿಯಾಗುವದು. ವಿದ್ಯೆಯಿಲ್ಲದೆ ಇದ್ದರು ಮನುಷ್ಯನು ಬಾಳಬಹುದು. ಆದರೆ ನೀತಿಯಿಲ್ಲದೆ ಇದ್ದರೆ, ಜಗತ್ತಿನಲ್ಲಿ ಬಾಳುವದು ಸಾಧ್ಯವಿಲ್ಲ. ಆದರೆ ನೀತಿ ಶಿಕ್ಷಣವು ಸಾಮಾನ್ಯವಾಗಿ ಎಲ್ಲ ಮಾತೆಯರಿಗೂ ಅತ್ಯಗತ್ಯವಾದದ್ದು. ಇನ್ನು ಇದಕ್ಕೆ ಪೋಷಕವಾಗಿ ಧಾರ್ಮಿಕ ಶಿಕ್ಷಣವು ಕೂಡ ಮುಖ್ಯವಾಗಿಬೇಕು. ಧರ್ಮವೆಂದರೆ ಉದ್ಧರಿಸುವದೆಂದರ್ಥ. ಧರ್ಮ ಶಬ್ದದ ಉತ್ಪತ್ತಿಯು ಧೃ. ಧಾತುವಿನಿಂದ ಆಗಿದೆ. ಧರ್ಮವು ಸಾಮಾನ್ಯ ವಿಶೇಷವೆಂದು ಎರಡು ಪ್ರಕಾರವಾಗಿದೆ. ನೀತಿಯ ಸಾಮಾನ್ಯ ಧರ್ಮವು ಇದ್ದು ಸರ್ವ ಮತಿಯರಿಗೂ ಲೌಕಿಕವಾದದ್ದು. ವಿಶೇಷ ಧರ್ಮವೆಂದರೆ ವರ್ಣ ಮತಗಳ ಆಚಾರ ವಿಚಾರವು ಈಗಿನಕಾಲದಲ್ಲಿ ವಿಶೇಷ ಧರ್ಮಕ್ಕೆ ಮಹತ್ವವಿಲ್ಲದಿದ್ದರೂ ಪೂರ್ವದ ಮಹನೀಯರು ಬಹಳ ಮಹತ್ವಕೊಟ್ಟಿದ್ದರು ಅಷ್ಟೇಅಲ್ಲದೆ ಇದರಿಂದ ಮಹತ್ತರವಾದ ಶ್ರೇಯಸ್ಸನ್ನು ಕಂಡಿದ್ದರು. ಈಗಲೂ ಕೂಡ ಪೂರ್ವಜರಂತೆ ಧಾರ್ಮಿಕಾಚಾರದಲ್ಲಿ ಬಲ್ಲಿದರಾಗಿ ಆದರಿಂದ ಶ್ರೇಯಸ್ಸನ್ನು ಕಂಡವರು ಅನೇಕರುಂಟು ದೂರವೇಕೆ? ಈ ಗ್ರಂಥದ ನಾಯಕರಾದ ಶ್ರೀ ಪರಮಪೂಜ್ಯ **ಬಂಥನಾಳದ ಶಿವಯೋಗಿಗಳು** ಅದೇ ಧಾರ್ಮಿಕಾಚಾರದಿಂದಲೇ ಪರಮಶ್ರೇಯಸ್ಸನ್ನು ಪಡೆದವರಲ್ಲವೆ? ಇದನ್ನರಿತವರಾದ ನಮಗೆ ಈ ಪರಮಪೂಜ್ಯರ ಮಾರ್ಗಸ್ಮರಣೆ ಪರಮಭಾಗ್ಯದಾಯಕವಾದದ್ದು. ಈ ಮಹಾತ್ಮರಿಗೆ ಆ ಜಗದೀಶ್ವರನು ಇತೋಪ್ಯತಿಶಯವಾದ ಆಯುರಾರೋಗ್ಯ ಭಾಗ್ಯವನ್ನು ಕರುಣಿಸಿ ಇವರಿಂದ ಇನ್ನೂ ಅನೇಕ ಜನೋದ್ಧಾರ ಕಾರ್ಯಗಳನ್ನು ಮಾಡಿಸಿ ತದ್ವಾರಾ ನಮ್ಮ ನಾಡಿಗೂ ನಮ್ಮ ರಾಷ್ಟ್ರಕ್ಕೂ ಶಾಂತಿ ಸಂಪತ್ತನ್ನು ಅನುಗ್ರಹಿಸಲೆಂದು ಅನನ್ಯವಾಗಿ ಪ್ರಾರ್ಥಿಸಿ ಈ ಸೇವೆಯನ್ನು ಶ್ರೀ ಶಿವಯೋಗಿಗಳ ಪಾದಕ್ಕೆ ಸಮರ್ಪಿಸುತ್ತೇನೆ.

# ವಿಶ್ವ ಸ್ವಾತಂತ್ರ್ಯ ಬಯಸುವ

### – ಮಹಾ ವಿಭೂತಿ –

## ಗುರು ಸಂಗನಬಸವಶಿವಯೋಗಿ

ಬರೆದವರು :

**ಶ್ರೀ ಶಿವಶಂಕರ ಎಂ. ಹಿಳ್ಳಿತಡವಲಗಾ (ತಾಲೂಕ:- ಇಂಡಿ)**

ಕರ್ಮವೇ ಧರ್ಮ, ಧರ್ಮವೇ ಕರ್ಮವೆಂದರಿತಾಚರಿಸಿ ಆದರ್ಶ್ಯವೆನಿಸಿತು "ಭರತವರುಷ" ಭರತ ವರುಷಕೆ ಸಿರಿಗನ್ನಡನಾಡುಪರುಷ ಇದು ಸ್ತುತ್ಯಾದರ್ಶ ಕನ್ನಡಿಗರಿಗೆ ಹೆಮ್ಮೆಯಹರುಷ.

ಶಿವಶರಣರ ಸಾಧು-ಸಂತರಬೀಡು, ಸಾಹಿತ್ಯ ಸಂಸ್ಕೃತಿಯ ನೆಲೆವೀಡು, ಕರ್ಮಯೋಗಿಗಳ ಗೂಡು ಈ ನಮ್ಮ ಸಿರಿಗನ್ನಡನಾಡು ಭಾರತದ ಕೋಡು.

ಪರಂಪರೆಯನ್ನುಳಿಸಿ ಬೆಳೆಸಿಕೊಂಡುಬಂದ ಈ ಸುಂದರ ನಾಡಿನಲ್ಲಿ ಇಂದಿಗೂ ಬಹುಕಡೆಯಲ್ಲಿ ಶಿವಶರಣ–ಶರಣೆಯರು, ಸಾಧು–ಶಿವಯೋಗಿಗಳು ಜನುಮಧರಿಸಿದ್ದಾರೆ ಇಂಥ ವರ್ಗದಲ್ಲಿ "ಅಭಿನವಬಸವ" ರೆನಿಸಿಕೊಂಡಿದ್ದ ಬಂಥನಾಳ ಮಹಾಶಿವಯೋಗಿಗಳವರೊಬ್ಬರು.

ಗುರುಸಂಗನಬಸವ ಶಿವಯೋಗಿಗಳ ಸಾಮೀಪ್ಯತನ ಪಡೆಯದವರಿಗಾಗಿ ಈ ನನ್ನ ಬರೆಹವು ಕೆಲಮಟ್ಟಿಗೆ ಪರಿಚಯ ಮಾಡಿಕೊಡುವದೆಂದು ನಂಬಿರುವೆ. ಇಂದಿನ ಕಾಲದಲ್ಲಿ ಮಹಾ ಪುರುಷರೆಂದು ಬೆಳಕಿಗೆ ಬಂದವರಿಗೆ ಜನ್ಮವಿತ್ತ ಮತವು ಕೆಲಮಟ್ಟಿಗೆ ಕಾಲ್ತೊಡಕವಾಗಲಿದೆ. ಇದುವೆ ಅಂದು ಮಹಾನುಭಾವಿ ಬಸವಣ್ಣನಿಗೆ ಪೀಡಿಸಿತು, ಕಾಡಿಸಿತು, ಕೊನೆಗೈದಿತು.

ಗುರುಸಂಗನಬಸವ ಕಾಯ-ಕಾಯಕವಾದಿ
ವರಸಂಗನಬಸವ ಸ್ತುತ್ಯಸ್ವಾತಂತ್ರ್ಯವಾದಿ,
ಹರಸಂಗನಬಸವ ಸಹಜೀವನವಾದಿ
ಉರೆಸಂಗನಬಸವ ಶರಣಶ್ರೇಷ್ಠರವಾದಿ
ನೆರೆಸಂಗನಬಸವ ಸತ್ಯಶಾಂತಿಯವಾದಿ
ಸುರಸಂಗನಬಸವ ಸುಂದರ-ಸಮಾಜವಾದಿ

## ಗುರಸಂಗನಬಸವ ಮಾನವಕುಲವಾದಿ
## " ಅಭಿನವಬಸವ-ಸಂಗನಬಸವ "

ಇಂದು ನಮ್ಮ ದೇಶದೊರಕಿಸಿಕೊಂಡ ಸ್ವಾತಂತ್ರ್ಯ ಸಂಪೂರ್ಣ ಸ್ವಾತಂತ್ರ್ಯವಲ್ಲ ಅದು ಸ್ವಾತಂತ್ರ್ಯದ ಆಭಾಸಮಾತ್ರ. ನುಡಿಯಲ್ಲಿ ಧರ್ಮ, ನಡೆಯಲ್ಲಿಧರ್ಮ, ದುಡಿಮೆಯಲ್ಲಿಧರ್ಮ, ಹೀಗೆ ಯಾವ ದೇಶವೇ ಇರಲಿ ಯಾವ ಪ್ರಾಂತವೇ ಇರಲಿ, ಯಾವದೇ ಸಮಾಜವೇ ಇರಲಿ ಧರ್ಮತಳಹದಿಯನ್ನಾಗಿರಿಸಿಕೊಂಡು ಪಡೆದ ಸಂಪೂರ್ಣ ಆರ್ಥಿಕ ಸ್ವಾತಂತ್ರ್ಯವೇ ಆದೇಶದ ನೈಜ ಸ್ವಾತಂತ್ರ್ಯ.

ಇದು ಇಂದು ಅರಿತಮಾತಲ್ಲ, ಸಿರಿಗನ್ನಡನಾಡಿನಲ್ಲಿ ಕಳೆದ ಎಂಟುನೂರು ವರುಷಗಳ ಹಿಂದೆ ಆಗಿಹೋದ ಪ್ರಮಥಾದಿ ಶಿವಶರಣರು ಪ್ರತಿವ್ಯಕ್ತಿಯೂಕೂಡಾ ಆರ್ಥಿಕ ಸ್ವಾತಂತ್ರ್ಯ ಪಡೆಯಲು " ಕಾಯಕವೇ ಕೈಲಾಸ"ವೆಂದು ಉದ್ಘೋಷಿಸಿ ಕಾಯಕನಿರತರನ್ನಾಗಿ ಮಾಡಿದರು.

ವ್ಯಕ್ತಿಯು ಕುಟುಂಬದ ಘಟಕ, ಕುಟುಂಬವು ಸಮಾಜದಘಟಕ, ಸಮಾಜವು ರಾಷ್ಟ್ರದಘಟಕ, ರಾಷ್ಟ್ರವು ಯುಕ್ತರಾಷ್ಟ್ರದ ಘಟಕ, ಪ್ರತಿಯೊರ್ವನು ಆರ್ಥಿಕ ಸ್ವಾತಂತ್ರ್ಯವನ್ನು ಪಡೆದನಾದರೆ ಯುಕ್ತ (ವಿಶ್ವ) ರಾಷ್ಟ್ರದ ಮಹೋದ್ದೇಶ ತಾನೆ ಈಡೇರಿ ವಿಶ್ವಶಾಂತಿ ತನ್ನಷ್ಟಕ್ಕೆ ತಾನೇಸಾಧ್ಯ.

ಧರ್ಮದ ತಿರುಳು ಅರಿಯದಾತನು ಭೋಧಿಸಲಿಕ್ಕೆ ಅನರ್ಹನು. ವಿಶ್ವಧರ್ಮದ ಮರ್ಮವರಿತು ಸ್ವತಃ ಆಚರಣೆಯಿಂದ ಜನರ ಮಾರ್ಗದರ್ಶಕರಾಗಬೇಕು ಇದುವೇ ಬೋಧನೆಯ ಮೊದಲು.

" ಕಾಯಕವೇ ಕೈಲಾಸ" ಎಂಬ ಅಮರ ಮಂತ್ರೋಚ್ಛಾರಕರಾದ ಮಹಾ ಶಿವಯೋಗಿ ಗುರು ಸಂಗನಬಸವರು ವಿವಿಧ ಬಗೆಯಿಂದ ತತ್ವಶಹ ಆಚರಣೆಯಲ್ಲಿ "ಕಾಯ ಕಾಯ-ಕವಾದಿತ್ವ" ವನ್ನು ತಂದವರಾದ್ದರಿಂದ ಭಕ್ತಜನಸ್ತೋಮದಲ್ಲಿ,

" ಮಹಾವೀರ ತಪಸಿಯೆಂದೂ "
" ಭೀಷ್ಮ ಬ್ರಹ್ಮಚಾರಿಗಳೆಂದೂ "
" ಧೀರ ಕರ್ಮಯೋಗಿಗಳೆಂದೂ "
" ಶಿಕ್ಷಣಾಚಾರ್ಯರೆಂದೂ "
" ವೀರ ವೈರಾಗಿಯೆಂದೂ "

ಹೀಗೆ ಬಗೆ-ಬಗೆಯ ಪ್ರತಿ ಅಭಿಪ್ರಾಯಗಳಿಂದ ಲೌಕಿಕವಾಗಿ ಜನಪ್ರಿಯತೆಯ ಅಧಿಕಾಧಿಕಗೊಂಡಿತು.

" ಮಾನವನಿಗೆ ಅನ್ನಬೇಕಿದ್ದರೂ ದುಡಿಯಬೇಕು, ಅರಿವು (ಜ್ಞಾನ) ಬೇಕಿದ್ದರೂ ದುಡಿಯಬೇಕು ಒಟ್ಟಿನಲ್ಲಿ ದುಡಿಯಬೇಕು. ದುಡಿತವಿಲ್ಲದಿರೆ ಮಾಂತ್ರಿಕ ಜಗತ್ತಿನ ಸುಜ್ಞಾನತ್ವಕ್ಕೂ, ಯಾಂತ್ರಿಕ ಯುಗದ ವಿಜ್ಞಾನತ್ವಕ್ಕೂ ಸ್ಥಾನವಿಲ್ಲ. ಅನ್ನಜ್ಞಾನ (ಸುಜ್ಞಾನ-ವಿಜ್ಞಾನ) ವಿಲ್ಲದಿರೆ ಜಗತ್ತು ಬಾಳದು,



ಬದುಕದು. ಸುಜ್ಞಾನ-ವಿಜ್ಞಾನಗಳ ಸಮನ್ವಯೀಕರಣದಿಂದಲೇ ಇಂದಿನ ಜಗತ್ತಂತೂ ನೂರ್ಮಡಿ ಪ್ರಗತಿಮುಖಿಯಾಗಿದೆ. ತನ್ನಿಂದಲೇ ಜರುಗುವ ಮಹಾಕಾರ್ಯ ನೋಡಿ ತಾನೇ ಬೆರಳು ಕಚ್ಚಿಕೊಳ್ಳುತ್ತಿದ್ದಾನೆ. ತಾನು ಮಾಡಿದ್ದೇ ತನ್ನ ಬುದ್ಧಿ ಮತ್ತೆ ಮೀರಿದಂತಾಗಿ ಅಚ್ಚರಿಯನ್ನುಂಟುಮಾಡಲಿದೆ. ಇದು ದುಡಿತದ ಹಿರಿಮೆಯ ಪ್ರಭಾವ.

ಕೂತು ಉಂಡರೆ ಕುಡಿಕಿ ಹೊನ್ನುಸಾಲದು. ಹಾಗೆಂದಬಳಿಕ ದುಡಿತವು ಮಾನವನ ಪಡಿನೆಳಲಂತೆ ಇರಬೇಕೆಂಬುವದು ನಿರ್ವಿವಾದ ಸಂಗತಿ. ಮಹಾನುಭಾವಿ ಬಸವನು ಈ ಮರ್ಮವನ್ನರಿತೇ "ಕಾಯಕದಲ್ಲಿ ನಿರತನಾದೊಡೆ ಗುರುದರ್ಶನವಾದರೂ ಮರೆಯಬೇಕು ಲಿಂಗ ಪೂಜೆಯಾದರೂ ಮರೆಯಬೇಕು. ಜಂಗಮ ಮುಂದಿದ್ದರೂ ಹಂಗುಹರಿಯಬೇಕು" ಎಂದು ಎಚ್ಚರಿಸಿದ್ದಾರೆ. ಇದು ಕಾಯಕಕ್ಕೆ ಕೊಟ್ಟ ಮಹತಿ."

"ಇಂದಿನ ಜಗತ್ತಿನಲ್ಲಿ ಪ್ರತಿಯೊಂದು ರಾಷ್ಟ್ರ, ಸಮಾಜ, ವ್ಯಕ್ತಿಸ್ವಾತಂತ್ರ್ಯ ಬಯಸಲಿದ್ದಾನೆ. ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವಲ್ಲ ; ಸ್ವ-ಅರ್ಥದಿಂದ ಜೀವನ ಸ್ವಾವಲಂಬತ್ವ ಪಡೆಯುವ ವಿಧಾನದ ಬೇರೊಂದು ಹೆಸರು ಮಾತ್ರ. ಇದನರಿತು ಪ್ರಗತಿಸಾಧಿಸಿದ ಮಹಾರಾಷ್ಟ್ರಗಳೇ ಇನ್ನುಳಿದ ದೇಶಗಳ ಅರ್ಥಸ್ವಾತಂತ್ರ್ಯ ಅಪಹರಿಸಿಕೊಂಡಿವೆ. ಅರ್ಥಸ್ವಾತಂತ್ರ್ಯದ ಮಹಾಕ್ರಾಂತಿಯನ್ನು ಮ. ಬಸವಾದಿ ಶಿವಶರಣರು ಹನ್ನೆರಡನೆಯ ಶತಮಾನದಲ್ಲಿಯೇ ಹೂಡಿದರು. ಅದನ್ನೇ ಮ. ಗಾಂಧೀಜಿಯವರು ಇಪ್ಪತ್ತನೆಯ ಶತಮಾನದಲ್ಲಿ "ಖಾದಿಯೇ ಸ್ವರ್ಗದಾಹಾದಿ"ಯೆಂದು ಘೋಷಿಸಿ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ದೇಶದ ಸ್ವಾತಂತ್ರ್ಯಕ್ಕೆ ಕಾರಣರಾದರು."

ಈ ಬಗೆಯ ಆರ್ಥಿಕ ಕ್ರಾಂತಿ ಸಾಧಿಸುವದರಲ್ಲಿ ಸತ್ಯಾಹಿಂಸೆ ತತ್ವ ಅಳವಟ್ಟಿರಬೇಕು ಎಂದು ನ್ಯಾಯನಿರ್ದೇಶನವಿತ್ತನು. ಮ. ಗಾಂಧೀಜಿ "ಪಾಪಿಯ ಧನ ಪ್ರಾಯಶ್ಚಿತ್ತಕಲ್ಲದೆ ಬೇರಾವದಕ್ಕೂ ಸಲ್ಲದು" ಎಂದು ೮೦೦ ವರುಷಗಳ ಹಿಂದೆ ಎಚ್ಚರಿಸಿದ ಬಸವನ ಮಹೋಕ್ತಿಯಲ್ಲಿ ದುಡಿತವು ನ್ಯಾಯ ಸಮ್ಮತವಾಗಿರಬೇಕು, ಶ್ರಮಕ್ಕೆ ತಕ್ಕ ಫಲವಾಗಿರಬೇಕು, ಈ ಹೊಂದಾಣಿಕೆಗೆ "ನಾನು ನಿಮಗಾಗಿ ನೀವೆಲ್ಲರೂ ನನಗಾಗಿ" ಎಂಬ ತತ್ವವು ಸಹಜೀವನದ ದ್ಯೋತಕವಾಗಿದೆ. ಈ ತಳಹದಿಯ ಮೇಲೆ ವ್ಯಕ್ತಿಯಿಂದ ವಿಶ್ವರಾಷ್ಟ್ರದತ್ತ ಸಾಗಬೇಕು. ಇದುವೇ ಪಂಚಶೀಲದ ಒಂದು ಮಹತಿ ಭಾಗ

ಹನ್ನೆರಡನೆಯ ಶತಮಾನದಲ್ಲಿ ಸಿರಿಗನ್ನಡನಾಡಿನ ಸಮಾಜದಲ್ಲಿ ಕ್ರಾಂತಿ-ಕಹಳೆಯನ್ನೂದಿದ ಪ್ರಮಾಥಾದಿ ಶಿವಶರಣರು ಧರ್ಮವನ್ನು ರಾಷ್ಟ್ರದ ತಳಹದಿಯನ್ನಾಗಿ ಮಾಡಿ, ಇಂದು ನಮ್ಮ ಪ್ರಜಾಸಾರ್ವಭೌಮ ಸರಕಾರವು ನೀಡಿದ ಮೂಲಭೂತ ಹಕ್ಕುಗಳನ್ನು ಅಂದು ಅವರು ಸಮಾಜಕ್ಕೆ ನೀಡಿ ಧಾರ್ಮಿಕ, ಸಾಮಾಜಿಕ, ಆರ್ಥಿಕ, ತನ್ಮೂಲಕ ರಾಷ್ಟ್ರೀಯ ಸ್ವಾತಂತ್ರ್ಯ ಘೋಷಿಸಿದರು. ಇವೆಲ್ಲವುಗಳ ಮೂಲವು ತಮ್ಮ ಪಂಚಾಚಾರ, ಷಟಸ್ಥಲ ಹಾಗೂ ಅಷ್ಟಾವರಣಗಳಲ್ಲಿದೆಯೆಂಬುವದನ್ನು ಅರಿದು ಬಿಚ್ಚಿತೋರಿಸಿದರು ಎಚ್ಚರಿಸಿ ಮರೆಯಾದರು. ಇಂದಿನ ಔದ್ಯೋಗಿಕ ಮಹಾಕ್ರಾಂತಿಯು ಅಂದಿನ ಕಾಯಕವೇ ಕೈಲಾಸ"ವೆಂಬ ಘೋಷಣೆಯ ಮಹಾರೂಪವಾಗಿದೆ.

ಇಂದು ರಾಷ್ಟ್ರದ ಮುನ್ನಡೆಗೆ ಅಡ್ಡ ಬಂಡೆಗಲ್ಲಾದ ಅಸ್ಪೃಶ್ಯತೆಯನ್ನು ಎಂಟುನೂರು ವರುಷಗಳ ಹಿಂದೆ ನಮ್ಮ ಶಿವಶರಣರು ಅದರ ಬೇರು ಸಹಿತ ಕಿತ್ತಿಹಾಕಲು ಕನ್ನಾಡಿನಲ್ಲಿ ಪ್ರಾಣವನ್ನು ಒರೆಗಲ್ಲಿಗೆ ಹಚ್ಚಿ ಅದರ ಉಚ್ಚಾಟನೆಗಾಗಿ ಪ್ರತ್ಯಕ್ಷ ಹೋರಾಡಿದರು. ಅಂದು ಅವರು ಮಾಡಿದ ಮಹಾಕ್ರಾಂತಿಯ ಮೂಲತತ್ವಗಳನ್ನು ಇಂದು ದೇಶ-ವಿದೇಶಗಳು ಅನುಸರಿಸಹತ್ತಿವೆ. ಬೇರೆ ಹೊಸದೇನೂ ಇಲ್ಲ. ಅಂತೆಯೇ ನಾವಿಂದು "ಉರ್ವಿಯೊಳ್ ಶಿವಶರಣ ಪ್ರಮಥಾದಿಯರ ಹಾದಿಯೇ ಹಾದಿ." ಎಂದು ಘೋಷಿಸುತ್ತಲಿದ್ದೇವೆ.

ಮಹಾತ್ಮರೆನಿಸಿಕೊಂಬಾತರು, ಧೀರ ಶೂರರೆನಿಸಿಕೊಂಬಾತರು, ನೂರಾರು ಜನರು ನಶಿಸಿ ಹೋಗಲಿ ಆದರೆ ಸತ್ಯವು ಮಾತ್ರ ನಿರಂತರವಾಗಿರಲಿ ಸತ್ಯವೆಂದರೆ ಅಸಂಖ್ಯ ತತ್ವವನ್ನೊಳಗೊಂಡ ಒಂದು ಸಾರ್ವಭೌಮ ತತ್ವ ಇದು ಇದ್ದಲ್ಲಿಜ್ಞಾನ, ಜ್ಞಾನವಿದ್ದಲ್ಲಿ ಬೆಳಕು, ಬೆಳಕಿನಲ್ಲಿ ನಿಖಿಲಾನಂದ, ಆ ನಿಖಿಲಾನಂದದಲ್ಲಿ ಪರಮಾತ್ಮ ಅಂದರೆ ಸತ್ಯವೇದೇವರ, ದೇವರನ್ನು ಅರಸುವದೇ ಮಾನವತೆ ಎಂದು ಸಮಾಜದ ಘಟಕವಾದ ಮಾನವನಿಗೆ ಮಾಹಾತ್ಮಾಗಾಂಧೀಜಿಯವರು ಮುನ್ನೆಚ್ಚರಿಕೆಯನ್ನಿತ್ತರು. ಇದೇ ಮಾತನ್ನೇ ೧೨ನೇಯ ಶತಮಾನದಲ್ಲಿ " ಸತ್ಯನುಡಿಯುವದೇ ಸ್ವರ್ಗ, ಮಿಥ್ಯನುಡಿಯುದೇ ನರಕ " ವೆಂದು ಸಮಾಜವನ್ನು ಎಚ್ಚರಿಸಿದನಾ ನಮ್ಮ ಮಹಾನುಭಾವಿ ಬಸವ.

ಸತ್ಯದಿಂದಲೇ ಜಗದಾದಿ
ಸತ್ಯದಿಂಲೇ ಜನಜೀವನದ ಹಾದಿ
ಸತ್ಯ-ಸತ್ಯಕ್ಕೂ ಅನಾದಿ
ಸತ್ಯಮೇವಜಯತೆ ಮಂತ್ರವಾದಿ

ಹೀಗೆಂದು ಗುರುಸಂಗನ ಬಸವರು ಇಂದಿನ ಸಮಾಜಕ್ಕೆ ಪುನರುಚ್ಚರಿಸಿದ್ದಾರೆ.

ಸುಂದರ ಸಮಾಜ ರಚನೆಗೆ ಧರ್ಮವೇ ಮೂಲ ತಳಹದಿ. ಆ ಧರ್ಮವು ವಿಶ್ವಧರ್ಮವಾಗಿರಬೇಕು. ಅಂಥ ಧರ್ಮಬೋಧಕರೇ ನಮ್ಮ ಅಂದಿನ ಮಹಾ ಶಿವಶರಣಾದಿ ಪ್ರಮಥರು.

ಆ ನಮ್ಮ ಮಹಾ ಶಿವಶರಣರು ತಮ್ಮ ಭಾಷೆಯಲ್ಲಿ ತಾವು ಬೋಧಿಸಿದ ಧರ್ಮಕ್ಕೆ ವೀರಶೈವ ಧರ್ಮವೆಂದು ಕರೆದಿರಲು ಸಾಕು. ಆ ಧರ್ಮವು ಪಂಚಾಚಾರ, ಷಟ್‌ಸ್ಥಲ, ಹಾಗು ಅಷ್ಟಾವರಣಗಳೆಂಬ ತ್ರಿವಿಧವಾದ ಅಮರ ಸಂಪತ್ತುಗಳಿಂದ ಪ್ರತಿಭಾಯುಕ್ತವಾಗಿರುವುದು.

ಈ ತ್ರಿವಿಧ ಸಂಪತ್ತುಗಳು ವ್ಯಕ್ತಿಯನ್ನು ಮಾನವತೆಯೆಡೆಗೆ ಕರೆದೊಯ್ಯುವವು. ಅದುವೇ ಸುಂದರ ಘಟಕ. ಅಂತಹ ಘಟಕಗಳಿಂದ ಕೂಡಿದ್ದೇ ಸುಂದರಸಮಾಜ. ಈ ಬಗೆಯ ಸುಂದರಸಮಾಜವು ದಾಸೋಹಕ್ಕೊಪ್ಪುವ ರೀತಿಯಲ್ಲಿ ಕಾಯಕವೇ ಕೈಲಾಸವೆಂಬ ತತ್ವಾಚರಣೆಯನ್ನು ಹೊಂದಿರಬೇಕು. ಅಂದರೆ ಮ. ಗಾಂಧೀಜಿಯವರು ಹೇಳುವಂತೆ "ಸತ್ಯಾಹಿಂಸೆ ಒಳಗೊಂಡಿರಬೇಕು "

ಈ ಕಟ್ಟಳೆಯು ಸ್ವಾವಲಂಬೀಪರವಾದ ಸುಖೀ ಸಮಾಜವನ್ನು ನಿರ್ಮಿಸಿ ಬೆಳೆಸುತ್ತಹೋಗುವದು. ಅಂದರೆ ಸ್ವಕಾಯ-ಶ್ರಮ ಜೀವನವಿಲ್ಲದೆ ಎಂಬುವದನ್ನು ಅಲ್ಲಗಳೆಯಲಾಗದು.



ಈ ರೀತಿ ರಚಿತವಾದ ಸುಂದರ ಸಮಾಜಪಡೆದ ಯಾವ ದೇಶದಲ್ಲಿಯೂ ಅಶಾಂತತೆಗೆ ಅವಕಾಶವಿಲ್ಲ, ಜಾತೀಯತೆಗೆ ಸ್ಥಾನವಿಲ್ಲ, ಮೇಲು-ಕೀಳೆಂಬ ಭಾವನೆಗೆ ತಾಣವಿಲ್ಲ, ಸಿರಿತನ-ಬಡತನ ಬಾಧೆಯಿಲ್ಲ. ಈ ರೀತಿ ಈಶ್ವರೀ ಜಗತ್ತು ನಿರ್ಮಾಣವಾದಾಗ—

ಅಣುಶಕ್ತಿ,-ಜಲಶಕ್ತಿ, ಹಾಗು ಕಿರಣಶಕ್ತಿ ಮೊದಲಾದ ಭಯೋತ್ಪಾದಕ ಶಕ್ತಿಗಳ ಸೆಣಗಾಟಕ್ಕೆ ಜಗದಲ್ಲಿ ಅವಕಾಶದೊರೆಯಲಾರದು ಆದುದರಿಂದ—

ದೇಶ-ವಿದೇಶಗಳಲ್ಲಿಯೂ ಸಹ ಅಮರ ತತ್ವಯುಕ್ತ ವಿಶ್ವಧರ್ಮ ಪುನರುದ್ಧಾರಗೊಂಡು ಬರಲೇಬೇಕು. ಅದಕ್ಕಾಗಿ ಮ ಗಾಂಧೀಜಿಯವರಂತಹವರು ಅವತರಿಸಲೇಬೇಕು, ಮತ್ತೊಮ್ಮೆ. ಅದೇಕೆ ಮಗುದೊಮ್ಮೆ. "

ಈ ರೀತಿ ವಿಶ್ವಸ್ವಾತಂತ್ರ್ಯ ಬಯಸುವ ಮಹಾವಿಭೂತಿ " ಅಭಿನವ-ಬಸವ "

**ಗುರುಸಂಗನಬಸವ ಮಹಾಶಿವಯೋಗಿಗಳು.**

# ಶ್ರೀ. ಶ್ರೀ. ಸಂಗನಬಸವ ಶಿವಯೋಗಿಗಳು.

ಲೇಖಕರು.
ಸಿಂಪಿ ಲಿಂಗಣ್ಣ.

ಹೊಸಯುಗದಲ್ಲಿ ವಿವೇಕಾನಂದ ರಾಮತೀರ್ಥರು ಹುಟ್ಟಿಬಂದು, ಹೊಸಕಾಲದ ಸ್ವಾಮಿಗಳೆನಿಸಿ 'ಸ್ವಾಮಿ' ಎಂಬ ಶಬ್ದಕ್ಕೆ ಪ್ರಚೋದಕವಾದ ಅರ್ಥವುಂಟಾಗುವಂತೆ ಬಾಳಿಬೆಳಗಿದರು. ಅಂದಿನಿಂದ ಎಲ್ಲ ಸ್ವಾಮಿಗಳನ್ನು ಸಮಾಜವು ಅದೇ ಅರ್ಥದಲ್ಲಿಯೇ ನೋಡತೊಡಗಿದೆ. ಆ ಹೊಸ ಅರ್ಥಕ್ಕೆ ಒಪ್ಪುವಂತೆ ಬಾಳಿಬೆಳಗುತ್ತಿರುವವರಲ್ಲಿ ನಮ್ಮ ಶ್ರೀ ಸಂಗನಬಸವ ಶಿವಯೋಗಿಗಳೂ ಒಬ್ಬರಾಗಿದ್ದಾರೆ. ಅಂಥ ಬಂಧನಾಳದ ಶ್ರೀ ಶಂಕರಲಿಂಗ ಸ್ವಾಮಿಗಳವರ ಪರಂಪರೆಗೆ ಸೇರಿದವರು

"ಬಂಧನಾಳ ಶರಣಯ್ಯ ನಾ ನಿಮ್ಮ ಮಗಳಯ್ಯ
ಲೇಸಗಿತ್ತೆಯ್ಯ ಬಡವೆಯ್ಯ । ನನ್ನ ಮೇಲೆ ।
ಸಾಸೀವಿಯಷ್ಟು ದಯವಿರಲಿ ॥"

ಎಂದು ಹಾಡಿ ಹಾಡಿ ಕನ್ನಡನಾಡಿನ ಅಸಂಖ್ಯಗರತಿಯರು, ಬಂಧನಾಳ ಶರಣಯ್ಯನ ಸಾಸಿವೆಯಷ್ಟೇ ಕೃಪೆದೊರೆತರೂ ಅದರಿಂದ ಧನ್ಯರಾಗಿ ಆವರಿಗೊಪ್ಪುವ ಮಗಳಾಗಿ, ಭಾಗ್ಯಹೀನಳಾದ ಬಡವಿಯಾಗಿದ್ದರೂ ಲೇಸಗಿತ್ತಿಯಾಗಿ ಹೊಗುತ್ತಿದ್ದಾರೆಂಬ ಒಂದೇಮಾತು ಬಂಧನಾಳ ಮಠದ ಪೀಠದ ಮಹಿಮೆಯನ್ನು ಎತ್ತಿ ತೋರಿಸುತ್ತಿದೆ. ಹೆರವರ ಮನೆಯಲ್ಲಿ ಕಲ್ಲು-ಒರಳು ಸವರಿ ಕೂಲಿ ಮಾಡಿ, ಹೊಟ್ಟೆ ಹೊರೆಯುವ ಬಡತನವು ಆ ಗರತಿಗಿರಬಹುದು; ಕೈಹಿಡಿದ ನಲ್ಲನನ್ನು ಕಳಕೊಂಡು ಅನಾಥೆಯಾಗಿ ಏಕಾಕೀ ಜೀವನ ನೂಕುವ ಹತಭಾಗ್ಯವು ಆಕೆಯ ಪಾಲಿಗಿರಬಹುದು. ಆದರೆ ಆಕೆ ಲೇಸಗಿತ್ತಿ ಯಾಕಂದರೆ ಆಕೆ ಬಂಧನಾಳ ಶರಣಯ್ಯನ ಮಾನಸಪುತ್ರಿ; ಮಗಳು ಗುಡ್ಡದಷ್ಟು ಅಲ್ಲದಿದ್ದರೂ ಸಾಸಿವೆಯಷ್ಟು ದಿವ್ಯಕೃಪೆ ಪಡೆದವಳು.

**ನಾನಿಮ್ಮ ಮಗಳಯ್ಯ:**—ಎಂದು ಹೇಳಿಕೊಂಡವಳು ಬಡವಿಯಾಗಿದ್ದರೂ ಲೇಸಗಿತ್ತಿಯಾಗಬಹುದಾದರೆ, ಬಂಧನಾಳ ಶರಣಯ್ಯನ ಔರಸಪುತ್ರನಾಗಿ, 'ಇವ ನಮ್ಮವನೆಂದು ಹೇಳಿಸಿಕೊಂಡು ಆತನ ಸಮಗ್ರ ಸಂಪತ್ತಿಗೆ ಅಧಿಕಾರಿಯಾಗಿರುವ ಶ್ರೀ ಸಂಗನಬಸವಸ್ವಾಮಿಗಳು ಅದೆಷ್ಟು ದಿವ್ಯಕೃಪೆ ಪಡೆದಿರಬೇಡ; ಅದೆಂಥ ಲೆಸುಗಾರರಾಗಿರಬೇಡ? ಸಕಲ ಜನರಿಗೆ ಲೇಸನೆ ಬಯಸುವ ಕೂಡಲಸಂಗನ ಬಸವನಂತೆ ಸಕಲ ಜನರಿಗೆ ಲೇಸನೆ ಎಸಗುವ ಕಾಯಕವನ್ನು ಕೈಕೊಂಡು ಈ ಸಂಗನ ಬಸವ ಶಿವಯೋಗಿಗಳು ನಿಸ್ತರಿಸುತ್ತ ಬಂದುದನ್ನು ಈ ಅರ್ಧಶತಮಾನವು ಅನಿಮಿಷನೇತ್ರದಿಂದ ನೋಡುತ್ತ ಬಂದುದಕ್ಕೆ ಇನ್ನಾವ ಸಾಕ್ಷಿಯೂ ಬೇಡ.

## ನಿರ್ವಿಕಲ್ಪ ಸಮಾಧಿಯಿಂದ ಹೊರಬಿದ್ದ ತತ್ವದರ್ಶಿ



ಶ್ರೀ ಬಂಧನಾಳ ಶಿವಯೋಗೀಶ್ವರರು.

ಭಾಗ್ಯವಾಡಿಯು ಹನ್ನೆರಡನೇ ಶತಮಾನದಲ್ಲಿ ಕೂಡಲಸಂಗನ ಬಸವನಿಗೆ ಜನ್ಮಕೊಟ್ಟಿದ್ದರೆ, ಭಾಗ್ಯವಾಡಿ ತಾಲೂಕಿನ ವಸೂತಿಗ್ರಾಮವು ಈ ಸಂಗನ ಬಸವನಿಗೆ ಇಪ್ಪತ್ತನೆ ಶತಮಾನವಲ್ಲಿ ಜನ್ಮ ಕೊಟ್ಟಿದೆ. ಹರನ ಕರುಣೆಯಂಥ ಒಂದು ಅರುಣೋದಯವು ಸಂಗನಬಸವನ ಆಗಮನವನ್ನು ಸೂಚಿಸಿದ್ದನ್ನು ಅಂದು ಯಾರೂ ಕಂಡಿರಲಾರರು; ಗುರುತಿಸಿರಲಾರರು. ಅವರು ವಿದ್ಯ ಬುದ್ಧಿಗಳಿಂದ ಹೊರಮಗ್ಗಲು ಬೆಳೆದುದಕ್ಕಿಂತ ಹೆಚ್ಚಾಗಿ, ತಪಸ್ಸಿನಿಂದ ಗುರುಕೃಪೆಯಿಂದ ಒಳಮಗ್ಗಲು ಬೆಳೆದರೆನ್ನಬೇಕು ಎಳೆವರೆಯದಲ್ಲಿಯೇ ಭೀಮಾಶಂಕರ ಘಟ್ಟಕ್ಕೆ ಹೋಗಿ, ತಮ್ಮ ತ್ರಿಗುಣಾತ್ಮಕವಾದ ಪ್ರಕೃತಿಯನ್ನು ನಿಸ್ತಬ್ಧಗೊಳಿಸಿಕೊಂಡು ಬಂಥನಾಳ ಮಠಕ್ಕೆ ಮರಿಯಾಗಿಬಂದರು.

ಅಷ್ಟರಲ್ಲಿ ಲಚ್ಯಾಣದ ಸಿದ್ದಪ್ಪ ಮಹಾರಾಜರು, ಶ್ರೀ ಶಂಕರಲಿಂಗ ಸ್ವಾಮಿಗಳ ಶಿಷ್ಯರಾಗಿ ರಾಮನಿಗೆ ನೀಗದ ಕೆಲಸವನ್ನು ರಾಮನಾಮದಿಂದ ನೀಗಿಸಿದ ಹನುಮಂತನಂತೆ ತಪಸ್ಸಿದ್ಧಿಯಲ್ಲಿ ಮಿಗಿಲಾಗಿ ನಿಂತು, ಮುಗುಳುಕೋಡದ ಎಲ್ಲಪ್ಪ ಮಹಾರಾಜರಿಗೂ, ರೂಗಿಬೋಳೆಗಾವಿಯ ಬಸವಲಿಂಗ ಮಹಾರಾಜ-ಗಿರಿಜಮ್ಮನವರಿಗೂ. ಕ್ಷೀರಾನಂದರಿಗೂ ಮಾರ್ಗದರ್ಶಕರಾಗಿ ಶಿಷ್ಯ ಪರಂಪರೆಯನ್ನು ಬೆಳೆಸಿಕೊಂಡು ಸದ್ಗುರುವಾಗಿದ್ದರು. ಅವರು ಶ್ರೀ ಶಂಕರಲಿಂಗ ಸ್ವಾಮಿಗಳ ಗುರುತ್ವವನ್ನು ಗಟ್ಟಿಯಾಗಿ ಹಿಡಿದುಕೊಂಡಂತೆ, ಅವರ ಪೀಠಾಧಿಕಾರಿಗಳಾದ ಸಂಗನಬಸವರ ಗುರುತ್ವವನ್ನು ಮರೆಯಲಿಲ್ಲ; ಅದೇ ಗಟ್ಟಿಹಿಡಿತದಿಂದ ಹಿಡಿದುಕೊಂಡರು. ಹೀಗೆ ಲಚ್ಯಾಣ ಮಠವೂ, ಸಿದ್ದಪ್ಪ ಮಹಾರಾಜರ ಶಿಷ್ಯವರ್ಗವೂ ಸಂಗನ ಬಸವ ಶಿವಯೋಗಿಗಳಿಗೆ ಅಯಾಚಿತವಾಗಿ ಮಹಾಮಠದ ಟೊಂಗೆಟಿಸಿಲುಗಳಾದವು, ಲಚ್ಯಾಣದಂತೆ ಪುಣೆ, ಕೃಷ್ಣಾ ಮಠಗಳೂ ಬಂಥನಾಳ ಶಿವಯೋಗಿಗಳ ಮಹಾಮಠಕ್ಕೆ ಕವಲೊಡೆದ ರೆಂಬೆಕೊಂಬೆಗಳೇ ಆದವು ಕ್ಷೀರಾನಂದರು ಅರ್ಪಿಸಿದ ಆಸ್ತಿ ಹಾಗೂ ಸುವರ್ಣಕಿರೀಟಗಳಂತೂ ಆ ಮಠಕ್ಕೆ ಬಿಟ್ಟ ಹೂಕಾಯಿಗಳೇಸರಿ.

ಹೆಸರು ಸಂಗನ ಬಸವ; ರೂಪ ಗುಡ್ಡರೊಡೆಯ ಸಿದ್ಧರಾಮ, ಕಾಯಕ ಸಕಲಜನರಿಗೆ ಲೇಸನೆ ಬಯಸುವ ವಿದ್ಯಾಪ್ರಸಾರ. ವಿಜಾಪೂರದ ವಿಜಯಕಾಲೇಜು ಅವರ ಅಂತರಂಗದ ವಿರಾಟಸ್ವರೂಪದ ನಿದರ್ಶನವೇ ಆಗಿದೆ. ಲಚ್ಯಾಣದ ಟ್ರೇನಿಂಗಕಾಲೇಜು-ಹೈಸ್ಕೂಲುಗಳು-ಕೊರಡು ಕೊನರಿಸುವ ಬರಡು ಹಯನಿಸುವ ಅವರ ಶಕ್ತಿಯದ್ಯೋತಕ. ತಾಳಿಕೋಟೆಯ ಹೈಸ್ಕೂಲನ್ನು ನೆನೆಸಿಕೊಂಡರು ತಾಂಬಾ ಹೈಸ್ಕೂಲಿನ ಕನಸುಕಂಡರೂ ಹೆಳವನ ಓಟ, ಮೂಕನ ಮಾತುಗಾರಿಕೆ ಎನಿಸದಿರಲಾರವು.

" ಮನನೋಡಾ ಬಡವರದು; ಮನನೋಡಾದಿವ್ಯ " ಎಂಬ ವಚನಭಾಗವನ್ನು ತುಸು ಬದಲಿಸಿ, " ಮನೆನೋಡಾ ಬಡವರದಲ್ಲ. ಮನನೋಡಾ ದಿವ್ಯ " ಎಂದು ಮಾರ್ಪಡಿಸಿಕೊಂಡರೆ. ಸಂಗನಬಸವನ ಮಠ ಮನೆಗಳಿಗೆ ಒಪ್ಪುವದೇನೋ. ವಿಜಯಕಾಲೇಜು ಮೈದೋರುವದಕ್ಕೆ ಆರಂಭದ ವಂತಿಗೆಯಿಂದ ಲಕ್ಷಗಟ್ಟಲೆ ಹಣವನ್ನು ಒದಗಿಸಿ ಬಿಡದೇ. ಅದು ಜೀವಗೊಟ್ಟು ಉಸಿರಾಡಿಸುವದಕ್ಕೆ ಪ್ರತಿವರುಷ ಜನತಾವಂತಿಗೆಗೆ ನಡುಗಟ್ಟಬೇಕಾಗುತ್ತದಂತೆ. ಕೋರಾನ್ನಕ್ಕೆ ಹೊರಟ ಜಂಗಮನು ಜೋಳಿಗೆಯಲ್ಲಿ ತನ್ನ ಮನೆಯ ಮೊದಲಭಿಕ್ಷೆಯೆಂದು ಬೊಗಸೆ ಜೋಳವನ್ನು ಹಾಕಿಕೊಂಡು ಹೊರಡುವಂತೆ ಸಂಗನಬಸವರು ಮೊದಲಗಾಣಿಕೆಯೆಂದು ನಾಲ್ಕಾರುಸಾವಿರ ರೂ, ಗಳನ್ನು ನೀಡಿಕೊಂಡೇ ಭಿಕ್ಷೆಯನ್ನು ಮುಂದುವರಿಸುವರೆಂದು ಹೇಳುತ್ತಾರೆ.

ಇವರು ಪುರಾಣ ಹೇಳಲಿ, ಪ್ರವಚನ ನಡೆಯಿಸಲಿ, ಸಾವಿರಗಟ್ಟಳೆ ಜನಜಂಗುಳಿಗೆ ಹಬ್ಬದೂಟ ಸಿಕ್ಕಂತೆ. ಅವರ ಮಾತು ಶ್ರೋತೃಗಳ ಬುದ್ಧಿಗೆ ಮುಟ್ಟುವದಕ್ಕಿಂತ ಮಿಗಿಲಾಗಿ ಹೃದಯವನ್ನು ತಟ್ಟುತ್ತದೆ. ಹಣ ಕೇಳುವದು ಅವರ ಬೇಡಿಕೆಯಲ್ಲ, ಕೊಡುವಂತೆ ಮಾಡುವದು ಅವರ ವಾಡಿಕೆ. ಮಾತಿನ ಮಿಂಚಿಗೆ ಅದೇ ಕಣ್ಣು ಪಿಳುಕಿಸಿದ ಅವೆಷ್ಟೋ ಜಿಂತರುಗಳ ಕೈಮುಷ್ಟಿಯು ತಾನಾಗಿಯೇ ಬಿಚ್ಚುತ್ತದೆ. ಕೇಳಿದರೂ ಕೊಡದ ಬುದ್ಧಿಯು, ಕೈಸಡಿಲುಬಿಟ್ಟು ಕೊಟ್ಟು ಧನ್ಯವಾಗಬೇಕೆಂದು ತವಕಿಸುತ್ತದೆ. ಬಲುಮೆ-ಜುಲುಮೆಗಳಿಲ್ಲ. ಬುದ್ಧಿಯ ರಿಂಗಣಗುಣಿತವಿಲ್ಲ. ಹೆದರಿಕೆ-ಬೆದರಿಕೆಗಳಂತೂ ಮೊದಲೇ ಇಲ್ಲ. ಕೊಟ್ಟ ದುಡ್ಡು ಎಡಗೈಯಿಂದ ಬಲಗೈಗೆ ಬಂದಂತೆ, ಕೊಟ್ಟದ್ದು ಇನ್ನೊಬ್ಬರಿಗೆ ಕಾಣಿಸದು, ಕೇಳಿಸದು ಕೊಟ್ಟರೆಂದು ಹೇಳಿದಾಗಲೇ ಎಲ್ಲರಿಗೂ ಗೊತ್ತಾಗುವುದು.

ಸಂಗನಬಸವ ಸ್ವಾಮಿಗಳು ಸುಧಾರಕರೆಂದರೂ, ತಮ್ಮ ಲಾಂಛನ ಮರೆಸಿಲ್ಲ. ಲಾಂಛನ ತೊಟ್ಟರೂ ಸುಧಾರಣೆ ಬಿಟ್ಟಿಲ್ಲ. ಅವರ ಧರ್ಮದ ಕುರುಹು ಧರಿಸಿದ ಬಟ್ಟೆಯನ್ನು ದಾಟ ಈಚೆಗೆ ಬಂದಿಲ್ಲ. ತನ್ನ ಧರ್ಮವನ್ನು ಅಳವಡಿಸಿಕೊಂಡರೂ, ಸರ್ವಧರ್ಮಸಮನ್ವಯವನ್ನು ಬೆಳವಡಿಸಿಕೊಳ್ಳಲು ಮರೆಯಲಾರರು ನಸುಕಿನ ನಾಲ್ಕು ಗಂಟೆಗೆದ್ದರೂ ದ್ಯಾನದಲ್ಲಿಯೇ ಬೆಳಗುಕಾಣುವವರಲ್ಲ; ಮೈಲು ಸಂಚಾರ, ಗುಂಡು ಎತ್ತುವದು ಆಸನ ಇವುಗಳನ್ನೇ ಮೊದಲು ದ್ಯಾನಿಸುವರು ಇಡಿಯವಾರ ಮಾತಾಡಿ ರೂಢಿಯಾಗಿದ್ದರೂ, ಸೋಮವಾರದ ಮೌನ ತಪ್ಪದು. ಅದು ತಪ್ಪದ ಮೌನವೆಂದರೂ ಘನತರ ಕೆಲಸದ ಸುಮುಹೂರ್ತವೊದಗಿದ್ದರೆ ಮೌನವನ್ನು ಮುರಿಯುವದಕ್ಕೂ ಸಿದ್ಧರು.

ಪಾದ ಪೂಜೆ, ಪಲ್ಲಕ್ಕಿಯ ಮೆರವಣಿಗೆ, ರಥಾರೋಹಣ ಮೊದಲಾದಪ್ರಸಂಗಗಳಲ್ಲಿ ಅವರು ಬಾಗವಹಿಸುತ್ತಿದ್ದರೂ ಅದು ಅವರಿಗೆ ಒಲ್ಲದ ಕೆಲಸ ಅಲ್ಲವ, ಕೆಲಸ, ಮಕ್ಕಳೊಡನೆ ಆಡುವಾಗ ಅವರಿಗಾಗಿ ತಲೆತೆರೆದು ನಿಂತು ಕುಣಿಯುವುದು ಹಿರಿಯರಾದವರಿಗೆ ಅನಿವಾರ್ಯವಾಗುತ್ತದೆ. ಕೋಡಂಗಿಯಾಟವಾಡಿ ಕೂಡಲಸಂಗನನ್ನು ಒಲಿಸಿಕೊಳ್ಳಬೇಕಾಗುತ್ತದೆಂದು ಬಸವಣ್ಣನವರು ಹೇಳಲಿಲ್ಲವೇ ? ಬಹು ಮುಖದ ಸಮಾಜ ಪುರುಷನ ಒಲುಮೆಗಾಗಿ ಸಂಗನಬಸವರು ಪಾದಪೂಜೆ ಮಾಡಿಸಿಕೊಂಡರು, ಪಲ್ಲಕ್ಕಿಯಲ್ಲಿ ಮೆರೆದರು, ರಥಾರೋಹಣ ಮಾಡಿದರು, ಬಂಗಾರದ ಕಿರೀಟವನ್ನು ಹೊತ್ತರು, ಭಾವಚಿತ್ರವನ್ನು ಕೊಟ್ಟರು. ಏಳುನೂರಾ ಎಪ್ಪತ್ತು ಅಮರಗಣಂಗಳ ಪೂಜೆಯಲ್ಲಿ ಪ್ರಮುಖಪಾತ್ರವಹಿಸಿದರು ; ಅಷ್ಟೇ ಲಿಂಗಸ್ಥಾಪನೆಯ ಲೀಲೆಯನ್ನೂ ಆಡಿದರು. ಅವನ್ನೆಲ್ಲ ಮಾಡಿದ್ದರಿಂದ ಅವರು ಶಿವಯೋಗಿಗಳಾಗಲಿಲ್ಲ. ಅವರು ಶಿವಯೋಗಿಗಳಾಗಿದ್ದರಿಂದ ಅವುಗಳನ್ನೆಲ್ಲ ಮಾಡಿಸುವದಕ್ಕೆ ಸಾಧ್ಯವಾಯಿತು. ಸರ್ವಧರ್ಮ ಸಮನ್ವಯದ ರಹಸ್ಯವನ್ನು ಅರಿತಿರುವಂತೆ " ಸ್ವಧರ್ಮ ನಿಧನಂ ಶ್ರೇಯಃ " ಎಂಬುದನ್ನೂ ಅರಿತಿದ್ದರಿಂದ ಇವುಗಳನ್ನೆಲ್ಲ ಮಾಡಗೊಟ್ಟಿತು—ಆ ಸುಧಾರಕ ಬುದ್ಧಿ. ಇವೆಲ್ಲಕ್ಕೂ ಮಿಗಿಲಾಗಿ ಆ ಭಕ್ತಜೀವಿಯು— "ಎಲ್ಲೆಲ್ಲಿ ಯಾವಯಾವ ಪೂಜೆ ನಡೆಯುವುದೋ ಅಲ್ಲೆಲ್ಲ ನಾನೇ ನಿಂತು ಆದನ್ನು ನಾನು ಸ್ವೀಕರಿಸುತ್ತೇನೆ" ಎಂಬ ಭಗವತ್ ವಾಣಿಯನ್ನು ಮೈಗೂಡಿಸಿಕೊಂಡಿರಲೇಬೇಕಲ್ಲವೇ ?

ಸಂಗನಬಸವ ಶಿವಯೋಗಿಗಳು ಲಿಂಗಪೂಜಾನಿರತರಾಗಿ ದಿನದಿನಕ್ಕೆ ಆಳದಲ್ಲಿ ಇಳಿಯುತ್ತಿರುವಂತೆ, ಗ್ರಂಥವಾಚನದಿಂದ ಜೀವನಾಕಾಶದಲ್ಲಿ ಬಿತ್ತರಗೊಳ್ಳುತ್ತಿದ್ದಾರೆ. ಕನ್ನಡ, ಸಂಸ್ಕೃತ, ಹಿಂದಿ, ಮರಾಠಿ




ಅಲ್ಲದೆ ಸಾಧಾರಣವಾಗಿ ಇಂಗ್ಲೀಷು ಈ ಭಾಷೆಗಳ ಬಾಣದಿಂದ ಸಿಗುವ ನೆತ್ತಿಯ ಅನ್ನವನ್ನು ಸಿಕ್ಕಷ್ಟು ಅಥವಾ ಸಿಕ್ಕಷ್ಟೇ ಅಗಿದು ಅರಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಜೀವಧಾರಣೆಗೆ ದಿನಕ್ಕೆ ಒಪ್ಪತ್ತಿನ ಊಟೇ ಸಾಕು, ಅವರ ಹೊಟ್ಟೆಗೆ. ಆದರೆ ನೆತ್ತಿಯ ಊಟ ಅವರಿಗೆ ಎರಡೂ ಹೊತ್ತು ಬೇಕು. ಆಹಾರದಲ್ಲಿ ಸಮತೋಲವನ್ನು ಕಾಯ್ದುಕೊಳ್ಳುವ ಎಚ್ಚರಿಕೆ ವಹಿಸುತ್ತಾರೆ. ಹಾಲು-ತುಪ್ಪ, ಹಣ್ಣು-ಕಾಯಿಪಲ್ಲೆ, ಧಾನ್ಯ ವಿಭಾಗ ಇವುಗಳ ತಾರತಮ್ಯವನ್ನು ಅರಿತಿರುವ ಇವರು, ಅಭ್ಯಾಸದ ವಿಷಯ ವೈವಿಧ್ಯದಲ್ಲಿಯೂ ತಾರತಮ್ಯವನ್ನು ಬಳಸುತ್ತಾರೆ. ಮೈಗೆ ತಣ್ಣೀರಿನ ಸ್ನಾನ, ಮನಕ್ಕೆ ತಣಿವಿನ ವಿಷಯ. ಚಳಿಗಾಲವೆಂದು ನೀರು ಕಾಯಿಸಿದರೂ ಆರಿಸದೆ ಮೈಮೇಲೆ ಸುರುವಿಕೊಳ್ಳುವಂತಿಲ್ಲ. ಬುದ್ಧಿಯನ್ನು ಕೆರಳಿಸುವ ಪ್ರಸಂಗಗಳು ಕಾಣಿಸಿಕೊಂಡರೆ, ಕರ್ತವ್ಯಕ್ಕಾಗಿ ಪ್ರಚೋದನೆಗೊಂಡರೂ ಸಮತೆಯ ಸಂಗಡಿಯಿಲ್ಲದೆ ಉದ್ದನೀರಿಗಿಳಿಯರು.

ಕಾಶ್ಮೀರದಿಂದ ಸಿಂಹಲದ ವರೆಗಿನ ಭಾರತ ಯಾತ್ರೆಯನ್ನು ಅವಕಾಶ ಸಿಕ್ಕಾಗ ಕೈಕೊಂಡು ಮುಗಿಸಿದ್ದರಿಂದ, ಅಖಿಲಭಾರತದ ಹುಡಿಯು ಅವರ ಮೈಗೇರಿ ಕುಡಿಯಾಗಿದೆ. ಅದು ಅವರ ರಾಷ್ಟ್ರಧರ್ಮ ಮನೋವೃತ್ತಿಗೆ ಗಂಧ-ಭಸ್ಮವಾಗಿದೆ. ಭಾರತದ ಬೆಟ್ಟ-ಬಯಲು, ಕಾಡು-ಮೇಡು, ಹಳ್ಳಿ-ಹೊಳಲು ಇವೆಲ್ಲವುಗಳ ವಾತಾವರಣದಲ್ಲಿ ಸಂಚರಿಸಿ ಅಲ್ಲಿಯ ವಿವಿಧ ಗಾಳಿಗಳನ್ನು ಉಸುರಾಡಿಸಿ, ಹೊಸಜೀವಕಳೆ ತುಂಬಿಕೊಂಡಿದ್ದಾರೆ. ಹೊಳೆ-ಹಳ್ಳ, ಕೆರೆ-ಸರೋವರ, ಬಾವಿ-ಪುಷ್ಕರಣಿಗಳ ನೀರು ಕುಡಿದವರಾದ್ದರಿಂದ ವೀರಶೈವ, ಕನ್ನಡಿಗ, ಭಾರತೀಯ, ವಿಶ್ವಮಾನವ ಈ ಎಲ್ಲವುಗಳ ಹಸಿಯು ಅವರ ರಕ್ತದಲ್ಲಿ ನೆಲೆಯಾಗಿದೆ.

ಇವರ ಶಿಷ್ಯವರ್ಗದ ಸಿದ್ಧಿಯು, ಗುರುವಿಗೂ ಒಂದು ಗುಂಜಿ ಮಿಗಿಲಾದದ್ದೆಂದು ಹೇಳಿದರೆ ಅವರಿಗೊಂದು ಹೆಮ್ಮೆ; ಹೊಟ್ಟೆಯುರಿ ಅಲ್ಲ, ಸಂಗನಬಸವ ಶಿವಯೋಗಿಗಳು ಉತ್ತರ ಭಾರತ ಹಾಗೂ ಹಿಮಗಿರಿಗಳಲ್ಲಿ ತೀರ್ಥಯಾತ್ರೆ ಕೈಕೊಂಡಾಗ, ರೂಗಿ ಬೋಳೆಗಾವಿ ಮಠದಲ್ಲಿರುವ ಶ್ರೀ ಗಿರಿಜಮ್ಮ ತಾಯಿಯವರು, ತಮ್ಮ ಗುರುಗಳು ಸಂಚರಿಸಿದ ದಾರಿಯನ್ನೂ, ವಸತಿ ಮಾಡಿದ ಸ್ಥಳವನ್ನೂ, ಅಲ್ಲಿ ನಡೆಯಿಸಿದ ಚಟುವಟಿಕೆಯನ್ನೂ ತಮ್ಮ ಶಿಷ್ಯಮಕ್ಕಳಿಗೆ ದಿನಾಲು ಗುರುತಿಸಿ ಹೇಳುತ್ತಿದ್ದರೆಂದೂ ಅವುಗಳನ್ನೆಲ್ಲ ಕ್ರಮವಾಗಿ ಬರೆದಿಟ್ಟುಕೊಂಡು, ಸ್ವಾಮಿಗಳು ಪ್ರವಾಸದಿಂದ ಹಿಂದಿರುಗಿ ಬಂದಬಳಿಕ ಅವರ ಸ್ವಂತದ ದಿನಚರಿಯೊಡನೆ ಸರಿಹೊಂದಿಸಿ ನೋಡಿದಾಗ ಅವೆರಡೂ ತಂತೋತಂತ ಹೊಂದಿಕೊಂಡವೆಂದೂ ಹೇಳುತ್ತಾರೆ. ಗಿರಿಜಮ್ಮ ತಾಯಿಯವರು ಅದನ್ನು ಹೇಗೆ ಹೇಳಿದರು ? ಅವರನ್ನೇ ಕೇಳಿದರೆ " ಹೇಗೆ ಹೇಳಿದೆನೋ ನನಗೂ ತಿಳಿಯದು. " ಎನ್ನುತ್ತಾರೆ. ಲಚ್ಯಾಣದ ಸಿದ್ದಪ್ಪ ಮಹಾರಾಜರ ಆತ್ಮವು ಅವರಲ್ಲಿ ಪ್ರವೇಶಿಸಿ ಹಾಗೆ ನುಡಿಸುವದೆಂದೂ ಹೇಳುವದುಂಟು. ಗಿರಿಜಮ್ಮನವರು ಪತಿ ಬಸವಲಿಂಗ ಮಹಾರಾಜರೊಂದಿಗೆ ಲಚ್ಯಾಣ ಸಿದ್ದಪ್ಪ ಮಹಾರಾಜರ ಅನುಗ್ರಹಕ್ಕೆ ಪಾತ್ರರಾಗಿ, ಮುಕ್ತಿಮಾರ್ಗದಲ್ಲಿ ಪ್ರಯಾಸಪಟ್ಟು ಸಾಗಿದವರು ಬಸವಲಿಂಗ ಮಹಾರಾಜರು ಮಧ್ಯದಲ್ಲಿಯೇ ದೇಹವಿಟ್ಟರು. ಆದರೆ ಗಿರಿಜಮ್ಮನವರ ಮಟ್ಟಿಗೆ ಅವರು ವಿದೇಹ ಪತಿಯಾಗಿ ಸಹಜೀವಿಯಾಗಿಯೇ ಇರುವ

ರೆಂದು ಹೇಳಲಾಗುತ್ತದೆ. ರೂಗಿ ಬೋಳೇಗಾವಿ ಕಮರಿಮಠದ ಗುಹೆಯಲ್ಲಿರುವ ಶ್ರೀ ಬಸವಲಿಂಗ ಮಹಾರಾಜರ ಪ್ರತಿಮೆಯೊಂದಿಗೆ, ಗಿರಿಜಮ್ಮ ತಾಯಿಯವರನ್ನು ಕುಳ್ಳಿರಿಸಿ, ಪ್ರತಿವರ್ಷ ಸಂಗನಬಸವ ಶಿವಯೋಗಿಗಳೂ, ಗೌಡ-ಗಣಾಚಾರಿಗಳೂ ಅಕ್ಕಿಕಾಳು ಹಾಕಿ ವಿವಾಹ ವಿಧಿಯನ್ನು ಆಚರಿಸುತ್ತಾರೆ. ಆ ಕಾಲಕ್ಕೆ ಸಾರ್ವಜನಿಕರು ಅಕ್ಷತೆ ಹಾಕಿ, ಹಣದ ರೂಪದಿಂದ ಉಡುಗೊರೆಯನ್ನೂ ಸಲ್ಲಿಸುತ್ತಾರೆ.

ತಮ್ಮ ಭಕ್ತರ ಹಿರಿಮೆಗಾಗಲಿ, ಶಿಷ್ಯರ ಮಹಿಮೆಗಾಗಲಿ ಸಂಗನ ಬಸವ ಶಿವಯೋಗಿಗಳು ಹೆಮ್ಮೆ ಪಡುವರೆಂದೇ ಹೇಳಬೇಕು, ಏಕೆಂದರೆ " ಮಮ ಭಕ್ತೋ ಮಮಾಧಿಕಃ " ಎಂಬ ಮಾತು ಅವರ ಮೂರು ಜೀವನ-ಸೂತ್ರಗಳಲ್ಲಿ ಒಂದಾಗಿದೆ. " ಕಾಯಕವೇ ಕೈಲಾಸ " ಎಂಬ ಇನ್ನೊಂದು ಜೀವನಸೂತ್ರಕ್ಕೆ ಅವರು ಸೂತ್ರಧಾರರಾಗಿ ನಿಂತುಕೊಂಡುದು ಎಲ್ಲರಿಗೂ ತಿಳಿದ ವಿಷಯವಾಗಿದೆ. " ಸಾವು ಸಹೋದರ " ಎಂಬ ಅವರ ಮೂರನೇ ಜೀವನ ಸೂತ್ರವು ಅವರಲ್ಲಿ ಅದ್ಭುತ ಕಾರ್ಯಶಕ್ತಿಯನ್ನೂ, ಅಜರಾಮರ ಪರಿಣಾಮ ಸಿದ್ಧಿಯನ್ನೂ ತುಂಬುತ್ತಲಿದೆಯೆಂಬುದು ಮನಗಾಣಲೇಬಹುದಾದ ಮಾತು.



# ಜೀವನದ ಧ್ಯೇಯ–ಆಧ್ಯಾತ್ಮಿಕ ವಿಕಾಸ

ಲೇಖಕರು:– ವಿದ್ಯಾವಾಚಸ್ಪತಿ, ವ್ಯಾಖ್ಯಾನಕೇಸರಿ, ಧರ್ಮಾಲಂಕಾರ, ಸಮಾಜರತ್ನ
**ಶ್ರೀ ಎಂ. ವರ್ಧಮಾನ ಶಾಸ್ತ್ರಿಗಳವರು, ನ್ಯಾಯಕಾವ್ಯತೀರ್ಥ,**
**ಸೋಲಾಪುರ.**

## ನಿಜವಾದ ವಿಕಾಸವೆಲ್ಲಿದೆ ?

ಇಂದು ಜಗತ್ತು ವಿಕಾಸದಕಡೆ ಓಡುತ್ತಿದೆ. ವಿವಿಧ ಮುಖದ ವಿಕಾಸನವನ್ನು ನೋಡಿ ವೈಜ್ಞಾನಿಕರು ತಮ್ಮ ಕೌಶಲ್ಯಕ್ಕೆ ತಾವೇ ಮೆಚ್ಚಿಕೊಳ್ಳುತ್ತಿದ್ದಾರೆ. ಆ ಮಾರ್ಗದಲ್ಲಿ ಇನ್ನು ಮುಂದ ವೈಜ್ಞಾನಿಕರು... ಸವಾರಿ ರಿಯಲು ಎತ್ನಿಸುತ್ತಿದ್ದಾರೆ. ಅಣುಬಾಂಬು ಹೈಡ್ರೋಜನ್ ಬಾಂಬಿನನಂತರ ಚಂದ್ರಲೋಕಕ್ಕೆ ಸವಾರಿ ಮಾಡುವ ಮಹಾಪುರುಷಾರ್ಥವು ನಡೆಯುತ್ತಿದೆ. ಈ ಪ್ರಗತಿಗಳಿಂದಲೇ ವಿಜ್ಞಾನದ ಜಗತ್ತು ನಾವು ಏನೋ ಒಂದು ದೊಡ್ಡ ಸಾಧನೆಯನ್ನು ಮಾಡುತ್ತಿದ್ದೇವೆಂದು ಹೆಮ್ಮೆಪಡುತ್ತಿದೆ, ಈ ಜಗತ್ತಿನಲ್ಲಿ ಎಷ್ಟು ವಿಕಾಸವನ್ನು ಮಾಡಿದರೂ ವಿಚಾರವಂತರು ಇದನ್ನು ವಿಕಾಸವೆಂದು ಒಪ್ಪುವದಿಲ್ಲ. ಅತ್ಯಂತ ದೂರದರ್ಶಿತೆಯಿಂದ ಇದನ್ನು ವಿಚಾರ ಮಾಡಿದರೆ ಈ ವಿಕಾಸವು ವಿನಾಶದ ಕಡೆಗೆ ಹೋಗುತ್ತಿದೆ ಎಂಬ ಮಾತನ್ನು ನಾವು ಇದರ ತಳಹದಿಯಲ್ಲಿ ಕಾಣಬಹುದು. ಇಂದು ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಉತ್ಕರ್ಷವನ್ನು ನಡಿಸುವದಿಲ್ಲ ಪ್ರತಿ ಒಂದು ರಾಷ್ಟ್ರಗಳು ಇತರ ರಾಷ್ಟ್ರಗಳ ಆಧಿಪತ್ಯ, ಸಂಪತ್ತಿ ವೈಭವಗಳನ್ನು ಪಾದಾಕ್ರಾಂತ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತ ಇವೆ. ಅದಕ್ಕೋಸ್ಕರವಾಗಿ ಎಲ್ಲ ವಿಧದ ಶಕ್ತಿ ಪುರುಷಾರ್ಥಗಳನ್ನು ವಿನಿಯೋಗ ಮಾಡುತ್ತಿವೆ. ನವೀನ–ನವೀನತಮವಾದ ಅಸ್ತ್ರ ಶಸ್ತ್ರಗಳ ನಿರ್ಮಿತಿಯು ಅದಕ್ಕೋಸ್ಕರವಾಗಿಯೇ ನಡೆದಿದೆ ಎಂಬ ಮಾತು ಸರ್ವವೇದ್ಯವಾಗಿದೆ. ಹೀಗಿರುವಾಗ ಇವತ್ತಿನ ವಿಜ್ಞಾನದ ಪ್ರಗತಿಯು ವಿನಾಶದ ಕಡೆ ಅಥವಾ ವಿಧ್ವಂಸದ ಕಡೆಗೆ ಸಾಗುತ್ತಿದೆ ಎಂಬ ಮಾತನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಈ ಆಸುರೀ ಆಕಾಂಕ್ಷಗಳ ಕೋಲಾಹಲದಲ್ಲಿ ಆತ್ಮನಿರೀಕ್ಷಣೆಯನ್ನು ಮಾಡಲು ಯಾರಿಗೆ ಸಮಯವಿದೆ? ಅಧ್ಯಾತ್ಮಿಕ ಪ್ರಗತಿಯೇ ವಿಶ್ವದ ಪ್ರಗತಿ ಎಂದು ನಮ್ಮ ಆರ್ಯಮಹರ್ಷಿಗಳು ಸಾರಿದ ಪಾವನ ತತ್ವವು ವಿಸ್ಮೃತವಾಗುತ್ತ ಹೋಗುತ್ತಿದೆ. ಅಧ್ಯಾತ್ಮಿಕ ವಿಕಾಸದಿಂದ ವ್ಯಕ್ತಿಯ ಜೀವನದಲ್ಲಿ ಶಾಂತಿ–ಆನಂದದ ನಿವಾಸವಾಗಿ ಅಂತತೋಗತ್ವಾ ಅವನು ಸಚ್ಚಿದಾನಂದಮಯ ಅವಸ್ಥೆಯನ್ನು ಹೊಂದಿ ಚಿರಂತನ ಸುಖ ಸಾಮ್ರಾಜ್ಯದ ಅಧಿಪತಿಯಾಗುತ್ತಾನೆ. ಆದರೆ ಇವರು ಈ ಮಹತ್ವದ ವಿಷದಯದ ಕಡೆ ಲೋಕದ ಲಕ್ಷ್ಯವಿಲ್ಲ. ಆದರೆ ಎಷ್ಟುರವರೆಗೆ ಈ ವಿಶ್ವವು ಈ ಪ್ರಗತಿಯನ್ನು ಸಾಧಿಸುವದಿಲ್ಲವೋ ಅಷ್ಟುರವರೆಗೆ ಯಾವ ರಾಷ್ಟ್ರದ ಪ್ರಗತಿಯೂ ಸಾಧಿಸಲಾರದೆಂಬ ಮಾತು ನಿರ್ವಿವಾದವಾಗಿದೆ.

## ಆತ್ಮನ ಅಸ್ತಿತ್ವವಿದೆಯೇ ?

ಇಂದಿನ ಭೌತಿಕ ವಾತಾವರಣದ ಪ್ರಭಾವದಲ್ಲಿ ನಡೆಯುತ್ತಿರುವ ನಮಗೆ ಆತ್ಮನೆಂಬ ವಸ್ತುವು ಇದೆಯೋ ಇಲ್ಲವೋ ಎಂಬ ವಿಷಯದಲ್ಲಿಯೂ ಅರಿವಿಲ್ಲ. ಅನೇಕರು ಅದನ್ನು ತಿಳಿಯುತ್ತಿದ್ದರೂ ಅದರ ಮೇಲೆ ವಿಶ್ವಾಸವಿಲ್ಲ. ಆತ್ಮನನ್ನು ಯಾರು ನೋಡಿದ್ದಾರೆ, ಅವನು ಎಲ್ಲಿದ್ದಾನೆ, ಕಾಣಲರಿಯದ ವಸ್ತುವನ್ನು ಇದೆ ಎಂದು ಒಪ್ಪುವುದಾದರೂ ಹೇಗೆ? ಈ ಪ್ರಕಾರದ ಅನೇಕ ಪ್ರಶ್ನೆಗಳು ನಮ್ಮೆದುರಿನಲ್ಲಿ ಬಂದುಹೋಗುತ್ತವೆ. ಅಧಿಕಾಂಶ ಜಗತ್ತು ಇಂದು ಅನಾತ್ಮಿಕವಾಗಿ, ಭೌತಿಕವಾಗಿ ಹೋಗುತ್ತಿರುವುದಕ್ಕೆ ಈ ವಿಷಯದ ಅವಿಶ್ವಾಸವೇ ಕಾರಣವಾಗಿದೆ. ಆತ್ಮನ ಅಸ್ತಿತ್ವದ ವಿಷಯದಲ್ಲಿ ನಾವು ನಿರಾಶರಾಗಬೇಕಾದ ಕಾರಣವಿಲ್ಲ. ಆತ್ಮದರ್ಶನವನ್ನು ನಾವು ಮಾಡಬಹುದು; ಹೇಗೆ ಲೌಕಿಕ ಉತ್ಕರ್ಷಕ್ಕೆ ನಮ್ಮ ಶಕ್ತಿ, ಭಕ್ತಿ, ಪುರುಷಾರ್ಥದ ಉಪಯೋಗವನ್ನು ಮಾಡುತ್ತೇವೆಯೇ ಅದೇ ಪ್ರಕಾರ ನಮ್ಮ ಆತ್ಮೀಯ ಉತ್ಕರ್ಷಕ್ಕೂ ನಮ್ಮ ಶಕ್ತಿ ಭಕ್ತಿ ಪುರುಷಾರ್ಥಗಳ ಉಪಯೋಗವನ್ನು ಮಾಡಲು ಪ್ರಯತ್ನಿಸಬೇಕಾಗಿದೆ. ಬಾಹ್ಯಕ್ಕೆ ನಾವು ಎಷ್ಟು ಮಹತ್ವವನ್ನು ಕೊಡುತ್ತಿದ್ದೇವೆಯೋ ಅಭ್ಯಂತರಕ್ಕೂ ಅಷ್ಟೇ ಮಹತ್ವವನ್ನು ಕೊಡಲು ನಾವು ಕಲಿಯಬೇಕಾಗಿದೆ. ಶರೀರ ಶಕ್ತಿಯನ್ನು ಬೆಳೆಸುವುದರಲ್ಲಿ ನಾವು ಎಷ್ಟು ಪ್ರಯತ್ನಶೀಲರಾಗಿದ್ದೇವೆಯೋ ಅಷ್ಟೇ ಆತ್ಮಶಕ್ತಿಯನ್ನು ಬೆಳೆಸುವ ಉದ್ಯೋಗವನ್ನು ಮಾಡಬೇಕಾಗಿದೆ.

ಈ ಜಗತ್ತಿನಲ್ಲಿ ನಾವು ಸುಖಿಗಳಾಗಬೇಕು, ನಮ್ಮ ಮಕ್ಕಳು ಸುಖಿಗಳಾಗಬೇಕು, ನಮ್ಮ ಪರಿವಾರದವರು ಸುಖಿಗಳಾಗಬೇಕು, ನನ್ನ ಶರೀರದ ಸೌಂದರ್ಯ ಬೆಳೆಯಬೇಕು, ನನ್ನ ಶರೀರದ ಆರೋಗ್ಯ ಬೆಳೆಯಬೇಕು, ಅದು ಹೃಷ್ಟಪುಷ್ಟವಾಗಿ ಬೆಳೆಯಬೇಕು, ನೋಡುವವರಿಗೆ ಅದು ಒಳ್ಳೆಯದಾಗಿ ಕಾಣಬೇಕು ಎಂಬೀತ್ಯಾದಿ ವಿಚಾರಗಳಿಂದ ನಾವು ಆ ಶರೀರದ ಪೋಷಣೆಗೆ, ಸುಂದರತೆಗೆ ಮತ್ತು ಅದರ ಸ್ವಾರ್ಥಕ್ಕಾಗಿ ಹೇಗೆ ಅನವರತ ಪ್ರಯತ್ನ ಮಾಡುತ್ತಿದ್ದೇವೆಯೋ ಅದೇ ಪ್ರಕಾರ ಎಂದಾದರೂ ನನ್ನ ಆತ್ಮನು ಸುಖಿಯಾಗಬೇಕು, ಅವನು ನಿರೋಗಿಯಾಗಬೇಕು, ಅವನ ಸೌಂದರ್ಯವು ಬೆಳೆಯಬೇಕು, ಅವನ ಸ್ವಾರ್ಥವು ಅಭಿವೃದ್ಧಿಯಾಗಬೇಕೆಂಬ ವಿಚಾರವು ನಮ್ಮನ್ನು ಪ್ರೇರೇಪಿಸುತ್ತದೆಯೇ? ಇಲ್ಲ, ಯಾಕಂದರೆ ಆಧ್ಯಾತ್ಮಿಕ ಜೀವನದ ಸಂಸ್ಕಾರವೇ ನಮ್ಮ ಜೀವನದಿಂದ ದೂರವಾಗಿದೆ. ನಮಗೆ ಅದರ ಅಭ್ಯಾಸವಿಲ್ಲ, ಸಂಸರ್ಗವಿಲ್ಲ, ಆಸಕ್ತಿ ಇಲ್ಲ, ಅಭಿರುಚಿ ಇಲ್ಲ, ಆದುದರಿಂದ ನಾವು ನಮ್ಮ ಪ್ರಾಣಸ್ವರೂಪನಾದ ಆತ್ಮನಿಂದ ದೂರವಾಗುತ್ತ ಹೋಗುತ್ತಿದ್ದೇವೆ, ಆತ್ಮನಿಂದ ದೂರವಾಗಿದ್ದರಿಂದಲೇ ಪರಮಾತ್ಮನಿಂದಲೂ ದೂರವಾಗುತ್ತಿದ್ದೇವೆ, ಪರಮಾತ್ಮನ ಸಾನ್ನಿಧ್ಯವಿಲ್ಲದವರಿಗೆ ಅಭ್ಯುದಯವೆಲ್ಲಿಂದ? ಶ್ರೇಯವೆಲ್ಲಿಂದ? ಪ್ರೇಮವೆಲ್ಲಿಂದ? ಬರಬೇಕು.

ಹಾಗಾದರೆ ಆ ಪರಮಾತ್ಮನ ದರ್ಶನವನ್ನು ನಾವು ಮಾಡಬೇಕಾಗಿದೆ ನಾವು ಆ ಪರಮಾತ್ಮನನ್ನು ಕಾಣಬಹುದೋ? ನಮಗೆ ಆ ಪರಮಾತ್ಮನ ದರ್ಶನವಾಗುವದಿಲ್ಲ, ಹೀಗಿರುವಾಗ ಆ ಆತ್ಮನಿದ್ದಾನೆಂದು ನಂಬುವದಾದರೂ ಹೇಗೆ? ಎಂದು ಕೆಲವರು ಕೆಲವು ಸಾರಿ ಕೇಳುತ್ತಾರೆ. ಆದರೆ



ಲೋಕದಲ್ಲಿ ಎಷ್ಟೋ ಪದಾರ್ಥಗಳು ನಮಗೆ ಕಾಣಬರದಿದ್ದರೂ ಅವುಗಳ ಅಸ್ತಿತ್ವವನ್ನು ನಾವು ಒಪ್ಪುತ್ತೇವೆ. ಕೆಲವು ಪದಾರ್ಥಗಳು ನಮಗೆ ಕಾಣದಿದ್ದರೂ ಅವುಗಳ ಕಾರ್ಯದಿಂದ ಅವುಗಳ ಅಸ್ತಿತ್ವವನ್ನು ಒಪ್ಪಬೇಕಾಗುತ್ತದೆ. ಅದೇ ಪ್ರಕಾರವಾಗಿ ಆತ್ಮನನ್ನು ನಾವು ಕಣ್ಣು ಬಿಚ್ಚಿದ ಕೂಡಲೇ ನೋಡಲು ಸಾಧ್ಯವಿಲ್ಲದಿದ್ದರೂ ಅವನ ಕಾರ್ಯದಿಂದ ಅವನ ಅಸ್ತಿತ್ವವನ್ನು ಕಾಣಬಹುದು. ನಾನು ಏಳುತ್ತೇನೆ. ನಾನು ಹೇಳುತ್ತೇನೆ, ನಾನು ಮಲಗುತ್ತೇನೆ. ನಾನು ಊಟಮಾಡುತ್ತೇನೆ. ನಾನು ಸುಖಪಡುತ್ತೇನೆ. ಇತ್ಯಾದಿ ವಾಕ್ಯಗಳಲ್ಲಿ ನಾನು ನಾನು ಎಂದು ಹೇಳುವ ವಸ್ತು ಯಾವುದು? ನಾನು ಎಂಬವನು ಯಾರು? ನಾನು ಎಂದು ಹೇಳುವ ಪದಾರ್ಥ ನಮ್ಮ ಶರೀರವಲ್ಲ. ಒಂದು ವೇಳೆ ಶರೀರವೇ ಹಾಗೆ ಹೇಳುತ್ತಿದ್ದರೆ ಮೃತ ಶರೀರವೂ ಹಾಗೆ ಹೇಳುತ್ತಿತ್ತು. ಅದು ಹಾಗೆ ಹೇಗೆ ಹೇಳುವದಿಲ್ಲ. ಆದುದರಿಂದ ನಾನು ನಾನು ಎಂದು ಹೇಳುವ ಪದಾರ್ಥ ಶರೀರ ವ್ಯತಿರಿಕ್ತವಾದ ಇನ್ನಾವುದೋ ಅದೆ ಎಂಬ ಮಾತನ್ನು ನಾವು ಒಪ್ಪಬೇಕಾಗಿದೆ. ಅದು ಬೇರೆ ಏನೂ ಅಲ್ಲ. ಆ ಆತ್ಮನೇ ಅಹಂಪ್ರಕೃತಿಯ ವೇದ್ಯತ್ವದಿಂದ ತನ್ನನ್ನು ಪೂಜಿಸುತ್ತಿದ್ದಾನೆಂಬ ವಿಷಯವನ್ನು ಪ್ರಿಯ ಎಲ್ಲ ಆಸ್ತಿಕವಾದಿಗಳು ಸ್ವೀಕರಿಸುತ್ತಾರೆ.

## ಆತ್ಮದರ್ಶನದ ಬಗೆ ಹೇಗೆ ?

ಹಾಗಾದರೆ ಎಂದಾದರೂ, ಹೇಗಾದರೂ ಆ ಆತ್ಮನನ್ನು ನಾವು ಕಾಣಬಹುದೇ? ಕಾಣಬಹುದು. ಹೇಗೆ? ಅದಕ್ಕೆ ಅವನನ್ನು ಕಾಣುವದಕ್ಕೆ ಸರಿಯಾದ ದೃಷ್ಟಿಯನ್ನು ಸಿದ್ಧಪಡಿಸಿಕೊಳ್ಳಬೇಕಾಗಿದೆ. ದೃಷ್ಟಿ ಸರಿ ಇಲ್ಲದಿದ್ದರೆ ಯಾವ ಪುಸ್ತಕವನ್ನೂ ನೋಡಲಿಕ್ಕೆ ಸಾಧ್ಯವಿಲ್ಲ ಆ ಅದೃಶ್ಯ ದೇವನಾದ ಆತ್ಮನನ್ನು ನೋಡಲಿಕ್ಕೆ ದೃಷ್ಟಿಯನ್ನು ಸರಿಮಾಡಿಕೊಳ್ಳುವುದು ಅಗತ್ಯವಿಲ್ಲವೋ? ಅಗತ್ಯವಿದೆ. ಮಹಾ ಕವಿ ರತ್ನಾಕರನು ಒಂದೆಡೆ ಹೀಗೆನ್ನುತ್ತಾನೆ:—

ಅರಿವಿಂದೀಕ್ಷಿಸಲಕ್ಕು ಮಾತ್ಮನಿರವಂ ದೇಹಂಬೊವೀ ಕಣ್ಗೆ ತಾಂ
ಗುರಿಯಾಗಂ ಶಿಲೆಯೊಳ್ಸುವರ್ಣ ಮರಲೋಳ್ಸೌರಭ್ಯ ಮಾಕ್ಷೀರದೋಳ್
ನರುನೆಯ್ಕಾಷ್ಠದೊಳಗ್ನಿ ಇರ್ಪುತೆರದಿಂದೀ ಮೈಯೊಳೊಂದಿರ್ಪನೆಂ
ದರಿದಭ್ಯಾಸಿಸಿ ಕಾಣ್ಬುಮೆಂದರು ವಿದ್ಯೆ, ರತ್ನಾಕರಾಧೀಶ್ವರಾ.

ಆ ಪರಮಾತ್ಮನನ್ನು ನೋಡಲಿಕ್ಕೆ ಜ್ಞಾನದೃಷ್ಟಿಯನ್ನು ಸಿದ್ಧಪಡಿಸಿಕೊಳ್ಳಬೇಕಾಗಿದೆ. ಚರ್ಮದೃಷ್ಟಿಯಿಂದ ಅವನನ್ನು ನೋಡಲು ಸಾಧ್ಯವಿಲ್ಲ. ಕಲ್ಲಿನಲ್ಲಿ ಬಂಗಾರವಿದೆ, ಪುಷ್ಪದಲ್ಲಿ ಸುಗಂಧವಿದೆ, ಹಾಲಿನಲ್ಲಿ ತುಪ್ಪವಿದೆ. ಕಟ್ಟಿಗೆಯಲ್ಲಿ ಬೆಂಕಿಇದೆ. ಹಾಗೆಯೇ ಈ ಶರೀರದಲ್ಲಿ ಆತ್ಮನಿದ್ದಾನೆಂಬ ವಿಷಯವನ್ನು ನಾವು ತಿಳಿದು ಅವನನ್ನು ನೋಡಲು ಅಭ್ಯಾಸ ಮಾಡಿದರೆ ಅವಶ್ಯವಾಗಿಯೂ ಕಾಣುವನು. ವಿಪರ್ಯುಕ್ತ ಪದಾರ್ಥ ಇಲ್ಲಿರುವ ವಸ್ತುಗಳು ಪ್ರತ್ಯಕ್ಷವಾಗಿ ಕಾಣದಿದ್ದರೂ ಅವುಗಳು ಇವೆ ಎಂಬ ವಿಷಯವು ನಿರ್ವಿವಾದವಾಗಿದೆ. ಸುವರ್ಣವು ಸುವರ್ಣಪಾಷಾಣದಿಂದಲೇ ಹೊರಡುತ್ತದೆ. ಸುಗಂಧವು ಪುಷ್ಪದಿಂದ, ತುಪ್ಪವು ಹಾಲಿನಿಂದ, ಹಾಗೆಯೇ ಬೆಂಕಿಯು ಕಟ್ಟಿಗೆಯಿಂದ ಲಭಿಸುತ್ತದೆ ಎಂಬ ವಿಷ

ಯವು ಅನುಭವಗಮ್ಯವಾಗಿದೆ. ಆದುದರಿಂದ ಮೊದಲು ಈ ಶರೀರದಲ್ಲಿ ಆತ್ಮನಿದ್ದಾನೆಂಬ ವಿಷಯವನ್ನು ನಾವು ನಂಬಬೇಕು. ನಾವು ಹಾಗೆ ನಂಬಿದರೆ ಆ ವಸ್ತುವನ್ನು ಪ್ರಾಪ್ತ ಮಾಡಲು ಪ್ರಯತ್ನಿಸಬಹುದು. ಪ್ರತೀತಿ ಇಲ್ಲದೆ ಪ್ರಯತ್ನವಾಗಲಾರದು. ಆಗಲಿ, ನಾವು ನಂಬುತ್ತೇವೆ. ಈ ಶರೀರದಲ್ಲಿ ಆತ್ಮನಿದ್ದಾನೆ. ಆ ಕಲ್ಲಿನಲ್ಲಿ ಸುವರ್ಣವಿದೆ, ಹಾಲಿನಲ್ಲಿ ತುಪ್ಪವಿದೆ, ಕಟ್ಟಿಗೆಯಲ್ಲಿ ಬೆಂಕಿ ಇದೆ ಮುಂದೇನು ?

ಅದರ ರಹಸ್ಯವನ್ನು ತಿಳಿಯಬೇಕು. ಅದರ ಗುಣವನ್ನು ಅರಿಯಬೇಕು. ಪರಮಾತ್ಮನ ನಿಜ ಸ್ವರೂಪದ ಅನುಭವವನ್ನು ಮಾಡಬೇಕು.

ಕಲ್ಲಿನಲ್ಲಿ ಸುವರ್ಣವಿದೆ ಎಂದು ಹೇಳಿದ ಮಾತ್ರಕ್ಕೆ ಯಾವ ಕಲ್ಲನ್ನಾದರೂ ಎತ್ತಿ ತಂದರೆ ಸುವರ್ಣ ಸಿಗಲಾರದು. ಹಾಲಿನಲ್ಲಿ ತುಪ್ಪವಿದೆ ಎಂದು ನಂಬಿದ ಮಾತ್ರಕ್ಕೆ ಯಾವ ಹಾಲನ್ನಾದರೂ ತಂದರೆ ಅದರಲ್ಲಿ ತುಪ್ಪ ಸಿಗಲಾರದು. ಹೀಗೆಯೇ ಶರೀರದಲ್ಲಿ ಆತ್ಮನಿದ್ದಾನೆಂದು ಹೇಳಿದ ಮಾತ್ರಕ್ಕೆ ಎಲ್ಲ ಶರೀರಗಳಲ್ಲಿ ಆತ್ಮನು ದೊರೆಯಲಾರನು. ಹಾಗಾದರೆ ಅದರ ರಹಸ್ಯವನ್ನು ತಿಳಿಯಬೇಕು.

ಕಲ್ಲಿನಲ್ಲಿ ಕಾಣುವ ಹೊಳಪು ಬಂಗಾರದ ಗುಣ, ಹಾಲಿನಲ್ಲಿ ಕಾಣುವ ಕೆನೆ ತುಪ್ಪದ ಚಿನ್ಹ ಕಟ್ಟಿಗೆಯಲ್ಲಿರುವ ಕಾಠಿಣ್ಯ ಬೆಂಕಿಯ ಸೂಚನೆ. ಹೀಗೆಯೇ ಈ ಶರೀರದಲ್ಲಿರುವ ಚೈತನ್ಯ ಅಂದರೆ ಜ್ಞಾನ-ದರ್ಶನ, ಅರಿವು ಮತ್ತು ನೋಟ ಇವು ಜೀವನ ಗುಣಗಳು. ಯಾವ ಶರೀರದಲ್ಲಿ ಜ್ಞಾನದ ರ್ಶನಗಳಿವೆಯೋ ಅಲ್ಲಿ ಆತ್ಮನಿದ್ದಾನೆಂದು ತಿಳಿಯಬೇಕು. ಅರಿವು ನೋಟಗಳೇ ಆತ್ಮನ ಲಕ್ಷಣ. ಅದಕ್ಕೇನೆಯೇ ವಿನಯೋಗವೆಂದೂ ಶಾಸ್ತ್ರಕಾರರು ಹೇಳುತ್ತಾರೆ.

ಆತ್ಮನ ಸ್ವರೂಪವು ತಿಳಿಯಿತು ಅದನ್ನು ತಿಳಿದ ಮಾತ್ರಕ್ಕೆ ಅವನ ದರ್ಶನವು ಹೇಗಾಗುವದು ? ಎಂಬ ಪ್ರಶ್ನೆಯು ಪುನಃ ಬರುತ್ತದೆ.

ಮತ್ತಾಕಲ್ಲನೆ ಸೋದಿಸಲ್ಕನಕಮಂ ಕಾಣ್ಬಂತೆ ಪಾಲಂಕ್ರಮಂ
ಬೆತ್ತೊಳ್ಪಿಂ ಮಥನಂಗೆಯಲ್ಘೃತಮುಮಂ ಕಾಣ್ಬಂತೆ ಕಾಷ್ಠಂಗಳಂ
ಒತ್ತಂಬಂಮೊನೆದಗ್ನಿ ಕಾಣ್ಬತೆರದಿಂ ಮೈಬೇರು ಬೇರಾನೆನು
ತ್ತಿತ್ತಭ್ಯಾಸಿಸಲೆನ್ನ ಕಾಣ್ಬುದಂದೇ ರತ್ನಾಕರಾಧೀಶ್ವರಾ.

ಹೊಳಪಿನ ಕಲ್ಲಿನಲ್ಲಿ ಸುವರ್ಣವಿದೆ ಎಂದು ತಿಳಿದಮಾತ್ರಕ್ಕೆ ಆ ಕಲ್ಲನ್ನು ತಂದು ಪೇಟೆಯಲ್ಲಿ ಕೊಟ್ಟರೆ ಸುವರ್ಣದ ಬೆಲೆ ಬರುವುದೇ ? ಹಾಲಿನಲ್ಲಿ ತುಪ್ಪವಿದೆಯೆಂದು ಕೆನೆಯನ್ನು ನೋಡಿ ತಿಳಿದ ಮಾತ್ರಕ್ಕೆ ತುಪ್ಪವು ಸಿಗುವದೇ. ಕಟ್ಟಿಗೆಯಲ್ಲಿ ಬೆಂಕಿ ಇದೆ ಎಂದು ತಿಳಿದ ಮಾತ್ರಕ್ಕೆ ಬೆಂಕಿಯು ಹೊರಬೀಳುವುದೇ ? ಇಲ್ಲ. ಅದು ಸಾಧ್ಯವಿಲ್ಲ. ಅದಕ್ಕೆ ಸ್ವಲ್ಪ ಪುರುಷಾರ್ಥ ಮಾಡಬೇಕಾಗಿದೆ, ಆ ಕಲ್ಲನ್ನು ಶೋಧಿಸಬೇಕಾಗಿದೆ, ಅದನ್ನು ಸುವರ್ಣ ಮಾಡುವ ಪ್ರಕ್ರಿಯೆಯಿಂದ ಕಾಸಿ, ಸೋಸಿ, ಕುಟ್ಟಿ, ಹೊಡೆದು, ಬಡೆದು ಅದರ ಶಿಟ್ಟ ಕಾಲಿಮಾಡಿ ದೋಷಗಳನ್ನು ದೂರಮಾಡಿದ ಮೇಲೆ ಅದ



ರಲ್ಲಿದ್ದ ದೋಷಗಳು ಹೋಗಿ ಶುದ್ಧ ಸುವರ್ಣವು ಸಿದ್ಧವಾಗುತ್ತದೆ. ಹಾಲನ್ನು ಸೋಸಿ, ಕಾಸಿ, ಹೆಪ್ಪುಹಾಕಿ ಮೊಸರು ಮಾಡಿ ಕಡುಗೋಲಿಂದ ಕಡೆದು ಬೆಣ್ಣೆ ತೆಗೆದನಂತರ ತುಪ್ಪವು ಬರುತ್ತದೆ. ಹಾಗೆಯೇ ಕಟ್ಟಿಗೆಗಳನ್ನು ಒಟ್ಟಿಗೆ ಹಿಡಿದು ಒಂದಕ್ಕೊಂದು ಘರ್ಷಣೆ ಮಾಡಲು ಬೆಂಕಿಯು ಹೊರಡುತ್ತದೆ. ಅಂದರೆ ಹೀಗೆ ಆ ವಸ್ತುಗಳ ದರ್ಶನವನ್ನು ಮಾಡಬೇಕಾದರೆ ಕೇವಲ ನಂಬಿಗೆ, ಮತ್ತು ತಿಳಿಯುವಿಕೆಯಿಂದಲೇ ಕಾರ್ಯಸಾಧ್ಯವಾಗಲಾರದು, ಅದರಲ್ಲಿ ಕ್ರಿಯಾತ್ಮಕವಾದ ಪ್ರಯೋಗವನ್ನು ಮಾಡಿದ ಮೇಲೆಯೇ ಆ ವಸ್ತುಗಳ ನಿಜಸ್ವರೂಪವು ಪ್ರಕಟವಾಗುತ್ತದೆ. ಹಾಗೆಯೇ ಆತ್ಮನ ಅಸ್ತಿತ್ವದ ಶ್ರದ್ಧೆ ಮತ್ತು ಜ್ಞಾನ ಇವುಗಳಿಂದಲೇ ಆತ್ಮದರ್ಶನವಾಗಲಾರದು, ಅದರೊಡನೆ ನಾನು ಬೇರೆ ಈ ಶರೀರಬೇರೆ ಎಂದು ಅವುಗಳ ಸ್ವರೂಪವಿಭಿನ್ನತೆಗಳನ್ನು ತಿಳಿದು ಅನುಭವ ಮಾಡಿ, ತನ್ನ ಅನುದಿನದ ವ್ಯವಹಾರದಲ್ಲಿ ಆ ವಿಷಯದ ಅಧ್ಯಯನ ಸಾಧನವನ್ನು ಮಾಡುತ್ತ ಹೋದರೆ ನಿಜವಾಗಿಯೂ ಒಂದುದಿನ ಪರಮಾತ್ಮನ ದರ್ಶನವಾಗುವುದರಲ್ಲಿ ಸಂದೇಹವಿಲ್ಲ.

## ಆತ್ಮದರ್ಶನದ ಫಲ.

ಈ ಪ್ರಯೋಗದಿಂದ ಆತ್ಮದರ್ಶನವನ್ನು ನಾವು ನೀಡಬಹುದೆಂಬ ವಿಷಯವು ತಿಳಿಯಿತು. ಆದರೆ ಅದರಿಂದ ನಮಗಾಗುವ ಲಾಭವೇನು ? ಪ್ರಯೋಜನವೇನು ?

ನಿಜ, ಪ್ರಯೋಜನವಿಲ್ಲದೆ ಯಾವ ಕಾರ್ಯವನ್ನು ಮಾಡಬಾರದು ಆದರೆ ನಾವು ಈಗ ಸಂಸಾರದಲ್ಲಿ ಮಾಡುತ್ತಿರುವ ಕಾರ್ಯಗಳೆಲ್ಲ ಆತ್ಮದೃಷ್ಟಿಯಿಂದ ನಿಷ್ಪ್ರಯೋಜನವಾದವುಗಳೇ, ನಾವು ನಿಷ್ಪ್ರಯೋಜನವಾದ ಅಸಂಖ್ಯ ಕಾರ್ಯಗಳನ್ನು ಮಾಡುತ್ತಿದ್ದರೂ ಪ್ರಯೋಜನದ ಅಭಿಲಾಷೆಯನ್ನು ಮಾತ್ರ ಬಿಡುವದಿಲ್ಲ. ನಾವು ಹೇಗಾದರೂ ಸುಖಿಗಳಾಗಬೇಕೆಂದು ಪ್ರಯತ್ನಪಡುತ್ತಿದ್ದೇವೆ. ಸುಖಿಯಾಗಬೇಕೆಂಬ ಹವ್ಯಾಸದಿಂದ ಒಳ್ಳೆಯ ಕೆಟ್ಟ ಎಲ್ಲ ವಿಧದ ಕಾರ್ಯಗಳನ್ನು ಮಾಡಲುದ್ಯುಕ್ತರಾಗತ್ತೇವೆ. ನಾವು ಕೊಡುತ್ತಿರುವ ಕಾರ್ಯದಲ್ಲಿ ಸುಖದ ಸಾಧನವಿದೆಯೋ ಇಲ್ಲವೋ ಎಂಬ ವಿಷಯವನ್ನು ನಾವು ವಿಚಾರ ಮಾಡುವುದಿಲ್ಲ. ನಾವು ಹೋಗುತ್ತಿರುವ ಸಾಧ್ಯಕ್ಕೆ ಸಾಧನವು ಅನುಕೂಲವಾಗಿದೆಯೇ ಎಂಬ ವಿಷಯವನ್ನು ನಾವು ನೋಡಬೇಕಾಗಿದೆ.

ಹಾಗಾದರೆ ಸುಖಪ್ರಾಪ್ತಿಯ ಸಾಧನವೇನು ? ಅದು ಎಲ್ಲಿದೆ? ಆತ್ಮದರ್ಶನದಿಂದ, ಪರಮಾತ್ಮ ಪದಪ್ರಾಪ್ತಿಯಿಂದ ನಿಜವಾಗಿಯೂ ಸುಖದ ಅನುಭವವಾಗುವುದೋ? ಎಂಬ ವಿಷಯವನ್ನು ನಾವು ವಿಚಾರ ಮಾಡಿದರೆ ನಮಗೆ ಪ್ರಕೃತ ವಿಷಯದೊಡನೆ ಸುಖದ ಸಂಬಂಧವೇನಿದೆ ಎಂಬ ವಿಷಯವು ತಿಳಿಯಬಹುದು.

ಪಾಪಾದ್ದುಃಖಂ ಧರ್ಮಾತ್ಸುಖಮಿತಿ ಸರ್ವಜನ ಸುಪ್ರಸಿದ್ಧಮಿದಂ
ತಸ್ಮಾದ್ವಿಹಾಯ ಪಾಪಂ ಚರತು ಸುಖಾರ್ಥೀ ಸದಾ ಧರ್ಮಂ

ಲೋಕದಲ್ಲಿ ಪ್ರಸಿದ್ಧವಾದ ಅಂದರೆ ಸರ್ವಸಮ್ಮತವಾದ ತಪ್ಪವಿದು, ಪಾಪದಿಂದ ದುಃಖವೂ, ಧರ್ಮದಿಂದ ಸುಖವೂ ಲಭಿಸುವುದು. ಆದುದರಿಂದ ಸುಖವನ್ನು ಬಯಸುವವರು ಧರ್ಮವನ್ನು ಆಚರಿಸಬೇಕು. ಪರಪೀಡೆ, ಅಸತ್ಯ, ಚೌರ್ಯ, ದುರಾಚಾರ, ಪರಿಗ್ರಹ, ಮೊದಲಾದವುಗಳು ಪಾಪವೆಂದು ಪರಿಗಣಿಸಲ್ಪಡುತ್ತವೆ. ಹಿಂಸಾದಿ ಪಾಪವು ವ್ಯಕ್ತಿಗಳ ಆಚರಣೆಯಿಂದ ಮನುಷ್ಯನಿಗೆ ಸುಖವಾಗಲಾರದು. ಅದರಿಂದ ಇತರರಿಗೂ ಸುಖವಾಗಲಾರದು ಆದುದರಿಂದ ಪಾಪವು ಸದಾ ಹೇಯವೆಂದು ಹೇಳಲಾಗಿದೆ. ಧರ್ಮವೆಂದರೆ ವಸ್ತುವಿನ ನಿಜಪರಿಣತಿ, ಪ್ರತಿಯೊಂದು ಪದಾರ್ಥದಲ್ಲಿರುವ ನಿಜಸ್ವಭಾವವೇ ಅದರ ಧರ್ಮ ಪದಾರ್ಥದ ನಿಜಸ್ವಭಾವದಲ್ಲಿ ಯಾವ ಸೌಂದರ್ಯವಿದೆಯೋ ಅದು ಅದರ ಕೃತ್ರಿಮ ವಿಕಾರದಲ್ಲಿರಲಾರದು ನಿಜರೂಪದಲ್ಲಿರುವ ಆನಂದ ವಿಕಾರದಲ್ಲಿ ಬರಲಾರದು ಹಾಗೆಯೇ ಈ ಆತ್ಮನಿಗೂ ನಿಜಸ್ವಭಾವವಿದೆ ಜ್ಞಾನ, ದರ್ಶನ ಸುಖ, ವೀರ್ಯಗಳೆಂಬ ಅನಂತ ಆನಂದದಾಯಕವಾದ ಗುಣಗಳು ಆತ್ಮನ ನಿಜಧರ್ಮ, ಆದರೆ ಅವನು ಭೌತಿಕ ವಾತಾವರಣದಿಂದ ಪ್ರಭಾವಿತನಾಗಿ ವಿಕಾರವಶನಾದುದರಿಂದ ಅವನು ಅಶಾಂತಿ, ಆಕುಲತೆ, ಸಂಕ್ಲೇಶ. ಸಂಮೋಹ, ಕಾಮ, ಕ್ರೋಧ ಮೊದಲಾದ ಕೃತ್ರಿಮ ಭಾವಗಳಲ್ಲಿ ಮಗ್ನನಾಗಿ ಅವೇ ತನ್ನ ನಿಜಧರ್ಮವೆಂಬ ಭ್ರಾಂತಿಗೊಳಗಾಗಿದ್ದಾನೆ. ಈ ಭ್ರಾಂತಿಯು ಎಷ್ಟರವರೆಗಿದೆಯೋ ಅವನಿಗೆ ಸಂಸಾರದ ಅಂತವಾಗಲಾರದು. ಈ ಭ್ರಾಂತಿಯು ದೂರವಾಗಿ ತನ್ನ ನಿಜಸ್ವರೂಪವನ್ನು ತಿಳಿದು ಯಾವಾಗ ಆತ್ಮನು ಶಾಂತಿ, ಸಹನಶೀಲತೆ, ಪರಮಾನಂದ ಮೊದಲಾದ ಗುಣಗಳನ್ನು ಪ್ರಾಪ್ತಮಾಡುತ್ತಾನೆಯೋ ಆಗ ಅವನು ನಿಜಧರ್ಮದಲ್ಲಿದ್ದಾನೆಂದು ತಿಳಿಯಬೇಕು. ಆಗ ಆತ್ಮನಿಗೆ ಸ್ವಧರ್ಮದ ಆಶ್ರಯದಿಂದ ಅನಂತ ಆನಂದದ ಪ್ರಾಪ್ತಿಯಾಗುತ್ತದೆ. ಅವನು ಸಚ್ಚಿದಾನಂದ ಸ್ವರೂಪವನ್ನು ಪ್ರಾಪ್ತಮಾಡಿ ಚಿರಕಾಲದ ವರೆಗೆ ತನ್ನ ಸ್ವರೂಪದಲ್ಲಿ ಮಗ್ನನಾಗುತ್ತಾನೆ. ಅದೇ ಮುಕ್ತಿ. ಅದೇ ಪರಮಾತ್ಮ ಅವಸ್ಥೆ. ಆತ್ಮದರ್ಶನದ ಫಲವೂ ಅಲ್ಲಿ ಪೂರ್ಣವಾಗಿ ಲಭಿಸುತ್ತದೆ ಯೋಗಿಗಳು ಆತ್ಮಸಾಕ್ಷಾತ್ಕಾರವನ್ನು ಮೊದಲು ಮಾಡುತ್ತಿರುವ ಪ್ರಯತ್ನವು ಕೇವಲ ಆ ಅವಸ್ಥೆಯನ್ನು ಪ್ರಾಪ್ತಿಮಾಡುವುದಕ್ಕೋಸ್ಕರವೇ ಎಂಬ ವಿಷಯವನ್ನು ನಾವು ಲಕ್ಷ್ಯದಲ್ಲಿಡತಕ್ಕದ್ದು. ಅಲ್ಲಿ ಆಧ್ಯಾತ್ಮಿಕ ಸಾಧನೆಯ ಅಂತಿಮ ಧ್ಯೇಯವು ಫಲಿಸುತ್ತದೆ.

### ಭೇದ ವಿಜ್ಞಾನದ ಅಗತ್ಯಃ—

ಈ ಮಾರ್ಗದಲ್ಲಿ ಸುಲಭವಾಗಿ ಮುಂದರಿಯಬೇಕಾದರೆ ನಾವು ಸ್ವ-ಪರ ವಿವೇಕವನ್ನು ಮಾಡಿಕೊಳ್ಳಬೇಕಾಗುತ್ತದೆ. ಸಂಸಾರಿಕ ಜೀವನದಲ್ಲಿ ಎಲ್ಲ ಪರ ಪದಾರ್ಥಗಳನ್ನೂ, ಪರ ಪರಿಗ್ರಹಗಳನ್ನೂ ತನ್ನದೆಂದೇ ಭಾವಿಸಿ, ಅಂದರೆ ಅತತ್ವದಲ್ಲಿ ತತ್ವವೆಂಬ ಬುದ್ಧಿಯನ್ನಿಟ್ಟು ಈ ಜೀವನು ದುಃಖಕ್ಕೆ ಭಾಗಿಯಾಗುತ್ತಾನೆ ಹೀಗಿರುವಾಗ ತನ್ನದು ಯಾವದು, ಬೇರೆಯವರದು ಯಾವದು, ಆತ್ಮ ಸ್ವಭಾವ ಹೇಗಿದೆ ? ಎಂಬ ಸ್ವ-ಪರ ಸ್ವಭಾವದ ವಿವೇಕವನ್ನು ಮಾಡಿಕೊಂಡರೆ ಅವನು ಈ ಮಾರ್ಗದಲ್ಲಿ ಮುಂದರಿಯುವನು.

ಆತ್ಮಸ್ವಭಾವಂ ಪರಭಾವ ಭಿನ್ನಪೂರ್ಣಮಾದ್ಯಂತ ವಿಮುಕ್ತಮೇಕಂ
ವಿಲೀನ ಸಂಕಲ್ಪ ವಿಕಲ್ಪ ಜಾಲಂ ಪ್ರಕಾಶಯನ್ ಶುದ್ಧ ನಯೋಭ್ಯುತ್ಪೈತಿ ॥



ಪರಪದಾರ್ಥದ ಸ್ವಭಾವದಿಂದ ಆತ್ಮ ಸ್ವಭಾವವು ತೀರಾ ಭಿನ್ನವಾಗಿದೆ. ಆದ್ಯಂತ ರಹಿತವಾಗಿದೆ, ಅಖಂಡವಾಗಿದೆ. ಈ ಪ್ರಕಾರ ಸಂಪೂರ್ಣ ಸಂಕಲ್ಪ ವಿಕಲ್ಪಗಳಿಂದ ರಹಿತವಾದ ಆತ್ಮಸ್ವರೂಪವನ್ನು ಸಂಕಲ್ಪ ವಿಕಲ್ಪ ಅವಸ್ಥೆಯಿಂದ ರಹಿತವಾದ ಏಕಾಗ್ರಚಿತ್ತದಿಂದ ದರ್ಶನ, ಚಿಂತನ, ಮನನ, ಅಧ್ಯವಸಾಯ, ಅನುಭವವೆಂಬ ಅವಸ್ಥೆಗಳಿಂದ ಸಾಧಿಸಲು ಪ್ರಯತ್ನಿಸಿದರೆ ಕ್ರಮಶ: ಆತ್ಮದರ್ಶನವಾಗುವದು. ಸಂಪೂರ್ಣವಾಗಿ ಆತ್ಮದರ್ಶನವಾದಾಗ ಧೃತಾ, ಧ್ಯೇಯ ಮತ್ತು ಧ್ಯಾನದಲ್ಲಿ ಅಭೇದ ಅವಸ್ಥೆಯು ಬರುವುದು. ಅದು ನಿರ್ವಿಕಲ್ಪಕ ಅವಸ್ಥೆ. ಅದು ವರ್ಣಿಸುವ ವಸ್ತುವಲ್ಲ, ಅನುಭವಿಸುವ ವಸ್ತು. ಆ ನಿರ್ವಿಕಲ್ಪಕ ಸಮಾಧಿಯ ಸ್ಥಿತಿಗೇನೆಯೇ ಪರಮಾತ್ಮ ಪದವೆಂದು ಹೇಳಲಾಗಿದೆ. ಅಲ್ಲಿಯೇ ಆತ್ಮಧರ್ಮದ ಚರಮ ಪದದ ಪ್ರಾಪ್ತಿಯಾಗುತ್ತದೆ. ಆ ಪದದ ಪ್ರಾಪ್ತಿಗೋಸ್ಕರವೇ ಜೀವನದಲ್ಲಿ ಅಧ್ಯಾತ್ಮಿಕ ವಿಕಾಸವನ್ನು ನಾವು ಮಾಡಬೇಕಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ಅಂಥಹ ವಿಕಾಸವನ್ನು ಮಾಡಿಕೊಳ್ಳುವ ಶಕ್ತಿಯಿದೆ. ಆದರೆ ಯುಕ್ತಿಯಿಂದ ಆ ಶಕ್ತಿಯ ವ್ಯಕ್ತಿಯಾಗುವ ಹಾಗೆ ಪುರುಷಾರ್ಥ-ಪ್ರವೃತ್ತಿಯನ್ನು ಮಾಡಲುಜ್ಜುಗಿಸಬೇಕು. ಯಾರಿಗೆ ಆ ದೃಷ್ಟಿ ಇದೆಯೋ ಅವರೇ ಮಹಾಪುರುಷರು.

# ಸಮಾಜ ಸೇವಾ ಪ್ರಶಸ್ತಿ

ಲೇಖಕರು:- **ಶ್ರೀ ಎ. ಕೆ. ರಾಮೇಶ್ವರ**, ದದಾಮಟ್ಟಿ.

ಮಾನವ ಕುಲಶೀದ ಸೂತ್ರಧಾರಳಾದ ಕೃಷ್ಣೆಯಲ್ಲಿ ಹೃತ್ಪೂರ್ವಕ ಪ್ರಣಾಮಗಳು—

ಬಹುದಿನಗಳ ನಂತರ ನಿನಗೆ ಕಾಗದ ಬರೆಯುತ್ತಿರುವೆ. ಕಾಲ ವಿಲಂಬವಾಗಿ ಆಕಸ್ಮಿಕ ಬಂದು ತಲುಪುತ್ತಿರುವ ಈ ಓಲೆಯನ್ನು ಕಂಡು ಆಶ್ಚರ್ಯಗೊಳ್ಳಬೇಕಾದುದೇನಿಲ್ಲ. ಬಿಚ್ಚಿ ಓದಿ ಅಪಕ್ವ ಅನುಭವಿಗಳಾದ ಈ ನಿನ್ನ ಕಿರಿ ಸಹೋದರಿಯ ಬಕ್ಕಾಣೆಯನ್ನು ನೋಡದೇ ವಿಷಯವನ್ನು ಓದಿ ಆನಂದಳಾಗಬಹುದೆಂದು ಅದೆಷ್ಟೋಪಾಲು ಆಶಿಸಿದ್ದೇನೆ ಇರಲಿ.

ಅಕ್ಕಾ, ಒಬ್ಬರಿಂದ ಕೇರಿ ಪಾವನವಾದರೆ ಇನ್ನೊಬ್ಬರಿಂದ ಊರು ಪಾವನವಾಗುತ್ತದೆ. ಮತ್ತೊಬ್ಬರಿಂದ ಜಗವು ಪಾವನವಾದರೆ ಮಗುದೊಬ್ಬರಿಂದ ಜನ್ಮ ಜನ್ಮಾಂತರವೇ ಪಾವನವಾಗುವದು. ಭವಭವಾಂತರವೇ ತಪ್ಪಿಹೋಗುವುದು. ಇದಕ್ಕೂ ಸಂಸ್ಕಾರಬೇಕು ಸಂಸ್ಕೃತಿ ಬೇಕು. ಈ ಸಂಸ್ಕಾರ ಸಂಸ್ಕೃತಿಗಳ ಸಂಗಮದಲ್ಲಿ ಮಿಂದು ಪರಿಶುದ್ಧರಾಗಿ ಪವಿತ್ರರಾಗಿ ಜನ್ಮ ಜನ್ಮಗಳನ್ನೇ ಉದ್ಧರಿಸಿದ ಹಲವಾರು ಮೇಧಾವಿಗಳು, ಮಹಾನುಭಾವಿಗಳೂ ಅಮರರಾಗಿದ್ದಾರೆ. ಅವರೆಲ್ಲರ ಹೆಸರನ್ನು ಇಲ್ಲಿ ನಿತಾಂತವಾಗಿ ಹೇಳದಿದ್ದರೂ ಉದಾಹರಣೆಗಾಗಿ ಒಬ್ಬಿಬ್ಬರ ಹೆಸರನ್ನು ಹೇಳದೆ ಮುಂದೆ ಬರೆಯಲು ಮನಸ್ಸಾಗಲೊಲ್ಲದು. ಇಂಥವರ ನಿಟ್ಟಿನಲ್ಲಿ ಅತಿಶ್ರೇಷ್ಠರಾಗಿ ಹೋದ ಸ್ವಾಮಿ ರಾಮಕೃಷ್ಣಪರಮಹಂಸರಂತಹ ಪರಮಗುರುಗಳಿಂದಲೇ ನರೇಂದ್ರನು ಸ್ವಾಮಿ ವಿವೇಕಾನಂದರಾದರಲ್ಲದೆ. ಆ ಜೀವನ್ಮುಕ್ತರಾದರು ಈ ಸ್ವಾಮಿಜಿಯವರಿಂದಲೇ ಜಗತ್ತಿಗೆ ಜಗತ್ತೆ ಪಾವನವಾಯಿತು. ಪರಮೋಚ್ಛವಾಯಿತು. ಇದಕ್ಕೂ ಪರಾಭಕ್ತಿ, ಪ್ರಬುದ್ಧ ಆತ್ಮೀಯತೆಗಳೇ ಕಾರಣವಲ್ಲವೇ ? ಇಂಥ ಅಪಾರವಾದ ಭಕ್ತಿ, ಅನುಪಮವಾದ ಆತ್ಮೀಯತೆಯುಳ್ಳ ನಿನ್ನನ್ನು ಕೂಡಿ ನಾನು ಧನ್ಯಳಾದೆ ! ಮಾನ್ಯಳಾದೆ!! ಕೃತಕೃತಾರ್ಥಳಾದೆ !!!

ನಾವಿಬ್ಬರು ಕೂಡಿದಲ್ಲಿ ಸಂಗಮವಾಯಿತು. ಈ ಕೂಡುವಿಕೆಯಲ್ಲಿ ಅಪಾರವಾದ ತತ್ವವಿದೆ. ಅಸದಳವಾದ ಸತ್ವವಿದೆ ಅನುಪಮವಾದ ರಸವಿದೆ ಅಮೋಘವಾದ ಜೀವನವಿದೆ ಇದನ್ನು ಅರಿಯಲು ಬಹಿರ್ದೃಷ್ಟಿಸಾಲದು ಆಳವಾಗಿ ಗಂಭೀರ ಚಿತ್ತರಾಗಿ ನೋಡಲು ಜ್ಞಾನ ದೃಷ್ಟಿಬೇಕು. ಆಗ ಗೋಚರವಾಗುವದು ನಾವಿಬ್ಬರು ಕೂಡಿ ಸಂಗಮವಾದ ಸಂಗತಿ. ನೀನು ನಾನು ಕೂಡಿರುವದು ಸಾಮಾನ್ಯವಲ್ಲ. ನನ್ನ ವ್ಯಕ್ತಿತ್ವವೆಲ್ಲವೂ ನಿನ್ನ ಅಸ್ತಿತ್ವದಲ್ಲಿ ಲಯವಾಗಿದೆ. ಈ ಲಯವೇ ಬಯಲ ನಿರ್ವಯಲು ಈ ಮಾತಿಗೆ ಪ್ರತೀಕವಾಗಿ ನಿಂತಿರುವ ದೇವಾದೀ ದೇವ ಸಂಗಮನಾಥ ಬಸವಣ್ಣನವರ ದಿವ್ಯ ಜೀವನವೇ ನಿದರ್ಶನವಾಗಿರಲು ಬೇರೆ ದರ್ಶನಗಳೇಕೆ ? ಲಿಂಗ ಅಂಗದಲ್ಲಿ ಲಯವಾಗುವುದು. ಅಂಗಶಕ್ತಿ ಲಿಂಗದಲ್ಲಿ ಅಳವಡುವುದು ಲಿಂಗದ ಚಿತ್ಕಳೆ ಪ್ರಸಾದ ಕಾಯಕದಲ್ಲಿ ಲಯವಾಗುವುದು. ಆಗಲೇ ಲಿಂಗಾಂಗ ಸಾಮರಸ್ಯವಾಗುವದು. ಈ ತತ್ವವನ್ನು ಅರಿತೇ ಬಸವಾದಿ ಪ್ರಮಥರು "ಕೂಡಲು ಸಂಗಮದೇವಾ" ಎಂದು ತಮ್ಮ ವಚನಗಳ ಮುದ್ರಿಕೆಯನ್ನಾಗಿ ಮಾಡಿಕೊಂಡಿದ್ದಾರೆ. ನಿರ್ಮಲೆಯಾದ ಸಹ್ಯಾದ್ರಿಯಿಂದ ಮಲಪಹಾರಿಯೂ, ಪರಮಪಾವನೆಯಾದ ಮಹಾಬಲೇಶ್ವರ ಕೃಷ್ಣೆಯೂ ಇವರಿಬ್ಬರು ಹೊರಟು ತುಸು ಅಂತರದ ಮೇಲೆ ಕೂಡಿ ನಲಿದ ತಾನ ಬಹಳೇ ಪವಿತ್ರವೆಂದು ಅತ್ಯಂತ ಪುಣ್ಯಕರವೆಂದು ಜನಸಾಮಾನ್ಯರೆಲ್ಲರಿಗೂ ತೋರಿಸಿಕೊಟ್ಟಿದ್ದಾರೆ. ಈ ಸಂಗಮದ ದಂಡಿಯ ಮೇಲೆ ಜ್ಞಾನವು ಉಗುಮ ಹೊಂದಿದೆಯೆಂದೂ, ಭಕ್ತಿಯು ಮೊಳೆತು ಶಶಿಯಾಗಿ ಬೆಳೆದು ವೃಕ್ಷವಾಗಿದೆಯೆಂದೂ, ಈ ವೃಕ್ಷದಡಿಯಲ್ಲಿ ನಿಂತು ಆತ್ಮೈಕದ ಕಹಳೇ ಊದಿದ್ದಾರೆ ಆ ಶರಣಶಿಖಾಮಣಿ ಸಂಗನಬಸವಣ್ಣ. ಇಂಥ ತಪೋನಿಷ್ಠರಾದ ಬಸವಾದಿ ಪ್ರಮಥರ ಬಾಳಿಗೆ ಹೊಸ ಚೇತನಕೊಟ್ಟು ಅಜರಾಮರ ಕೀರ್ತಿಪಡೆದ ನೀನು ಎಂಥ ಧನ್ಯಳೌ! ಎಷ್ಟು ಪುಣ್ಯಳೌ !!

ಕಲ್ಪಾಂತರದಲ್ಲಿ ಕಲ್ಯಾಣದ ಜ್ಯೋತಿಯು ನಿನ್ನಲ್ಲಿಯೇ ಬೆಳಗಲಿ. ಬಿತ್ತುವ ಬೀಜದಂತಿದ್ದ ಬಸವಣ್ಣನವರ ನಾಮಶ್ರೀಯಿಂದ ಅನೇಕ ಜನ ಭಕ್ತಾದಿಗಳು ಅವತರಿಸಿ ಬರಲಿ ಕನ್ನಡ ಕುಲ, ನೆಲ, ಜಲಪವಿತ್ರಗೊಳಿಸಲಿ, ಅವರೆಲ್ಲರನ್ನು ನೋಡುವ ಭಾಗ್ಯ ಬೇಗದೊರೆಯಲೆಂದು ಆ ಸಂಗಮನಾಥನಲ್ಲಿ ಅನಂತ ಪ್ರಣಾಮಗಳು.

ಅಂ! ಇದೇನು ಅಕ್ಕಾ ಇದೆಂಥ ನಿನ್ನ ಹುಚ್ಚು ಹಂಬಲ ನನಗಿಂತಲೂ ನಿನ್ನ ಬಯಕೆ ಮಿಗಿಲು. ಈ ಬಯಕೆಯನ್ನು ಎಂಟುನೂರು ವರುಷಗಳಿಂದ ನಿನ್ನ ಹೃದಯದಲ್ಲಿ ಹೇಗೆ ಬಚ್ಚಿಟ್ಟುಕೊಂಡೆ ಒಡನಾಡಿಯಾದ ನನ್ನ ಮುಂದೆ ಇದನ್ನು ಒಮ್ಮೆಯಾದರೂ ಬಿಚ್ಚಿ ಹೇಳಲಿಲ್ಲವಲ್ಲ? ಹೌದು ಅಂದೊಮ್ಮೆ ನಿನ್ನ ಸಂಕಲ್ಪ ಪ್ರಸ್ತಾಪಿಸಿದ್ದಿ. ಕೃಷ್ಣೆಯ ಪರವಾಗಿ ಸಂಗಮನಾಥ ಮಲಪಹಾರಿ ಪರವಾಗಿ ಬಸವಣ್ಣ ಎಂದು. ನಾವಿಬ್ಬರೂ ಕೂಡಿ ಸಂಗಮವಾದಂತೆ ಸಂಗಮನಾಥ-ಬಸವಣ್ಣನವರು ಕೂಡಿ "ಸಂಗನಬಸವಣ್ಣ" ಎಂಬ ನಾಮದಿಂದ ಜನಿಸಿಬಂದರೆ ಕನ್ನಡನಾಡಿನ ಬಿರುಕು ಬೆಸೆದು ಎಲ್ಲರೂ ಒಂದೆ ಎಂಬ ಎರಕ ಹೊಯ್ದು ಇವರ ಕೀರ್ತಿ ಕಳಸ ಮುಟ್ಟುತ್ತದೆಂದು ಪದೆಪದೆ ಹೇಳುತ್ತಿದ್ದಿ, ಈ ಕಾರಣ ಪುರುಷನ ಅವತಾರಕ್ಕಾಗಿ ಇಷ್ಟು ಕಾತರಿಸುತ್ತಿರುವಿಯಾ ? ಆ ಪುಣ್ಯಾತ್ಮರ ತಿಳಿಮನದ ದರ್ಶನಕ್ಕಾಗಿ ಇಷ್ಟು ಕುದಿಯುತ್ತಿರವಿಯಾ ? ಅಕ್ಕಾ ಎಷ್ಟು ನಿನ್ನ ಹುಚ್ಚು ! 'ದುಃಖದಲ್ಲಿ ಜ್ಞಾನ ಸಹ ತುಕ್ಕು ಹಿಡಿ'ಯುವದೆಂಬ ಮಾತು ಸುಳ್ಳಲ್ಲವೇನೋ ? ಇರಲಿ ಸಮಾಧಾನಗೊಳ್ಳು ಆ ಜನ್ಮದಲ್ಲಿಯೇ 'ಶಿವನೇ ಬಸವಾ, ಬಸವಾ ಶಿವನೇ' ಎಣಿಸಿಕೊಂಡುದು ನಿನಗೆ ತೃಪ್ತಿಯಾಗಿಲ್ಲವೆನ್ನುವದು ಆ ದೇವ ಕೇಳಿದಂತಿದೆ ನಾನ್ನಾ ಕೊರಗು ನಮ್ಮಿಬ್ಬರ ಬಯಕೆಯ ಪುತ್ರರತ್ನ ಅಖಂಡ ಕರ್ನಾಟಕವರನ್ನಗನ್ನಡಿಯಂತೆ ಬಾಗ್ಯವಾದಿಯ ಪಕ್ಕದಲ್ಲಿರುವ ಮಸೂತಿಯೆಂಬ ಗ್ರಾಮದಲ್ಲಿ ಶಿವಯೋಗ ಸಂಪನ್ನರಾದ ದಂಪತಿಗಳ ದಿವ್ಯ ಸಂಪುಟದಲ್ಲಿ ಉದಯಿಸಿ ಈಗ ಅರವತ್ತರ ಅಂಚನ್ನು ದಾಟಿರುವದು. ಅವರಿಗಾಗಿ ನಿನ್ನ ಸದಾಶಯದ ಸಂದೇಶಗಳಿರಲಿ! ನಾನಂತೂ ನನ್ನ ಸರ್ವಸ್ವವನ್ನೇ ಅವರಿಗೆ ಅರ್ಪಿಸಿದ್ದೇನೆ.

ವಿದ್ಯಾರಣ್ಯರ ಪುಣ್ಯಪ್ರಭಾವದಿಂದ ಹೊನ್ನಾದ ಈ ಕನ್ನಡ ನಾಡನ್ನು ತೊಳೆದು ಚೊಕ್ಕ ಚಿನ್ನವನ್ನಾಗಿ ಮಾಡಿ ಚಿನ್ಮಯ ಭಕ್ತರಿಗೆ ಜನ್ಮಕೊಟ್ಟು ಶಿವ-ಜೀವೈಕ್ಯದ ನೆಲೆಯನ್ನು ತಿಳಿಸಿ ಮಹಂತರನ್ನಾಗಿ ಮಾಡಿರುವಿ. ನಿಜವನರಿದು ನಿಶ್ಚಿಂತರನ್ನಾಗಿ ಮಾಡಿರುವಿ ಈ ನಿನ್ನ ಸಂಸ್ಕಾರ ಸಂಸ್ಕೃತಿಯಲ್ಲಿ ಮಿಂದು ಆತ್ಮೈಕ್ಯದ ನೆಲೆ-ಕಲೆಗಳನ್ನು ಕರಗತಮಾಡಿಕೊಂಡು ಸಿದ್ಧರ ಹಸ್ತದಿಂದ ಶುದ್ಧವಾದ ಬಂಥನಾಳದಲ್ಲಿ ಶಿವಾನುಭವ ಮಂಟಪವನ್ನು ಸ್ಥಾಪಿಸಿ ಮೆದಳು ಅರಳುವಂತಹ, ಹೊಟ್ಟೆತಣಿಯುವಂತಹ. ಬುದ್ಧಿ ಆತ್ಮಶುದ್ಧಿಯ ಹೆದ್ದಾರಿ ಹಿಡಿಯುವಂತಹ, ಮನವು ಮಾಣಿಕ್ಯವಾಗುವಂತಹ ಕಾರ್ಯವನ್ನು ಕೈಕೊಂಡಿದ್ದಾರೆ. ಕನ್ನಡಿಗರ ಭಕ್ತಿ ಬಡವಲ್ಲವೆಂದು ಸಾರುತ್ತಿದ್ದಾರೆ ಹರಿದ ಕನ್ನಡವನ್ನು ಒಂದುಗೂಡಿಸಿದ್ದಾರೆ. ಹನ್ನೆರಡನೇ ಶತಮಾನದಲ್ಲಿ (ಸಂಗ) ಲಿಂಗದಲ್ಲಿ ಲೀನವಾದ (ಬಸವ) ಅಂಗವೇ "ಸಂಗನಬಸವ" ರಾಗಿ ಮರ್ತ್ಯಲೋಕದ ಮಾನವರ ಕಷ್ಟಪರಂಪರೆಗಳನ್ನು ಬಿಡಿಸಲು, ಜೀವನದ ಮಾರ್ಮಿಕವಾದ ಸಮಸ್ಯೆಗಳನ್ನು ಬಗೆಹರಿಸಲು ಬೌದ್ಧಿಮಾಂದ್ಯವನ್ನು ಪರಿಹರಿಸಲು ಪರಮಾರ್ಥ ತತ್ವಗಳನ್ನು ತಿಳಿಮಾಡಿ ತಿಳಿಸಲು ಬುವಿಯ ಈ ಬಾಳನ್ನು ಕಲಿಸುವ ಗುರುಗಳಾಗಿ ಅವತರಿಸಿದ್ದಾರೆ. ಬಂಥನಾಳದ ಶಿವಯೋಗಿಗಳೆಂದು ಪ್ರಸಿದ್ಧನಾಗಿದ್ದಾರೆ.

"ಹಣ್ಣಿನ ಗುಣ ಹೀಚಿನಲ್ಲಿ" ಎಂಬ ನಾಣ್ಣುಡಿಯಂತೆ ಶ್ರೀ ಶಿವಯೋಗಿಗಳ ಹುಟ್ಟಿದೊಡನೆ ಓಜಸ್ಸು ತೇಜಸ್ಸುಗಳೆರಡೂ ಬೆನ್ನಟ್ಟಿ ಬಂದಿರುವವು. ಅವರ ಜೀವನ ಲೋಕಶಾಂತಿಯ ಕುರುಹುವಾಗಲೂ, ಶ್ರೀ ಅನುಭವಮಂಟಪದ ಪುನಃ ಸ್ಥಾಪನೆಯ ಬೀಜವಾಗಲು ಪ್ರೇರಕವಾದವು, ಪರಿಪೂರಕವಾದವು. ಅಂತೆಯೇ ಅವರ ನುದಿಗಡಣದಲ್ಲಿ ಶ್ರೀ ಶಾರದೆಯು ಸುಳಿದುಬಂದಳು. ಅವರ ನಡೆಯೊಡನೆ ಶ್ರೀದೇವಿ ಒಲಿದುಬಂದಳು. ಕಾಯಕದ ನಿಷ್ಠೆಯಲ್ಲಿ ಅನ್ನಪೂರ್ಣೆಯು ಅಳವಡಿಸಿದಳು, ಅವರ ಚಿತ್ತದಲ್ಲಿ ಧನ್ವಂತರಿಯು ಉದಯಿಸಿ ಮನ್ವಂತರಗಳ ಕಣ್ಣುಗಳನ್ನು ತೆರೆಯಿಸಿದಳು, ಇಂದಿಗೂ ಆ ಶಿವಯೋಗಿಗಳು ಅನುಭವಮಂಟಪದ ಮುಖಾಂತರ ಜ್ಞಾನವನ್ನೂ, ದಾಸೋಹದ ಮುಖಾಂತರ ಅನ್ನವನ್ನೂ, ನೀಡಿ ಜೀವ-ಆತ್ಮರನ್ನು ಸಂತೃಪ್ತಿಗೊಳಿಸುತ್ತಲಿದ್ದಾರೆ; ಭವಬಾಧೆಯ ಸೋಂಕು ತಗಲುಬಾರದೆಂದು ಅನುಭವಮಂಟಪದ ಪರದೆ ಬಿಟ್ಟಿದ್ದಾರೆ.

ಇಷ್ಟೇ ಅಲ್ಲ ಧನರೇಷೆಯ ಜೊತೆಗೆ ಆಯುಷ್ಯ ರೇಷೆಯಿರಬೇಕು. ಆಯುಷ್ಯರೇಷೆಯ ಜೊತೆಗೆ ಆರೋಗ್ಯಚಿನ್ಹವಿರಬೇಕು, 'ಆರೋಗ್ಯವೇ ಭಾಗ್ಯ' ಎಂದು ಶ್ರೀ ಶಿವಯೋಗಿಗಳು ತಮ್ಮ ಮುನ್ನಡೆಯಲ್ಲಿ ಅಲಂಕರಿಸಿರುವರು, ಮರ್ತ್ಯಲೋಕದ ಮಾನವರಿಗೆ ಕಾಯವು ಸದೃಢವಾಗಿದ್ದರೆ ಕಾಯಕ ಮಥನವು ಚನ್ನಾಗಿ ನಡೆಯುವದೆಂದು ತಿಳಿದು ಅನಾರೋಗ್ಯರನ್ನು ಆರೋಗ್ಯವಂತರನ್ನಾಗಿ ಮಾಡಲು ಶ್ರಮದಹಿಸಿ ಸಾಧಿಸಿದ ಸಿದ್ಧೌಷದಗಳ, ಮಣಿಮಂತ್ರೌಷದಗಳ ಮಹಿಮೆಯನ್ನು ಇವರು ಕಂಡಷ್ಟು ಇಂದಿನ ವಿಜ್ಞಾನಿಗಳೂ ಸಹ ಕಂಡಿಲ್ಲವೆಂದರೆ ಅತ್ಯುಕ್ತಿಯೇನಲ್ಲ, ನಿದರ್ಶನಕ್ಕಾಗಿ ಪ್ರತಿ ಅಮವಾಸಿಗೊಮ್ಮೆ ಅನುಭವಮಂಟಪ ಸ್ಥಳವಾದ ಬಂಥನಾಳದಲ್ಲಿ ಇಂದಿಗೂ ಸಾವಿರಾರು ಜನರು ಬಂದು ಸೇರಿ ಶಿವಾನುಭವಿಗಳಾಗಿ ಶಿವಯೋಗಿಗಳ ಸೇವೆ ಮಾಡಿ ಆರೋಗ್ಯವಂತರಾಗಿ, ತಮ್ಮ ಇಷ್ಟಾರ್ಥವನ್ನು ಪೂರೈಸಿಕೊಂಡು ಹೋಗುತ್ತಾರೆ; ಹೋಗುತ್ತಿದ್ದಾರೆ.



ಒಟ್ಟಿನಲ್ಲಿ ಶಿವಯೋಗಿಗಳು ದಾನವನಾದವನನ್ನು ದೇವನನ್ನಾಗಿಮಾಡಲು ಅವಿಶ್ರಾಂತವಾಗಿ ಹೆಣಗಾಡುತ್ತಿರುವರು ಮೂಢ ಮಾನವನ ಹೃದಯ ಭೂಮಿಯಲ್ಲಿ ಮೃಢ ನಾಮದ ಬೀಜವನ್ನು ಊರಲು ಅನೇಕ ಮಠಮಾನ್ಯಗಳನ್ನು ಉದ್ಧರಿಸಿ ಉಚ್ಚಸ್ಥಾನಕ್ಕೇರಿಸಿದ್ದಾರೆ. 'ಇಂದಿನ ಮಕ್ಕಳು ನಾಳಿನ ನಾಗರಿಕರು' ಅವರೇ ನಾಳಿನ ಸಂಪತ್ತು ಎಂದು ಬಗೆದು ಅವರಿಗಾಗಿ ಉನ್ನತ ಶಿಕ್ಷಣಾಲಯಗಳನ್ನು ನಿರ್ಮಾಣ ಮಾಡಿದ್ದಾರೆ. ಅವರಿಗಾಗಿ ಹೊಸ ಹೊಸ ಹೊತ್ತಿಗೆಗಳನ್ನು ಪ್ರಕಟಿಸಲು ಅನೇಕಾನೇಕ ಲೇಖಕರಿಗೂ, ಕವಿಗಳಿಗೂ ವಿಮರ್ಶಕರಿಗೂ, ಕಲೆಗಾರರಿಗೂ, ನಟರಿಗೂ, ನಟಿಯರಿಗೂ ಆಧಾರಸ್ತಂಭರಾಗಿರುವರು. ಸ್ತ್ರಿಯರಿಗಾಗಿ ಪ್ರತ್ಯೇಕ ಸ್ಥಾನಮಾನಗಳನ್ನು ಏರ್ಪಡಿಸಿ ಅಕ್ಕನ ಉಚ್ಚ ಜೀವನದ ಚೊಕ್ಕ ಹಾದಿಯನ್ನು ತಿಳಿಯಲು ನಾಡಿನ ನಾನಾಕಡೆಗಳಲ್ಲಿ ಅಸಂಖ್ಯಾತ 'ಅಕ್ಕನ ಬಳಗ'ಗಳನ್ನು ಕಟ್ಟಿರುವರು. ಇವರು ಇಂತು ಸಾಮಾಜಿಕ, ನೈತಿಕ, ತಾತ್ವಿಕ, ಅಧ್ಯಾತ್ಮಿಕ ಕ್ಷೇತ್ರದಲ್ಲಿ ಎಡಬಿಡದೆ ಹೋರಾಡುತ್ತಿರುವದನ್ನು ಕಂಡು ರಾಜ್ಯ ಸರಕಾರದವರು ಇವರಿಗೆ "ಸಮಾಜದ ಸೇವಾ ಪ್ರಶಸ್ತಿ" ಯನ್ನು ಕೊಟ್ಟು ಸನ್ಮಾನಿಸಿದರೆಂದು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಒದಿ ಆನಂದವಾಯಿತು. ಆ ಆನಂದದ ಆಗರದಲ್ಲಿ ತಲ್ಲಿನನಾಗಿ ಈ ಕಾಗದ ಬರೆದು ನಿನಗೂ ಆ ಸಂತೋಷವನ್ನುಂಟುಮಾಡುತ್ತಿರುವೆ.

ಇಂಥ ಸಮಾಜೋದ್ಧಾರಕ ಸತ್ಪುರುಷನನ್ನು ಪಡೆದ ಕನ್ನಡಮ್ಮನನ್ನು ನೆನೆಸಿ ನಿಮ್ಮಂಥ ಹಿರಿಯ ಅಕ್ಕಂದಿರನ್ನು ಸ್ಮರಿಸಿ ಆ ಶಿವಯೋಗೀಶ್ವರರಿಗೆ ಆಯುರಾರೋಗ್ಯವನ್ನೂ, ಶತಾಯುಷ್ಯವನ್ನೂ ಕೊಟ್ಟು ಕಾಪಾಡಲೆಂದು ಆ ಸಂಗಮನಾಥನಲ್ಲಿ ಪ್ರಾರ್ಥಿಸಿ ಈ ಕರ್ಮಯೋಗಿಯ ಬಾಳು ಸರ್ವತೋಮುಖದಿಂದ ಗೆಲುವಿನದಾಗಲೆಂದು ಹಾರೈಸುವೆ.

ಇಂತು, ನಿನ್ನೊಲವಿನ,

**ಸಹೋದರಿ.**

# ‘ಅಭಯ ಹಸ್ತ.’

ಲೇಖಕರು:— **ಸಂಗನೇಶ ಮ. ಬಿರಾದಾರ,** ಬಿ. ಎ. (ಆನರ್ಸ) ತುಂಗಳ.

ಢಣ್ ಢಣ್ ಎಂದು ಹನ್ನೊಂದು ಬಾರಿಸಿತು, ಹಸಿರು ನಿಶಾನೆ ಅಲುಗಾಡಿತು ಕುಕೂಕೂ ಎಂದು ಸಿಳ್ಳುಹಾಕಿ ಹೊಗೆಬಂಡಿ ಹೊರಟಿತು. ರಾತ್ರಿಯ ಅಮವಾಸ್ಯೆಯ ಕಗ್ಗತ್ತಲು ಎತ್ತಲೂ ವ್ಯಾಪಿಸಿತ್ತು. ಹೊಗೆಬಂಡಿ ತನ್ನ ಹಣೆಗಣ್ಣನ್ನು ತೆರೆದು ದಾರಿಮಾಡಿಕೊಂಡಿತು. ಮುಸಲಧಾರೆಯಾಗಿ ಮಳೆ ಹನಿ-ಸುರಿಯುತ್ತಲೇ ಇದ್ದಿತು. ಅದನ್ನು ಭೇದಿಸಿಕೊಂಡು ಹೊರಟಿತು. ಗದಗ ಸೊಲ್ಲಾಪೂರ ನಡುವಿನ ಮಾರ್ಗ ಕೇಳಬೇಕೆ? ನಿಧಾನವಾಗಿ ನಡದೇ ಇತ್ತು.

ಗೆಳೆಯರೆಲ್ಲ ಹರಟುತ್ತಲೇ ಇದ್ದೆವು ವೇಳೆ ಗಮಿಸಿದ್ದು ಗೊತ್ತಾಗಲೇ ಇಲ್ಲ. ಅಂತೂ ಗಾಡಿ ಲಚ್ಯಾಣವನ್ನು ತಲುಪಿತು ಇಳಿಯುವದಕ್ಕೆ ಧಾವಿಸಿದೆವು. ಆ ಧಾವತೆ ಸಮಯೋಚಿತವಾಗಲಿಲ್ಲ. ಜನರ ಗದ್ದಲವಿರಲಿಲ್ಲ ವ್ಯಾಪಾರಿ ಹುಡುಗರ ಕೂಗಾಟವಿರಲಿಲ್ಲ. ಪ್ಲಾಟಫಾರ್ಮ ಬಂದಾಗಿತ್ತು ಅಲ್ಲಿ ಇಳಿಯುತ್ತಿದ್ದಂತೆ ನಮ್ಮೆದೆಯೂ ಬರಿದಾಗುತ್ತವೆನ್ನುವಂತೆ ಎದೆ ಹಾರತೊಡಗಿದವು. ಪ್ಲಾಟಫಾರ್ಮಿನ ಮೇಲೆ ಅಲ್ಲೊಂದೆರಡು ದೀಪಗಳು ಮಿನುಗುತ್ತಿದ್ದವು. ಅನಿವಾರ್ಯವಾಗಿ ಸ್ಟೇಶನ್ ಮಾಸ್ತರ, ಒಬ್ಬ ಆಳು ಮಗ ತಮ್ಮ ಕೆಲಸದಲ್ಲಿದ್ದರು. ನಮ್ಮಂತೆ ಆಕಸ್ಮಿಕವಾಗಿ ಬಂದಿಳಿದವರು ನಾಲ್ಕೆಂಟು ಜನ ಅಷ್ಟೇ. ಇನ್ನೇನೂ ಇಲ್ಲ; ಸುತ್ತಿನ ಕಾರ್ಗತ್ತಲೆಯಲ್ಲಿಯೂ ಅಲ್ಲೊಂದು ಇಲ್ಲೊಂದು ದೀಪಗಳು ತಮ್ಮದೆ ಆದ ಸಹಜ ನಗೆಯಲ್ಲಿದ್ದುವು ಅದೇ ನಮಗೊಂದು ಆಶೆ.

ಭಾದ್ರಪದ ಮಾಸ, ಚತುರ್ದಶಿಯ ದಿನ ಕಾಲಿಕ್ಕಿದೆ. ಸೋಮವಾರ ಒಂದು ವಾರದಿಂದ ಮಳೆ ಹನಿಯುತ್ತಲೇ ಇದೆ. ವಿಜಯಪುರ ಜಿಲ್ಹೆಯಲ್ಲಿ ಎಂದಿಲ್ಲದ ಮಳೆ ಎತ್ತ ಕಣ್ಪೋಡಿಸಿದರೂ ನೀರೇ ನೀರು ಚಿಕ್ಕ-ಚಿಕ್ಕ ಪ್ರವಾಹಗಳಿಗೂ ಇಲ್ಲದ ಸೊಕ್ಕು ಹೊಳೆಹಳ್ಳಗಳಿಗೆ ಆನಂದದ ಅತಿರೇಕ. ಅಂಗಾಂಗಗಳನ್ನೂ ಸುತ್ತಲೂ ಪಸರಿಸಿವೆ. ಒಂದೇ ಸವನೆ ಕುಣಿಯುತ್ತಿವೆ. ಅದು ತಾಂಡವ ಕುಣಿತ. ಅಲ್ಲಿ ಏನು ಸಿಕ್ಕರೂ ನುಚ್ಚುನೂರು ಮಾರ್ಗಗಳನ್ನು ಹರಿದುಹಾಕಿವು, ತಿಂದು ತೇಗಿವೆ. ಅಂತೆಯೇ ಪಯಣ ನಿಂತುಹೋಗಿದೆ. ಎಲ್ಲೋ ಅಲ್ಲೊಂದು ಇಲ್ಲೊಂದು ಉನ್ನತ ಘೂಲುಗಳು ಮಾತ್ರ ತಲೆಯತ್ತಿ ನಿಂತಿವೆ; ಅವೇ ಕೆಲವು ಮಾರ್ಗಗಳು.

ಬಂಥನಾಳ ಶಿವಯೋಗಿಗಳನ್ನು ಕಾಣಬೇಕಿತ್ತು ಲಚ್ಯಾಣದಲ್ಲಿರುವ ಕೆಂಬನದಂತಿ ಒಂದು ದಿನ ಕಳೆದು ಮರಳಿ ಬೆಳಗಾದರೇ ಮಹಾನವಮಿಯ ಅಮಾವಾಶ್ಯೆ. ಒಂದು ದಿನ ತಪ್ಪಿದರೆ ಅವರು ಸಿಕ್ಕಲಾರರು. ಅಮಾವಾಶ್ಯೆಯ ರಾತ್ರಿ ಬಂಥನಾಳದಲ್ಲಿಯೇ ಕಳೆಯ ಬೇಕು ಅವರಿಗೆ. ಅದಕ್ಕಾಗಿಯೇ



ನಮ್ಮ ಕಾತರ. ಬಂಥನಾಳಕ್ಕೆ ಹೋಗಿ ಬಿಟ್ಟದ್ದರೆ ನಮಗೆ ಎಲ್ಲಿಲ್ಲದ ಪೇಚಾಟ. ಆ ಊರಿಗೆ ಹೋಗಲು ಮಾರ್ಗಗಳೆಲ್ಲ ಬಂದಾಗಿಹೋಗಿವೆ. ಹೇಗೋ ಹೋಗುವದೇ ಆದರೆ ಸುತ್ತುವರಿದು ಹೋಗಬೇಕು. ಯೋಚನೆಯೇ ಮಾರ್ಗವಾಯಿತು. ಕೆಳಗಿಳಿದೆವು.

ನಮ್ಮೆದೆಯೂ ಬರಿದಾಯಿತು. ಹೊರಗೆ ಮಳೆ, ಒಳಗೆ ನಿರಾಶೆಯ ಕಳೆ. ಅಲ್ಲಿಯೇ ಇದ್ದ ಪ್ಲಾಟಫಾರ್ಮದ ಹೊರಗಡೆಯ, ಜನರನ್ನು ವಿಚಾರಿಸಿದಾಗ ಮೈಯೆಲ್ಲ ಜರಿದು ಹೋಯಿತು ಆಶಾ ಭಂಗವಾಯಿತು. ಶಿವಯೋಗಿಗಳು ಬಂಥನಾಳಕ್ಕೆ ಹೋಗಿ ಎರಡು ದಿನಗಳಾಗಿವೆಯೆಂದು ಅವರು ಹೇಳಿದರು. ಅಷ್ಟಕ್ಕೂ ನಮ್ಮ ಕುತೂಹಲ ಕಡಿಮೆಯಾಗಲಿಲ್ಲ. ಮಠಕ್ಕೆ ಹೋಗಿ ನೋಡಿಕೊಂಡೇ ಬರಬೇಕೆಂದು ನಮ್ಮ ಹಟ ಸರಿ ರಾತ್ರಿ ಆಗಲೇ ಸರಿದುಹೋಗಿತ್ತು. ಮಳೆಯ ಹೊಡೆತ ಕಡಿಮೆಯಾಗಿರಲಿಲ್ಲ. ಎತ್ತಲೂ ಕತ್ತಲೆ ನಾವೆಲ್ಲರೂ ದಾರಿಯನ್ನು ಕಂಡರಿಯದ ಅಪರಿಚಿತರು. ಹೆರರ ಸಲಹೆಯ ಮೇರೆಗೆ ರೈಲ ಹಳಿ ಹಿಡಿದು ಮುಂದಡಿ ಇಟ್ಟೆವು ಅಡ್ಡದಾರಿ ಬಂತು ಯಾವದಿಕ್ಕೋ ಏನೋ ಅಂತೂ ಅವನ ಸೂಚನೆಯ ಮೇರೆಗೆ ಅವನು ಹೇಳಿದತ್ತ ನಡೆದೆವು. ರೈಲು ಮಾರ್ಗ ಬಿಡುವದೇ ತಡ; ಅರಲು ಮಾರ್ಗ. ಮರೆಯಿಂದ ನೀರು ಹರಿಯುತ್ತಲೇ ಇತ್ತು. ಮೇಲೆ ಮಳೆ ಸುರಿಯುತ್ತಲೇ ಇತ್ತು. ಯಾರ ಕೈಯಲ್ಲಿ ಕೊಡೆ ಇರಲಿಲ್ಲ. ತೊಯ್ದು ತಪ್ಪಟೆ ಅರಲಿನಲ್ಲಿ ಕಾಲ್ಮರಿಗಳು ಮುಂದೇಳದಾದವು ಮೊಟ್ಟೆ ಮೊಟ್ಟೆಯಾಕಾರವನ್ನು ಧರಿಸಿದವು. ಅವುಗಳ ಸೇವೆಯು ಅನಿವಾರ್ಯವಾಯಿತು. ಮುಂಬರಿದೆವು. ಹೆಗಲಿಗೇರಿಸಿ ಎಲ್ಲ ಕಿಚ್ಚುಗಳಲ್ಲಿ “ಹೊಟ್ಟೆಕಿಚ್ಚು” ಹೆಚ್ಚು ಕಾಲ್ಮರೆ ಕಾಲಿನಿಂದ ಮರೆಯಾಗುವದೇ ತಡ ಕಾಲುಗಳಿಗೆ ಮಾತ್ಸರ್ಯ ಉಕ್ಕೇರಿಬಂದಿತು ಹೆಜ್ಜೆ ಪಿಸಲಾಯಿಸತೊಡಗಿದವು. ಡಾನ್ಸ ಪ್ರಾರಂಭವಾಯಿತು. ಆ ಡಾನ್ಸಿಗೆ ಹಲ್ಲುಗಳು ತಾಳಹಾಕತೊಡಗಿದವು. ಅಂತೂ ಕೊನೆಗೊಮ್ಮೆ ಮಠವನ್ನು ತಲುಪಿದೆವು.

ನಂದಾದೀವಿಗೆ ಉರಿಯುತ್ತಲೇ ಇತ್ತು. ಕಾಲಿಡುವದಕ್ಕೂ ಸ್ಥಳವಿಲ್ಲ ಜನ ಇಕ್ಕಟ್ಟಾಗಿ ಮಲಗಿ ಗೊರಕೆಹೊಡೆಯುತ್ತಿದ್ದಾರೆ. ಅದು ದಾಸೋಹ ಮಠವಲ್ಲವೇ? ಆಗಲೇ ಅಡಿಗೆಯ ಸಿದ್ಧತೆ ನಡೆದಿತ್ತು. ಅವರು ನಮ್ಮ ಸಪ್ಪಳದಿಂದ ಹೊರಗೆ ಬಂದರು. ವಿಚಾರಿಸಿದೆವು. ಉತ್ತರ ಬರಲಾಗಲಿಲ್ಲ ಅಲ್ಲಿ ನಿಲ್ಲುವದಕ್ಕೆ ಮನಸ್ಸಾಗಲಿಲ್ಲ. ಮತ್ತೆ ಸ್ಟೇಶನ್ನಿಗೆ ಮರಳಿದೆವು. ಆಗಿನ ನಮ್ಮ ಸ್ವರೂಪದ ಅರಿವನ್ನು ನಾವೇ ಊಹಿಸಬೇಕು, ಅನ್ಯರಿಂದ ಸಾಧ್ಯವಿಲ್ಲ ಬೀಳುವ ಮಳೆಹನಿಯಲ್ಲಿ ಬಿಸಿಯ ಕಣ್ಪನಿಗಳು ಸೇರಿ ಹೋದುವು, ಕತ್ತಲೆಯಲ್ಲಿ ಮಾಯವಾದವು.

ಸ್ಟೇಶನ್ನಿಗೆ ಬಂದಾಯ್ತು. ಮತ್ತೆ ವಿಚಾರಕ್ಕೆ ಪ್ರಾರಂಭ- ನಮಗುಳಿದವು ಎರಡೇ ಮಾರ್ಗ. ಬಂದದಾರಿಗೆ ಸುಂಕವಿಲ್ಲವೆಂದು ಮರುಳಬೇಕು. ಇಲ್ಲದಿದ್ದರೆ ಸುತ್ತವರಿದು ಹೋಗಬೇಕು. ಮನಸ್ಸು ಸುತ್ತುವರಿದರೂ ಜೇಲು ಸುತ್ತುವರಿಯಲಿಲ್ಲ, ಸುಂಕ ತೆರದಿರುವದೇ ಒಳ್ಳೆಯದಾಯಿತು ನಿಶ್ಚಯಿಸಿದೆವು.

ಕೊನೆಯ ಉಸಿರಿರುವ ವರೆಗೂ ಪ್ರಯತ್ನ ನಡೆಯಲೇಬೇಕು ನಡೆಯುವದೂ ಅವಶ್ಯ, ಹತ್ತರ ಜೊತೆಗೆ ಹನ್ನೊಂದನೆಯ ಕಲ್ಲನ್ನೂ ಬೀಸಾಕಬೇಕೆನ್ನುವ ಮನೋಭಿಲಾಷೆ. ಇಂಡಿಯಿಂದ ಬಂಥನಾಳಕ್ಕೆ

ಮಾರ್ಗ ಅಲ್ಲಿಯೇ ಇಳಿದು ಕೊನೆಯ ಕಲ್ಲನ್ನು ಬೀಸುವಾಕಿ ಸಮ್ಮತಿ ದೊರೆತಾಯ್ತು. ಟಕೆಟ್ಟು ಪಡೆದುಕೊಂಡೆವು ಗಾಡಿಯೂ ಬಂಧಿತು. ಅರ್ಧ ಆಶೆ ಅರ್ಧ ನಿರಾಶೆಯಿಂದ ಮರಳಿ 'ಕೊಳಗ'ಬೆಳೆಸಿದೆವು. ಇಂಡಿ ಸ್ಟೇಶನ್ನಿನಲ್ಲಿ ಬಂದಿಳಿದೆವು.

ನಾವೀಗ ತೊಯ್ಸಿಕೊಂಡ ಕಾಗೆ, ಪರದೇಶಿಯಾದ ಕೂಸು. ಸ್ವಾಗತದ ಸುಳಿವಿಲ್ಲ ಬಂದಿಳಿಯುತ್ತಿದ್ದಂತೆಯೇ ಸುರ್ಯೋದಯವಾಗಬಹುದೆಂಬ ನಮ್ಮ ಗ್ರಹಿಕೆ. ಆದರೆ ನಮ್ಮ ಗ್ರಹಿಕೆ ಗ್ರಹಿಕೆಯಾಗಿಯೇ ಉಳಿಯಿತು. ಸೂರ್ಯೋದಯಕ್ಕೆ ಇನ್ನೂ ಎರಡು ತಾಸಿನ ಅವಧಿ, ಕಟಗುಡುವ ಚಳಿ. ಅಲ್ಲಿಯೇ ಕುಳಿತುಕೊಳ್ಳಬೇಕಾಯಿತು.

ನಿಧಾನವಾಗಿ ಮುಗಿಲ್ ತೆರೆ ಸರಿಯಿತು. ಸೂರ್ಯ ರಂಗಭೂಮಿಗೈತಂದ. ಅವನ ಕಿರಣ ಸುತ್ತಲೆಲ್ಲ ಪಸರಿಸಿದವು. ಮಳೆ ಅದೇ ಒಂದು ತಾಸಿನಿಂದ ನಿಂತಿತ್ತು. ಸುತ್ತಲೆಲ್ಲ ಶಾಂತತೆ ವ್ಯಾಪಿಸಿತ್ತು. ಇಂಡಿಯಿಂದ ಬರುವ ಬಸ್ಸಿನ ದಾರಿಯನ್ನೇ ಕಾಯುತ್ತಿತ್ತು ಜನ. ನಾವು ಅವರಲ್ಲಿ ಗಣನೆಯಾದೆವು. ಎರಡು ಮೂರು ದಿವಸದಿಂದ ಬಸ್ಸು ಬಾರದೇ ಇದ್ದುದರಿಂದ ಯಾರಲ್ಲಿಯೂ ಉತ್ಸುಕತೆಯಿರಲಿಲ್ಲ. ನಾವೂ ಕಷ್ಟೆ. ಆದರೆ ಕುತೂಹಲ ಕೆರಳಿಸಿತು ಮುನ್ನುಗಿತು ಹಸಿದ ಹೊಟ್ಟೆ ಅಶನಕಾಗಿ ಇಂಡಿಗೆ ಅಟ್ಟಿತು ನೈರಾಶ್ಯದ ಮೇಲೆ ನೈರಾಶ್ಯಗಳ ಬಂದರೂ ಎದೆಗುಂದಲಿಲ್ಲ ಮುಂದಡಿಯಿಟ್ಟೆವು. ಮೈಲುಗಲ್ಲುಗಳನ್ನು ಮುಟ್ಟಿದೆವು. ಒಂದು ಎರಡು ಹಳ್ಳಿಗಳು ಹಿಂದುಳಿದವು. ಶಿವಯೋಗಿಗಳನ್ನು ಕಾಣಬೇಕೆಂಬ ಕಾತರ ಈ ಸುಗುಂಬಳವಾಗಿ ತೇಲಿಸಿ ಕೊಂಡು ದಾಟಿಸಿತು.

ಇಂಡಿ ಬಸ್ ಸ್ಟ್ಯಾಂಡಿನಲ್ಲಿ ವಿಚಾರಿಸಿದೆವು, ಉತ್ತರ ಬದಲಾಗಲಿಲ್ಲ. ಅಡ್ಡಗೋಡೆ ಆಶ್ರಯವಾಯಿತು. ಗೆಳೆಯರ ಮುಖ ಬಾಡಿದ ಸವುತೆಯನ್ನು ನಾಚಿಸಿದವು. ಆದರೂ ದೂರದ ಆಶೆ ಮಾತ್ರ ಮನದಿಂದ ದೂರವಾಗಿರಲಿಲ್ಲ ಊರನ್ನು ಸುತ್ತಾಡಿಕೊಂಡು ಬರೋಣ, ಅಷ್ಟರಲ್ಲಿ ಏನಾದರೂ ಸುದ್ದಿ ಬಂದೀತು. ಎಂದು ಊರೊಳಗೆ ಪ್ರವೇಶಿಸಿದೆವು ಕಿರಿಯಗಲವಾದ ಬೀದಿಗಳು; ನೃತ್ಯದ ಭಂಗಿಯನ್ನು ನೈಸರ್ಗಿಕವಾಗಿ ಕಲಿಯ ಬಹುದಿತ್ತು ಅಲ್ಲಿ ಮಡಿಮೈಲಿಗೆ ಅಲ್ಲಿ ಮಡಿದ ಹಾಗಿಯೆ. ಅಂತೂ ಎಂಟು ಗಂಟೆ ಸರಿದುಹೊಗಿತ್ತು. ರಾತ್ರಿಯೆಲ್ಲ ಜಾಗರಣೆ. ಹೊಟ್ಟೆ ಬರಿದಾಗಿದ್ದವು. ಮಂಡಕ್ಕಿ ನೆಲಗಡಲೆ–ಬೆಲ್ಲದ ಉಪಹಾರ ವಾಗಬೇಕೆಂದು ನಿರ್ಧರಿಸಿದೆವು ಏಕಂದರೆ ಜೇಬು ಹೊಟೇಲಿಗೆ ಎಳೆದೊಯ್ಯಲಿಲ್ಲ; ಒಯ್ಯಲು ಸಮರ್ಥವೂ ಇರಲಿಲ್ಲ ಅಂತೂ ಉಪಹಾರ ಸೇವನೆಗಾಗಿಯೂ ಇನ್ನೊಮ್ಮೆ ವಿಚಾರಿಸುವದಕ್ಕಾಗಿಯೂ ಮತ್ತೊಮ್ಮೆ ಬಸ್ಸ್ ಸ್ಟ್ಯಾಂಡ ಬರಮಾಡಿ ಕೊಂಡಿತು. ಆಗಲೂ ಅದೇ ಉತ್ತರ ಉಪಹಾರ ತೀರಿಸಲು ಸ್ವಲ್ಪ ಬಯಲಿಗೆ ಹೋಗ ಬೇಕೆಂದ ದಾರಿಗೆಬಂದೆವು ಇಲ್ಲಿಯವರೆಗೆ ಬಂದವರು ಕೇವಲ ಐ ದಾರು ಹರದಾರಿಯ ಸಲುವಾಗಿ ಹಿಂತಿರುಗಬೇಕೇ? ಎಂದು ಎಲ್ಲರ ಮನ್ಸಿನಲ್ಲಿಯೂ ಏಕ ಕಾಲಕ್ಕೆ ಮೂಡಿ ಬಂದಿತು ಅದು ಕೂಡಲೇ ಹೊರ ಬಿದ್ದು ಬೆಂಬಲವೂ ದೊರೆಯಿತು. ಕಾಲುಗಳು ಹೇಳಿಸಿಕೊಳ್ಳಲಿಲ್ಲ, ಮಾರ್ಗಾನುಯಾಯಿಗಳೇ ಆಗಿದ್ದವು.



ಸೂರ್ಯ ಮೇಲಕ್ಕೆ ಬರುತ್ತಿದ್ದ. ಬಿಸಿಲು ಹೆಚ್ಚುತ್ತಲೇ ಇತ್ತು. ನಗುತ್ತ, ಕೆಲೆಯುತ್ತ ನಾವೂ ನಡದೇ ಇದ್ದೆವು ಎಂದೂ ನಡೆದ ಅಭ್ಯಾಸ ವಿಲ್ಲದ ಕಾಲುಗಳು ಒಂದೆರಡು ಮೈಲ ಹೋಗುವದರಲ್ಲಿಯೋ ಸಂಪು ಹೂಡ ತೊಡಗಿದವು. ಆದರೂ ಕುತೂಹಲ ಹೇಗೋ ನುಗ್ಗಿಸಿಕೊಂಡು ಹತ್ತು ಮೈಲನ್ನು ದಾಟಿಸಿತು. ಬದಿಯ ಒಂದು ಬಾವಿಯ ಮೇಲೆ ಕುಳಿತು ಮಂಡಕ್ಕಿ ಚೀಲ್ಲನು ಕಾಲಿ ಮಾಡಿದೆವು; ಸ್ವಲ್ಪ ಹೊತ್ತು ವಿಶ್ರಮಿಸ ಬೇಕಂದರೆ ಮಾರ್ಗ ದೊಡ್ಡ ಬಾಯಿ ತೆರೆಯುತ್ತಿತ್ತು ಸೂರ್ಯ ನಡುಗೆತ್ತಿಯಿಂದಿಳಿದಿದ್ದ. ಕಂಣೆವೆ ಆಕುಂಚನ ವಾಗತೊಡಗಿದವು. ವಿಶ್ರಾಂತಿ ಒಳ್ಳೆಯದೆನಿಸಲಿಲ್ಲ ಮಾರ್ಗಾನುಯಾಯಿಗಳಾದೆವು.

ಸುತ್ತಲೂ ಸೌಂದರ್ಯವೇನೋ ತುಂಬಿದೆ ನೋಡುವ ಕಣ್ಣು ಬೇಕು, ಅರಗಿಸಿಕೊಳ್ಳುವ ಮನಸ್ಸು ಬೇಕು ಇವಾವುವೂ ನಮ್ಮಲ್ಲಿ ಉಳಿದಿರಲಿಲ್ಲ; ನಮ್ಮ ಚಿತ್ತವೆಲ್ಲ ಅಂತಿಮ ಗುರಿಯಲ್ಲಿಯೋ ಕೇಂದ್ರೀಕೃತ ವಾಗಿದ್ದಿತು, ಗುರುತ್ವಾಕರ್ಷಣವಾಗಿ ಎಳೆಯುತ್ತಿದ್ದಿತು, ಅಂತೂ ಹೇಗೋಮಾಡಿ ತಾಂಬೆ ಹಳ್ಳದಡಿಯನ್ನು ಸಾರಿದೆವು. ಹಳ್ಳವನ್ನು ಕಂಡಾಯ್ತು. ಎದೆಯ ಬಡಿತ ಹೆಚ್ಚಾಗತೊಡಗಿತು. ಹಳ್ಳ ಯಾರ ಮೇಲೆ ಮುನಿಸುಗೊಂಡಿತ್ತೋ ಏನೋ. ಬೇಟೆಗೆರಗುವ ಹದ್ದಿನಂತೆ ಮುನ್ನುಗ್ಗುತ್ತಿತ್ತು. ಇಕ್ಕೆಲಗಳಲ್ಲಿಯೂ ಜನಸಮುದಾಯವಿತ್ತು. ಆದರೆ ಶಿವ ಧನಸ್ಸನ್ನು ಮೆಟ್ಟಿ ಹೆದೆಯೇರಿಸುವ ಧೀರ ಬೇಕಾಗಿದ್ದ ಕಂಠಮಟದುದ್ದ ಧುಮ್ಮಿಕ್ಕುವ ಪ್ರವಾಹದಲ್ಲಿ ಮುಂದಡಿಯಿಡುವವರಾರು?

ಇದು ನಮ್ಮ ದೈವ ಪರೀಕ್ಷೆಯ ಕಾಲ ಪ್ರವಾಹ ಕಡಿಮೆಯಾಗುವ ಲಕ್ಷ್ಮಣವಿರಲಿಲ್ಲ ದೃಷ್ಟಿಯಲ್ಲಿ ಒಂದು ಶಕ್ತಿ ಬಂತು. ಪ್ರವಾಹ ಸಂಣದಾಗಿ ತೋರತೊಡಗಿತು. ದಾಟೇವೆಂಬ ಕೆಚ್ಚು ಹೃದಯದಲ್ಲಿ ಮೂಡಿತು. ಒಬ್ಬರಮುಖವನೊಬ್ಬರು ನೋಡುವ ಪ್ರಸಂಗಬಾರದೆ ಹೋಯಿತು ಬಟ್ಟೆಗಳೆಲ್ಲ ಶಿರೋಭೂಷಣಗಳಾದವು "ಜಯ ಶಿವಯೋಗಿ" ಎಂದು ಮುಂದಡಿಯಿಟ್ಟೆವು.

ಅದೊಂದು ಸೆಳುಕಿನ ಮೂಲೆ, ನಾವಿದ್ದ ಕಡೆಗೆ ಪ್ರವಾಹ ಶಾಂತವಾಗಿಯೇ ಇತ್ತು ಕಾಲನ್ನು ಎತ್ತಿಡದೆ ನಿಧಾನವಾಗಿ ಸಾಗಿದ್ದೆವು. ಸುಮಾರು ಅರ್ಧದಷ್ಟ ಬಂದಿರ ಬಹುದು. ಸೆಳಕು ಹೆಚ್ಚಿತು. ಕಾಲಲ್ಲಯ ಮಳಲು ಕತ್ತರಿಸತೊಡಗಿತು. ಸ್ಥಿರತೆ ತಪ್ಪಿ ಹೊಯ್ದಾಟಕಂಡಿತು. ಪರಸ್ಪರರ ಬಾಹುಗಳು ಪೂರೈಸಿದುವು ನೀರು ಉಲುಕುತ್ತ ಭುಜವನ್ನು ಏರುತ್ತಿತ್ತು ಶಿವಯೋಗಿ ಧ್ರುವವನ್ನು ಸಪ್ತರ್ಷಿಗಳು ಒಳಸಿದವು. ನಡೆಯುತ್ತಲೇ ಇದ್ದೆವು. ಮೂಲೆಯ ಸೆಳಕು ಒಮ್ಮೆ ಕಾಲನ್ನುಹಾರಿಸಿತು, ಎದೆ "ಸಳ್" ಎಂದಿತು, ನನ್ನ ಬದಿಯಲ್ಲಿಯ ಮತ್ತಿಬ್ಬರು ಗೆಳೆಯರು ನನ್ನನ್ನೇ ಆಧಾರವಾಗಿಟ್ಟುಕೊಂಡವರು ಕೂಡಲೆ ಇನ್ನೊಬ್ಬ ಬಲಯುತ ಗೆಳೆಯನನ್ನು ಬಲವಾಗಿ ಹಿಡಿದು ಸ್ವಲ್ಪ ಸ್ತಬ್ಧವಾಗಿ ನಿಂತೆ ಸ್ಥೈರ್ಯ ಬಂತು ಮುಂದಡಿಯಿಟ್ಟೆವು ದಡದಲ್ಲಿಯ ಜನ ನಮ್ಮನ್ನೇ ನೋಡುತ್ತಿದ್ದಿತ್ತು. ಆದರೆ ನಮ್ಮ ದೃಷ್ಟಿ ಆಕಡೆ ಇರಲಿಲ್ಲಿ ಸರ್ವೇಂದ್ರಿಯಗಳು ಏಕಾಗ್ರವಾಗಿದ್ದವು ಕುಡುಗೋಲು ಕುಂಬಳ–ಕಾಯಿಯನ್ನೇ ಅವನ ಕೈಗಿತ್ತಿದ್ದೆವು ಕೊಲ್ಲುವದೂ ಕಾಯುವದೂ ಅವನದೇ ಆಗಿದ್ದಿತ್ತು. ಭಕ್ತರಕ್ಷಕನೆಂಬ ಹೆಸರನ್ನು ಸಾರ್ಥಕಗೊಳಿಸಿಕೊಳ್ಳಬೇಕಾಯಿತು. ನಾವು ಸುಗಮವಾಗಿ ಧಡವನ್ನು ತಲುಪಿದೆವು.

ಆನಂದಕ್ಕೆ ಪಾರವೇಇಲ್ಲ ಹಸಿವು-ನೀರಡಿಕೆಗಳ ನೆನಪು ಹಾರಿಹೋಯಿತು ಇಳಿಹೊತ್ತು ಬಂಥನಾಳನ್ನು ಸೇರುವ ತನಕ ಹೊರಟೆವು ಇಲ್ಲಿಯವರೆಗೆ ಬಟ್ಟೆಯ ಕಡೆಗೆ ಲಕ್ಷ್ಯವಿರಲಿಲ್ಲ ಮಳೆಯಿಂದ ತೊಯ್ದೋ, ರಾಡಿಸಿಡಿದೋ ಏನೇನೋ ಆಗಿದ್ದವು ತಾಂಬೆಯಹೊರಗಡೆ ಒಂದುಭಾವಿ. ಬಟ್ಟೆಗಳನ್ನು ತೊಳೆದು ಹಾಕಿದೆವು ಮನದಣಿ ಈಜಿದೆವು ಹೊಟ್ಟೆಗೆ ಹಿಂದಿನ ಉಪಹಾರವೇ ಆಧಾರ ಜತೆಗೆ ಈಗಷ್ಟುನೀರು.

ಇಲ್ಲಿ ನಿಮಗೆ ನಮ್ಮೆಲ್ಲರ ಪರಿಚಯಮಾಡಿ ಕೊಡಬೇಕಾಗಿದೆ. ಏಕೆಂದರೆ ಮುಂದಿನ ಕಾರ್ಯ ನಡೆಯುವದು ನಗುಮುಖವಾಗಿ, ಅದರ ಮೇಲಿಂದಲೇ ನಾವ ಏಳೂಮಂದಿ ತಾಂಬೆಯನ್ನು ದಾಟ ಒಂದೆರಡು ಮೈಲು ಕ್ರಮಿಸಿರಬಹುದು. ಒಂದು ಸುಮಾರಾಗಿ ದಿನ್ನೆ ಬರುತ್ತದೆ. ಎಲ್ಲರೂ ನಿಧಾನವಾಗಿ ಹೆಜ್ಜೆ ಹಾಕುತ್ತ ನಡೆದಿದ್ದರು. ಕಾರಣಾಂತರದಿಂದ ನಾನೊಬ್ಬನೇ ಹಿಂದಿನಿಂದ ಬರುತ್ತಿದ್ದೆ ಅವರೂ ಕೂಡ ಸ್ವಲ್ಪ ಹಿಂದೆ ಮುಂದೆ ಇದ್ದರೆನ್ನಿ ಆದೃಶ್ಯವನ್ನು ಕಂಡಾಗ ಒಮ್ಮೆಲೆ ಒಂದು ಸಂಗತಿ ನೆನಪಾಯಿತು. ಪಾಂಡವರ ಪರ್ವತಾರೋಹಣದ ಚಿತ್ರ ಕಂಣು ಮುಂದೆ ಸುಳಿಯಿತು. ಅವರವರ ಯೋಗ್ಯತೆಗೆ ತಕ್ಕಂತೆ ಹೆಸರಿಸಿದೆ ಆದು ಅವರಿಗೂ ಸಮ್ಮತಿಸಿತು. ಅದೊಂದು ಮೋಜಾಯ್ತು ನಮ್ಮೆಲ್ಲೆಲ್ಲ ಶಾಂತ ಮೂರ್ತಿ ಕಾಖಂಡಿಕಿ ನಿಂಗಪ್ಪ ಲಿಂಗಮೂರ್ತಿಯೇ ಸೈ. ಆಪನಿಗೆ ಧರ್ಮರಾಯನೆಂದು ಹೆಸರಿಸಿದೆವು B. D. ಬಾಲರೆಡ್ಡಿ ಎರಡನೆಯ ನಂಬರನ್ನು ದೊರಕಿಸಿದ ನಿಜ. ರೂಪಕ್ಕೆ ತಕ್ಕಂತೆ ಹೆಸರು. ಗಡುತರ ಶರೀರ ಕಪ್ಪು ಬಣ್ಣ. ಭೀಮರಾಯ ಅರ್ಜುನನ ಚಪಲತೆ M. H. ಉಸ್ತಾರನಿಗೆ ಸೇರಲೇಬೇಕಾಯಿತು. ಬಂಣ, ಮೈಕಟ್ಟು. ಸ್ವಭಾವ ನಿಲುವಿಕೆಗಳಲ್ಲಿ ಅಮಳ್‌ಗಳನ್ನು ಓಂಕಾರಿ ಬಿರಾದಾರ ರಾಠೋಡ ಇವರು ಆಶ್ರಯಿಸಿದರು. ಇನು ಉಳಿದವರೆಂದರೆ ನಾವೇ ಇಬ್ಬರೂ ಬಲರಾಮನಂತೆ ಗಂಭೀರನೂ, ಭದ್ರಕಾಯನೂ. ಶಾಂತನೂ ಆದ R. B. ಗಿಡಗಂಟಿ ಮತ್ತು ನಾನು (S. M. ಬಿರಾದಾರ.) ಕುಮಾರ ವ್ಯಾಸ, ಭಾರತದ ಕಥೆಗೆ, ಕೃಷ್ಣನನ್ನೇ ನಾಯಕನನ್ನಾಗಿ ಮಾಡಿದ್ದಾನೆ ಇಂದಿನ ಈ ಪಯಣಕ್ಕೆ ನಾನೇ ನಾಯಕನೆನ್ನಿ ಅಂತೆಯೇ ಕೃಷ್ಣನ ಪಟ್ಟ ನನಗೆ ದೊರೆಯಿತು.

ಈ ರೀತಿ ಹರಟುತ್ತ ಒಂದೆರಡು ಹಳ್ಳಗಳನ್ನು ದಾಟಿದೆವು ಕರಡಿಗೆ ಹೆದರದವರು ಕರಿ ಕಂಬಳಿಗೆ ಹೆದರಬೇಕಾಗಲಿಲ್ಲ ಕೊನೆಗೊಮ್ಮೆ ಬಂಥನಾಳನ್ನು ಬಂದು ತಲುಪಿದೆವು. ಗಂಟೆ ನಾಲ್ಕಾಗಿತ್ತು.

ಬುದ್ಧಿ ಅರಿಯದ್ದನ್ನು ಕರುಳು ಅರಿಯುತ್ತದೆ ಮಠ ಪ್ರದೇಶಿಸಿದೆವು ಮಠದ ವಿಳಾಸ ಅರಿದಾಯ್ತು, ಬಂದು ಒಳಸಾರ್ದೆವು. ನಿಟ್ಟುಸಿರು ತನ್ನಷ್ಟಕ್ಕೆ ತಾನು ಸರಿದು ಹೋಯಿತು. ಶಿವಯೋಗಿಗಳ, ಕರುಳು ಅರಿತಿತ್ತು. ನಮಗಾಗಿ, ನಮ್ಮ ಬರುವಿಕೆಗಾಗಿ ನಮ್ಮ ಸುರಕ್ಷಿತತೆಗಾಗಿ ದಾರಿ ಕಾಯುತ್ತಿದ್ದರು. ಬಲಬದಿಗೆ ವಿಶಾಲವಾದ ಪಡಸಾಲೆ ಉನ್ನತಾಸನದಲ್ಲಿ ವಿರಾಜಮಾನರಾಗಿದ್ದರು. ಹೋಗಿ ದಂಡ ಪ್ರಣಾಮವನ್ನರ್ಪಿಸಿದೆವು. ಅಂದು ಸೋಮವಾರ ಅವರು ಮೌನ ವ್ರತ ಮಾತಾಡುವ ಹಾಗಿಲ್ಲ. ನಮ್ಮನ್ನು ಕಂಡು ಮುಗುಳ್ನಗೆ ನಕ್ಕು ಕೂಡ್ರಲು ಸೂಚಿಸಿದರು ವಾಡಿಕೆಯಂತೆ ಕುಶಲತೆಯ ಬಗೆಗೆ ಹೇಳಿಯಾಯ್ತು. ಹಸಿದ ಹೊಟ್ಟೆ ತನ್ನ ಪಡಿಯಚ್ಚನ್ನು ಮುಖದ ಮೇಲೆ ಮೂಡಿಸಿತ್ತು ಅದನ್ನು ಗ್ರಹಿಸುವದು ಶಿವಯೋಗಿಗಳಿಗೆ ತಡವಾಗಲಿಲ್ಲ ಕೂಡಲೇ ಪ್ರಸಾದ ತೆಗೆದು ಕೊಳ್ಳಲು ಸೂಚಿಸಿದರು.



ಅವರ ಸೇವಕನಿಗೆ ನಮ್ಮೆಲ್ಲರ ಪರಿಚಯ ಸಾಕಷ್ಟು ನೇವೀಗ ಬಂದುದು ಆಕಸ್ಮಿಕವಾಗಿ ಅವನು ದಿಗಿಲುಗೊಂಡ ಅಂತೆಯೆ ಒಂದು ರೀತಿಯ ಸಂತೋಷ ದಾಸೋಗ ಮಠ. ಕೇಳಬೇಕೆ? ಯಾವಾಗ ಹೋದರೇನು? ಪ್ರಸಾದಕ್ಕೆ ಕೊರತೆಯಿಲ್ಲ ಆ ಸೇವಕನೂ ಸ್ವಲ್ಪನಗೆಗಾರನೇ ಅನ್ನಿ ನಮ್ಮೊಡನೆ ಆವನದು ಅತೀವವಾದ ಸಲುಗೆ ತಾನೇ ಉಣಬಡಿಸಿದ ರೊಟ್ಟಿ. ಕಾರಬೇಳೆ, ಹುಳಿಯನುಚ್ಚು ಹಕ್ಕರಿಕೆ ಇದರಿಂದ ಕೂಡಿದ ಆ ಊಟದ ಸವಿ ಹೇಳತೀರದು. ಇದು ಕಾಲ ದೇಶಗಳ ಮಹಿಮೆಯಲ್ಲದೆ ಮತ್ತೇನು? ಅಂತೂ ಯಥೇಚ್ಛವಾಗಿ ಹೊಡೆದೆವು. ಊಟ ಮುಗಿಸಿ ಸ್ವಲ್ಪ ವಿಶ್ರಾಂತಿಯನ್ನೂ ಪಡೆದೆವು

ಚಿಕ್ಕಮಕ್ಕಳ ಕೂಡ ಇರುವದೆಂದರೆ ನನಗೆ ಎಲ್ಲಿಲ್ಲದ ಆನಂದ ಮಠವನ್ನೆಲ್ಲ ಸುತ್ತುವರಿದು ನೋಡುತ್ತಿದ್ದೆವು. ಹೊರಗೆ ಹೋಗಲು ಅವಕಾಶ ವಿದ್ದಿಲ್ಲ ಮಳೆ ಮತ್ತೆ ಸುರಿಯತ್ತಲೇ ಇತ್ತು ಹಾಗೆಯೇ ನೋಡುತ್ತಿದ್ದೆವು ಮಕ್ಕಳ ಸಂಗ ದೊರೆಕಿತು. ನೆರೆಯೂರಿನ ಕೆಲವು ವಿದ್ಯಾರ್ಥಿಗಳ ವಾಸ ಅಲ್ಲಿಯೇ ಅಂಥವರ ಸಲುವಾಗಿಯೇ ಕೆಲವು ಕೋಣೆಗಳನ್ನು ಕಟ್ಟಿಸಲಾಗಿದೆ. ಅವರೇನೂ ಅವರು ಬಾಡಿಗೆ ತೆತ್ತ ಬೇಕಾಗಿಲ್ಲ ಆಗಲೇ ರಾತ್ರಿಯಾಗಿತ್ತು ಅವರು ಊಟ ಮಾಡುತ್ತಿದ್ದರು ನಾವೂ ಅಲ್ಲಿಗೆ ಹೋದೆವು. ನಮ್ಮನ್ನು ಕಂಡು ಅವರು ಸ್ವಲ್ಪ ಸಂಕೋಚ ಪಟ್ಟುಕೊಂಡರೂ ನಾನು ಸ್ವಲ್ಪ ವಾಚಾಳಿ ಆದ್ದರಿಂದ ಕೂಡಲೇ ಅವರೊಡನೆ ಸಲುಗೆಯನ್ನು ಬೆಳೆಸಿದೆ ಅವರು ನಿಧಾನವಾಗಿ ಉಣುವಂತೆ ಮಾಡಿದೆ ನಮಗೂ ಊಟಕ್ಕೆ ಕರೆದರು ಆದರೆ ಕಂಠಮಟ ತುಂಬಿ ಹವೆ ತುಂಬುವದಕ್ಕೂ ಅವಕಾಶವಿಲ್ಲದ ಸ್ಟೋವಿನಂತಾಗಿತ್ತು ನಮ್ಮ ಪರಿಸ್ಥಿತಿ ಆದರಿಂದಾಗಿ ನಾವು ನಿರಾಕರಿಸಬೇಕಾಯಿತು ಅವರು ಊಟವನ್ನು ಮುಗಿಸಿದರು.

ಮಹಾದ್ವಾರದ ಮೇಲೆ ಒಂದು ಕೋಣೆ ಅಲ್ಲಿಯೇ ನಮಗೆ ಮಲಗುವ ಸಿದ್ಧತೆಯಾಯ್ತು ದಾರಿ ನಡೆದ ದಣುವಿನಿಂದ ನಮಗೂ ನಿದ್ರೆ ಬಂದಿದ್ದಿತು ಆದರೆ ಆ ಮಕ್ಕಳನ್ನು ಬಿಟ್ಟು ಹೋಗುವದು ನನಗೊಪ್ಪಲಿಲ್ಲ ಅಲ್ಲದೆ ಯಾವದೇ ಕಾರಣದಿಂದ ಅವರ ಗುರುಗಳೂ ಅಲ್ಲಿ ಬಂದಿದ್ದರು ಇದರಿಂದಾಗಿ ಮಾತು ಮುಂದಕ್ಕೆಯೇ ಬೆಳೆಯಿತು ಹುಡುಗರೆಲ್ಲ ಮೊದಲನೆಯ ವರ್ಗದಲ್ಲಿ ಪಾಸಾಗುವಂತೆ ಅಭ್ಯಾಸ ಮಾಡುವರಾಗಿ ಹೇಳುವಷ್ಟು ಹುರುಪು ತುಂಬಿಸಿದೆ. ಇದರಿಂದ ಆ ಗುರುಗಳು ನಮ್ಮ ಮೇಲೆ ಇನ್ನಷ್ಟು ಪ್ರೀತರಾದರು ಹಳ್ಳಿಯ ಹುಡಗರು, ಯಾವದೇ ರೀತಿಯ ಸಂಸ್ಕಾರ ವಿರಲಾರದು ಅವರಿಗೆ ಹೇಗೆ ಹೇಳಬೇಕೆನ್ನುವದೇ ಒಂದು ಸಮಸ್ಯ. ಅಲ್ಲದೆ ಹಳೆಯ ರೀತಿಯ ಆ ಮಾಸ್ತರರಿಗೂ ಅಷ್ಟೇ ನಮ್ಮ ಸಂಪರ್ಕ ಅವರಿಗಾಯ್ತು ನವ ಚೈತನ್ಯ ಉಂಟಾಯ್ತು ದಾರಿಯ ದಣವು ನಮಗೆ ಹೆಚ್ಚಾಗಿತ್ತು ಗೆಳೆಯರು ಮಲಗಿ ನಿದ್ರೆ ಹೋಗಿದ್ದರು ಅವರನ್ನೆಚ್ಚರಿಸದೆ ನಿಧಾನವಾಗಿ ಬಂದು ಮಲಗಿದೆವು.

ದಣಿವಾರಿತು ನಿದ್ರೆ ತಿಳಿದೆದ್ದೆವು. ಸೂರ್ಯನಾಗಲೇ ಮೇಲಕ್ಕೆ ಬಂದಿದ್ದ ಸ್ವಾಮಿಗಳವರಿಗೆ ಮುಂಜಾನೆ ವಾಯುಸೇವನಿಗೆ ಹೋಗಿ ಬರುವದು ರೂಢಿ ಆ ಪ್ರಕಾರ ಅವರು ಹೋಗಿದ್ದರು. ಅವರು ತಿರುಗಿ ಬರುವದರಲ್ಲಿಯೇ ತೋಟವನ್ನು ನೋಡಿ, ಸ್ನಾನ ತೀರಿಸಿಕೊಂಡು ಬಂದೆವು ಅವರ ದರ್ಶ

ನವಾಯಿತು. ವಿಶೇಷ ಮಾತು ಕತೆಗಳಾದವು. ನಾವು ವಿಜಾಪೂರದಿಂದ ಹೊರಟು ಅಲ್ಲಿಗೆ ಬಂದು ಮುಟ್ಟುವವರೆಗಿನ ಸವಿಸ್ತಾರವಾದ ಕಥೆಯನ್ನೂ ನಾವು ಬಂದ ಕಾರಣವನ್ನೂ ತಿಳಿಸಿದೆವು ಪಾರಾಗಿ ಬಂಡುದಕ್ಕೆ ಅವರಿಗೆ ಅತ್ಯಾನಂಡವಾಯಿತು ಇಷ್ಟೇ ನಾವು ನಡಿಸಿದ ರಕ್ಷನ ಕಥೆಯನ್ನು ಕೇಳಿ ಹಿಡಿಸಲಾರದ ಕಳವಳವಾಯಿತು

ಅಂದು ಮಂಗಳವಾರ. ಮಹಾನವಮಿಯ ಅಮಾವಾಸ್ಯೆ ರಾತ್ರಿ ವಿಶೇಷವಾದ ಕಾರ್‍ಯಕ್ರಮ. ಆದರೆ ಕಾರ್‍ಯಕ್ರಮಕ್ಕೆ ಉಳಿದುಕೊಳ್ಳುವ ಅವಕಾಶ ನಮಗಿರಲಿಲ್ಲ ಮರುದಿನವೇ ಪಾವು ವಿಜಯಪೂರವನ್ನು ತಲುಪ ಬೇಕಾಗಿತ್ತು ಅದರಿಂದಾಗಿ ಪ್ರಸಾದವನ್ನು ಸೇವಿಸಿ, ಶಿವಯೋಗಿಗಳ ಆಶಿರ್ವಾದವನ್ನು ಪಡೆದೆವು. ಅಷ್ಟರಲ್ಲಿ ಶಿವಯೋಗಿಗಳ ಆದೇಶದಂತೆ ಬುತ್ತಿ ಸಿದ್ಧವಾಯಿತು. ಮಗ.ದೊಮ್ಮೆ ಶಿವಯೋಗಿಗಳಿಗೆ ನಮಸ್ಕರಿಸಿ ಹೊರಹೊರಟೆವು.

ಸೋಮವಾರದ ರಾತ್ರಿ ವಿಪರೀತವಾಗಿ ಮಳೆ ಹೊಡೆದಿತ್ತು ಹಳ್ಳಗಳು ತಮ್ಮ ಪಾತ್ರಗಳನ್ನು ಇನ್ನಷ್ಟು ಹೆಚ್ಚಿಸಿದ್ದವು ಬಂಥನಾಳದಿಂದ ಹೇಗೋ ಕಷ್ಟಪಟ್ಟು ಎರಡು ಹಳ್ಳಗಳನ್ನು ದಾಟಿದೆವು. ತಾಂಬೆ ಬಂತು ಪ್ರವಾಹ ಹೆಚ್ಚಾದುದು ದೂರದಿಂದಲೇ ತಿಳಿಯಿತು. ಇನ್ನೇನು ಮಾಡುವದು ಈಜಿ ಪಾರಾಗೋಣವೆಂದರೆ ಹಳ್ಳದ ಸೆಳವು ವಿಪರೀತ. ಅಲ್ಲದೇ ಭೀಮಸೇನನಿಗೆ ಈ ಜಿ ಬರುವಹಾಗಿಲ್ಲ. ಇದೇ ಯೋಚನೆ ಹಳ್ಳದ ದಡಕ್ಕೆ ಬಂದೆವು. ಶಿವಯೋಗಿ ನಮ್ಮ ಬೆಂಗಾವಲಾಗಿಯೇ ಇದ್ದು. ಅವರ ಅಭಯ ಹಸ್ತ ನಮ್ಮ ಮಸ್ತಕದ ಮೇಲೆ ಸದಾವಿರಾಜಿಸುತ್ತಿತ್ತು ನಾವು ಅಲ್ಲಿಗೆ ಬಂದೆವು. ಕಾಕತಾಲೀಯ ನ್ಯಾಯ ಕಾಯ್ದಿತ್ತು ಅಲ್ಲಿಯ ಜನ ಪಾಯಿಸದ ಕಡಾವಿಗೆಯನ್ನ ಆಚೆಯದಡಕ್ಕೆ ಸಾಗಿಸಬೇಕಾಗಿತ್ತು ಸಮಯ ಕೂಡಿ ಹೋಯಿತು. ನಮ್ಮೆಲ್ಲ ಬಟ್ಟೆ–ಬರೆಗಳನ್ನು ಭೀಮಸೇನನ ಕಾವಲಿನಲ್ಲಿ ಕಡಾವಿಗೆಯಲ್ಲಿಟ್ಟೆವ. ನಾವೂ ಆ ಹಳ್ಳಿಯ ಗಟ್ಟಿಗರ ಜೋತೆಗೆ ಈಸು ಬಿದ್ದೆವು ಆ ಕಡಾವಿಗೆಯೇ ನಮಗೂ ಆಶ್ರಯವಾಯಿತು. ಶಿವಯೋಗಿಗಳ ಅಭಯಹಸ್ತದಿಂದ ಸುರಕ್ಷಿತವಾಗಿ ಬಂದು ದಂಡಿಯನ್ನು ತಲುಪಿದೆವು

ಅಂತೂ ಕೊನೆಗೊಮ್ಮೆ ಕುತ್ತ ದಾಟಿತು. ಎಲ್ಲೆಡೆಗೂ ಹುದುಲು. ಮೋಟಾರ್‌ಸರ್ವಿಸ್ ಇನ್ನು ಪ್ರಾರಂಭವಾಗಿರಲಿಲ್ಲ. ನಡೆದುಕೊಂಡೇಹೋಗಬೇಕು ಅಲ್ಲಿ ನಮಗೆ ಇದ್ದದ್ದು ಎರಡು ಮಾರ್ಗ. ಇಂಡಿಗೆ ಹೋಗಿ ರೈಲು ಹಿಡಿಯಬೇಕು ; ಇಲ್ಲವೆ ಮಿಂಚಿನಾಳಕ್ಕೆ, ಆದರೆ ಮಿಂಚಿನಾಳವು ಇಂಡಿಯಕ್ಕಿಂತ ಸಮೀಪವೆಂಬುದನ್ನು ಅಲ್ಲಿಯ ಮೈಲುಗಲ್ಲು ತಿಳಿಸಿತು. ಇದರಿಂದ ಎರಡು ರೀತಿಯ ಲಾಭ, ಒಂದು ನಡೆಯುವ ಶ್ರಮದ ಉಳಿತಾಯ, ಇನ್ನೊಂದು ಹಣದ ಉಳಿತಾಯ ಇದರಲ್ಲಿ ಮೊದಲನ್ಯ[illegible] ಮಹತ್ವವು ಹೆಚ್ಚಿದ್ದಿತು. ಏಕೆಂದರೆ ಮುನ್ನಾ ದಿನದ ದಣಿವು ಇನ್ನೂ ಆರಿರಲಿಲ್ಲ ಹೇಗೂ ದಾರಿ ಹಿಡಿದೆವು.

ಎಡವುತ್ತ, ಮುಗ್ಗುತ್ತ ಹೆಳವನ ಕುದುರೆ ಮುನ್ನಡೆಯಿತು ಈಗ ಒಂದು ರೀತಿಯ ಆನಂದ [illegible] ನಮ್ಮಲ್ಲಿ ಮೂರ್ತಿಮಂತಾಗಿ ಬಂದಿತ್ತು, ಕುತ್ತಿನಿಂದ ಪಾರಾಗಿದ್ದೆವು. ಶಿವಯೋಗಿಗಳ

266.4-9539



ದರ್ಶನ ಲಭಿಸಿತ್ತು. ಇದರಿಂದ ನಮ್ಮ ಮಾತಿನ ಕಾಣಿಕೆ ಬಿಚ್ಚಿ ಬಿಟ್ಟಿತ್ತು. ಮನಬಲ್ಲಂತೆ ಹರಟಿದೆವು. ನಕ್ಕೆವು, ಕೆಲೆದೆವು, ದಾರಿಯನ್ನು ಕ್ರಮಿಸಿದೆವು. ಸುಮಾರು ಮಿಂಚಿನಾಳು ನಾಲ್ಕು ಮೈಲು ದೂರಿರಬಹುದು ಸೂರ್ಯ ಹೊರಡುವ ಅವಸರದಲ್ಲಿದ್ದ ನಮ್ಮೊಡನೆ ಬರುವದಕ್ಕೆ ಅವನಿಗೆ ಇಷ್ಟವಿಲ್ಲ. ಅಲ್ಲಿಯೇ ಬದಿಯಲ್ಲಿ ಒಂದು ತೋಟ ಈ ತೋಟದಲ್ಲಿ ಊಟಮಾಡಿಕೊಂಡು ಹೋಗುವದು ಸಾಟ ಯೆನಿಸಿತು. ಆ ಪ್ರಕಾರ ಕವಲ್ದಾರಿ ಹಿಡಿದೆವು.

ನಾವೆಲ್ಲ ಅನು–ಭವಿಗಳು ದಾರಿಯ ಅರಿವಿಲ್ಲ ಬಲರಾಮನೆಂದೋ ಬೇಸಿಗೆಯಲ್ಲಿ ಕಂಡ ಜ್ಞಾಪಕ ಅದೇ ಒಂದು ಮಸಕಾದ ಚಿತ್ರ 'ನವರಂಗದ' ನೆನಪಾಯಿತು. ಕಲ್ಪನಾ ಸುಂದರಿ ಅಡಗೆ ಮನೆಯಿಂದ ಇಲ್ಲಿ ಗೈಯ್ದುಂದಳು. ಅದೇ ಸೌಂದರ್ಯ ದಾರಿ ಮಾಡಿತು ಮುಂದುವರಿದೆವು.

ನಮ್ಮ ಸತ್ವ ಪರೀಕ್ಷೆ ಇನ್ನೂ ಮುಗಿದಿರಲಿಲ್ಲ. ಬಂಗಾರ ಮೂಸೆಯಿಂದ ಹೊರಬಂದು ಅಪರಂಜಿಯಾಗಿರಲಿಲ್ಲ ಕವಲ್ದಾರಿ ಹಿಡಿದು ನಡೆದೆವು. ಅದೊಂದು ಇಕ್ಕಟಾದ ಮಾರ್ಗ ಬದಿಯಲ್ಲಿ ನಾರಂಜಿಯ ಬೆಳೆ ಒಡ್ಡಿನ ಜವುಳು ಮೇಲಕ್ಕೆದ್ದಿದೆ. ಎರೆಯ ನೆಲ. ಕೆಸರೇ ಕೆಸರು. ಕಾಲ್ಮರೆಯನ್ನು ಹಾಕಿದರೆ ನಡೆಯುವದಕ್ಕಾಗದು ತೆಗೆದರೆ ಮುಳ್ಳಿನ ಬಾಧೆ, ನಿಧಾನವಾಗಿ ಹೋಗೋಣವೆಂದರೆ ಸೂರ್ಯ ಹೊರಟೇ ನಿಂತಿದ್ದಾನೆ. ಹಾರಿ, ನೆಗೆದು, ಮುಳ್ಳು ತುಳಿದೆವು. ಬಂದು ತೋಟವನ್ನು ಸೇರಿದೆವು. ಮಾಲಿ ಮನೆಯವನಾದ ಪೇರಲಹಣ್ಣಿನ ಮೇಲೋಗರವಾಯಿತು. ಬುತ್ತಿಯ ಸವಿ ಇಮ್ಮಡಿಸಿತು. ಊಟ ತೀರಿತು. ಸೂರ್ಯ ಅಸ್ತಂಗತನಾದ.

ದೇಹಕ್ಕೆ ಜಾಡ್ಯ ಹೆಚ್ಚಾಯಿತು, ಆದರೇನು ? ಅದನ್ನೆಲ್ಲ ಲಕ್ಷಿಸುವಹಾಗಿರಲಿಲ್ಲ ಕೆಲವು ಅಂತರ ಕ್ರಮಿಸಿರಬಹುದು. ಸುತ್ತಲೂ ಕತ್ತಲೆಯ ಕವಿತೆ, ಮೇಲೆ ಆಕಾಶದಲ್ಲಿ ಮೋಡದ ಕವಿತ, ಎದುರಿಗೆ ಹಳ್ಳ, ಧರ್ಮ, ಬಲರಾಮರು ಮುಂದಾದರು. ಕೈಯಲ್ಲಿ ಹೊನ್ನೆಹುಳುವಿನಂತಹ ಟಾರ್ಚು ನಾನೇ ಹಿಂಗಾವಲಾದೆ, ಅರ್ಜುನನಿಂದ ಕೂಡಿಕೊಂಡು ಭೀಮ, ನಕುಲ–ಸಹದೇವರ ಬೆಂಗಾವಲಾದ, ಮಧ್ಯದಲ್ಲಿ ಏನೋ ಹತ್ತಾರು ಹೆಜ್ಜೆಗಳಲ್ಲಿ ದಾಟಿ ಹೋಗಬಹುದೆಂದು ನಮ್ಮ ಭಾವನೆ. ಆದರೆ ನಮ್ಮ ಭಾವನೆ ನಿಜವಾಗಿರುವದನ್ನು ಮೀರಿಸಲು ಸಮರ್ಥವಾಗಲಿಲ್ಲ, ಆದು ಹಾಗೆಯೇ ಮುಂದುವರಿಯಿತು. ಎರಡು ಬದಿಗೆ ಗಿಡಗಂಟೆಗಳಿಂದ ಕೂಡಿದ ಜುಡುಪು. ನಡುವೆ ಸೀಳುಮಾರ್ಗ. ಮಾರ್ಗ ತುಂಬ ಮೊಳದುದ್ದ ನೀರು, ನಡೆದೇ ನಡೆದೆವು ದಂಡೆ ಬರಲೇ ಒಲ್ಲದು. ದಾರಿ ತಪ್ಪಿದೆವೆ ? ಎಂದು ಭಯವಾಯಿತು, ಆದರೆ ಹಿಂದಿರುಗುವದೂ ಅಷ್ಟೇ ಕಠಿಣ ಕೆಲಸ. ಶಿವಯೋಗಿಯ ನೆನಪಾಯಿತು. ಮುಂದಡಿಯಿಟ್ಟೆವು. ಒಂದು ಮೈಲಿನಷ್ಟು ದಾರಿ ಕಳೆದುಹೋಯಿತು ಆ ಘನತರವಾದ ನೀರನ್ನು ದಾಟಿ ಹೊರಕ್ಕೆ ಬಂದೆವು. ಕಂಟಿಗಳು ಕಡಿಮೆಯಾದುವು ಬಯಲು ವಾತಾವರಣ ಸಿಕ್ಕಿತು.

ಮುಂದಿನ ದಾರಿಯ ಅನುಭವವಿಲ್ಲ ಯಾವ ದಿಕ್ಕಿಗೆ ಹೊರಡುತ್ತಿದ್ದೇವೆ ಎನ್ನುವದು ವಮ್ಮೋಮ್ಮೆ ಸ್ಮೃತಿಯಿಂದ ಜಾರಿ ಹೋಗುತ್ತಿತ್ತು. ಈಗಲೂ ನೆನೆಸಿಕೊಂಡಾಗ ಮೈ "ಝುಂ" ಎನ್ನುತ್ತದೆ ಆ

ಗಿಡಗಂಟಿಗಳ ಕಿಕ್ಕಿರಿತ "ಕಿರ್......." ಎಂದು ಅರಚುವ ಜಿಟ್ಟೆಗಳ ತಾರಸ್ವರ, ಕುಡರ್....ರೊಕ್
ರೊಕ್...... " ಎನ್ನುವ ಕಪ್ಪೆಗಳ ಕೂಗಾಟ· ಇವೆಲ್ಲ ಒಂದರ ವೇಲೆ ಒಂದು ಬರುತ್ತಿದ್ದವು. ಭಯಾ
ನಕತೆಯನ್ನು ಇನ್ನಷ್ಟು ಭೀಷಣ-ಸ್ವರೂಪಕ್ಕೆ ತರುತ್ತಿದ್ದವು, ಹೃದಯವನ್ನು ಬೆರಕು ತ್ತಿದ್ದವು.

ಇನ್ನೇನು ? ಬಯಲಿಗೆ ಬಂದಾಯಿತು ಮೈ-ಚಳಿ ಬಿಟ್ಟೆವು· ದೂರದಲ್ಲಿ ವಿಜಯಪೂರದ
ವಿದ್ಯುದ್ದೀಪಗಳ ಗುಂಪು ನಿರುಕಿಸುತ್ತಲೇ ಸಾಗಿದೆವು. ಅಲ್ಲಿಗೆ ಯಾವಾಗ ಮುಟ್ಟೇವು ಎನ್ನುವ ಕಾತರ
ಭಾವ ಧಾವಿಸುತ್ತಲೇ ಇದ್ದೆವು ಹಠಾತ್ತನೆ ಎಲ್ಲಿಂದಲೋ ಭಯಾನಕವಾಗಿ ಕುಯೋ ಎಂದು ಕೂಗಿ
ದಂತಾಯಿತು· ಅದಕ್ಕೆ ಮೇಳ ಕೂಡಿತು ಹತ್ತಾರು ಧ್ವನಿಗಳು ಚಿತ್ರ ವಿಚಿತ್ರವಾಗಿ ಬಂದು ಸೇರಿದವು
ಆ ದ್ವನಿಗಳಿಗೆ ಜನರ ಹುಯ್ಲಿನ ಸಪ್ಪಳವೂ ಕೂಡಿ ಕೊಂಡಿತು· ಗೆಳೆಯರ ಹೃದಯದ ಬಡಿತ ನಿಂತಿರ
ಬಹುದು ಗತಿಮಂದವಾಯಿತು. ಮಾತಾಡುವ ನಾಲಿಗೆ ಅಂಗಳವನಾಶ್ರಮಿಸಿತು. ನಾನು ಸ್ವಲ್ಪ ಹಿಂದಿದ್ದೆ
ಬಹುದಿನಗಳ ಅನುಭವ; ಸುಗ್ಗಿಯ ಸಮಯದಲ್ಲಿ ಇಂತಹ ಹತ್ತಾರನ್ನು ಎದುರಿಸಿದ್ದೆ ಭೀತನಾಗಲಿಲ್ಲ.
ಆ ದ್ವನಿಯನ್ನು ಸ್ಪಷ್ಟವಾಗಿ ಕೇಳಿದೆ. ಪರಿಚಯವಾಯಿತು ಅದಕ್ಕೆ ಪ್ರತಿಕಾರ ಬೇಕಾಯಿತು· ಗೆಳೆ
ಯರು ಮೂನ್ನಿನ ಧ್ವನಿಯನ್ನು ಮರೆಯುವಂತೆ ಗಟ್ಟಿಯಾಗಿ ಕೂಗಿದೆ· ಅವುಗಳ ಧ್ವನಿಗೆ ನಾನೇನೂ
ಸೋಲಲಿಲ್ಲ. ಇದರಿಂದ ಅವರಲ್ಲಿಯೂ ಒಂದು ರೀತಿಯ ಜಾಗ್ರತೆಯಾಯಿತು· ಅವರೂ ಆ ಉದ್ಯೋ
ಗಕ್ಕೆ ತೊಡಗಿದರು· ಆ ಮಿಕಗಳ ಕೂಗಾಟ ಕಡಿಮೆಯಾಯಿತು· ತರ್ಕದ ಕುದುರೆ ಓಡಿತು. ನರಿ
ತೋಳಗಳ ಧ್ವನಿಯ ನೆನಪಾಯ್ತು, ಗಹ ಗಹಿಸಿ ನಕ್ಕು ಬಿಟ್ಟೆವು.

ಮುನ್ನಿಡಿಯುತ್ತಿದ್ದಂತೆ ದಾರಿ ಕವಲೊಡೆಯಿತು ಯಾವದನ್ನಾಶ್ರಯಿಸಬೇಕೆಂಬುದು ಹೊಳೆಯ
ದಾಯಿತು. ಆಗ ಇನ್ನೇನೂ ಉಪಾಯವಿರಲಿಲ್ಲ· "ಮಹಾಜನೋಯೇನ ಗತಸ ಪಂಥಃ" ಎನ್ನುವದೇ
ಆಶ್ರಯವಾಯಿತು. ದೊಡ್ಡ ಮಾರ್ಗ ಹಿಡಿದೆವ. ಸ್ಮಶಾನವನ್ನು ಕಾಣುವ ಪ್ರಸಂಗಬಂದಿತ್ತು. ಮುಂದು
ವರಿದಿದ್ದರೆ ಹಳ್ಳವನ್ನು ಸೇರುತ್ತಿದ್ದೆವು· ಹಳ್ಳ ನಮಗಾಗಿ ಕಾಯ್ದಿತ್ತು ಆದರೆ· 'ಅಭಯಹಸ್ತ' ಜಾಗೃತ
ವಾಗಿತ್ತು ನಮಗಾಗಿ ಸುಮಾರಾಗಿ ಎರಡು ಫರ್ಲಾಂಗು ಗತಿಸಿರಬಹುದು. ಬದಿಯ ಹೊಲದಲ್ಲಿ
ಲಮಾಣಿಯರ ಒಂದು ಮೆಟ್ಟು· ಅವರಿಗೆ ಬೇಕಾಗಿತ್ತು ಸೇದುವದಕ್ಕೆ ಬೀಡಿ ನಮ್ಮ ಮಾತನ್ನು ಆಲ
ಸಿದರು· ಬೀಡಿಯನ್ನು ಯಾಚಿಸಿದರು· ಆದರೆ ನಾವಾರೂ ಆ ಅಮ್ಮನ ಉಪಾಸಕರಾಗಿರಲಿಲ್ಲ· ಇದರಿಂದ
ಅವರನ್ನು ನಿರಾಶರನ್ನಾಗಿ ಮಾಡಬೇಕಾಯಿತು. ಆದೇ ಕಾಲಕ್ಕೆ ಅವರಿಂದ ದಾರಿಯನ್ನು ಕೇಳಿದೆವು.
ಹಾಗೆ ಕೇಳಿದ್ದು ನಮ್ಮ ಸುದೈವವೇ ನಾವು ಹಿಡಿದದ್ದು ತಪ್ಪು ಮಾರ್ಗವಾಗಿತ್ತು. ನಮ್ಮನ್ನು ಕರೆದು
ಕೊಂಡು ತಮ್ಮ ಗುಡಿಸಲಿಗೆ ಬಂದರು. ಅಲ್ಲಿಯೇ ಒಂದು ಕಾಲ್ದಾರಿ ಅದನ್ನೇ ಹಿಡಿದು ನಡೆದ ಅವ
ರಲ್ಲೊಬ್ಬ ಮುಖ್ಯ ಬೀದಿಗೆ ತಲುಪಿಸಿದ· ಈಗಲೂ ಆ ಪ್ರಸಂಗ ನೆನಪಾಗುತ್ತದೆ· ಅವರಿಗೆ ಧನ್ಯ
ವಾದವುಗಳನ್ನು ಅರ್ಪಿಸುತ್ತೇನೆ· ಇಷ್ಟೂ ಬೇಡವೇ ಮನುಷ್ಯನಾದ ಮೇಲೆ? ಅವರು ತೋರಿಸಿದ
ಅದೇ ಮಾರ್ಗ ಮುಂದುವರಿದೆವು· ತಗ್ಗು ದಿನ್ನೆಗಳು ದಾಟಿದವು· ಅಡ್ಡ-ದಾರಿಗಳು ಸರಿದವು ದಾರಿ
ಕೊಂಡೊಯ್ದಿತು· ಪೂಲಿನ ಬಳಿ ಕೂಡಿಸಿತು· ಝುಗ್ಗನೆ ಬೆಳಕು ಪ್ರಜ್ವಲಿಸಿತು ನಿರುಕಿಸಿದೆವು· ಹೊಗೆ
ಬಂಡಿ ದೂರದಲ್ಲಿ ಬರುತ್ತಿದ್ದಿತು· ಇದರಿಂದಾಗಿ ನಮ್ಮ ಗತಿಯನ್ನು ಸ್ಪೀಡಿಸ (Speed) ಬೇಕಾಯಿತು



ಹೊನ್ನೆಹುಳದ ಟಾರ್ಚಿನ ಬೆಳಕು, ಫೂಲನ್ನು ದಾಟುವದರಲ್ಲಿದ್ದೆವು· ಇನ್ನೇನು ಕೊನೆಯಹಂತ ಕೈಯ
ಲ್ಲಿಯ ಟಾರ್ಚು ಒಮ್ಮೆಲೇ ಬಿದ್ದು ಹೋಯಿತು. ಆದೇ ಉಪಾಂತ್ಯದ ಕಂಬಿ; ಕೈಯಾಡಿಸಿ ನೋಡಿ
ದೆವು. (ಕತ್ತಲೆಯಲ್ಲಿ ಕಾಣುತ್ತಿರಲಿಲ್ಲ.) ಬಿದ್ದ ಸಪ್ಪಳಿನ ಜಾಡ ಹಿಡಿದು ಅರಸಿದೆವು. ಈಗ ನಾವು ನಿಂತದ್ದು
ರೈಲು ಹಳಿಯ ಮೇಲೆಯೆ ರೈಲಿನ ಅರ್ಭಟ ಹೇಳತೀರದು ಎದೆಯನ್ನೆ ತುಳಿದು ಹಾಕುವೆನೆನ್ನುವಂತೆ
ತೋರುತ್ತಿತ್ತು· ಇತ್ತ ಟಾರ್ಚಿಗಾಗಿ ಪೇಚಾಟ; ಅತ್ತ ಉಗಿಬಂಡಿಯ ಭರಭರಾಟ. ಇನ್ನೂ ಸ್ಟೇಶನ್ನು
ಒಂದು ಫರ್ಲಾಂಗ ತಿಕೀಟು ಪಡೆಯಬೇಕು. ಗಾಳದಲ್ಲಿ ಸಿಕ್ಕ ಮೀನಿನಂತೆ ಒದ್ದಾಡಿದೆವು· ಆ ಒದ್ದಾಟಕ್ಕೆ
ಟಾರ್ಚದೊರಕಿತು· ಆದರೆ ಕಾಜು ಒಡೆದುಹೋಗಿತ್ತು· ಒಳಗಿನ ಬಲ್ಬು ಎಲ್ಲಿಯೋ ಸಿಡಿದುಬಿದ್ದಿತ್ತು.
ಅದಕ್ಕಾಗಿ ಕಾಯುವಷ್ಟು ಅವಕಾಶವಿರಲಿಲ್ಲ· ಸಿಕ್ಕಷ್ಟನ್ನು ತೆಗೆದುಕೊಂಡು ಕಾಲಿಗೆ ಬುದ್ಧಿ ಹೇಳಿದೆವು
ಸ್ಟೇಶನ್ನನ್ನು ತಲುಪಿದೆವು·

ಓಡುತ್ತ ಓಡುತ್ತ ಹೋಗಿ ತಿಕೀಟನ್ನು ಪಡೆದೆ. ನಾನಿನ್ನೂ ತಿಕೀಟಿನ ಕಿಡಿಕಿಯ ಬಳಿಯಲ್ಲಿಯೇ
ಇದ್ದೆ, ಗಾಡಿ ಬಂದೇ ಬಿಟ್ಟಿತು ಗೆಳೆಯರು ಜಾಗ ರಿಝರ್ವಿಸಿದ್ದರು. ನನಗಾಗಿ ದಾರಿ ಕಾಯು
ತ್ತಿದ್ದರು· ಅದೇನು ದೊಡ್ಡನಿಲ್ದಾಣವೇ? ಕೇವಲ ಎರಡು ನಿಮಿಷಗಳದ್ದು. ಹೇಗೋ ಗಡಿಬಿಡಿ
ಯಿಂದ ಓಡಿ ಬಂದೆ ಹತ್ತುವದೇ ತಡ ಗಾಡಿ ಸಿಳ್ಳು ಹಾಕಿತು· ಚಕ್, ಬಕ್, ಧ್ವನಿ ಮಾಡಿತು.
ನಿಧಾನವಾಗಿ ನಡೆಯಿತು.

ಆಗ ನಮ್ಮ ಸ್ವರೂಪ ಹೇಳಲಾಸಲ್ಲ. ನೀರಿನಲ್ಲಿ ಹಾಯ್ದು ಬರುವಾಗ ತೆಗೆದ ಬಟ್ಟೆಗಳನ್ನು
ಧರಿಸಿಯೇ ಇರಲಿಲ್ಲ ಕೂದಲೆಲ್ಲ ಕೆದರಿದ್ದವು ಹಾಗೆಯೇ ಕೂಡ್ರುವದೆಂತು? ಈ ಬಟ್ಟೆಗಳನ್ನು ಧರಿಸಿ
ಕೊಂಡೆವು ಅವೆಲ್ಲ ತೊಯ್ದು ಹೋಗಿದ್ದುವು. ರಾಡಿಯಿಂದ ಮುಳುಗಿದ್ದವು· ಆದರೂ ಮೈ ಮುಚ್ಚಿ
ಕೊಳ್ಳುವದಕ್ಕಾಗಿ ಚಳಿಯನ್ನು ಸಹಿಸಬೇಕಾಯಿತು· ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಮೈಗೆ ಬಟ್ಟೆಬೇಕು
ಜುಟ್ಟಕ್ಕೆ ಎಣ್ಣೆ ಬೇಕು.

ಅಂತೂ ವಿಜಾಪುರಕ್ಕೆ ಬಂದು ತಲುಪಿದೆವು. ಹೊರಟ ವೇಳೆಯಾಗಿತ್ತು. ಆಗ ಈ ಎರಡು
ದಿನಗಳಲ್ಲಿ ಎಷ್ಟೋ ವಿಧದ ಕಷ್ಟ-ಸುಖಗಳನ್ನು ಅನುಭವಿಸಿದ್ದೆವು. ಶಿವಯೋಗಿಗಳ ಆಶೀರ್ವಾದವನ್ನು
ಪಡೆದುಕೊಂಡಿದ್ದೆವು· ಈ ಸನ್ನಿವೇಶವನ್ನು ಜೀವವಿರುವತನಕ ಎಂದೂ ಮರೆಯಲಾಸಲ್ಲ. ಗೆಳೆಯರ
ಬಳಗದ ಈ ಪ್ರವಾಸ ನಮ್ಮನ್ನು ಹತ್ತಿರ ಹತ್ತಿರದವರನ್ನಾಗಿಮಾಡಿತು· ಶಿವಯೋಗಿಗಳ 'ಅಭಯ
ಹಸ್ತ' ನಮ್ಮ ಮಸ್ತಕದ ಮೇಲಿರುವಾಗ ಯಾವದಕ್ಕೆ ಕೊರತೆ !

## ಮುಕ್ತಿಸೋಪಾನ.

ಸತ್ಯ ಸುಂದರ ಶಿವನ । ನಿತ್ಯ ಕರ್ಮಗಳಿಂದ । ತೊತ್ತಾಗಿ ಪೂಜಿಸುದೆ ಧರ್ಮ । ತೊತ್ತಾಗಿ ಪೂಜಿಪುದೆ ಧರ್ಮ । ದೃಷ್ಟದ ರೂಪ । ದುತ್ಪತ್ತಿಯಂಕುರದ ಕುರುಹು ॥ ೧ ॥

ಧರ್ಮದುತ್ಪತ್ತಿಯಲೆ । ನಿರ್ಮೂಲವಾಗಿಹವು । ನಿರ್ಮಿಸಿದ ಪಾಪಗಳು ಭವ್ಯ । ನಿರ್ಮಿಸಿದ ಪಾಪಗಳು ಭವ್ಯ । ಅಂಧಂತಮುವ್ರ । ನಿರ್ಮಲಜ್ಯೋತಿ ಕಿರಣದಲಿ ॥ ೨ ॥

ಪಾಪನಾಶನದಿಂದ । ರೂಪುಗೊಂಡಿತು ಬುದ್ಧಿ । ಈ ಪರಿ ವಿವೇಕ ವರ್ಧಿಸುತ । ಈ ಪರಿವಿವೇಕ ವರ್ಧಿಸುತ । ಚಿತ್ತವು ಶುದ್ಧಿ । ತಾಪೂರ್ಣಗೊಳ್ವುದಕೆ ಮುಂದೆ ॥ ೩ ॥

ಚಿತ್ತಶುದ್ಧಿಯ ಬಲದಿ । ಮಿಥ್ಯಸಂಸಾರದೊಳ । ನಿತಾದಿ ದೋಷಗಳೆ ತೋರಿ । ನಿತಾದ್ಯಿದೋಷಗಳೆ ತೋರಿ । ಸಾರಾಸಾರ । ಸತ್ಯಜ್ಞಾನವೆ ಬೆಳೆಯುತಿಹುದು ॥ ೪ ॥

ಸ್ವಾನುಭವ ಪರಿಪೂರ್ಣ । ಜ್ಞಾನ ಬೆಳದಿಹ ಮೇಲೆ । ತಾನೆ ವೈರಾಗ್ಯ ಬಲದಿಂದ । ತಾನೆ ವೈರಾಗ್ಯ ಬಲದಿಂದ । ಜೀವನದುದಾದ । ಸೀನ ಬಾವನೆಯ ತಳೆದಿಹನು ॥ ೫ ॥

ವಿರತಿಜ್ಞಾನಗಳಿಂತು । ಪರಿಪೂರ್ಣ ಬೆಳೆದವರಿಗೆ । ಪರಮಪದ ಮೋಕ್ಷದಲಿ ಮನವ । ಪರಮಪದ ಮೋಕ್ಷದಲಿ ಮನವ । ಪೇಕ್ಷೆಯನಲಿ । ಸ್ಥಿರತೆಯೊಳಗಿರಿಸಿ ನಿಲ್ಲುವದು ॥ ೬ ॥

ಹೀಗೆ ಮೋಕ್ಷಾಪೇಕ್ಷೆ । ಸಾಗಿ ಜೀವನದೊಳಗೆ । ನೀಗುವವು ಸರ್ವಕರ್ಮಗಳು । ನೀಗುವವು ಸರ್ವಕರ್ಮಗಳು । ತಮ್ಮಿಂತಾವೆ । ರಾಗದ್ವೇಷಾದಿ ಭೇದಗಳು ॥೭॥

ಅಳಿದ ಕರ್ಮಗಳಿಂದ । ತಿಳುವಳಿಕೆ ಹೆಚ್ಚುತಲಿ । ಉಳಿದು ಯೋಗಾಭ್ಯಾಸ ಸತತ । ಉಳಿದು ಯೋಗಾಭ್ಯಾಸ ಸತತ । ಜೀವನಿಗಿಂತು । ತಿಳಿಯಿದರ ಮರ್ಮವನುಭವದಿ ॥೮॥

ಯೋಗದಭ್ಯಾಸದಲಿ । ಭೋಗ ಸಂಸೃತಿಯಳಿದು । ದಾಗಿ ತಾನೇಕಾಗ್ರಚಿತ್ತ । ಆಗಿ ತಾನೇಕಾಗ್ರಚಿತ್ತ । ವಂತರ್ಮುಬದಿ । ಸಾಗುವದು ಬಾಹ್ಯಜಗತೊರೆದು ॥೯॥

ಚಿತ್ತನೇಕಾಗ್ರತೆಯೆ । ತತ್ವಮನ್ಯಾದಿಗಳ । ಮೊತ್ತವಾಕ್ಯಾರ್ಥಗಳ ನರಿಯೆ । ಮೊತ್ತವಾಕ್ಯಾರ್ಥಗಳ ನರಿಯೆ । ಮುಕ್ತನು ಜೀವ । ನಿತ್ಯತನ್ನರಿವಿನಲಿ ತಾನೆ ॥೧೦॥


ಎಲ್ಲ ಮಹವಾಕ್ಯಾರ್ಥ । ಬಲ್ಲ ಜೀವನೆ ಜ್ಞಾನಿ । ಎಲ್ಲಿ ಹೇಗಿದ್ದರವ ಮುಕ್ತ । ಎಲ್ಲಿ ಹೇಗಿದ್ದರವ ಮುಕ್ತ । ಬಾಲಕ ಪಶುವು । ಒಳ್ಳೆಮಥುನೋನ್ಮತ್ತನಂತೆ ॥೧೧॥

ಅರಿವೆ ತಾನಾರೆಂಬ । ಇರವೆ ಮೋಕ್ಷದಪ್ರಾಪ್ತಿ । ಸರಳ ಸೋಪಾನಗಳು ಮುಕ್ತ । ಸರಳ ಸೋಪಾನಗಳು ಮುಕ್ತ । ಮಾರ್ಗದಲಿಂತು । ಮೆರೆಯುವವು ಸಾಧಕನಿಗಿಲ್ಲಿ ॥೧೨॥

ಪಾ. ರಾ. ಪಾಟೀಲ

ಮುಖ್ಯ ಗುರುಗಳು–ಚೊಳಚಗುಡ್ಡ, ಕ. ಗ. ಮ. ಶಾಲೆ.

## ಉಗ್ರ ತಪಸ್ಸಾಧನೆಯಲ್ಲಿ



ಶ್ರೀ ಬಂಥನಾಳ ಶಿವಯೋಗೀಶ್ವರರು.

# ಅಕ್ಕ ಮಹಾದೇವಿಯವರು

## ಪಕ್ಷಿಗಳೊಡನೆ ಮಾತನಾಡಿದರೆಂಬುವದು ನಿಜವೇ ?

ಲೇಖಕರುಃ– ಶ್ರೀ ನಿ. ಪ್ರ. ನ್ಯಾಯಾಚಾರ್ಯ, ಕಾವ್ಯತೀರ್ಥಾದಿ ಬಿರುದಾಂಕಿತ ಪಂ. ಸಿದ್ಧರಾಮೇಶ್ವರ
ಕುಂಟೋಜಿ ಮಠ, ಸೋಲಾಪುರ.

ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ ? ನೀವು ಕಾಣಿರೆ. ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ ? ನೀವು ಕಾಣಿರೆ ? ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ ? ನೀವು ಕಾಣಿರೆ. ಕೊಳನ ತಡಿಗಾಡುವ ನವಿಲುಗಳಿರಾ, ನೀವು ಕಾಣಿರೆ ? ನೀವು ಕಾಣಿರೆ. ಚೆನ್ನಮಲ್ಲಿಕಾರ್ಜುನನೆಲ್ಲಿಹನೆಂದು ನೀವು ಹೇಳಿರೆ ? ನೀವು ಹೇಳಿರೆ.

ಈ ವಚನವನ್ನು ಓದಿದ ಕೂಡಲೆ ಇದರ ಅರ್ಥವು ಸಂಗತವೋ ಅಥವಾ ಅಸಂಗತವೋ ಎಂಬ ಸಂಶಯ ಹುಟ್ಟುತ್ತದೆ ಆದರೆ ಇಲ್ಲಿ ಕೆಳಗೆ ಕೊಟ್ಟ ಸಂದರ್ಭಗಳನ್ನು ಕಂಡಾಗ ಸಂಗತವಾದದ್ದೇ ನಿಜವೆಂಬುದನ್ನು ತಾವು ಕಾಣಬಹುದು.

ಅಕ್ಕ ಮಹಾದೇವಿಯವರು ದೇವರ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವದಕ್ಕೋಸ್ಕರ ಶ್ರೀಶೈಲದ ಕಡೆಗೆ ಹೊರಟಾಗ ದಾರಿಯಲ್ಲಿ ಪಶುಪಕ್ಷಿಗಳಿಗೆ, ಗಿಡಮರಗಳಿಗೆ, ಸಮಸ್ತ ಪ್ರಾಣಿಗಳಿಗೆ ದೇವರೆಲ್ಲಿದ್ದಾನೆಂಬುವದನ್ನು ಕೇಳುವ ಸಂದರ್ಭದಲ್ಲಿ ಹಾಡಿದ ವಚನವಿದು.

೧ಃ– ರಾಮಾಯಣ ಮಹಾಭಾರತಗಳಲ್ಲಿ ಪಕ್ಷಿಗಳೊಡನೆ ಮಾತನಾಡಿದ ಪ್ರಸಂಗಗಳು ಸಾಕಷ್ಟಿವೆ.

ಜಟಾಯು ಎಂಬ ಪಕ್ಷಿಯು ರಾಮನೊಡನೆ ಮಾತನಾಡಿತು. ಮಹಾಭಾರತ ಶಾಂತಿಪರ್ವದಲ್ಲಿ ಇಂದ್ರನು ಪಕ್ಷಿಯ ರೂಪ ತಾಳಿ ವಿದ್ಯಾರ್ಥಿಗಳಿಗೆ ಉಪದೇಶಿಸಿದನು.

೨ಃ– ರಾಜಾ ಶಿಬಿಚಕ್ರವರ್ತಿಯು ಒಂದು ಪಾರಿವಾಳದ ತೂಕದಷ್ಟು ತನ್ನ ತೊಡೆಯ ಮಾಂಸವನ್ನು ತೆಗೆದು ಗಿಡಗ ಪಕ್ಷಿಗೆ ಕೊಡುವಾಗ ಪಕ್ಷಿಗಳೊಡನೆ ಸಂಭಾಷಣೆ ಮಾಡಿದನು.

೩ಃ- ಪಾಂಡವರು ದ್ರೌಪತಿಯ ಕೂಡ ಸ್ವರ್ಗಕ್ಕೆ ಹೊರಟಾಗ ಸ್ವರ್ಗದ ವರೆಗೆ ನಾಯಿಯು ಒಂದೇ ಧರ್ಮರಾಜನನ್ನು ಹಿಂಬಾಲಿಸಿತು. ಸ್ವರ್ಗಕ್ಕೆ ಮುಟ್ಟಿದಾಗ ಇಂದ್ರನು ನಾಯಿಯೊಡನೆ ಸಂಭಾಷಣೆ ಮಾಡಿದನು.

೪ಃ- ವೈಶಂಪಾಯನೆಂಬ ಗಿಳಿಯು ಸಂಭಾಷಣೆ ಮಾಡಿದ ವಿಷಯ ಬಾಣಕಾದುಂಬರಿಯಲ್ಲಿ ಉಂಟು.

೫ಃ- ಮಾರ್ಕಂಡೇಯ ಪುರಾಣದಲ್ಲಿ ಭಾಂಡೀರ ಪಕ್ಷಿಯ ಮುಖಾಂತರ ಋಷಿಗಳಿಗೆ ಬ್ರಹ್ಮ ವಿಧೋಪದೇಶ ದೊರೆಯಿತು.

೬ಃ- "ತೈತೇರೇಯ ಉಪನಿಷತ್ತು" ಈ ಗ್ರಂಥದಲ್ಲಿ ತಿತಿರಿ ಎಂಬ ಪಕ್ಷಿಯು ಋಷಿಗಳಿಗೆ ಜ್ಞಾನೋಪದೇಶವನ್ನು ಮಾಡಿತು.

೭ಃ- ಗಜೇಂದ್ರಮುಕ್ತಿ ಪ್ರಕರಣದಲ್ಲಿ ಆನೆಯು ನೀರ ಕುಡಿಯಲಿಕ್ಕೆ ಸರೋವರಕ್ಕೆ ಹೋದಾಗ ಮೊಸಳೆಯು ಅದರ ಕಾಲುಹಿಡಿದು ಎಳೆಯುವಕಾಲದಲ್ಲಿ ಆನೆಯು ಕೃಷ್ಣಾ! ಕೃಷ್ಣಾ! ಎಂದು ಮೊರೆಯಿಟ್ಟಿತು. ಕೃಷ್ಣನು ಆ ತೊಂದರೆಯನ್ನು ಪರಿಹರಿಸಿದನು.

೮ಃ- ನೈಶಧಕಾವ್ಯದಲ್ಲಿ ನಳಮಹಾರಾಜನು ದಮಯಂತಿಯ ಸೌಂದರ್ಯದ ಬಗ್ಗೆ ಹಂಸಪಕ್ಷಿಗೆ ದೂತನನ್ನಾಗಿ ಕಳುಹಿಸಿ ಎಲ್ಲ ಸಂಗತಿಗಳನ್ನು ತಿಳಿದುಕೊಳ್ಳುತ್ತಿದ್ದನು.

೯ಃ- ಕೂರ್ಮಾವತಾರ, ಮಹಾ ಅವತಾರ, ಮಚ್ಛಾವತಾರ, ನೃಸಿಂಹ ಅವತಾರ ಇಷ್ಟು ಅವತಾರಗಳಲ್ಲಿ ಕೃಷ್ಣನು ಮಾತಾಡಿದನು.

೧೦ಃ- ತುಕಾರಾಮನ "ವೃಷವಲ್ಲೀವನಚರೇ ಸೋಯರೇ ಅಮಾ" ಈ ಅಭಂಗದಿಂದ ಪಕ್ಷಿಗಳೊಡನೆ ಆತನು ಮಾತನಾಡಿದ್ದು ಸ್ಪಷ್ಟವಾಗುತ್ತದೆ.

೧೧ಃ- ಜ್ಞಾನೇಶ್ವರನು ಕೋಣನ ಮುಖಾಂತರ ವೇದವನ್ನು ಓದಿಸಿದನು,

೧೨ಃ- ಕೆಂಭಾವಿಯ ಭೋಗಣ್ಣನು ಕೋಣನಬಾಯಿಯಿಂದ ವೇದವನ್ನು ನುಡಿಸಿದನು. ಈ ಸಂಗತಿಯನ್ನು ಶಿವಶರಣರ ಚರಿತ್ರೆಯಲ್ಲಿ ಕಾಣಬಹುದು.

೧೩ಃ- 'ವಿಕ್ರಮೋರವನಿ" ನಾಟಕದಲ್ಲಿ ಊರ್ವಸಿಯ ವೃತ್ತಾಂತವನ್ನು ಸಾರಂಗದ ಮುಖಾಂತರ ವಿಕ್ರಮನು ಕೇಳುತ್ತಿದ್ದನು.



೧೪ಃ- ರಾಮನು ಸೀತೆಯ ವೃತಾಂತವನ್ನು ಸಾರಂಗದ ಮುಖದಿಂದ ಕೇಳುತ್ತಿದ್ದನು.

೧೫ಃ- ಮೇಘದೂತಕಾವ್ಯದಲ್ಲಿ ಯಕ್ಷನು ಪತ್ನಿಗೆ ಮೇಘಗಳ ಮುಖಾಂತರ ಸಂದೇಶಗಳನ್ನು ಕಳಿಸುತ್ತಿದ್ದನು.

೧೬ಃ- ಶಂಕರಾಚಾರ್ಯರು ಮಂಡನ ಮಿಶ್ರನ ಊರಿಗೆ ಹೋದಾಗ ಗಿಳಿಯು ಮಂಡನ ಮಿಶ್ರನ ಮನೆಯು ಇದೇ ಎಂದು ಹೇಳಿತು.

೧೭ಃ- ಮಹಮ್ಮದ ಗಝುನಿಯು ಬೇಟೆಗೆ ಹೋದಾಗ ಪಕ್ಷಿಗಳ ಮತ್ತು ಗೂಗಿಗಳ ಸಂಭಾಷಣೆಯನ್ನು ಅರಿತು ಬೇಟೆಯೂಡುತ್ತಿದ್ದನು.

ಅಕ್ಕ ಮಹಾದೇವಿಯವರು ಪಕ್ಷಿಗಳೊಡನೆ ಸಂಭಾಷಣೆ ಮಾಡುತ್ತಿದ್ದರೆಂಬುವದು ಮೇಲಿನ ಎಲ್ಲ ವಿವಣೆಗಳಿಂದ ಸಿದ್ಧವಾಗುತ್ತದೆ,

ಮೇಲಿನ ವಚನಕ್ಕೆ ವಚನಾರ್ಥ ಮತ್ತು ಅಧ್ಯಾತ್ಮಿಕಾರ್ಥ ಇವೆರಡೂ ಇನ್ನೂ ವಿವರಿಸಿಲ್ಲ ಲೇಖ ಅಪೂರ್ಣವಿದೆ. ಪ್ರಸಂಗಾನುಸಾರ ವಿಸ್ತಾರವಾಗಿ ಬರೆಯಬಹುದು.



## ಭಕ್ತನ ಬೇಡಿಕೆ.

### ಕಂದ ಪದ್ಯ.

ಆಂದನಾಗಿಹ ನಾನು, ಇಂದು ನಯನನನಿತ್ತು,
ಅಂದ ರೂಪವನ ತೋರಿ, ಮಾಯಾ ಬಂಧನವ ಬಿಡಿಸಿ.
ನಿನ್ನಯ ಕಂದನ್ನ ಕರುಣಿಸಿ ಕಾಯೋ ಗುರುಯೋಗಿ.

ಆರು ನಾನೆಂಬುದನರಿಯೆ, ನಾನೀಗ ಮಾಯ ಮೋಹದಿ ಸಿಲುಕಿ
ಘಾಯದಿಂ ಬಳಲುವ, ತನಯಗೆ ತಾಯ ನೀನಾಗೆನ್ನ
ಕರುಣಿಸಿ ಕಾಯೋ ಗುರುಯೋಗಿ.

ಇಂತು ಇಹಲೋಕದಿ, ಚಿಂತಿಸುವೆ ನಿನ್ನನು,
ಮನವೆಂಬಂತಕನ ಬಳಿಯಲಿ ಸೈರಿಸೇ ನಾನೀಗ
ಕಂತು ಹರ ನೀನೆನ್ನ ಕರುಣಿಸಿ ಕಾಯೋ ಗುರುಯೋಗಿ.

ಈಶನಂತಿಯ ನೀನು, ಕೂಸಿನಂತಿಯ ನಾನು,
ಕೋಶ ಪರಿತ್ಯಜಿಸಿ, ಇಹ ಲೋಕದಾ ಪಾಶ ಪರಿಹರಿಸಿ,
ನಿನ್ನಯ ದಾಸನ್ನ ಕರುಣಿಸಿ ಕಾಯೋ ಗುರುಯೋಗಿ.

ಉರುಳುವೆನು ಚರಣದಲಿ ಕೊರಗುವೆನು ಮನದಲಿ,
ಮರುಳ ಮಾನವ, ನಿನ್ನರಿಯಿದಾ ಕಂದಗೆ ಅರುಹಿ
ತೊರಯದೇ ಕರುಣಿಸಿ ಕಾಯೋ ಗುರುಯೋಗಿ.

ಊರು ಅರಿಯದೆ ನಾನು, ದಾರಿ ಕಾಣದೆ ನಾನು ಘೋರ
ಬವಣೆಯೊಳು ಪೊಕ್ಕು, ಬಳಲುವಾತನಯಗೆ ಮಾರಹರ
ನೀನೆನ್ನ ಕರುಣಿಸಿ ಕಾಯೋ ಗುರುಯೋಗಿ.

ಖಣಿಯು ನಾನಿನಗಾಗಿ, ಫಣಿಗೆ ಭಸಿತವ ಕೊಟ್ಟು
ಅಕ್ಷಯ ಮಣಿಸುದಂತೆನ್ನ ಕರುಣಿಸಿಕಾಯೋ
ಗುರುಯೋಗಿ.

ತಮ್ಮ ತಪೋಬಲದಿಂದ ಶಿಶುವಿಗೆ ಪ್ರಾಣದಾನ ಮಾಡಿದ



ಶ್ರೀ ಬಂಥನಾಳ ಶಿವಯೋಗೀಶ್ವರರು.

ಎಷ್ಟು ಕೋಶವ ತೊರಿದೆ, ಕಷ್ಟ ಜನ್ಮವ ತಾಳ್ದೆ,
ಇಷ್ಟು ಕಾಲವ ಕಳೆದೆ, ಶಿಷ್ಟಪರಿಪಾಲನೆ ನಿನ್ನಯ
ದುಷ್ಟ ಕಂದನ್ನ ಕರುಣಿಸಿ ಕಾಯೋ ಗುರುಯೋಗಿ

ಏಳು ಸದ್ಗುರುನಾಥ, ಏಳು ಭಕ್ತರ ದಾತ.
ಏಳು ಮುಕ್ತಿದಾಯಕಾ, ಏಳು ನಿನ್ನಯ ಅಡಿದಾವರೆಗೆರುಗುವ
ತನಯಗೆ ನಾಳೆ ಎನ್ನದಲೆ ಕರುಣಿಸಿ ಕಾಯೋ ಗುರುಯೋಗಿ.

ಐದು ಶಬ್ದದೊಳಿರ್ಪ "ಶಿವಾಯ ನಮಃ" ನಾಮವನು
ಮೂರೈದು ಲಕ್ಷ ಜಪವಗೈದೆ, ಸಹಿಸಲಾರೆನು ಮನದ ದುರ್ಗುಣವ
ದಹಿಸೆನ್ನ ಕರುಣಿಸಿ ಕಾಯೋ ಗುರುಯೋಗಿ.

ಒಂದಿಸುವೆ ಶ್ರೀ ಗುರುವೆ ವಸುಧಿಯೊಳು ನಾನಿಂದು
ಚಂದ್ರ ಮೌಳಿಯನರಿತ, ಮಂದಾರ ಪ್ರೀಯಕರ ಪರಮೇಶ
ನೀನೆನ್ನ ಕರುಣಿಸಿ ಕಾಯೋ ಗುರುಯೋಗಿ.

ಓಂಕಾರನಾದೀಶ, ಕಿಂಕರನ ಕಾಯೀಶ,
ಝೇಂಕಾರ ನಾದಿರಿಸಿ ಅಂಹಕಾರವನು ತೊರೆಯಿಸಿ,
ಬಿಂದಾಂಕ ಗುಡುವೆನ್ನ ಕರುಣಿಸಿ ಕಾಯೋ ಗುರುಯೋಗಿ.

ಔದುಂಬರ ಪುಷ್ಪದಂತಿರ್ಪ, ಆಹುದಹುದು ಗುರುದೇವಾ
ಆವಧೈರ್ಯ ಮಾನವನಿಗೆ ಅರುಣ ತೇಜವನಿತ್ತು
ಕರುಣಿಸಿ ಕಾಯೋ ಗುರುಯೋಗಿ.

ಅಂಬುಜ ನಾಭೀಶ, ಬ್ರಹ್ಮಜ ನೀನಿಶ ಸಾಮ್ಯಜ್ಞಾನೇಶ
ಸೃಷ್ಟಿಜಲಯವಾಶ, ತತ್ವಮುಸೀ ಅರ್ಥೀಶಾ ಮನದಿಷ್ಟ ಪ್ರೇಮುದಿ
ಕರುಣಿಸಿ ಕಾಯೋ ಗುರುಯೋಗಿ.

ಅಃ ಗುರು ನಿಜಕಾಣು, ಅಃ ಗುರುವೆ ಭಜಿಸುವೆನು,
ಅಃ ನಿನ್ನ ಪಾದ ಪಂಕಜವ ತೋರು, ಅಃ ನಿನ್ನ ಅಡಿದಾವರೆಯೊಳು
ಆಡುವ, ಅಲರುಣಿ ಭಕ್ತನ ಕರುಣಿಸಿ ಕಾಯೋ ಗುರುಯೋಗಿ.

## ಪ್ರಪಂಚಿಗರಿಗೆ ಪಾರಮಾರ್ಥವು ಅಸಾಧ್ಯವೇ ?

ಲೇಖಕ:– ಬಳವಂತ ಧಡೂತಿ, ಮಹಾಲಿಂಗಪೂರ.

ಹಲಕೆಲವರು ಪ್ರಪಂಚದಿಂದ ಪಾರಮಾರ್ಥಸಾಧನೆಯು ಅಸಾಧ್ಯ, ಅದು ಬಹು ಕಷ್ಟದಾಯಕವಾದದ್ದು. ಪ್ರಪಂಚ ತ್ಯಾಗಮಾಡಿ ಪಾರಮಾರ್ಥವನ್ನು ಸಾಧಿಸಬಹುದು. ಆದರೆ ಆ ಮಹನೀಯರು ಅಜ್ಞಾನಸಾಗರದಲ್ಲಿ ಮುಳುಗಿದ್ದಾರೆ. ಅವರನ್ನು ಅಜ್ಞಾನಸಾಗರದಿಂದ ಹೊರತೆಗೆಯಲು ಜಗದುದ್ಧಾರ ಮಾಡುವಗೋಸುಗ ಆ ಜಗನ್ನಿಯಾಮಕನೇ ಮನುಷ್ಯರೂಪಿಯಾಗಿ ಬರಬೇಕಲ್ಲದೆ ಅನ್ಯರಿಂದ ಅಶಕ್ಯ.

ಮಹನೀಯರೆ, ಶ್ರೀ ಬಸವಾದಿ ಪ್ರಮಥರ ಎಷ್ಟೋ ಚರಿತ್ರಗಳಿವೆ. ಅವುಗಳಲ್ಲಿ ಒಂದನ್ನಾದರೂ ಓದಲಿಲ್ಲವೆ? ಅಥವಾ ಜ್ಞಾನಿಗಳಿಂದಾದರೂ ಕಿವಿಯಿಂದಾ ಕೇಳಿಲ್ಲವೆ? ಶ್ರೀ ಬಸವಾದಿ ಪ್ರಮಥರು ಮತ್ತು ಅರವತ್ತುಮೂರು ಪ್ರರಾತನರು ಯಾರು? ಅವರಿಗೆ ಹೆಂಡಂದಿರಿದ್ದಿಲ್ಲವೆ? ಅಷ್ಟೇ ಏಕೆ; ಶ್ರೀ ಬಸವೇಶ್ವರನು ಕಲ್ಯಾಣಪಟ್ಟಣದಲ್ಲಿ ಬಿಜ್ಜಳೇಶ್ವರನ ಮುಖ್ಯಮಂತ್ರಿಯಾಗಿ ಇಡೀ ರಾಜ್ಯದ ರಾಜ್ಯಭಾರ ವಹಿಸುತ್ತಾ ದಿನಾಲು ಎಷ್ಟೋ ಜಂಗಮರಿಗೆ ಅನ್ನ ಸಂತರ್ಪಣೆ ಮಾಡಿಸುತ್ತಿದ್ದನಲ್ಲದೆ, ಅನುಭವ ಮಂಟಪ ಸ್ಥಾಪಿಸಿ, ಅಲ್ಲಿ ಎಲ್ಲ ಶಿವಶರಣರು ನೆರೆದು ಅನುಭವಸಿದ್ಧವಾದ ವಚನಗಳನ್ನು ತಯಾರಿಸಲಿಲ್ಲವೇ? ಯಾಕೆ? ಬಿಜ್ಜಳರಾಜನು ಬಸವೇಶನನ್ನು ರಾಜ್ಯದಲ್ಲಿಯ ವ್ಯವಸ್ಥೆ, ತನಿಖೆ, ಭಾಂಡಾರ ಮುಂತಾದವುಗಳ ಲೆಕ್ಕಪತ್ರಗಳನ್ನು ವಿಚಾರಿಸುತ್ತಿರಲಿಲ್ಲವೆಂದು ತಿಳಿದಿರುವಿರಾ? ಛೇ; ಅವೆಲ್ಲಾ ವ್ಯಾವಹಾರಿಕ ಚರಖಗಳು ತಿರುಗತಕ್ಕವುಗಳೇ. ಆದರೆ ರಾಜ್ಯದಲ್ಲಿ ರಾಜಸೂತ್ರ, ಅನುಭವ ಮಂಟಪದಲ್ಲಿ ಅನುಭವಸೂತ್ರ. ಮನೆಯಲ್ಲಿ ಪ್ರಪಂಚದ ಇವೆಲ್ಲಾ ವ್ಯವಹಾರಗಳಲ್ಲಿದ್ದರೂ ತಾನೇ ಜಗತ್ಕರ್ತನಾದ ಈಶ್ವರನೆಂದು ಪೂರ್ಣಜ್ಞಾನಿಯಾಗಿ, ಎಲ್ಲವುಗಳನ್ನೂ ಸಾಗಿಸುತ್ತಾ ನಡೆದಿದ್ದನು. ಅವರಂಥ ದಿವ್ಯ ವ್ಯಕ್ತಿತ್ವ. ಅಮೋಘ ಸಾಹಸ, ಅನುಭವ ಮಂಟಪದಿಂದ ಹೊರಟ ಅವರ ವಚನಗಳು, ಚಿನ್ನದ ಪಟದಲ್ಲಿ ಕೆತ್ತಿನಿರ್ಮಿಸಿದ ಸುವರ್ಣಾಕ್ಷರಗಳಂತೆ ಈಗಲೂ ಮನಷ್ಯಜನಾಂಗದ ಹೃದಯಪಟಲವನ್ನು ಹೊಡೆದೆಬ್ಬಿಸುತ್ತಿವೆ. ಕಾಣಲಾರೆವು! ಕೇಳಲಾರೆವು! ಅಮಾದರಿಯ ವ್ಯಕ್ತಿತ್ವ. ಈ ಮುಂದೆಯೂ ಈಗಲೂ.

ಭಕ್ತ ಗೋರಾಕುಂಬಾರನು ಯಾವಪ್ರಕಾರ ಏಕನಿಷ್ಠವಾದ ಭಕ್ತಿಯಿಂದಾ ಮುಕ್ತಿ ಪಡೆದನು? ಸಂತ ತುಕಾರಾಮರಿಗೇನು ಸಂಸಾರವಿದ್ದಿಲ್ಲವೇ? ಇಂಥ ಸತ್ಪುರುಷರು ಪ್ರಪಂಚಮಾಡಿ ಪಾರಮಾರ್ಥಗೆಲಿದು ಆ ಮುಕ್ತಾಂಗನೆಯನ್ನು ವರಿಸಿದ್ದಾರೆ ಇನ್ನೂ ಇಂಥ ಉದಾಹರಣೆಗಳು ನಿಮಗೆ ಬೇಕೆ?



ಯಾಕೆ ಕ್ಯಾವಿಯ ಬಟ್ಟೆಯುಟ್ಟರೇನು ಖಾದಿ ಧರಿಸಿದರೇನು? ಸೂಟು ಬೂಟು ಹ್ಯಾಟುಗಳಿಂದ ವೇಷಧಾರಿಯಾದರೇನು? ಎಲ್ಲರಲ್ಲಿಯೂ ಅಖಂಡ ಸ್ವರೂಪವಾದ ಆ ಜ್ಞಾನ ಜ್ಯೋತಿ ಸದಾ ಬೆಳಗುತ್ತಲಿರುವದು. ( ಇಲ್ಲಿ ಬಟ್ಟೆಗಳಿಗೆ ಮಹತ್ವವಿಲ್ಲಾ )

ಇಡೀ ಮಾನವ ಜನಾಂಗಕ್ಕೇ ಸಾಮರ್ಥ್ಯವಿದೆ ಆ ಪರಮಾತ್ಮನನ್ನು ಕಂಡು ನಲಿಯುವದು. ಆದರೆ ಸಕಾಮು ಕರ್ಮದಿಂದಾ ನೀವು ವರ್ತಿಸುತ್ತಿದ್ದಲ್ಲಿ ನಿಮಗೆ ಕಂಡುಬರುವದಿಲ್ಲಾ. ನಿಷ್ಕಾಮ ಕರ್ಮದಿಂದಾ ಲಿಂಗ ನಿಷ್ಠಾ ಭಕ್ತಿಯಿಂದ ಬೇಡಿದವರಿಗೆ ಬೇಡಿದ್ದನ್ನು ಕೊಡುವ ಶಕ್ತಿ ಶ್ರೀ ಗಣಂಗಳಪ್ಪನವರಿಗೆ ದೊರೆತದ್ದು, ನೀವು ಕೇಳಿರುವಿರಷ್ಟೇ.

ಮುಳಗುಂದ ಗ್ರಾಮದಲ್ಲಿ ಶ್ರೀ ಬಾಲಲೀಲಾ–ಮಹಂತ ಶಿವಯೋಗಿಗಳ ಸೇವೆಯನ್ನು ಅತಿ ಭಕ್ತಿಯಿಂದಾ ಮಾಡಿದ ಗಣಂಗಳಪ್ಪ ಶೆಟ್ಟರು ಕಡು ಬಡವರಿದ್ದು, ಶೆಟ್ಟಿಯ ಲಿಂಗ ನಿಷ್ಠಾ ಭಕ್ತಿಯನ್ನು ಕಂಡು ಶಿವಯೋಗಿಗಳು ನಿನ್ನಲ್ಲಿ ಶಿವನ ಕೃಪೆ ಮೂಡಲಿ! ಬೇಡಿದವರಿಗೆ ಬೇಡಿದ್ದನ್ನು ಕೊಡುವ ಪರುಷ ಹಸ್ತವಾಗಲಿ ನಿನ್ನ ಆ ಹಸ್ತಾ ಎಂದು ಆಶೀರ್ವದಿಸಿದರು. ಸತ್ಯ ಶಿವಶರಣದ ಲೀಲೆ ಮಂದ ಮತಿಗಳಿಗೆ ಹೇಗೆ ತಿಳಿದೀತು? ಆ ಶುಭಾಶೀರ್ವಾದ ದೊರೆತಂದಿನಿಂದ ಶೆಟ್ಟಿಯು ತನ್ನ ಮನೆಯ ಮುಂದೆ ಒಂದು ಚಿಕ್ಕ ಕಿರಾಣಿ ಅಂಗಡಿ ಸ್ಥಾಪಿಸಿದನು ಆದರೆ ಆ ಅಂಗಡಿಯಲ್ಲಿ ಖಾಲೀ ಚೀಲ ಖಾಲೀ ಡಬ್ಬೆಗಳಿಗೇನೂ ಬಡತನವಿರಲಿಲ್ಲಾ ಬೇಡಿದವರಿಗೆ ಬೇಡಿದ್ದು ದೊರೆಯುವದು ಎಂಬ ಬೋರ್ಡ ಮಾತ್ರ ಹಾಕಲ್ಪಟ್ಟಿತು, ಆ ಊರಲ್ಲಿಯ ಓರ್ವ ಜಮಿನ್ದಾರನು ಸಂನ್ಯಾಸಿಯ ಉಪದೇಶದಿಂದ ಈ ಶೆಟ್ಟಿಯ ತಲಿ ಕೆಟ್ಟಿರುವದೆಂದು ತಿಳಿದು, ಕುಹಕತನದಿಂದ ಅಂಗಡಿಗಳಲ್ಲಿಯೇ ದೊರೆಯದ ವಸ್ತು ಹೇಗೆ ಕೊಡುತ್ತಾನೋ ನೋಡುವಾ ಎಂದೆನ್ನುತ್ತಾ ಮನೆಗೆ ಹೋಗಿ. ವಿಚಾರಮಗ್ನನಾಗಿ ಕುಳಿತಿರಲು ಒಂದು ಕುಯುಕ್ತಿಯು ಶೋಚಲಾಗಿ, ತನ್ನ ಆಳಿಗೆ ಆಶೆಟ್ಟಿಯ ಅಂಗಡಿಗೆ ಹೋಗಿ ನೂರು ಮಣಾ ಅಬಕಾರ ( ರಕ್ತ ಹಿರುವ ಹುಳ ) ತೆಗೆದುಕೊಂಡುಬಾ ಮತ್ತು ಅವನೆಷ್ಟು ಹಣಾ ಕೇಳಿದರೂ ಕೊಡು ಎಂದು ಹೇಳಿಕಳಿಸಿದನು. ಆ ಆಳು ಶೆಟ್ಟಿಯ ಅಂಗಡಿಗೆ ಹೋಗಿ ಕೇಳಲಾಗಿ ಶಿವಯೋಗಿಗಳ ಪರಾತ್ಪರ ಶಕ್ತಿಯನ್ನು ಪಡೆದ ಶೆಟ್ಟಿಯು ಹೃದಯಲಿಂಗ ಮಾನಸ ಪೂಜೆ ಮಾಡಿಕೊಂಡು ಒಳಗೆ ಹೋಗಿ ನೋಡಲಾಗಿ ದನ ಕಟ್ಟುವ ಧಾಬೆಯಲ್ಲಿ ಅವನಿಗೆ ಸಾಮಾನು ಬೇಕಿತ್ತೋ ಅಷ್ಟು (ನೂರುಮಣಾ ಅಬಕಾರ) ತೂಕಮಾಡಿಕೊಟ್ಟು, ಇಪ್ಪತ್ತುನಾಲ್ಕು ರೂಪಾಯಿ ತೆಗೆದುಕೊಂಡು ಕಳಿಸಿದನು. ಇದರಿಂದ ಆ ಜಮಿನ್ದಾರನ ಮನೆಯಲ್ಲಿ ಅಬಕಾರದ ಹುತ್ತುಗಳೆ ಹುತ್ತುಗಳಾದವು ಅಬಕಾರದ ಕಾಟ ಹೆಚ್ಚಾಯಿತು. ಅದನ್ನು ತಾಳಲಾರದೆ ಆ ಜಮಿನ್ದಾರನು ಶ್ರೀಗಳವರ ಹತ್ತಿರ ಬಂದು ಅಂಗಲಾಚಿ ಬೇಡಿಕೊಳ್ಳಲಾಗಿ, ಪುನ: ಶ್ರೀಗಳವರ ಕೃಪೆಯಿಂದ ಅಬಕಾರದ ಕಾಟದಿಂದ ಅವನು ಮುಕ್ತನಾದನು

ನಿಷ್ಕಾಮ ಕರ್ಮದಿಂದ ಈ ಪ್ರಪಂಚವನ್ನೇ ಗೆಲಿಯಬಹುದು. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಮಾನವನಿಗೆ ನಿಷ್ಕಾಮ ಕರ್ಮದಿಂದ ಮುಕ್ತಿ ಉಂಟು. ಎಂದು ಹೇಳಿದ್ದಾನಲ್ಲವೆ?

ಆದುದರಿಂದ ನಿಷ್ಕಾಮ ಕರ್ಮವೆಂದರೇನು ? ಯಾವ ಪ್ರಕಾರವಾದಂಥ ಕರ್ಮವದು? ಎಂಬುದನ್ನು ಜ್ಞಾನಿಗಳಿಂದ ಶ್ರವಣ ಮಾಡಿ ಮಾಯೆಯನ್ನು ಗೆಲಿಯಿರಿ, ಗುರು ಇಲ್ಲದೆ ಮುಕ್ತಿ ಇಲ್ಲ. ಸದಮಲ ಜ್ಞಾನವೆಂಬ ಪಟ್ಟಣಕ್ಕೆ ಹೋಗಲು ಕೈದೀವಿಗೆಯಂತೆ ದಾರಿಯುದ್ದಕ್ಕೂ ಪ್ರಕಾಶವನ್ನು ದಯಪಾಲಿಸುವಂಥ ಗುರುಬೇಕು. ಗುರು ಹೇಳಿದ ವಚನ ಮೀರದಂಥ ಶಿಷ್ಯನೂ ಬೇಕು. ನಿಷ್ಕಾಮ ಕರ್ಮಸಾಧನೆಯ ಒಂದು ಉದಾಹರಣೆಯು ಮಹಾಜ್ಞಾನಿಗಳೂ ಕವಿಗಳೂ ಆದಂಥ ಮಹಾಲಿಂಗರಂಗರ ಅನುಭವಾಮೃತವೆಂಬ ಗ್ರಂಥದ ನಾಲ್ಕನೆ ಅಧ್ಯಾಯದಲ್ಲಿಯ "ತತ್ವದ ಶೋಧನೆ"ಯಲ್ಲಿದ್ದ ಈ ಕೆಳಗಿನ ಪದ್ಯವನ್ನು ಬರೆಯಲಾಗಿದೆ.

ನೀಲರುಚಿಯಭ್ರದಲಿ ದೀಪ । ಜ್ವಾಲೆಯೊಳು ಕಾಳಿಕೆಯ
ತೆರದಿ । ಥಡಾಳ ಚಂದ್ರನ ಕಾಂತಿಯಲಿ ಕಳಂಕು ತೋರ್ಪಂತೆ ॥
ಕೀಳೆನಿಪ ಪುಸಿಮಾಯೆ ಬ್ರಹ್ಮದೊಳಾಳಿ ಹೊಕ್ಕಾಶ್ರೈಸಿ ಮೆರೆ
ವುದು । ಹೇಳಲೇನದು ಮಿಥ್ಯತಥ್ಯದವೋಲು ತೋರುವದು ॥

ಮೇಲಿನ ಪದ್ಯದ ತತ್ವಸಾರ ನೋಡಲಾಗಿ ಆವ ಮಾಯೆಯು ಬಹು ಕೀಳು, ಹೇಯವಾದದ್ದೂ ಎಂದು ತಿಳಿಯುತ್ತೇವೆಯೋ ಆ ಶಕ್ತಿಯನ್ನು ನಿಷ್ಕಾಮ ಕರ್ಮದಿಂದ ಗೆಲಿಯಿರಿ. ಆ ಪ್ರಕೃರ್ತಿ ದೇವಿಯೇ ನಿನ್ನನ್ನು ಶುದ್ಧಾತ್ಮನನ್ನಾಗಿ ಮಾರ್ಪಡಿಸಿ, ಮುಕ್ತಾಂಗನೆಯ ಹತ್ತಿರ ಕಳಿಸುತ್ತಾಳೆ. ಒಂದು ಅತ್ಯಮೋಘವಾದಂಥ ವಿಶಿಷ್ಟ ಶಕ್ತಿಯು ಆ ಪ್ರಕೃರ್ತಿದೇವಿಯಲ್ಲಿದೆ. ಆ ಆದಿಮಾಯೆಯನ್ನು ವಲಿಸುವ ಒಂದು ದಿವ್ಯಮಾದರಿ ಸಾಧನೆ (ತತ್ವವು) ನಮ್ಮ ವೀರಶೈವರಲ್ಲಿ ಕಾಣುವೆವಲ್ಲದೆ, ಅನ್ಯರಲ್ಲಿ ಔಷಧಕ್ಕೂ ಕೂಡ ದೊರೆಯಲಾರದಂಥ ಶ್ರೇಷ್ಠ ತತ್ವವದು ! ಆದ್ದರಿಂದಲೇ ನಮ್ಮ ವೀರಶೈವ ಮತಕ್ಕೆ ಶಕ್ತಿವಿಶಿಷ್ಟಾದ್ವೈತ ಮಾರ್ಗದವರು ಅಂತಾ ಪುರಾಣಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ಹೇಳಲ್ಪಟ್ಟದೆ. ಈ ತತ್ವವು ಮುಕ್ತಿಮಾರ್ಗಕ್ಕೆ ಅತಿ ಸಮೀಪವಾದ ಸೋಪಾನವಾಗಿದೆ. ಇಂಥ ತತ್ವಗಳು ಇದೇ ಮಾನವ ಜನಾಂಗಕ್ಕೆ ಪ್ರಪಂಚದಲ್ಲಿದ್ದು ಅತ್ಯುಚ್ಚಮಟ್ಟದ ಸಂಸಾರ ಸಾಗಿಸಿ ಪಾರಮಾರ್ಥ ಗೆಲಿಯಿರಿ ಅಂತಾ ಒತ್ತಿ ಒತ್ತಿ ಹೇಳುತ್ತಿವೆ

" ಈಶ್ವರ ನಿರ್ಮಿತವಾವ ಈ ಜಗತ್ತೂ ಸತ್ಯ. ಈಶ್ವರನೂ ಸತ್ಯ. "


### ತ್ರಿಪದಿ

ಬಾರ್ಮಗನೆ ಬಾರಿನೊಂದರ ।
ಘಳಿಗೆ ತಡಮಾಡದೆ ನೋಡಾ ನಿನ್ನಂತರ್ದೇಹ ॥
ಸಲೆ ಹೋರಾಡುತ್ತಿಹುವು ಸದಾ ।
ಅಂತರವಯವಗಳ್ನಾಳಿಕೆ ಮುಂತಾದವುಗಳ್ ॥೧॥



ಬಹಿರಂಗ ಪ್ರಪಂಚದವೊಲೆ ।
ದೆಗೆಟ್ಟು ಒದ್ದಾಡುತ್ತಿಹವು ಸದಾ ॥
ಬ್ರಹ್ಮಾಂಡ ಸೂತ್ರವೇ ಅಲ್ಲಿರುವುದು ।
ನೋಣ್ ಮಗನೆ ನೋಡು ನಿನ್ನ ಅಂತರ್ದೇಶೆಯ ॥೨॥

ಆದ್ದರಿಂದ ಈ ಪ್ರಪಂಚವೆಂಬ ನಾಟಕ ಕಂಪನಿಯಲ್ಲಿ ತಾನು ವಹಿಸುತ್ತೇನೆಂದರಿದು ತನ್ನ ಪಾತ್ರವನ್ನು ಶ್ಲಾಘನೀಯವಾಗಿ ದಕ್ಷತೆಯಿಂದ ನಿರ್ವಹಿಸಬೇಕಲ್ಲವೇ ? ಪಾತ್ರ ಮುಗಿದ ಬಳಿಕ ತಾನು ಯಾರು ? ಎಂಬದನ್ನು ತಿಳಿದರೆ ಸಾಕು. ಅಂದಮೇಲೆ ಪ್ರಪಂಚಿಗರಿಗೆ ಪಾರಮಾರ್ಥವು ಅಸಾಧ್ಯವೇನಿಲ್ಲ. ಸಾಧ್ಯವಿದೆ. ಆದರೆ ಸ್ವಲ್ಪ ಕಷ್ಟಪಡಬೇಕು. ಕಷ್ಟಂತಿ ಫಲಂ !



ಶ್ರೀ ಮ. ನಿ. ಪ್ರ. ಸ್ವ. ಸಂಗನಬಸವ ಶಿವಯೋಗಿಗಳವರ

## ವಿದ್ಯಾ ಭಾಂಡಾರ

ಲೇಖಕರು:– ಶ್ರೀಯುತ ಭೀ. ಶ್ರೀ. ಕುಲಕರ್ಣಿ, ವಿಜಾಪುರ.

ಬೊಕ್ಕಸ ಭಾಂಡಾರ ಬರಿದಾಗಬಹುದು, ಧಾನ್ಯಾದಿ ಭಾಂಡಾರ ಬರಿಡಾಗಬಹುದು, ಆದರೆ ವಿದ್ಯಾಭಾಂಡಾರವೆಂದಿಗೂ ಬರಿದಾಗಲಾರದು. ಇಂಥ ವಿದ್ಯಾದೇವಿಯ ವಿದ್ಯಾಭಾಂಡಾರದ ಅಧಿಪತಿಗಳಾದ ನಮ್ಮ ಶಿವಯೋಗಿಗಳು ಆಕೆಯ ಭಕ್ತರಿಗೆ ವಿದ್ಯಾಭಾಂಡಾರವನ್ನು ಮೀಸಲಾಗಿರಿಸಿದುದು ನಮ್ಮೆಲ್ಲರ ಸುದೈವ.

ಶ್ರೀಗಳವರು ಜಗತ್ತಿಗೇನಾದರೂ ಕಾಣಿಕೆ ಅರ್ಪಿಸಬೇಕೆಂದು ಯೋಚಿಸಿ, ಅದೂ ಕೊನೆಯವರೆಗೂ ಕರಗದಂತಹ ವಸ್ತುವನ್ನೇ ಅರ್ಪಿಸಬೇಕೆಂಬ ಬಲವಾದ ಬಯಕೆಯನ್ನು ಈಡೇರಿಸಿಕೊಳ್ಳಲು ಈ ವಿದ್ಯಾಭಾಂಡಾರದ ಅಧಿಪತಿಗಳಾದುದಕ್ಕೆ ಕಾರಣ. ಇಂಥ ದಿವ್ಯ ಮಹಾಕಾಣಿಕೆಯನ್ನು ಪಡೆದ ನಮ್ಮ ಕನ್ನಡಮ್ಮನ ಮಕ್ಕಳ ಸುದೈವ; ಇಂಥ ದಿವ್ಯ ಜ್ಯೋತಿಯನ್ನು ಪಡೆದ ನಮ್ಮ ಕನ್ನಡಮ್ಮನೇ ಭಾಗ್ಯಶಾಲಿನಿ.

ಸರಸ್ವತಿ ಲಕ್ಷ್ಮಿಯರ ಮಿಲನವು ದುಸ್ತರವೆಂಬುದನ್ನು ಸಂಸಾರಿಗಳ ಭಾವನೆ, ಆದರೆ ಅದು ಶ್ರೀಗಳವರ ಅಕ್ಷುವಿನಲ್ಲಿ ಸಮತಾಭಾವವನ್ನು ತಾಳಿದೆ. ಅದರ ನಿದರ್ಶನವನ್ನೂ ನಾವು ಕಾಣುತ್ತಿದ್ದೇವೆ. ಬಯಸುವವರ ಬೆಂಬತ್ತಿಬಾರದ ಲಕ್ಷ್ಮಿಯು ಬಯಸದವರ ಸೇವೆಗೂ ಸಿದ್ಧಳಾಗಿದ್ದಾಳೆಂಬುದನ್ನು ನಾವು ಶ್ರೀಗಳವರ ಜೀವನದಿಂದ ಅರಿತುಕೊಳ್ಳುತ್ತಲಿದ್ದೇವೆ. ಶ್ರೀಗಳವರ ಜೀವನದಿಂದ ಪ್ರಪಂಚಿಗರೂ ಆ ಲಕ್ಷ್ಮಿಯನ್ನು ದಾಸಿಯನ್ನಾಗಿರಿಸಿಕೊಳ್ಳಬಹುದು. ಆದರೆ ಆಶೆ ಆಮಿಷಗಳಿಂದ ದೂರಿದ್ದರೆ ಮಾತ್ರ.

ಶ್ರೀಮನ್ ಶಿವಯೋಗಿಗಳು ಸರಸ್ವತಿ ಮಂದಿರಕ್ಕೆ ಮಾತ್ರ ಹಾತೊರೆದಾಗ ಲಕ್ಷ್ಮಿಯು ಅವರ ಈ ಮಂದಿರದ ಬೆಂಬಲಕ್ಕೆ ಸಿದ್ಧಳಾಗಿ ಮುಂಬಂದಿದ್ದಾಳೆ. ಅಂದಮೇಲೆ ಸರಸ್ವತಿ ಲಕ್ಷ್ಮಿಯರು ಎಷ್ಟೊಂದು ಐಕ್ಯ ಭಾವನೆಯವರಾಗಿದ್ದಾರೆಂಬುದನ್ನು ನಾವಿಲ್ಲಿ ಕಾಣಬಹುದು.

ಇಂಥ ವಿದ್ಯಾದೇವಿಯ ಮಂದಿರ ಕಟ್ಟಿಸಿದುದು ಆ ದೇವಿಗೆ ಹಾಗೂ ಒಬ್ಬ ಪೂಜಾರಿಗಾಗಿ ಅಲ್ಲ; ಸಮಸ್ತ ವಿದ್ಯಾಪುತ್ರರಿಗಾಗಿ ಮಾತ್ರ.

ವಿಶ್ವವು ಸರ್ವವಿಧದಿಂದಲೂ ಮುಂದುವರೆಯುತ್ತಲಿದೆ. ಒಂದಾನೊಂದು ಕಾಲದಲ್ಲಿ ಕುಟಿರಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಲಿತ್ತು. ಅದಕ್ಕೂ ಮೊದಲು ನಿಸರ್ಗದ ಪ್ರಶಾಂತ ವಾತಾವರಣದ ಬಹುದೂರ ಸ್ಥಳದಲ್ಲಿ ವಿದ್ಯಾಭ್ಯಾಸ ನಡೆಯುತ್ತಿತ್ತು. ಅಂಥ ಸ್ಥಳಗಳಿಗೆ ತಾಯಿ ತಂದೆಗಳನ್ನು ತ್ಯಜಿಸಿ ಹಲವು ಕಾಲ



ತೆರಳಬೇಕಾಗುತ್ತಿತ್ತು. ಹೀಗಾಗಿ ಮಾತೃವಾತ್ಸಲ್ಯದ ಬಂಧನಕ್ಕೊಳಗಾಗಿ ಶಿಕ್ಷಣವು ಮುಂದುವರೆಯದೆ ಅಶಿಕ್ಷಿತತೆ ಪ್ರಾಪ್ತವಾಗಿತ್ತು. ಮುಂದೆ ಹಲವು ವರ್ಷಗಳಲ್ಲಿ ಹಲವು ಸುಸಜ್ಜಿತ ಪಟ್ಟಣಗಳಲ್ಲಿ ಮಾತ್ರ ಶಿಕ್ಷಣ ಸಂಸ್ಥೆಗಳಾದವು. ಹೀಗಾಗಿಯೂ ಶಿಕ್ಷಣವು ಕುಂಠಿತವಾಗಿಯೇ ಸಾಗುತ್ತಿರುವ ಕಾಲಕ್ಕೆ ಹಾಗು ಬಡ ರೈತಬಾಂಧವರ ಜಿಲ್ಹೆಯಾದ, ಭಕ್ತಿಭಾಂಡಾರಿ ಬಸವನ ಜನ್ಮಸ್ಥಾನವಾದ ಬಿಜಾಪುರ ಜಿಲ್ಹೆಗೊಂದು ಶಿಕ್ಷಣ ಸಂಸ್ಥೆಯ ಅವಶ್ಯಕತೆ ಇರುವಾಗ ಶ್ರೀಮನ್ ಮಹಾಸ್ವಾಮಿಗಳು ಆ ಕಡೆಗೆ ದೃಷ್ಟಿಹರಿಸುವದೇ ತಡ, ಸರಸತಿಯ ಮಂದಿರಕ್ಕೆ ಭಕ್ತಿರೂಪದಿಂದ ಲಕ್ಷ್ಮಿಯು ಜನ್ಮತಾಳಿದಳು; ಕಟ್ಟಗಳು ಪೂರ್ತಿಯಾದವು. ಅನಂತ ಬಡಮಕ್ಕಳಿಗೂ ಇಂದು ವಿದ್ಯದಾಗರವಾಗಿ ಅಂಥ ಸಂಸ್ಥೆಗಳು ಶ್ರೀಮನ್ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಮುಂದುವರೆದಿವೆ; ವರೆಯುತ್ತಲಿವೆ. ಇಂಥ ಶಿಕ್ಷಣ ಸಂಸ್ಥಾಪಕರ ಜನ್ಮಭೂಮಿ ಹಾಗೂ ಭಕ್ತಿಭಾಂಡಾರಿ ಬಸವಣ್ಣನವರ ಜನ್ಮಭೂಮಿ, ಮೇಲಾಗಿ ಭಕ್ತಶಿರೋಮಣಿಗಳ ನೆಲೆವೀಡಿನ ಈ ಸ್ಥಳದಲ್ಲಿ ಜನ್ಮಿಸಿದ ನಾವು ನಿಜವಾಗಿಯೂ ಧನ್ಯರು !

ಇಂಥ ಶಿಕ್ಷಣ ಸಂಸ್ಥೆಗಳ ಸ್ಥಾಪಕರೂ, ಬಡವರ ಭಾಗ್ಯನಿಧಿಗಳೂ, ಮಾರ್ಗದರ್ಶಕರೂ ಆದ ಶ್ರೀಮನ್ ಮಹಾಸ್ವಾಮಿಗಳವರ ಷಷ್ಠ್ಯಾಬ್ದಿಯನ್ನು ಕಂಡ ಅನಂತ ಅಕ್ಷುಗಳು ಅವರ ಅನಂತ ಶತಾಬ್ಧಿ ಉತ್ಸವಗಳನ್ನೂ ಕಾಣಲೆಂದು ಹಾರೈಸುವೆ. ಆದರೆ ನಮ್ಮೀ ಜೀವನವು ಸ್ಥಿರವಲ್ಲ. ಆದರೂ ನಮ್ಮೆಲ್ಲರ ಮುಂದಿನ ಜೀವಿಗಳು ಅವರ ಶತಾಬ್ಧಿಗಳನ್ನಾಚರಿಸಿ, ಅವರ ಆದರ್ಶ ಜೀವನವನ್ನು ಸದಾ ಕಾಣಲೆಂದು ಬಯಸಿ. ಈ ಚಿಕ್ಕ ಲೇಖನವನ್ನು ಮುಗಿಸುವೆ.



# ಶರಣ ಸುಖಸಂದೇಶ

ಲೇ:- ಸಾ. ಮ. ಸಿದ್ಧರಾಮಯ್ಯ
ನಾಗರಹಾಳು, ತಾ॥ ಶಿರಗುಪ್ಪಾ

ಮಾನವ ಜೀವನದ ನೌಕೆಯು ಚರಮಗುರಿ ಮುಟ್ಟಲು ತನ್ಮಧ್ಯೆದಲ್ಲಿ ಅನೇಕ ಅಸಹ್ಯ, ಅದನ್ಯ ಸುಖದುಃಖಗಳ ತೆರೆಗಳೇಳುವುದೊಂದು ಪ್ರಕೃತಿ. ಜೀವನದ ಒಳ್‌ತಿರುಳನ್ನು ಚನ್ನಾಗಿ ತಿಳಿಯದೆ ಅಸಭ್ಯ ಅನಾಚಾರಗಳ ಪಾಶವೀ ಪ್ರವೃತ್ತಿತನದಿಂದ ಜೀವನ ನಡೆಸುವುದೊಂದು ವಿಕೃತಿ. ಕಾರಣ ಮಾನವನು ತನ್ನ ಜೀವನವು ಸುಸಂಸ್ಕೃತಿಯಿಂದ ಸರ್ವಾಂಗ ಸುಂದರವಾಗಬೇಕಾದರೆ ಆತ್ಮದ ಶಾಂತಿಯು ಪೂರ್ಣವಾಗಿ ಪ್ರಫುಲ್ಲಿತವಾಗಿದೆಯೋ ಆತನಿಗೆ ದೇಹದ ಶಾಂತಿಯೂ ಸಹಜದಲ್ಲಿ ಮೈದೋರಿರುತ್ತದೆ. ಜೀವನ್ಮುಕ್ತಿಗೆ ಹಲವಾರು ಮಾರ್ಗಗಳಿವೆ. ಗುರಿ 'ಯಾ' ಧ್ಯೇಯ ಒಂದೇ ಆದರೂ ಮಾರ್ಗಗಳೊಂದಲ್ಲ. ಆದ್ದರಿಂದ ಅವರವರ ಮತಧರ್ಮಗಳಿಗನುಗುಣವಾಗಿ ಜೀವನ್ಮುಕ್ತಿ ಮಾರ್ಗಗಳುಂಟು. ಆದರೆ ಒಂದು ಧರ್ಮದಲ್ಲಿ ನೈತಿಕವೇ ಪ್ರಧಾನವಾಗಿ ಪರಮಗಂತವ್ಯವೆನಿಸುತ್ತದೆ. ಇನ್ನೊಂದು ಧರ್ಮದಲ್ಲಿ ಬರೀ ತಾತ್ವಿಕವೇ ಪ್ರಮುಖವಾಗಿದ್ದರೆ ಮತ್ತೊಂದು ಧರ್ಮದಲ್ಲಿ ಧಾರ್ಮಿಕವೇ ಆಗ್ರಸ್ಥಾನ ಪಡೆದಿರುತ್ತದೆ. ಆದರೆ ನಮ್ಮ ವೀರಶೈವ ಧರ್ಮದಲ್ಲಿ ನೈತಿಕ, ಧಾರ್ಮಿಕ ಮತ್ತು ತಾತ್ವಿಕ ಈ ಯಾವ ತ್ರಿತಂತಿಗಳ ಮೇಳನದಿಂದ ಹೃದ್ವೀಣೆಯು ಸುಸ್ವರವಾಗಿ ಓಂಕಾರಮಯವಾಗುವುದು. ತ್ಯಾಗ-ಭೋಗ ಮಾಟ-ಕೂಟಗಳ ಸಮನ್ವಯವಾಗುವುದು.

ಶಿವನು ಕೊಟ್ಟ ಪಂಚೇಂದ್ರಿಯಗಳನ್ನು ಮಹಾಪ್ರಸಾದವೆಂದು ತಿಳಿದು ಹದವರಿತು ಸಮಯವರಿತು ನೈತಿಕ ಕ್ರಮದಲ್ಲಿ ಭೋಗಿಸಬೇಕು. ಅದು ಬಿಟ್ಟು ಸಂಸಾರವೆಂಬುದು ಒಂದು ಮಹಾ ಘೋರಾರಣ್ಯ ಕಾರಣ ಇದು ತ್ಯಾಜ್ಯವೆಂದು ವಾನಪ್ರಸ್ಥಾಶ್ರಮದಲ್ಲಿ ಶ್ರಮಿಸುವುದಾಗಲೀ ಯೋಗ್ಯವಲ್ಲ. ಸ್ತ್ರೀಯ ತಪಸ್ಸನ್ನು ಸುಡುವ ಕೆಂಡವೆಂದು ಭಾವಿಸಿ, ಬೈರಾಗಿಗಳಾಗಿ ಕಂದಮೂಲಾದಿಗಳನ್ನು ಸೇವಿಸುತ್ತ ಉಗ್ರತಪಸ್ಸು ಮಾಡುವವರನ್ನು ಆತ್ಮವಂಚಕ ಕವಚವನ್ನು ತೊಟ್ಟಿರುವವರೆನ್ನುವುದರಲ್ಲಿ ಸಂಶಯವೇ? ಸ್ತ್ರೀಯನ್ನು ಅಲ್ಲಗಳೆಯುವ ಅಣ್ಣಗಳೇ ಕೇಳಿ! ಹಾಸ್ಯ ಕವಿಶ್ರೇಷ್ಠ ಸರ್ವಜ್ಞನ ವಚನದ ಸಸಿನ ಸಮರ್ಥನೆಯನ್ನು ನೋಡಿ !!

ಪಲ್ಲಕ್ಕಿ ಏರಿದವರೆಲ್ಲಿಂದ ಬಂದಿಹರು
ನೆಲ್ಲಕ್ಕಿಯಂತ ಸಲಿವಲ್ಲ ಹಿರಿಯರು
ನಲ್ಲಳಿಂದಲ್ಲೇ ? ಸರ್ವಜ್ಞ

ನಲ್ಲೆಯೊಲ್ಲೆಂಬುವರ ಸೊಲ್ಲುನಾಲಿಗೆ ಹೊಲೆಯು
ಬಲ್ಲಿದ ಶ್ರವಣ ಸನ್ಯಾಸಿ ಇಹರುಗ
ಳೆಲ್ಲಿ ಉದಿಸಿದರು ? ಸರ್ವಜ್ಞ



ಹೀಗೆ ಅನುಭಾವಿಗಳ ನುಡಿಮುತ್ತುಗಳು ನಾಡ ನಡೆಸಬಲ್ಲವು. ಒಂದರ ನಿಗ್ರಹದಿಂದ ಮತ್ತೊಂದರ ದುರಾಗ್ರಹ ಉಂಟಾಗುತ್ತದೆ. ಮುನಿ ವಿಕ್ರಮ ವಿಶ್ವಾಮಿತ್ರ, ಗೌತುಮರೇ ಪಂಚೇಂದ್ರಿಗಳನ್ನು ಪ್ರತಿಭಟಿಸಿ ತಲ್ಲಣಗೊಂಡು ವಿಫಲರಾಗಿದ್ದಾರೆ.

ಹೊನ್ನು, ಹೆಣ್ಣು, ಮಣ್ಣಿಗಾಗಿ ಅತ್ತವರು ಬಹುಮಂದಿ ಹೊರತು ಲಿಂಗದೊಲವಿಗೆ ಅತ್ತವರು ಮಾತ್ರ ವಿಫಲವಾಗಿರದೆ ವಿರಳವಾಗಿದ್ದಾರೆ. ವೀರಶೈವರಲ್ಲಿ ಮುಕ್ತಿಪಡೆಯಲು ಯಾವ ಕಠಿಣ ಕರ್ಮಯೋಗಗಳಿಲ್ಲ. ಮುಕ್ತಿಯನ್ನು ಪಡೆಯುವ ಮನುಷ್ಯನಿಗೆ ಅಜ್ಞಾನ, ಅವಿದ್ಯೆ, ಮಾಯೆ ಇವುಗಳೇ ವಿಘ್ನಕಾರಿಗಳಾಗಿ ಅಡ್ಡೈಸಿ ಬರುವುವು. ಪತಿಯು ಸತೀವ್ರತನಾಗಿ, ಸತಿಯು ಪತಿವ್ರತಳಾಗಿ ಸಂಸಾರದಲ್ಲಿದ್ದು ಗುರು-ಲಿಂಗ-ಜಂಗಮ ಪ್ರೇಮಾಸಕ್ತರಾಗಿ, ಸದಾಚಾರ ಸಂಪನ್ನರಾಗಿ ಕಾಯಕ ನಿರತರಾಗಿ ಜೀವನ ನಡೆಸುವವರಿಗೆ ಇದ್ದಲ್ಲೇ ಕೈಲಾಸವಾಗದಿರುತ್ತದೆಯೇ ? ಆದರೆ ಇಂದಿನ ಮಾನವರು ಸದಾಚಾರವುಳ್ಳವರಾಗಿ ನಡೆಯದೆ ಕೇವಲ ನುಡಿಗಣ್ಯ ವ್ಯಕ್ತಿಗಳಾಗಿದ್ದಾರೆ. ಸದಾಚಾರವು ಯಾರಿಗೆ ತಾನೇ ಅನಾವಶ್ಯಕ? ಬಹಿರಂಗದಾಚಾರದಿಂದ ಅಂತರಂಗ ಪರಿಪಕ್ವಗೊಂಡು ಪಾವಿತ್ರ್ಯತೆ ಉಂಟಾಗುತ್ತದೆ. ಆತ್ಮವು ನಿರಾಳ ಸ್ಥಿತಿಯನ್ನು ಹೊಂದುತ್ತದೆ. ಹೀಗಿದ್ದರೂ ವೀರಶೈವ ಧರ್ಮವನ್ನು ಚನ್ನಾಗಿ ತಿಳಿದು ಅದರಂತೆ ನಡೆಯುವುದಿಲ್ಲ. ಧರ್ಮಗಳು ಬರೀ ಹೊತ್ತಿಗೆಗಳಲ್ಲಿ ಅಡಗಿವೆಯೇ ಹೊರತು ಕೃತಿಯಲ್ಲಿ ಮಾತ್ರ ಕುಂಠಿತವಾಗಿವೆ. ನಾಹೆಚ್ಚು ತಾಹೆಚ್ಚು ನನ್ನ ಧರ್ಮ ಶ್ರೇಷ್ಠ, ತಮ್ಮ ಧರ್ಮ ಶ್ರೇಷ್ಠವೆಂದು ಕ್ರಾಂತಿಯನ್ನು ಎಬ್ಬಿಸುವುದರಲ್ಲಿಯೇ ದೇಹಸವೆಸುವರೇ ಹೊರತು ಧ್ಯೇಯದ ಕಡೆಗೆ ವಿಮುಖರಾಗುತ್ತಾರೆ. ಜನ ಬದುಕಬೇಕು, ಸಮಾಜದಲ್ಲಿ ಸುಖ-ಶಾಂತಿಗಳು ಏರ್ಪಡಬೇಕು ಎನ್ನುವ ವಿಚಾರವನ್ನು ಆಚಾರದಲ್ಲಿ ಪರಿಣಾಮಗೊಳಿಸದೆ ಅಹಂಕಾರ ಮಮಕಾರಗಳಿಂದ ವ್ಯಕ್ತಿವ್ಯಕ್ತಿಗಳಲ್ಲಿ ದ್ವೇಷಾಸೂಯೆಗಳೆಂಬ ಕಿಡಿಗಳನ್ನು ಹಾರಿಸುತ್ತ ಜೀವನ ಬೆಳಕಾಗಿ ಮಾಡಿಕೊಳ್ಳದೆ ಬೆಂಕಿಯಾಗಿ ಮಾಡಿಕೊಳ್ಳಹತ್ತಿದ್ದಾರೆ. ವಿಶ್ವವ್ಯಾಪಕನಾದ ಪರಮಾತ್ಮನೇ ಅಣುವಿಗಿಂತಲೂ ಅಣುವಾಗಿಯೂ; ಮಹತ್ತಿಗಿಂತಲೂ ಮಹತ್ತಾಗಿಯೂ ಇರುವಾಗ್ಗೆ ಆತನ ಸೂತ್ರದ ಬೊಂಬೆಗಳಾದ ಮಾನವರ ಪಾಡೇನು? ಕಾರಣ ಮನುಷ್ಯನು ತನ್ನ ಅಹಂಕಾರವು ಅಣೋರಣೀಯಕ್ಕೆ ಅಪ್ಪಳಿಸಿ ಭೂಮಾನುಭೂತಿಗೆ ಕುಪ್ಪಳಿಸಿ ಶಿವಸ್ಪರ್ಶಿಯಾಗಬೇಕು.

ಪರಂತು ಧರ್ಮದ ತಿರುಳನ್ನೂ ಮರೆತು ಅನೇಕ ಪಾಪಕೃತ್ಯಗಳನ್ನು ಮಾಡಿ ಒಂದುಸಲ ಮೂರ್ತಿದೇವತೆಗಳಲ್ಲಿಗೆ ಹೋಗಿ ತಲೆ ಮುಂಡಿ ಕೊಟ್ಟರೆ ಅಥವಾ ಗಂಗೆಯಲ್ಲಿ ಮಿಂದರೆ ತಮ್ಮ ಪೂರ್ವ ಪಾಪವೆಲ್ಲ ಹೋಗುತ್ತದೆಂದು ತಿಳಿದ ಅಜ್ಞಾನಿಗಳನೆಂತು ಕರೆಯಬೇಕು ?

ಸತ್ಯ-ಶೌಚ-ನಿತ್ಯನೇಮವ ತಪ್ಪದೆ ಮಾಡಬಲ್ಲರೆ ಆದುಲೇಸು
ಮತ್ಸ್ಯಕೂರ್ಮ ಮಂಡೂಕ ಜಲದೊಳಗಿದ್ದಲ್ಲಿ ಫಲವೇನು ?

ಚಿತ್ತಮಂತರ್ಗತಂ ದೃಷ್ಟ್ವಾ । ತೀರ್ಥಸ್ನಾನೇನ ಶುಧ್ಯತೇ
ಶತಕುಂಭಜಲೇ ಶೌಚಂ । ಸುರಾಭಾಂಡಮಿವಾಶುಚಿಃ ।

ಆಗಡವ ಮಾಡಿ ಮಾಗುಡವ ಮಿಂದರೆ
ತಾ ಕೂಡಬಲ್ಲನೆ ಕೂಡಲಸಂಗಮದೇವ ?

ಮೇಲಿನ ಭಗವಾನ್ ಬಸವಣ್ಣನವರ ವಚನ ಅಶಕ್ತ-ಅನಾಚಾರಿಗಳಿಗೆ ಸಶಕ್ತ-ಸಂಕ್ತಿ-ಸುಧೆಯಾಗಿದೆ. ಚಿತ್ತವು ಅಂತರ್ಮುಖವಾಗಿ ಶಿವನೊಳಗೆ ಐಕ್ಯವಾಗಲು ಯೋಗ್ಯತೆಪಡೆಯುವುದೇ ಶ್ವೇತ ಶುಭ್ರದ ಮಹಾತೀರ್ಥ. ಹೀಗಿಲ್ಲದೆ ದುಷ್ಟಪ್ರವೃತ್ತಿ-ವರ್ತನೆಗಳಿಂದ ಪಾಪಕೃತ್ಯಗಳನ್ನೆಸಗಿ ದೊಡ್ಡ ದೊಡ್ಡ ತೀರ್ಥಗಳಲ್ಲಿ ಮಿಂದರೆ ಸೈಪುಂ ಪಡೆಯುವನೇ ? ಇಲ್ಲ ಎಂದಿಗೂ ಇಲ್ಲ. ಅಂಥವರಿಗೆ ಕೂಡಲ ಸಂಗಮದೇವನು ಎಂದೂ ಅನುಗ್ರಹಿಸಲಾರನು ಎಂದು ನಮ್ಮ ಅಣ್ಣ ಬಸವಣ್ಣನವರು ಕಠಿಣ-ಕೋಮಲದಿಂದ ನುಡಿದಿದ್ದಾರೆ. ಯಾಕಂದರೆ ಹೆಂಡದ ಕೊಡವನ್ನು ನೂರು ಕೊಡಗಳ ನೀರಿನಿಂದ ತೊಳೆದರೂ ಅದು ಹೆಂಡದ ಕೊಡವಾಗಿ ಉಳಿಯುತ್ತದೆಯೇ ಹೊರತು ಪಾವಿತ್ರ್ಯಯನ್ನು ಪಡಕೊಳ್ಳಲಾರದು. ಪಾಪ ಮಾಡಿದವರೆಲ್ಲ ಜಲದಲ್ಲಿರುವ ಮೀನು, ಆವೆ. ಮತ್ತು ಕಪ್ಪೆಗಳಂತೆ. ಅಂಥವರ ಕಾರ್ಯ-ದುಷ್ಕಾರ್ಯ ಮತ್ತು ಅವರ ಫಲ-ವಿಫಲ. ಆದ್ದರಿಂದ ಸುಶ್ರದ್ಧೆಗೆ ತಕ್ಕ ಸುಫಲ, ಹಿಂದಿನ ಅನೇಕ ವಿಭೂತಿ ಪುರುಷರು ಸತ್ಯ-ಶುದ್ಧ-ಕಾಯಕದಿಂದ ನಡೆದು ನುಡಿದಿದ್ದಾರೆ. ಶರಣರ ನಡೆಚನ್ನ-ನುಡಿಚನ್ನ ಸರ್ವವೂ ಚನ್ನ ಮುಂದಿನಾ ಏಳಿಗೆಗೆ ಹಿಂದಿನದು ತಳಹದಿಯಾದ್ದರಿಂದ ಶರಣರ ತತ್ವವನ್ನು ಸತ್ಸಂಗದಿಂದ ಚನ್ನಾಗಿ ತಿಳಿದು ಇಷ್ಟಲಿಂಗದಲ್ಲಿ ನೈಷ್ಟಿಕಭಕ್ತಿ ಬಲಿತನರಾಗಿ ಕಾಯಕದಲ್ಲಿ ನಿತ್ಯನಿರತರಾಗಿ ಗುರು-ಜಂಗಮರ ಸೇವೆ ಮಾಡುವವರ ಜೀವನವೇ ಮಹಾ ಜೀವನವಾಗಿ ಶಿವಮಯವಾಗುವುದು.

## ಷಟಸ್ಥಲ ಬ್ರಹ್ಮ



ಶ್ರೀ ಬಂಥನಾಳ ಶಿವಯೋಗೀಶ್ವರರು.

# ವೈಜವ್ವೆ
[ ಏಕಾಂಕ ]

ಲೇಖಕರು
ಶ್ರೀ ನಾ. ಮ. ಬಸವರಾಜ,
ಶಿವಾನುಭವ ಭೂಷಣ, ನಾಗರಹಾಳು.

## ಪಾತ್ರಪರಿಚಯ.

ಶಿವಭಕ್ತ .... .... .... ಶಿವಪುರದ ಓರ್ವ ಶಿವಾಚಾರಸ್ಥನು.
ವೈಜವ್ವೆ .... .... .... ಶಿವಭಕ್ತನ ಮಗಳು ಮಹಾತ್ಮಳು.
ತಂಗಿ .... .... .... ಶಿವಭಕ್ತನ ತಂಗಿ.
ನೇಮಿಸೆಟ್ಟಿ .... .... .... ಶಿವಭಕ್ತನ ತಂಗಿಯ ಮಗ, [ಜೈನ ಸಂಪ್ರದಾಯಸ್ಥನು]
ಪರಮೇಶ್ವರ, ಜೈನರು, ಜಂಗಮಯೋಗಿ....

ಹಿನ್ನೆಲೆ:— ವೈಜವ್ವೆಯ ಚರಿತ್ರವು ಬಹಳ ಭಕ್ತಿ ತೋರಿಸುವ ಚಿತ್ರವಿದು, ಪರಸಳಿಗೆಗೆ ಸಮೀಪವಾಗಿ ಒಂದು ಶಿವಪುರವಿದೆ. ಅಲ್ಲಿ ಒಬ್ಬ ಶಿವಭಕ್ತನು ತನ್ನ ಹೆಂಡತಿಯೊಡನೆ ಸುಖವಾಗಿದ್ದನು. ಉಭಯ ದಂಪತಿಗಳು ಶಿವನಲ್ಲಿ ಪೂರ್ಣ ವಿಶ್ವಾಸವುಳ್ಳವುರು. ಅವರಿಗೆ "ವೈಜವ್ವೆ" ಎಂಬು ಹೆಸರಿನ ಮಗಳು ಹುಟ್ಟಿದಳು. ಅವಳು ತನ್ನ ತಾಯಿ ತಂದೆಗಳಂತೆಯೇ ಲಿಂಗ ಭಕ್ತಿಯುಳ್ಳವಳಾಗಿ ಲಿಂಗಾನು ಭವಿಯಾಗಿ ಆಚರಿಸುತ್ತ ಬಂದಿದ್ದಾಳೆ. ಹೀಗೆ ಬೆಳೆಯುತ್ತ ಯೌವ್ವನಾವಸ್ಥೆಯನ್ನು ಹೊಂದಿದಳು. ಅವಳು ಈಗ ಲಿಂಗಪೂಜೆಯಲ್ಲಿ ನಿರತಳಾಗಿದ್ದಾಳೆ.

(ತೆರೆ ನಿಧಾನವಾಗಿ ಬೀಳುವದು.)

ಓಂ ನಮಃ ಶಿವಾಯ ಓಂ ನಮಃ ಶಿವಾಯ
ತಾನೆನೆಯೆ ಶಂಭುವಿನ ಸಾಂಬನಿರವನಾ
ತಾನೆನೆಯೆ ಅಂಬುಜಾಕ್ಷಿ ಗೌರಿಯರಸನಾ
ತಾನೆನೆಯೆ ನೀಲಕಂಠ ನಿಖಿಲ ಲೋಚನ ನಿರಾಮಯನೆ
ತಾನೆನೆಯೆ ಸಮಯವದೆಲ್ಲದು ಪ್ರಹರ ವಿಹಾರ ಮಾನಸಾ.

[ ಪರಮಾತ್ಮನ ಪೂಜೆ ಮುಗಿಸಿ ಒಳಗೆ ಹೋಗುತ್ತಾಳೆ. ಅಷ್ಟರಲ್ಲಿ ವೈಜವ್ವೆಯ ಅತ್ತೆ ಬರುತ್ತಾಳೆ ]

ತಂಗಿ:— ವೈಜವ್ವೆ ಎಷ್ಟು ಬೆಳೆದಿದ್ದಾಳೆ, ಎಷ್ಟು ಸೌಂದರ್ಯವತಿ. (ಪ್ರಕಾಶ) ಅಣ್ಣಾ, ಅಣ್ಣಾ ಯಾರೂ ಇಲ್ಲವೇ ? (ಶಿವಭಕ್ತ ಬರುತ್ತಾನೆ.)

ಶಿವಭಕ್ತ:— ಬಾ, ತಂಗೀ, ಯಾವಾಗ ದಯಮಾಡಿಸಿದಿ.

ತಂಗಿ:— ಇದೇ ವೈಜವ್ವೆ ಪೂಜೆ ಮುಗಿಸಿಕೊಂಡು ಒಳಗೆ ಹೋದಾಗಲೇ.

ಶಿವಭಕ್ತ;— ಒಳ್ಳೇದು, ಊಟಕ್ಕೇಳು. ಅಪರೂಪ ಬಂದದ್ದು.

ತಂಗಿ:— ಬರೋಕಾಲ ಬಂದಿತು ಬಂದೆ ಅಣ್ಣ.

ಶಿವಭಕ್ತ:— ಏನು ಅಂಥಾ ಅವಸರ ಕೆಲಸಮ್ಮಾ, ಇರಲಿ ಊಟ ಮುಂದು ಕಾಳಗ ಹಿಂದು. ಎನ್ನುತ್ತಾರಲ್ಲ ಹಾಗೆ ಮೊದಲು ಊಟಕ್ಕೆ ಏಳು.

ತಂಗಿ:— ಇಲ್ಲ 'ಕಾಳಗ ಮುಂದು ಊಟ ಹಿಂದು' ಎಂದು ನಾನು ಹೇಳುತ್ತೇನೆ.

ಶಿವಭಕ್ತ:— ಹೇಳು ತಂಗಿ ವಿಷಯವಾದರೂ ಏನು ?

ತಂಗಿ:— ನಿನ್ನ ಮಗಳು ವೈಜವ್ವೆಯನ್ನು ನನ್ನ ಮಗ ನೇಮಿಸೆಟ್ಟಿಗೆ ಕೊಡಬೇಕು.

ಶಿವಭಕ್ತ:— (ಆಶ್ಚರ್ಯದಿಂದ) ಏನಂದಿ ನನ್ನ ಮಗಳನ್ನು ನಿನ್ನ ಮಗನಿಗೆ ಕೊಡಬೇಕೇ ! ಎಂಥ ಮಾತು, ನೀವು ಜೈನರು, ನಾವು ಶಿವಭಕ್ತರು. ನೇಮಿಸೆಟ್ಟಿಯು ನನಗೆ ಸೋದರಳಿಯನಾದರೇನಾಯಿತು. ನಾನು ನನ್ನ ಮಗಳನ್ನು ಶ್ರವಣರಿಗೆ ಕೊಡುವದಿಲ್ಲ.

ತಂಗಿ:— ಅಣ್ಣನೇ ನೀನು ನಿನ್ನ ಬೆನ್ನು ಬಿದ್ದ ತಂಗಿಗೆ ಲೇಸು ಮಾಡಿದೆ ನಾನು ವೈಜವ್ವೆಯನ್ನು ಎಂದೂ ಬಿಡುವವಳಲ್ಲ ಅವಳನ್ನು ನನ್ನ ಮಗನಿಗೆ ನೀನು ಕೊಡಲೇಬೇಕು

ಶಿವಭಕ್ತ:— ಸಾಧ್ಯವಾಗದು ತಂಗಿ, ಊಟ ಮಾಡು ಊರಿಗೆ ಪಯಣ ಬೆಳಿಸು ಹಠ ಮಾಡಬೇಡ.

ತಂಗಿ:— ಇಲ್ಲಿಲ್ಲ, ನಿನ್ನ ಮಗಳನ್ನು ಕೊಡುವವರೆಗೆ ಊಟ ಮಾಡೋದಿಲ್ಲ, ಈ ಮನೆ ಬಿಡೋದಿಲ್ಲ.

ಶಿವಭಕ್ತ:— ತಂಗೀ, ಛಲಬೇಡ, ನಿನ್ನ ಮಾತು ಎಂದಿಗೂ ಸಾಧ್ಯವಿಲ್ಲ.

ತಂಗಿ:— ಅಣ್ಣಾ ಸಾಧಿಸುತ್ತೇನೆ, ನಿನ್ನ ಮಗಳನ್ನು ಕೊಡೋವರೆಗೆ ಇಲ್ಲಿಂದ ಒಂದು ಹೆಜ್ಜೆ ಇಡಲಾರೆ (ಕುಳಿತುಬಿಟ್ಟಳು.)

ಶಿವಭಕ್ತ:— ತಂಗೀ, ಸಾಯಿ, ನಿನ್ನಷ್ಟ ಹೇಳಿದ ಮಾತು ಕೇಳೋದಿಲ್ಲ. ಎಷ್ಟು ದಿನ ಉಪವಾಸವಿರುವಿಯೋ ನೋಡುತ್ತೇನೆ. (ಹೋದನು)

[ ತೆರೆ ಬೀಳುವುದು ]



ಹಿನ್ನೆಲೆ:— ಇದೇ ರೀತಿ ಶಿವಭಕ್ತನ ತಂಗಿಯು ತನ್ನ ಮಗನಿಗೆ ವೈಜವ್ವೆಯನ್ನು ಕೊಡಬೇಕೆಂದು ಹಠಹಿಡಿದು ಮೂರು ದಿವಸಗಳವರೆಗೆ ಉಪವಾಸ ಕೂತಳು. ನಾಲ್ಕನೆ ದಿವಸದಲ್ಲಿ ಬಂಧು ಬಳಗದವರು ಬರುತ್ತಾರೆ.

ನಿಧಾನವಾಗಿ ತೆರೆ ಏಳುತ್ತದೆ.

ಮಾವ:— ಏನಪ್ಪಾ, ನೇಮಿಸೆಟ್ಟಿಗೆ ನಿನ್ನ ಮಗಳನ್ನು ಕೊಡತಕ್ಕದ್ದು ನ್ಯಾಯ ಕೊಟ್ಟಿಬಿಡು.

ಶಿವಭಕ್ತ:— ಆದೇನು ಮಾವ, ನೀನೂ ಸಹ ತಂಗಿಯ ಬೆಂಬಲವಾಗಿಯೇ ಹೇಳುತ್ತಿ. ನಾನು ಕೊಡೋದಿಲ್ಲ.

ಚಿಕ್ಕಪ್ಪ— ಹೋಗ್ಲಿ ಹೆಣ್ಮಗಳ ಮನಸ್ಸು ನೋಯಿಸಬಾರದು ಮೂರು ದಿನ್ನ ಉಪವಾಸ ಕೂಡಿಸಬೇಕೆ ? ಮಗಳನ್ನು ಕೊಟ್ಟಿಡು. ಜೈನರಾದರೇನಾಯಿತು?

ಸ್ನೇಹಿತ— ಗೆಳೆಯಾ, ನಿನ್ನ ತಂಗಿಯನ್ನು ಮೂರದಿನ್ನ ಉಪವಾಸ ಕೆಡಿವಿಯಲ್ಲಾ, ಎಂಥಾ ಕಠೋರ ಹೃದಯದವನಪ್ಪಾ ವೈಜವ್ವೆಯನ್ನು ಕೊಟ್ಟು ಮದುವೆ ಮಾಡಿ ಬಿಡು. ನೇಮಿಸೆಟ್ಟಿ ಚನ್ನಿಗ.

ಶಿವಭಕ್ತ— ಎಲ್ಲರಿಗೂ ನನ್ನ ಅಭಿಪ್ರಾಯ ಒಂದೇ ಒಂದು, ಅವರು ಜೈನರು, ನಾವು ಶಿವಭಕ್ತರು ಅದಕ್ಕಾಗಿ ನಾನು ಅವರಿಗೆ ನನ್ನ ಮಗಳನ್ನು ಕೊಡಲಾರೆ.

ಸ್ನೇಹಿತ— ಮಿತ್ರಾ, ನೀನು ಈ ಸಮಯದಲ್ಲಿ ಹಠ ಹಿಡಿಬೇಡ ಹೆಣ್ಮಗಳನ್ನು ಕಣ್ಣೀರಿಡಿಸಬೇಡ ನಿನಗೆ ಒಳ್ಳೆದಾಗದು ತಿಳಿಯಿತೇ ಜೈನರಾದರೇನು; ಮುಂದೆ ನಿನ್ನ ಮಗಳಿಂದ ನೇಮಿಶೆಟ್ಟಿ ಶಿವಭಕನಾಗಬಹುದು, ಎಲ್ಲರೂ ಇಷ್ಟುರೀತಿ ಹೇಳುತ್ತಿರುವಾಗ ನೀನು ನಿನ್ನ ಛಲಬಿಟ್ಟುಬಿಡಬೇಕು

ಅತ್ತೆ— ನೀನು ಹೀಗೆ ಕ್ರೂರತನಮಾಡಬೇಡ, ಹಿರಿಯರಲ್ಲಿ, ನೆಂಟರಲ್ಲಿ ಹಿಗೆ ಛಲವಿರಬಾರದು. ನಿನ್ನ ತಂಗಿಯು ಜೈನಳಾದರೇನಾಯಿತು, ಅವಳ ಮಗನಿಗೆ ನಿನ್ನ ಮಗಳನ್ನು ಕೊಡುವದೇ ಉಚಿತವಾದದ್ದು.

ಸ್ನೇಹಿತ— ಹೂಂ, ಒಪ್ಪಿಕೊ ಮೌನವೇಕೆ?

ಶಿವಭಕ್ತ:- ಆಗಲಿ, ತಂಗಿ ನನ್ನ ಮಗಳನ್ನು ನಿನ್ನ ಮಗನಿಗೆ ಕೊಟ್ಟೆನು. ಮಗಳನ್ನು ಸದ್ಧರ್ಮದಿಂದ ರಕ್ಷಿಸು, ಈಗಾದರೂ ಊಟಕ್ಕೆ ಏಳು.

( ಎಲ್ಲರೂ ಹೋಗುವರು )

## ೨ನೇ ದೃಶ್ಯ

ಹಿನ್ನೆಲೆ— ಆದರೆ ವೈಜವ್ವೆಯು ಹರನಲ್ಲಿ ಪೂರ್ಣಭಕ್ತಿಯುಳ್ಳವಳು. ಅವಳು ತನ್ನನ್ನು ಒಬ್ಬ ಜೈನನಿಗೆ ಕೊಟ್ಟು ಲಗ್ನ ಮಾಡುತ್ತಾರೆಂಬುದನ್ನು ಕೇಳಿ ಮನದಲ್ಲಿ ನೊಂದು ತನ್ನಲ್ಲಿ.

( ತರೆ ನಿಧಾನವಾಗಿ ಏಳುತ್ತದೆ)

ವೈಜವ್ವೆ— " ದೇವ ಭವಿಗೆ ಮದುವೆ ಎಂದು ತಾಪಿಸಿದುರ್ದೇವೆನಯ್ಯ
ಭಾವಿಸಲ್ಕೆ ಭವಿಯ ಸೊಂಕದಾವತೆರದೊಳಾರ್ಪೆನಯ್ಯ ?
ತಿಳಿವಿನೊಳಗೆ ಪುಟ್ಟಿ ಮರವೆಯೊಳಗದೆಂತು ಪುಗುವೆನಯ್ಯ ;
ಬೆಳಗಿನೊಳಗೆ ಬಳೆದು ತಮದೊಳೆಂತು ಪೋಗಿಬೀಳ್ವೆನಯ್ಯ
ನಿನ್ನ ನರಿಯದಚ್ಚ ಬಚ್ಚಬರಿಯ ಭವಿಗಳಲ್ಲಿ ದೇವ
ನಿನ್ನ ನೆಂತು ನೆನೆವನೆಂತು ನೂಳ್ಪನೆಂತದೆಂತು ದೇವ ?
ಏಕೆ ಭಕ್ತರೊಳಗೆ ಬರಿಸಿ ಭವಿಗಳೊಳಗೆ ನೂಕಿದೆಪ್ಪ
ಏಕೆ ನಿನ್ನನರಿಸಿ ಮರಿಪ ಲೀಯಡಿರಿದಂತಿರಿಪ್ಪರಯ್ಯ
ಕರುಣಿ ಎಂಬರ ಭವ ಕರುಣಮಿದಂತಿರಿಪ್ಪರಯ್ಯ
ಕರುಣಿ ಯೊರಲುತಿರ್ದೆನಕ್ಕಟಾ ನಿರೀಕ್ಷಿಸಯ್ಯ
ದೇವ ಚಂದ್ರಮೌಲಿ ಶೂಲಿಗರಳಕಂಠ ಕರುಣಿಸಯ್ಯ
ದೇವ ಸಲಿಲಶಯನ ನಯನ ಚರಣಕಮಲ ಕರುಣಿಸಯ್ಯ"

( ಹೀಗೆ ಹಾಡುತ್ತಾ ನಿದ್ರೆ ಹೋಗುವಳು. ಕನಸಿನಲ್ಲಿ ಪರಮ್ಮಾತ್ಮಾ )

ಪರಮಾತ್ಮಾ— ವೈಜವ್ವೆಯೇ ನೀನ ಚಿಂತೆಮಾಡಬೇಡ, ನಾನು ಯಾವಾಗಲೂ ನಿನ್ನ ಸಮೀಪದಲ್ಲಿರುವೆನು. ನನ್ನನ್ನು ನಂಬು ನೀನು ನೇಮಿಸೆಟ್ಟಿಯನ್ನು ಮದುವೆಯಾಗು ಜಗತ್ತಿನಲ್ಲಿ ನಿನ್ನ ಹೆಸರು ಕಡೆತನಕ ಉಳಿಯುವಂತೆ ಮಾಡುವೆನು ( ಎಂದು ಹೇಳಿ ಅಂತರ್ಧಾನನಾದನು. ವೈಜವ್ವೆಗೆ ಎಚ್ಚರವಾಯಿತು.

ವೈಜವ್ವೆ:— ಹಾ! ಶಿವನೆ ಮದುವೆಯಾಗಲೇ ಅಂತೂ ನನ್ನ ಕೈಬಿಡಬೇಡ. ಹೋಗುವಳು ಪರದೆ ಬೀಳುತ್ತದೆ

## — ೩ನೇ ದೃಶ್ಯ —

ಹಿನ್ನೆಲೆ:— ನೇಮಿಸೆಟ್ಟಿಯೊಂದಿಗೆ ವೈಜವ್ವೆಯ ಮದುವೆ ನಡೆದು ಹೋಯಿತು. ಈಗ ವೈಜವ್ವೆ ಗಂಡನ ಮನೆಗೆ ಬಂದಿದ್ದಾಳೆ. ಅಲ್ಲಿ ಅವಳಿಗೆ ಎಲ್ಲವೂ ಕತ್ತಲೆಯಾದಂತೆ ತೋರಹತ್ತಿತು. ಅವಳ ಮನಸ್ಸಿನಲ್ಲಿ ಎಷ್ಟು ಮಾತ್ರವೂ ಸಮಾಧಾನವಿರಲಿಲ್ಲ. ಆದರೂ ಸದಾ ಲಿಂಗಧ್ಯಾನದಲ್ಲಿಯೇ ಇರುತ್ತಿದ್ದಾಳೆ.



[ ತೆರೆ ನಿಧಾನವಾಗಿ ಮೇಲಕ್ಕೇರುತ್ತದೆ ]

ವೈಜವ್ವೆ:— " ದೇವ ಭವಿಗಳೊಳಗಣಿಕವಿದೆಂದು ಮಾಣ್ಬುದೆಂದೆನುತ್ತೆ.

ದೇವ ನಿನ್ನನೆನ್ನ ಕಣ್ಗಳಾರೆ ಕಾಣ್ಬೆನೆಂದೆನುತ್ತೆ.
ದೇವ ಚಿತ್ತವೃತ್ತಿ ತಣಿಯೆ ಪೂಜಿಸುವೆನದೆಂದೆನುತ್ತೆ.
ದೇವ ಜೈನರೊಳಗೆ ಸಿಲ್ಕಿದೆಂ ಸುರಾರಿ ಬಿಡಿಸೆ ಮತ್ತೆ" ಪೋಗುವಳು.

ನೇಮಿಸೆಟ್ಟಿ:— (ಬಂದು) ವೈಜವ್ವೆ, ಏನು ಮಾಡುತ್ತಿದ್ದಿ ಇಲ್ಲಿ ಬಾ. (ವೈಜವ್ವೆ ಬರುವಳು.) ನಾನು ಇಂದಿನ ದಿನ ಜೈನಮುನಿಗಳಿಗೆ ಊಟ ಹಾಕುತ್ತೇನೆ. ಅವರಿಗೆ ಹಾಲೋಗರ, ಹಾಲುಂಡಿ, ಮಂಡಿಗೆ, ತರಗು, ಲಡ್ಡು, ಇಡ್ಡಲಿ, ಹಾಲು ಪಾಯಸ, ಬೋಂಡಾ ಮೊದಲಾದ ರುಚಿ ಪದಾರ್ಥಗಳನ್ನು ಮಾಡು. ಪದಾರ್ಥಗಳನ್ನು ಕಳಿಸುತ್ತೇನೆ. ( ಹೋಗುವನು. )

(ಸ್ವಲ್ಪ ಹೊತ್ತಿನೊಳಗಾಗಿ ಎಲ್ಲವನ್ನೂ ಸಿದ್ಧಪಡಿಸುವಳು. ಅವುಗಳನ್ನು ನೋಡುತ್ತಾ)

ವೈಜವ್ವೆ:— ಅಕ್ಕಟಾ, ಈ ವಸ್ತುಗಳು ಶಿವನಿಗಾಗಲಿಲ್ಲ. ಅವುಗಳಿಂದ ನಾನು ಮಹೇಶ್ವರನನ್ನು ತೃಪ್ತಿಪಡಿಸಲಿಲ್ಲ. ಅವು ಭವಿಗಳಿಗೆ ಹೋಗುತ್ತವೆ. ನನ್ನ ತಂದೆಯು ನನ್ನನ್ನು ಭವಿಗಳಿಗೆ. ಕೊಟ್ಟಿದ್ದರಿಂದ ಶಿವನೇ, ನಿನ್ನ ಭಕ್ತರ ಸೇವೆ ಮಾಡುವದು ನನ್ನಿಂದ ಆಗದಂತಾಗಿದೆ. (ಕಣ್ಣೀರಿಡುವಳು. ಪರಮಾತ್ಮನೇ ಜಂಗಮ ವೇಶದಿಂದ ಬರುವನು.)

ಜಂಗಮ:— ನಾವು ಪರಊರಿನವರು ನಮಗೆ ಭಿಕ್ಷೆ ನೀಡಿರಮ್ಮಾ ಶಿವನ ಕರುಣವಾಗಲಿ

ವೈಜವ್ವೆ:— (ಓಡಿಬಂದು) ನನ್ನ ಬಯಕೆ ಈಡೇರಿತು. ಒಳ್ಳೇ ಸಮಯಕ್ಕೆ ಬಂದಿರಿ. (ಒಳಗೆಹೋಗಿ ಎಲ್ಲ ಪದಾರ್ಥಗಳನ್ನು ತಂದು ನೀಡಿದಳು. ) ಇನ್ನು ಮೇಲೆ ನೀವು ಇಲ್ಲಿ ನಿಲ್ಲಬೇಡಿರಿ ಇಷ್ಟರಲ್ಲಿಯೇ ಶ್ರವಣರು ಬರತಕ್ಕವರಿದ್ದಾರೆ. ನೀವು ಅವರ ಕಣ್ಣಿಗೆ ಬೀಳದಂತೆ ಹೋಗಿರಿ. (ಅಷ್ಟರೊಳಗೆ ನೇಮಿಸೆಟ್ಟಿಯು ಜಿನಮುನಿಗಳನ್ನು ಕರೆದುಕೊಂಡು ಬಂದನು. ಆ ಮುನಿಗಳು ವೈಜವ್ವೆಯು ಜಂಗಮರಿಗೆ ಉಟದ ಪದಾರ್ಥಗಳನ್ನು ನೀಡುತ್ತಿರುವದನ್ನು ಕಂಡು ಅವರು ನೇಮಿಸೆಟ್ಟಿಗೆ)

ಜಿನಮುನಿಗಳು:— ನೀವು ಮಾಡಿದ ಅಡಿಗೆಯನ್ನು ನಾವು ಇನ್ನುಮೇಲೆ ಮುಟ್ಟಲಾರೆವು. ಆ ಗೊರವನು ಅದನ್ನು ಎಂಜಲು ಮಾಡಿದ್ದಾನೆ (ಹೋದರು) ನೇಮಿಶೆಟ್ಟಿಯು ಸಿಟ್ಟಿನಿಂದ.

ನೇಮಿಸೆಟ್ಟಿ:— ನೀನೇನು ಮಾಡಿದೆ? ಅನ್ನವನ್ನು ಜಂಗಮನಿಗೆ ನೀಡಿ ಕೆಡಿಸಿದೆಯಲ್ಲ! ಮುನಿಗಳು ಹಸಿದುಕೊಂಡು ಹೊರಟುಹೋದರು. ಅರುಹನ ವೃತಕ್ಕೆ ನೀನು ಭಂಗತಂದೆ

ವೈಜವ್ವೆಃ— ಜನರೆಲ್ಲ ಅಡಿಗೆ ಮಾಡುವದು ಅಗ್ನಿಯಿಂದ. ಆದರೆ ಆ ಅಗ್ನಿಯು ಶಿವನ ಹಣೆಗಣ್ಣಿನ ಎಂಜಲು. ಅಂಥ ಎಂಜಲಿಂದಾದ ಆಹಾರವನ್ನು ನೀವೆಲ್ಲ ಉಣ್ಣುವಿರಿ. ಅದನ್ನು ಜಂಗಮನಿಗೆ ನೀಡಿದಲ್ಲಿ ಎಂಜಲು ಹೇಗೆ? ನೀವು ಅರುಹವೆಂದು ಪೂಜಿಸುವ ವಸ್ತುವು ಭೂಮಿಯೊಳಗಿಲ್ಲ. ಅದು ವೇದದಲ್ಲಿಲ್ಲ, ಶಾಸ್ತ್ರದಲ್ಲಿಲ್ಲ. ಬತ್ತಲೆಯ ಗೊಂಬೆಗಳನ್ನು ನೀವು ಪೂಜಿಸಿ ಬಳಲುವದೇಕೆ? (ಆಗ ನೇಮಿಸೆಟ್ಟಿ ಕೇಳಿ ಪ್ರಳಯಕಾಲದ ರುದ್ರನಂತಾಗಿ ಆವಳನ್ನು ಚನ್ನಾಗಿ ಹೊಡೆಯುತ್ತಾನೆ.) ವೈಜವ್ವೆ ಪತಿಯು ಹೊಡೆದ ಪೆಟ್ಟಿನಿಂದ ಬಹಳ ನೊಂದು ಪರಮಾತ್ಮನ ಸ್ಮರಣೆಯಲ್ಲಿಯೇ ಮಲಗುವಳು. ಶಿವನು ಕನಸಿನಲ್ಲಿ ಬಂದು )

ಶಿವನು:— ವೈಜವ್ವೆಯೇ ಅಂಜಬೇಡ, ಚಿಂತಿಸಬೇಡ, ನಾಳೆ ಪಟ್ಟಣದಲ್ಲಿ ಒಂದು ಅದ್ಭುತವಾಗುವದು. ನಾನು ಪಟ್ಟಣದಲ್ಲಿಯ ಜಿನನ ಶಿರವನ್ನೊಡೆದು ಅಲ್ಲಿ ಮೂಡುವೆನು ಅಂಜಬೇಡ. (ಅಂತರ್ಧಾನನಾವನು ಎಚ್ಚರವಾದಳು.)

ವೈಜವ್ವೆಃ— ನನ್ನಮೇಲೆ ಶಿವನ ಕರುಣವಿದೆ. (ಸ್ತುತಿಸಲಾರಂಭಿಸಿದಳು)

ಕರುಣಿಸು ಕರುಣಿಸು ಗಿರಿಜಾವಲ್ಲಭನೇ
ಕರುಣಿಸು ಕರುಣಿಸು ವೃಷಭವಾಹನನೇ
ಕರುಣಿಸು ಕರುಣಿಸು ಶಂಕರಾ ಶಂಕರಾ
ಕರುಣಿಸು, ಕರುಣಿಸು ಚಂದ್ರಮೌಳಿ ಮಹಿಮೇಗ್ರಚರ್ಮಾಂಬರಾಸುರನೇ

### ೪ನೇ ದೃಶ್ಯ.

(ಮರುದಿನ ಮುಂಜಾವಿನಲ್ಲಿ ಶ್ರವಣರು ಬಸದಿಗೆ ಹೋಗಿ ಕದ ತೆರೆಯಲು ಪ್ರಯತ್ನಿಸುತ್ತಾರೆ. ಸಾಧ್ಯವಾಗುವದಿಲ್ಲ.)

ಒಬ್ಬಃ— ಎಷ್ಟು ತಳ್ಳಿದರೂ ಬಾಗಿಲು ತೆರೆಯಲೊಲ್ಲದು, ಏಕೆ?

ಇನ್ನೊಬ್ಬ:— ನಿನ್ನೆ ನೇಮಿಸೆಟ್ಟಿ ವೈಜವ್ವೆಯನ್ನು ಹೊಡೆದನಂತೆ, ಆ ಮೂಲಕ ನಾವೆಲ್ಲರೂ ಗಾಸಿಯಾದೆವು. ಆ ಪೆಟ್ಟುಗಳು ನಮ್ಮಮೇಲೆ ಬಿದ್ದವು.

೩ನೇಯವನುಃ—ಹೌದಪ್ಪಾ, ನನಗೂ ಬಿದ್ದವು. ನೋಡು ಬಾಸುಂಡಿಗಳು. (ತೋರಿಸುವರು) (ಆಗ ಎಲ್ಲರೂ 'ಹೌದು' ಎನ್ನುವರು.)

೧ನೇಯವನು:— ಎಲ್ಲರೂ ಕೂಡಿ ವೈಜವ್ವೆಯ ಹತ್ತಿರ ಹೋಗೋಣ ನಡೆಯಿರಿ. (ಎಲ್ಲರೂ ಹೋಗುವರು. )



ಎಲ್ಲರೂಃ— ನಿನಗಾದ ನೋವಿನಿಂದ ನಾವು ಬಳಲಿದೆವು. ನಮ್ಮನ್ನು ಕ್ಷಮಿಸು ಅಲ್ಲದೆ ಅರುಹನು ಕದವನ್ನಿಕ್ಕಿಕೊಂಡು ನಮ್ಮನ್ನು ಕಾಡಹತ್ತಿದ್ದಾನೆ. ನೀನು ಅಲ್ಲಿಯ ವರೆಗೆ ಬಂದು ಕದವನ್ನು ತೆರೆಯುವಂತೆ ಮಾಡು.

ವೈಜವ್ವೆ:— ಏಕೆ ಬಂದಿರಣ್ಣಾ ನಾನೇ ಬರುತ್ತೇನೆ ನಡಿಯಿರಿ. (ಹೋಗುವರು. ಜಿನಾಲಯದ ಬಾಗಿಲಲ್ಲಿ ನಿಂತಿರುವರು.)

ವೈಜವ್ವೆ—" ದೇವಸತ್ಯ ನಿತ್ಯಭರ್ಗ ಭೀಮರುದ್ರ ಕರುಣಿಸಯ್ಯ

ದೇವಸಕಲಭುವನ ತಿಮಿರಹರಣ ಕಿರಣ ಕರುಣಿಸಯ್ಯ
ದೇವಗಿರಿಶ ಗಿರಿಜೆಯರಸು ತತ್ವದರ್ಶ ಕರುಣಿಸಯ್ಯ
ದೇವಚಂದ್ರ ಸುರನದೀಕಳಾಪ ಜೂಟಕರುಣಿಸಯ್ಯ"

ಸ್ತುತಿಸಿಬಾಗಿಲು ತೆರೆದ`ು ಅಲ್ಲಿ ಜಿನನಶಿರವು ಒಡೆದುಬಿದ್ದಿತ್ತು. ಅದರ ಸ್ಥಳದಲ್ಲ ಶಿವಲಿಂಗ ಮೂಡಿತ್ತು.

ನೆರೆದವರು— ಅಮ್ಮಾ, ಇದೇನು ತಾಯಿ, ಇದೇನದ್ಭುತ, ಜೀನನಶಿರವು ಒಡೆದು ಬಿದ್ದಿದೆ, ಶಿವಲಿಂಗ ಮೂಡಿದೆ. ಶರಣು ತಾಯಿ, ನಮಗೆ ಲಿಂಗದೀಕ್ಷೆ ಮಾಡುತಾಯಿ

ನೇಮಿಸೆಟ್ಟಿ— (ಲಿಂಗದೆದುರಿಗೆನಮಸ್ಕರಿಸಿ ನಾನು ಪಾಪಿಷ್ಠನು, ನಿನ್ನನ್ನು ನೋಯಿಸಿದೆನು, ಕ್ಷಮಿಸು

ವೈಜವ್ವೆ:— ನೀನು ನನ್ನ ಪತಿಯು. ಪತಿಯ ತಪ್ಪು ಸತಿಯು ಕ್ಷಮಿಸಲು ಬರಲಾರದು. (ಎಲ್ಲರಿಗೂ ಲಿಂಗವರ್ಶನ ಮಾಡಿಸಿ, ಲಿಂಗದೊಳೈಕ್ಯವಾಗಲು ಸಿದ್ಧಳಾಗುವಳು)

ನೇಮಿಶೆಟ್ಟಿ:— ನನಗೇನಪ್ಪಣೆ ?

ವೈಜವ್ವೆಃ— ಪರಮಾತ್ಮನು ಬೇಡಿದ ವರವನ್ನಿತ್ತು ರಕ್ಷಿಸುವನು ಅವನನ್ನು ನೀನು ಅರ್ಚಿಸುತ್ತ ಶಿವಾನುಭವದೊಳಗೆ ಕಾಲ್ಕಳಿ. ನನಗೆ ಶಿವನು ಕರೆಯುತ್ತಾನೆ. ( ಎಂದು ಹೇಳಿ ಲಿಂಗದೊಳಗೆ ಐಕ್ಯವಾದಳು.)

## ಸನ್ಯಾಸಿ [ವಿರಕ್ತ]

ಲೇಖಕರು:— ಶ್ರೀ ಶಿವಾನಂದ ಸ್ವಾಮಿಗಳು, ಗವಿಮಠ
ತೆಗ್ಗಿಹಳ್ಳಿ, ತಾ ಇಂಡಿ.

ತ್ಯಾಗ ಸೇವೆಗಳೇ ಸನ್ಯಾಸದಲಕ್ಷಣವೆಂದು ಶ್ರೀ ವಿವೇಕಾನಂದರು ಹೇಳಿದ್ದಾರೆ. ಅದರಂತೆ ಅವರ ಜೀವನವೂ ಕೂಡ ಹೆಣೆದಿತ್ತು. ಸ್ವಾರ್ಥತ್ಯಾಗದಿಂದ ಪರ ಹಿತಕ್ಕಾಗಿ ಸದಾ ದುಡಿಯುವದೇ ಸನ್ಯಾಸಿಯ ಕರ್ತವ್ಯ. ಮೊದಲು ಸ್ವಾರ್ಥತ್ಯಾಗದಿಂದ ತನ್ನ ಮನ ಪ್ರಾಣ ಭಾವ ಶುದ್ಧವಾಗುವವು. ಇದರಿಂದ ಮುಂದೆ ಸೇವೆ ಮಾಡಲಿಕ್ಕೆ ಸಹಜ ಬರುವದು. ಅನ್ಯರ ಸೇವೆ ಗೈಯುವದರಿಂದ ತನ್ನಂತೆ ಪರರು ಪರರೇ ಹರನು ಎಂದು ಅನುಭವವಾಗುವದು. ಸಾಧನರೂಪಿಯಾದ ಭಕ್ತ ಮಹೇಶ ಪ್ರಸಾದಿ ಇವು ತ್ಯಾಗವನ್ನು ಹೇಳಿದರೆ ಸಾಧ್ಯರೂಪಿಯಾದ ಪ್ರಾಣಲಿಂಗ ಶರಣ ಐಕ್ಯ ಇವು ಸೇವೆಯನ್ನು ಭೋಧಿಸುವವು. ತ್ಯಾಗದಿಂದ ನುಡಿ ಶುದ್ಧವಾದರೆ ಸೇವೆಯಿಂದ ನಡೆ ಶುದ್ಧವಾಗುವದು. ಇದರಲ್ಲಿ ಜ್ಞಾನ ಕ್ರಿಯೆಗಳ ಸಮನ್ವಯ ಕಾಣುವದೇ ಸನ್ಯಾಸಿಯ ಲಕ್ಷಣವೆಂದು ಹೇಳಬಹುದು. ನಡೆನುಡಿ ಒಂದು ಗೂಡಿಸುವದೇ ಸನ್ಯಾಸಿಯ ಗೊತ್ತುಗುರಿ

ಮಾನವನಿಗೆ ಬೇಕಾದುದೇ ತ್ಯಾಗ. ತ್ಯಾಗವಿಲ್ಲದೆ ಅನ್ಯರ ಸೇವೆ ಘಟಿಸದು. ಅದಿಲ್ಲದೆ ಅದೆಂದೂ ಶಕ್ಯವಾಗಲಾರದು. ತ್ಯಾಗವೆಂದರೆ ಸ್ವಾರ್ಥತ್ಯಾಗ ಅಲ್ಲದೆ ಪ್ರಸಂಗಬಂದರೆ ಸ್ವತ್ಯಾಗಕ್ಕೂ ಈ ಸನ್ಯಾಸಿ ಸಿದ್ಧನಿರಲೇಬೇಕು. ಅಂದರೆ ಮಾತ್ರ ಪರಸೇವೆ ಚನಾಗಿ ಸಾಧಿಸುವದು. ಆಗ ಮಾತ್ರ ಈ ತ್ಯಾಗಿ, ಸನ್ಯಾಸಿ, ವಿರಕ್ತ, ಸ್ವಾಮಿ, ಆಗಿ ಸಕಲರನ್ನು ಸಮದೃಷ್ಟಿಯಿಂದ ನೋಡುವನು. ಆಗ ಸಕಲ ಸ್ತ್ರೀ ಪುರುಷರು ಶಿವ ಶಕ್ತಿಯರೆಂದೇ ಇವನ ದೃಷಿಯಲ್ಲಿ ಕಾಣುವದು. ಇದಕ್ಕಾಗಿಯೇ ಅವರಲ್ಲಿ ಕಡುಬರುವ ಆರ್ಥಿಕ, ನೈತಿಕ, ಸಾಮಾಜಿಕ, ಔದ್ಯೋಗಿಕ ಶೈಕ್ಷಣಿಕ ಮಾನಸಿಕ ಧಾರ್ಮಿಕ ಆಧ್ಯಾತ್ಮಿಕ ರಾಜಕಿಯ ಮೊದಲಾದ ಕುಂದುಕೊರತೆಗಳನ್ನು ಹೊಡೆದೋಡಿಸಲು ಹೆಣಗುವನು ಇದೇ ಇವನ ಸೇವೆ ಇದೇ ಇವನ ಪೂಜೆ. ಇದೆಲ್ಲ ಸಾಧಿಸಬೇಕಾದರೆ ಸ್ವಾರ್ಥವಿದ್ದವರಿಂದ ಎಂದೂ ಶಕ್ಯವಾಗಲಾರದು. ಪರರನ್ನು ಸ್ವಾರ್ಥಿಗಳೆಂದೂ ಪ್ರೀತಿಸಲಾರರು. ಇದಕ್ಕಾಗಿಯೇ ಸ್ವಾರ್ಥವೇ ಪಾಪ, ನಿಸ್ವಾರ್ಥವೇ ಪುಣ್ಯ ಎಂದು ಗಾದೆಯಾಗಿರುವದು. ಇದರಮೇಲಿಂದಲೇ ಪರಪಿಡೆಯೇ ಪಾಪ ಪರೋಪಕಾರವೇ ಪುಣ್ಯ ವೆಂದು ವೇದ ವಾಕ್ಯವಾಗಿರುವದೆಂದು ಹೇಳಬಹುದು ಸ್ವಾರ್ಥದಿಂದ ಪರಪೀಡೆ ಆಗುವದು ಸಹಜ ಸ್ವಾಭಾವಿಕವಾಗಿದೆ. ನಿಸ್ವಾರ್ಥದಿಂದ ಪರೋಪಕಾರವಾಗುವದೂ ಕೂಡ ಅಷ್ಟೇ ಸಹಜ ಸ್ವಾಭಾವಿಕ ವೆಂದು ಹೇಳಬಹುದು.



ನಿಸ್ವಾರ್ಥತೆ ಹೆಚ್ಚು ಲಾಭದಾಯಕ. ಶಾಂತಿದಾಯಕ, ಹಿತದಾಯಕ, ಕಲ್ಯಾಣದಾಯಕ, ಪ್ರೇಮದಾಯಕವೆಂದು ತಿಳಿದರೂ ಜನರು ಅದನ್ನು ಆಚರಣೆಗೆ ತರಲು ತಾಳ್ಮೆಯಿಂದ ಯತ್ನಿಸುವದಿಲ್ಲ. ತ್ಯಾಗವಿಲ್ಲದೆ ಯಾರೂ ಮಹಾ ಕಾರ್ಯಗಳನ್ನು ಮಾಡಲಾರರು. ಮಹಾ ಕಾರ್ಯಕ್ಕೆ ಮಹಾ ತ್ಯಾಗ ಬೇಕೇಬೇಕು. ಅಂದರೆ ಮಾತ್ರ ಜಗತ್ತಿನ ಕಲ್ಯಾಣ ಶಕ್ಯವಾಗುವದು. ಇದೇ ಸನ್ಯಾಸಿ ವಿರಕ್ತರ ಲಕ್ಷಣವಾಗಿದೆ.

ತ್ಯಾಗದಿಂದ ತನ್ನಲ್ಲಿ ಬಲ ಶಕ್ತಿಗಳು ಪ್ರಕಟವಾಗುವವು. ಆಗ ಅವನಿಗೆ ಸೇವೆ ಮಾಡಲು ಆನಂದ ಉತ್ಸಾಹ ಪ್ರೀತಿಗಳುಂಟಾಗುವವು. ತ್ಯಾಗಕ್ಕೆ ಸತ್ಯ, ನಿಷ್ಠೆ ಅವಶ್ಯಬೇಕು. ಅಲ್ಲದೆ ಪ್ರೀತಿಯೂ ಬೇಕೇಬೇಕು. ಭಕ್ತಿ ಪ್ರೀತಿಗಳೆರಡೂ ಒಂದೇ. ಪರಿಪೂರ್ಣ ಭಕ್ತನು ದೇವರನ್ನು ಕಾಣಲು ಗುಡಿ, ದೇಗುಲ, ಮಸೀದಿ, ಚರ್ಚುಗಳಿಗೆ ಹೋಗಬೇಕಾಗಿಲ್ಲ. ಅವನಿಗೆ ದೇವರಿಲ್ಲದ ಸ್ಥಳವೇ ಜಗತ್ತಿನಲ್ಲಿ ಇಲ್ಲ. ಸರ್ವತ್ರ ಸರ್ವದರಲ್ಲಿ ಸರ್ವರಲ್ಲಿ ದೇವರನ್ನು ಈ ಪರಿಪೂರ್ಣ ಭಕ್ತನು ಕಾಣುವ ದೃಷ್ಟಿಯನ್ನು ಪಡೆದಿರುವನು. "ದೇಹವೇ ದೇಗುಲ ಪ್ರಾಣವೇ ದೇವನು" ಎಂದು ಶಿವಶರಣರು ಹೇಳಿದ್ದು ನಿಜವೆಂದು ಹೇಳಬೇಕು. ದೇವಸ್ಥಾನದಲ್ಲಿ ಈ ಪರಿಪೂರ್ಣ ಭಕ್ತನು ದೇವರನ್ನು ಕಾಣುವಂತೆ ಜನರಲ್ಲಿ ದನದಲ್ಲಿ ಸಹ ದೇವರನ್ನು ಕಾಣುವನು. ದೀನ ದರಿದ್ರರಲ್ಲಿ, ಸುಶಿಕ್ಷಿತ ಅಶಿಕ್ಷಿತರಲ್ಲಿ, ಪಾಪಿ ಕೋಪಿಗಳಲ್ಲಿ, ಹರಿಜನ ಗಿರಿಜನರ, ಅಜ್ಞಾನಿ ಜ್ಞಾನಿಗಳಲ್ಲಿ ಮಹಾತ್ಮಾ ದುರಾತ್ಮರಲ್ಲಿ, ಸದಾಚಾರಿ ದುರಾಚಾರಿಗಳಲ್ಲಿ ಹೀಗೆ ಸಕಲರಲ್ಲಿ ದೇವರನ್ನು ಕಾಣುವನು. ಯತ್ರ ಯತ್ರ ಜೀವಃ ತತ್ರ ತತ್ರ ಶಿವಃ ಎಂದು ಶರಣರು ಕಂಡುಂಡಂತೆ ಈ ಪರಿಪೂರ್ಣ ಭಕ್ತನು ಸಹ ಪ್ರತಿಯೊಬ್ಬರ ಹೃದಯ ಮಂದಿರದಲ್ಲಿ ಸರ್ವ ಶಕ್ತನಾದ ಸದಾ ಪ್ರಕಾಶಿಸುತ್ತಿರುವ ಪ್ರೇಮ ಜ್ಯೋತಿ ಕಾಣುವನು. ಈ ಕಾರಣದಿಂದಾಗಿ ಈ ಸನ್ಯಾಸಿ ಈ ವಿರಕ್ತ ಸ್ವಾರ್ಥತ್ಯಾಗ ಮಾಡಿ ಪರಸೇವೆ ಮಾಡುತ್ತಿರುವನು. ಮೇಲೆ ಹೇಳಿದಂತೆ ಸೇವೆಗೆ ಅನಂತ ಮುಖಗಳುಂಟು. ಸನ್ಯಾಸಿಯಾದವನು ಇವೆಲ್ಲವುಗಳನ್ನು ಮಾಡುವನು. ಆಗ ಮಾತ್ರ ಅವನು ದೇಶ ಭಕ್ತ ವೀರಸನ್ಯಾಸಿ ಅಥವಾ ದೇಶಭಕ್ತ ವೀರವಿರಕ್ತನೆಂದು ಹೇಳಬಹುದು.

(೧) ದಾಸೋಹ:— ಪರರಿಗೆ ಅನ್ನ ದಾಸೋಹ, ಜ್ಞಾನದಾಸೋಹ, ವಸ್ತ್ರದಾಸೋಹ, ಧನದಾಸೋಹ ಮೊದಲಾದ ದಾಸೋಹಗಳನ್ನು ಪ್ರೀತಿಯಿಂದ ಪೂಜೆಯಿಂದ ಮಾಡುವನು. ಪ್ರವಚನ ಪುರಾಣ, ಭಾಷಣ ಶಾಸ್ತ್ರ ಮೊದಲಾದವುಗಳಿಂದ ಜ್ಞಾನ ದಾಸೋಹ ಮಾಡುವನು. ಅನ್ನ ದಾಸೋಹಕ್ಕೆ ಪುಕ್ಕಟೆ ಭೋಜನಾಲಯಗಳನ್ನು ಬಡವರಿಗಾಗಿ, ವಿದ್ಯಾರ್ಥಿಗಳಿಗಾಗಿ ತೆರೆಯುವನು. ಇದು ಪ್ರಸಾದದ ಮಹಿಮೆಯನ್ನು ತಿಳಿಸುವದು.

(೨) ಶಿಕ್ಷಣ:— ಶಿಕ್ಷಣದ ಮಹತ್ವ ಅಷ್ಟಿಷ್ಟೆಂದು ಹೇಳಲಿಕ್ಕೆ ಬರುವಂತಿಲ್ಲ. ಶಿಕ್ಷಣ ಪ್ರಸಾದಕ್ಕೆ ಶಾಲೆ, ಹಾಯಸ್ಕೂಲು, ಕಾಲೇಜಗಳನ್ನು ಸ್ಥಾಪಿಸುವನು ಈ ಸನ್ಯಾಸಿಯಿಂದ ವಿದ್ಯಾರ್ಥಿಗಳು ಸ್ಫೂರ್ತಿಯನ್ನು ಪಡೆಯುವರು. ವಿದ್ಯೆಯ ಗೊತ್ತುಗುರಿ ಮಹತಿ ಉತ್ತರ ಬಹಳವಾಗಿದೆ ಅದನ್ನು ಸ್ವಲ್ಪದರಲ್ಲಿ ಹೇಳಬೇಕಾದರೆ– "ಮಾನವನ ಇಚ್ಛಾ ಪ್ರವಾಹ ಮತ್ತು ಅದು ಆವಿರ್ಭವಿಸುವ ರೀತಿ

ನಮ್ಮ ಸ್ವಾಧೀನಕ್ಕೆ ಬಂದು ಫಲಕಾರಿಯಾಗುವದೋ ಅದೇ ವಿದ್ಯಾಭ್ಯಾಸ ಎಂದು ವಿವೇಕಾನಂದರು ಹೇಳಿದ್ದಾರೆ. ಸ್ವಾತಂತ್ರ ಸ್ವಾವಲಂಬನಗಳನ್ನು ತಂದುಕೊಡುವದೇ ವಿದ್ಯೆಯ ಗೊತ್ತುಗುರಿಯಾಗಿದೆ. ಮಾನಸೀಕ ಏಕಾಗ್ರತೆಯೇ ವಿದ್ಯೆಯ ಸಾರಸರ್ವಸ್ವವಾಗಿದೆ. ಏಕಾಗ್ರತೆ ಅನಾಸಕ್ತಿಗಳು ಅದರ ಗೊತ್ತು ಗುರಿಗಳು ವಿದ್ಯೆ ನಮ್ಮ ಜೀವನಭ್ಯುದಯಕ್ಕೆ ನೆರವಾಗಬೇಕು ಇಂಥ ಶಿಕ್ಷಣವು ಅವಶ್ಯಬೇಕು. ಇದನ್ನು ಈ ಸನ್ಯಾಸಿಗಳು ವಿರಕ್ತರು ಪ್ರಸಾರ ಮಾಡಬೇಕು. ಸನ್ಯಾಸಿ ವಿರಕ್ತರಿಂದ ಇದು ಸ್ಫೂರ್ತಿ ಹೊಂದಿ ಬೆಳೆದು ಜನಾಂಗದಲ್ಲಿ ನೆಲಿಸುವದು. ಶುದ್ಧ ಅವಿವೇಕಿಗಳಿಗೆ ಕೆಲಸಕ್ಕೆ ಬಾರದವರಿಗೆ ಈ ಸನ್ಯಾಸಿ ಗಳು ವಿರಕ್ತರು ಪ್ರೋತ್ಸಾಹಿಸಿ ಹುರಿದುಂಬಿಸಿ ಸ್ಫೂರ್ತಿತುಂಬಿ ಅವರ ನೀರಸ ಜೀವನವನ್ನೇ ರಸ ಮಯದವಾದ ದಿವ್ಯ ಜೀವನವನ್ನಾಗಿ ಮಾರ್ಪಡಿಸುವರು. ಇದೇ ಶಿಕ್ಷಣ. ಅದಕ್ಕಾಗಿಯೇ ಶಾಲೆಕಾಲೇಜ ಗಳನ್ನು ಅವರು ತೆರೆಯಬೇಕು. ಇಂಥ ಶಿಕ್ಷಣದಿಂದಲೇ ಕ್ರಾಂತಿ. ಅದಕ್ಕೆ ಸನ್ಯಾಸಿಗಳಾದವರು ಕ್ರಾಂತಿಯ ಕೇಂದ್ರವೆಂದು ಹೇಳಬಹುದು.

(೩) ನೀತಿಃ— ಸನ್ಯಾಸಿ ವಿರಕ್ತರು ತಾವು ಸ್ವತಃ ನೀತಿಯಿಂದ ನಡೆದು ಅನ್ಯರಿಗೆ ನೀತಿ ಯಿಂದ ನಡೆಯಲು ಸ್ಫೂರ್ತಿಯನ್ನು ತಂದುಕೊಡಬೇಕು. ತಮ್ಮ ನಿತ್ಯ ಸದಾಚರಣೆಯಿಂದ ಅನ್ಯರಿಗೆ ನೀತಿಬೋಧೆಮಾಡುವರು. ಅದಕಾಗಿಯೇ ಪಂಚಾಚಾರಗಳನ್ನು ಹೇಳಿದ್ದಾರೆ ಸದಾಚಾರ, ಲಿಂಗಾ ಚಾರ, ಶಿವಾಚಾರ ಭೃತ್ಯಾಚಾರ, ಗಣಾಚಾರ ಎಂದು ಐದು ಆಚಾರಗಳನ್ನು ಹೇಳಿದ್ದಾರೆ. ಸದಾ ಚಾರ, ಲಿಂಗಾಚಾರ, ಶಿವಾಚಾರಗಳು ತನ್ನ ಸ್ವಂತಕ್ಕೆ ಸಂಬಂಧಿಸಿರುವವು. ಇವು ತ್ಯಾಗದಿಂದಲೇ ಬರುವವು. ಇವುಗಳಿಂದಲೇ ತನು ಮನ ಪ್ರಾಣ ಭಾವಗಳು ಶುದ್ಧವಾಗುವವು. ಇವು ಸಾಧನಾವಸ್ಥೆಗೆ ಪೋಷಕವಾಗಿವೆ. ಭೃತ್ಯಾಚಾರ, ಗಣಾಚಾರಗಳು ಸೇವೆಯನ್ನು ಹೇಳುವವು. ಇವು ಸಾಧ್ಯಾವಸ್ಥೆಗೆ ಮೋಕ್ಷವಾಗಿರುವವು. ಇವುಗಳಿಂದಲೇ ಅಂತಿಮಸಿದ್ಧಿ ಸಾಧಿಸುವದು. ಇವರು ಹೊರಗಿನವರಾರನ್ನು ದೂರುವದಿಲ್ಲ, ನಿಂದಿಸುವದಿಲ್ಲ, ತನ್ನ ಬಣ್ಣಿಸಿಕೊಳ್ಳುವದಿಲ್ಲ ಅದನ್ನೇ ಅಣ್ಣನ ವಚನದಲ್ಲಿ ನೋಡಿರಿ. "ಕಳಬೇಡ ಕೊಲಬೇಡ, ಹುಸಿಯ ನುಡಿಯಲುಬೇಡ. ಮುನಿಯಬೇಡ, ಅನ್ಯರಿಗೆ ಅಸಹ್ಯಬಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ ಇದೇ ನಮ್ಮ ಕೂಡಲಸಂಗನ ಒಲಿಸುವ ಪರಿ" ಎಂದು ಹೇಳಿದ್ದು ಸನ್ಯಾಸಿ ವಿರಕ್ತನ ಇರುವಿಕೆಯನ್ನೇ ಹೇಳಿ ದಂತಾಗಿದೆ. ಇದರಂತೆ ಅನ್ಯರಿಗೂ ಸ್ಫೂರ್ತಿಯನ್ನು ತಂದುಕೊಟ್ಟು ಈ ವಿರಕ್ತನು ಅವರನ್ನು ತಿದ್ದುವನು.

(೪) ಆರ್ಥಿಕ ನೆರವು— ಜನರ ಉದ್ಯೋಗಕ್ಕೆ ಅದಂರೆ ಕಾಯಕಕ್ಕೆ ತನ್ನ ಕಾಯಕಗ ಳಿಂದಲೇ ಈ ಸನ್ಯಾಸಿ ವಿರಕ್ತ ಪ್ರೋತ್ಸಾಹ ಸ್ಫೂರ್ತಿಕೊಡುವನು. ಇವನ ಕಾಯಕ ನೋಡಿ ಜನರು ಕಾಯಕ ನಿರತರಾಗುವರು. ಸ್ವಾವಲಂಬಿಯಾಗುವರು. ಇದೇ ಈ ಸನ್ಯಾಸಿ ಜನರಿಗೆ ಕೊಡುವ ಆರ್ಥಿಕ ನೆರವೆಂದು ಹೇಳಬಹುದು. ಸನ್ಯಾಸಿ ವಿರಕ್ತ ನಿಜವಾಗಿ ಜಗತ್ತಿನ ಸಕಲರಿಗೂ ಒಂದು ಪ್ರೋತ್ಸಾಹದ ಸ್ಫೂರ್ತಿಯ ಖಣಿಯಾಗಿರುವನು ಇವನ ನಿತ್ಯ ಸತ್ಯ ಶುದ್ಧಕಾಯಕ ನೋಡಿ ಜನರು ಇವನ ಹಾದಿ ಯನ್ನೇ ಹಿಡಿಯುವರು. ಹೀಗಾಗಿ ಉದ್ಯೋಗದಂಥೆಗಳು ಬೆಳೆದು ಸಮಾಜದಲ್ಲಿ ನಿರುದ್ಯೋಗತನ ಹೇಳ ಹೆಸರಿಲ್ಲದೆ ಓಡಿಹೋಗಲಿಕ್ಕೆ ಈ ಸನ್ಯಾಸಿ ವಿರಕ್ತ ನೆರವಾಗುವನು. ಇದೇ ಇವನು ಮಾಡುವ ಆರ್ಥಿಕ ನೆರವು.



(೫) ದುರ್ಘಟಗಳ ಅಭಾವಃ— ಸನ್ಯಾಸಿ ಸಕಲ ದುರ್ಘಟದಿಂದ ದೂರಿರುವನು ಇದೇ ಅವನ ಮೊದಲಿನ ತ್ಯಾಗ. ಇದರಿಂದಲೇ ಅವನ ಮುಂದಿನ ಯೋಗಸಿದ್ಧಿ. ಜನರು ಇದನ್ನು ಕಂಡು ಅವ ನಿಂದ ಸ್ಫೂರ್ತಿಗೊಂಡು ತಾವೂ ದುರ್ಜನರಿಂದ ದೂರಿರಲು ಸದಾ ಹೆಣಗುವರು. ಇದರಂತೆ ಇವನು ತನ್ನ ದಿವ್ಯ ಅಧಿಕಾರಯುತ ವಾಣಿಯಿಂದ ಬೋಧಿಸುವನು. ನುಡಿ ನಡೆ ಒಂದೇ ಇದ್ದುದರಿಂದ ಇವನ ಬೋಧೆ ಜನರಲ್ಲಿ ಮಳಿಕೆಯೊಡೆದು ಸಸಿಯಾಗಿ ಮರವಾಗಿ ಫಲ ಕೊಡುವದು ಇದರಿಂದ ಆರ್ಥಿಕ ಪರಿಸ್ಥಿತಿ ಸುಧಾರಿಸುವದು ಅಲ್ಲದೆ ನೀತಿವಂತರಾಗುವರು.

(೬) ಭಕ್ತಿ+ಜ್ಞಾನಃ— ಇವುಗಳೂ ಕೂಡ ಇವನ ನಡೆ ನುಡಿ ಬೋಧೆಗಳಿಂದ ಸ್ಫೂರ್ತಿ ಗೊಂಡು ಬೆಳೆಯುವವು ಸದಾ ತನ್ನ ದಿವ್ಯವಾಣಿಯಿಂದ ಪುರಾಣ, ಕೀರ್ತನ, ಪ್ರವಚನ, ಭಾಷಣ, ಶಾಸ್ತ್ರ ಮೊದಲಾದವುಗಳನ್ನು ಹೇಳುತ್ತ ಜನತೆಯಲ್ಲಿ ಭಕ್ತಿ ಜ್ಞಾನಗಳನ್ನು ಬಿತ್ತುವನು. ಇದೇ ಇವನ ಆಧ್ಯಾತ್ಮ ಸೇವೆ ಇವನೇ ವಿರಕ್ತ ಇವನೇ ಮಹಾಸ್ವಾಮಿ.

(೭) ರಾಜಕೀಯ ರಂಗಃ— ಧರ್ಮ, ನೀತಿ. ಭಕ್ತಿ, ಜ್ಞಾನ ಮೊದಲಾದವುಗಳನ್ನು ನಷ್ಟ ಮಾಡುವ ರಾಜಕೀಯ ಪಕ್ಷವನ್ನು ಇವನು ಯೋಗ್ಯ ಅಸ್ತ್ರದಿಂದ ಎದುರಿಸಬೇಕಾಗುವದು. ಇದಕ್ಕಂಜಿ ಬಿಟ್ಟರೆ ಎಲ್ಲವೂ ನಷ್ಟವಾಗುವದು ಧರ್ಮ, ನೀತಿ, ಸತ್ಯ ಸ್ವಾತಂತ್ರ್ಯಗಳಿಗೆ ಚ್ಯುತಿ ಬರುವ ಯಾವದೇ ಪಕ್ಷವನ್ನು ಇವನು ಧೈರ್ಯದಿಂದ ಎದುರಿಸಭೇಕು. ಅಂದರೆ ಇವನು ಮಾಡುವ ಕಾರ್ಯಗಳು ಜಯ ಪ್ರಸಾದವಾಗುವವು. ಇವನು ಅಂಜಿ ಹಿಂಜರಿದರೆ ವಿರಕ್ತನಾಗಲಾರ ಧರ್ಮವನ್ನು ನಷ್ಟಮಾಡಿದ ಪಾಪ ಇವನಿಗೆ ಬರುವದು. ಇವನು ಯೋಗ್ಯ ಪಕ್ಷಪಂಗಡಗಳಿಗೆ ಶಕ್ಯವಿದ್ದಷ್ಟು ಅಂತರಂಗ ಬಹಿರಂಗವಾಗಿ ಸಹ ನೆರವಾಗುವನು. ಇದೂ ಕೂಡ ಈ ವಿರಕ್ತನ ಕರ್ತವ್ಯವಾಗಿದೆ. ಸತ್ಯ, ಅಹಿಂಸೆ, ಬ್ರಹ್ಮಚರ್ಯ ಮುನ್ನ ತಪ ಜಪ, ಸೇವೆ, ಧ್ಯಾನ, ಪೂಜೆಗಳಿಂದ, ತ್ಯಾಗ, ಮನೋನಿಗ್ರಹ, ಇಂದ್ರಿಯನಿಗ್ರಹ ಆಸ್ತೇಯಗಳಂತೆ ನಡೆಯುವದರಿಂದ ಅವನು ಈ ಜನರಲ್ಲಿ ಯಾರಿಗೂ ಅಂಜಬೇಕಾಗಿಲ್ಲ. ದೇವರಿಗೂ ಅಂಜುವದಿಲ್ಲ. ಅದಕ್ಕೆ ಇವನು ತನ್ನ ಸಂಕಲ್ಪ ಶಕ್ತಿಯಿಂದ ಜಯಗಳಿಸುವನು ಇಂಥವರಿಗೆ ದೇಶ ಭಕ್ತ ವೀರಸನ್ಯಾಸಿ ವೀರ ವಿರಕ್ತನೆಂದು ಹೆಸರುವಾಸಿಯಾಗುವನು. ಇಂಥವರೇ ನಮ್ಮ ರಾಜ್ಯಕ್ಕೆ ಈಗ ಬೇಕಾಗಿದ್ದಾರೆ. ಆಗ ಮಾತ್ರ ದೇಶದಲ್ಲಿ ಸುಖ ಶಾಂತಿ ನೆಮ್ಮದಿ ಸಮೃದ್ಧಿಗಳು ನೆಲಿಸುವವು.

(೮) ಸಾಹಿತ್ಯ ಸೇವೆಃ— ಸನ್ಯಾಸಿಯಾದವನು ಅನೇಕ ಧಾರ್ಮಿಕ ಆಧ್ಯಾತ್ಮಿಕ ಹೊತ್ತಿಗೆ ಗಳನ್ನು ತನ್ನ ಅನುಭವದಿಂದ ಬರೆಯುವನು ಅವುಗಳನ್ನು ಜನರ ಕಲ್ಯಾಣಕ್ಕಾಗಿ ಮುದ್ರಿಸಿ ಪ್ರಕಾಶ ಗೊಳಿಸುವನು ಅಥವಾ ಅನ್ಯರ ಯೋಗ್ಯ ಗ್ರಂಥಗಳನ್ನು ಪ್ರಕಟಿಸಲು ನೆರವಾಗುವನು. ತಿಂಗಳ ಪತ್ರಿಕೆ ವಾರ ಪತ್ರಿಕೆಗಳನ್ನು ಹೊರಡಿಸುವನು ಇದರಿಂದ ಅವನ ತತ್ವಸಿದ್ಧಾಂತ ಜನರಲ್ಲಿ ಪ್ರಚಾರವಾಗುವವು ಜ್ಞಾನ ದಾಸೋಹ ನಡೆಯುವದು ಇದೂ ಕೂಡ ಸನ್ಯಾಸಿ ವಿರಕ್ತನ ಕರ್ತವ್ಯವೆಂದು ಹೇಳಬೇಕು.

(೯) ಮಂತ್ರೋಪದೇಶಃ — ಇದು ಸನ್ಯಾಸಿಯ ಕರ್ತವ್ಯ. ಮೇಲಿನಂತೆ ಇದ್ದವರು ಮಾತ್ರ ಇದಕ್ಕೆ ಅಧಿಕಾರಿಗಳು ಇವರೇ ನಿಜವಾದ ಗುರುಗಳು ಯೋಗ್ಯ ಸನ್ಯಾಸಿವಿರಕ್ತರು ಇದನ್ನು ಮಾಡಬೇಕು.

ಅಂದರೆ ತನ್ನಂತೆ ಅನ್ಯರನ್ನು ಮಾಡಲಿಕ್ಕೆ ಇದರಿಂದ ಶಕ್ಯವಾಗುವದು. ಕುರಡಿ ಹುಳಗಳು ಕೀಡಿಯನ್ನು ತನ್ನಂತೆ ಮಾಡುವದು ಶಿಷ್ಯರು ಗುರುಗಳಾಗಲಿಕ್ಕೆ ಇದರಿಂದ ಶಕ್ಯವಾಗುವದು. ಇದು ವಿರಕ್ತನ ಕರ್ತವ್ಯವೆಂದು ಬೇರೆ ಹೇಳಬೇಕಾಗಿಲ್ಲ.

(೧೦) ಸಾಮಾಜಿಕ ಸೇವೆ:— ಬೇರೆ ಬೇರೆ ಸಮಾಜದವರ ಆಚಾರ ವಿಚಾರದಂತೆ ನಡೆಯಲು ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟು ಅದರಲ್ಲೇ ಉತ್ತಮ ಪ್ರಗತಿಯಾಗುವಂತೆ ಸರ್ವ ಧರ್ಮ ಸಮನ್ವಯ ಮಾಡಿ ಬೋಧಿಸಿ ಅವರಿಗೆ ಮಾರ್ಗದರ್ಶನ ಮಾಡಬೇಕು. ಇದೇ ಸನ್ಯಾಸಿಯು ಕರ್ತವ್ಯ. ನಮ್ಮ ನಾಡಿನಲ್ಲಿ ಅನೇಕ ಸಮಾಜಗಳಿರುವವು. ಎಲ್ಲರೂ ಈ ಸನ್ಯಾಸಿಯಿಂದ ಸ್ಫೂರ್ತಿ ಪ್ರೋತ್ಸಾಹ ಪಡೆಯುವಂತಾಗಬೇಕು, ಎಲ್ಲ ಸಮಾಜದವರೂ ತಮ್ಮ ರೀತಿ ನೀತಿಗಳಂತೆ ಸತ್ಯ ಅಹಿಂಸೆಯಿಂದ ನಡೆದು ಪರಧರ್ಮ ಸಹಿಷ್ಣುಗಳಾಗಿ ಎಲ್ಲರೂ ಸರಿಸಮಾನ ಹಕ್ಕುಬಾಧ್ಯತೆಗಳನ್ನು ಅನುಭೋಗಿಸುತ್ತ ಸುಖ ಶಾಂತಿ ನೆಮ್ಮದಿಯಿಂದ ಬಾಳುವಂತಾಗಬೇಕು. ಇದೇ ವಿರಕ್ತನ ಕೆಲಸವಾಗಿದೆ.

(೧೧) ಮುಕ್ತಿಃ— ಸನ್ಯಾಸಿಯಾದವನು ತನ್ನ ಮುಕ್ತಿಯನ್ನು ಸಹ ಲೋಕಕಲ್ಯಾಣಕ್ಕಾಗಿ ತ್ಯಾಗಮಾಡುವನು. ತನಗೆ ಪರರ ಸೇವೆಯಲ್ಲಿ ದುಃಖವಾದರೂ ಅದನು ಸಹಿಸಿಕೊಂಡು ಸೇವೆ ಮಾಡುವನು. ಇದೇ ಅವನ ನಿತ್ಯದ ಪೂಜೆ ಜಪ. ಧ್ಯಾನ, ಯೋಗ, ತಪಗಳಾಗಿರುವವು. ಆದರೂ ನಿತ್ಯ ಕೆಲವು ವೇಳೆ ಆಸನ, ಪೂಜೆ, ಮೌನ, ಧ್ಯಾನ, ಜಪಗಳನ್ನು ಮಾಡೇಮಾಡುವನು. ಜನರು ಗಾಢ ನಿದ್ರೆಹೋದಾಗ ಈ ವಿರಕ್ತನು ಎಚ್ಚರಿದ್ದು ಇವುಗಳನ್ನು ಹೆಚ್ಚಾಗಿ ಮಾಡುವನು. ಆದರೆ ಇವನು ಮುಕ್ತಿ ಮುಕ್ತಿ ಎಂದೂ ಸದಾ ಅರಚುವದಿಲ್ಲ. ಜನಸೇವೆ ಜನರ ಕಲ್ಯಾಣ ಎಂದು ಸದಾ ಅರಚುತ್ತ ಕನಸುಕಾಣುವನು. ಇದಕ್ಕಾಗಿ ಅನೇಕ ಜನ್ಮಗಳನ್ನು ಸಹ ಧಾರಣ ಮಾಡಲು ಸದಾ ಸಿದ್ಧನಿರುವನು. ದುರುಳ ವೇದಾಂತಿಗಳಂತೆ ಜನ್ಮಮರಣಕ್ಕೆ ಅಂಜುವದಿಲ್ಲ. ವೀರನಂತೆ ಹುಟ್ಟಿ ವೀರನಾಗಿ ಬಾಳಿ ಬದುಕುವನು. ಇದೇ ನಿಜವಾದ ಸನ್ಯಾಸಿ, ವಿರಕ್ತನ ಲಕ್ಷಣವೆಂದು ಹೇಳಬಹುದು.

ಇಂಥ ಇನ್ನೂ ಅನೇಕ ಇವನ ಕರ್ತವ್ಯ ಕರ್ಮಗಳಿರುವವು ಸ್ಥಳದ ಅಭಾವದ ಮೂಲಕ ಬರೆಯುವದಾಗುವದಿಲ್ಲ. ಇಷ್ಟರಮೇಲಿಂದ ನಿಜವಾದ ಸನ್ಯಾಸಿ ವಿರಕ್ತನು ಎಂಥವನು? ಹೇಗಿರಬೇಕೆಂದು ಹೊಳೆಯುವದು. ಇಂಥ ವಿರಕ್ತನಲ್ಲಿ ಸಾಹಸ, ಶ್ರದ್ಧೆ, ನಿಷ್ಠೆ, ಶಕ್ತಿ, ಬಲ, ತೇಜ, ಓಜ, ನಿರ್ಭಯತೆ, ಶಾಂತಿ, ಸ್ಫುರಣೆ, ಸ್ಥೈರ್ಯ, ಪರಿಶುದ್ಧತೆ, ಆತ್ಮಸಮರ್ಪಣೆ ಮೊದಲಾದ ದಿವ್ಯ ಭವ್ಯ ಒಳ್ಳೊಳ್ಳೇ ಸದ್ಗುಣಗಳಿರುವವು. ಇದರಿಂದ ಸಕಲ ಜನರ ಹೃದಯಗಳನ್ನು ಸಹಜ ಆಕರ್ಶಿಸುವನು. ಅದಕ್ಕಾಗಿ ಜನರು ಅವನ ಕಡೆಗೆ ಓ ನೋಡುತ್ತ ಹುಚ್ಚೆದ್ದು ಕುಣಿಯುವರು. ಅವನ ತಾಳಿಗೆ ತಕ್ಕಂತೆ ಕುಣಿಯುವದು. ಇದು ಸಹಜ ಸ್ವಭಾವವಿರುವದು. ಇವರೇ ನಿಜವಾದ ಸನ್ಯಾಸಿಗಳು. ಇವರೇ ವಿರಕ್ತರೆಂದು ಹೇಳಬಹುದು. ಇವರೇ ಸ್ವಾಮಿಗಳು, ಇವರೇ ಯೋಗಿಗಳು.

ಶ್ರೀ ಮ. ನಿ. ಪ್ರ ಸ್ವ. ಶ್ರೀ ಬಂಥನಾಳ ಶಿವಯೋಗಿಗಳವರು ಈ ಮೇಲೆ ಕಾಣಿಸಿದ ಸಕಲ ಕಾರ್ಯ ಕ್ಷೇತ್ರಗಳ್ಲಿ ಸರಿಯಾಗಿ ಕಾರ್ಯಗೈದಿದ್ದಾರೆ ಗೈಯುತ್ತಲೂ ಇದ್ದಾರೆ. ಇದರಪರಿಣಾಮುವಾಗಿ ಅನೇಕ



ಶಾಲೆ ಕಾಲೇಜ ಹಾಯಸ್ಕೂಲ ಭೋಜನಾಲಯ ಮೊದಲಾದ ಸಂಸ್ಥೆಗಳು ಇವರಿಂದ ಸ್ಥಾಪಿಸಲ್ಪಟ್ಟಿವಲ್ಲದೆ, ಉಳಿದವರೂ ಕೂಡ ಇವರಿಂದ ಆಶೀರ್ವಾದ ಹೊಂದಿ ಸ್ಫೂರ್ತಿಗೊಂಡು ಅನೇಕ ಶಾಲೆ ಕಾಲೇಜಗಳನ್ನು ಸಹ ಸ್ಥಾಪಿಸಿದ್ದಾರೆ. ಅನೇಕ ಮಠಗಳ ಅಧಿಪತಿಗಳಾಗಿ ಎಲ್ಲ ಕಡೆಗೆ ಅನ್ನದಾಸೋಹ ಜ್ಞಾನದಾಸೋಹ ವಸ್ತ್ರದಾಸೋಹ ಧನದಾಸೋಹಗಳನ್ನು ಸಹ ನಡಿಸಿದ್ದಾರೆ. ಆದಕ್ಕೆ ಇವರ ಅನುಕರಣವನ್ನು ಉಳಿದ ಸ್ವಾಮಿಗಳು ಮಾಡಿ ದೇಶ ಕಲ್ಯಾಣ ಸಮಾಜ ಕಲ್ಯಾಣ ಮಾಡುವದು ಒಳ್ಳೇದೇ ಸರಿ ಅಂದರೆ ಇವರ ಜೀವನವೂ ಸಹ ಒಳ್ಳೇ ಸಾರ್ಥಕವಾಗುವದರಲ್ಲಿ ಸಾದೇಹವಿಲ್ಲ. ಹೀಗೆ ಮಾಡಿ ಉಳಿದವರು ಕೂಡ ಯೋಗ್ಯಸ್ವಾಮಿಗಳು ಯೋಗ್ಯಸನ್ಯಾಸಿಗಳು ಯೋಗ್ಯವಿರಕ್ತರೆಂದು ಹೆಸರು ವಾಸಿಯಾದರೆ ಬಹಳ ಒಳ್ಳೇದಲ್ಲವೇ. ? ಶ್ರೇಯಸ್ಕರವಲ್ಲವೇ. ? ೭೭೦ ಅಮರ ಗಣಾಧೀಶ್ವರರ ಪೂಜೆಮಾಡಿ ೭೭೦ ಅಮರ ಗಣಂಗಳ ಸ್ಮಾರಕ ರಚಿಸಿ ಧರ್ಮದಲ್ಲಿ ಒಳ್ಳೇ ಜಾಗ್ರತೆಯನ್ನು ಮಾಡಿರುವರು. ಪರಪ್ರಾಂತದವರಿಗೂ ಪರ ಧರ್ಮಿಯರಿಗೂ ಕೂಡ ಈ ಧರ್ಮದ ಪರಿಚಯವನ್ನು ಚನ್ನಾಗಿ ತಂದು ಕೊಟ್ಟಿರುವರೆಂದು ಧಾರಾಳವಾಗಿ ಹೇಳಬಹುದು.

ಸ್ವಾಮಿಗಳು ಸನ್ಯಾಸಿಗಳು ವಿರಕ್ತರು ಬಂದಕೂಡಲೇ ಪ್ರಪಂಚದಿಂದ ಓಡಿ ಹೋಗಿ ಅಡವಿಯಲ್ಲಿ ವಾಸಿಸಿ ಭಿಕ್ಷಾನ್ನದಿಂದ ಜೀವಿಸಿ ಕರಿಚ್ಚರಂತೆ ಜೀವಿಸಿ ಯಾರ ಉಸಾಬರಿಯನ್ನು ಮಾಡದೆ ಇರವದು ಸನ್ಯಾಸವಲ್ಲ ವಿರಕ್ತಿಯೂ ಅಲ್ಲ ಮೇಲೆ ಹೇಳಿದಂತೆ ಇದ್ದವರೇ ನಿಜವಾದ ಸನ್ಯಾಸಿಗಳು ಹೊರತು ಕ್ಯಾವಿ ಧರಿಸಿ ಆವಿಗೆ ಮೆಟ್ಟು, ಜಡೆ ಬಿಟ್ಟು, ಇಲ್ಲವೆ ಬೋಳದೆಲೆ ಮಾಡಿಕೊಂಡು, ರುದ್ರಾಕ್ಷಿ ಧರಿಸಿ, ಮೈಗೆ ಭಸ್ಮ ಬಳಿದುಕೊಂಡು ತಿರುಗಿದರೆ, ಅವರೆಂದೂ ಸನ್ಯಾಸಿಗಳಲ್ಲ. ಕೂಡಿದ ವಿರಕ್ತರಲ್ಲ. ಸ್ವಾಮಿಗಳೂ ಅಲ್ಲ ನಾವು ಹೇಳಿದ ಎಲ್ಲ ಗುಣಗಳಿಂದ ಕೂಡಿದ ಶ್ರೀ ಬಂಥನಾಳ ಶಿವಯೋಗಿಗಳ ಷಷ್ಠಬ್ಧಿ ಕಾಲದಲ್ಲಿ ಲೇಖಕರಿಗೆ ಗ್ರಂಥಕಾರರಿಗೆ ಸ್ಥಾನ ಕೊಟ್ಟದ್ದು ಭೂಷಣವೇ ಸರಿ. ಇದರಂತೆ ಇವರು ಮುಂದೆ ಶತಬ್ಧಿಯನ್ನು ಸಹ ಕಾಣಲೆಂದು ಆ ಪರಾತ್ಪರ ಪರಮಾತ್ಮನಲ್ಲಿ ಅನನ್ಯ ಭಕ್ತಿಯಿಂದ ಪ್ರಾರ್ಥಿಸಿ, ಲೇಖಣಿಗೆ ವಿರಾಮಕೊಡುವೆನು.

# ತಿರುಪತಿ ವಿಗ್ರಹದ ಬಗ್ಗೆ ಸಂಶೋಧನೆ.

ಲೇಖಕರು.
ವೀರಶೈವ ಇತಿಹಾಸ ಪ್ರವೀಣ
**ಶ್ರೀ. ಬಿ. ಸಿ. ಶ್ರೀನಿವಾಸರಾಯರು, M. A. M. R. A. S.**
ಮತ್ತು ಮಾಜಿ. ಇತಿಹಾಸ ಪ್ರಾಧ್ಯಾಪಕರು. ಶರಣಬಸವೇಶ್ವರ ಕಾಲೇಜ, ಗುಲ್ಬುರ್ಗ.

## ಕವಿಗಳ ಆಧಾರ.

೧. ಅಣ್ಣಮಾಚಾರಿ ಇವನು, ವೈಷ್ಣವ ಕವಿ, ಈತನಕಾಲ ೧೪೨೯ ರಿಂದ ೧೪೪೬ ರ ವರೆಗೆ ಅಂದರೆ ಈತನು ವಿಜಯನಗರದ ಸಂಗಮ ವಂಶದ ವೀರಶೈವ ಚಕ್ರವರ್ತಿ ಫ್ರೌಢರಾಯನ ೧೪೨೯ ರಿಂದ ೧೪೪೬) ಕಾಲದವನು. ಈ ವೈಷ್ಣವ ಕವಿಯಾದ ಅಣ್ಣಮಾಚಾರಿ ತಿರುಪತಿ ವಿಗ್ರಹವನ್ನು ಶ್ರೀನಿವಾಸ ಅಥವಾ ಶ್ರೀ ವೆಂಕಟೇಶ್ವರ ಎಂದಾಗಿ ಕರೆದನು.

ಫ್ರೌಡದೇವರಾಯನು ವೀರಶೈವನು ಎಂಬುದಕ್ಕೆ ಆಧಾರಗಳನ್ನು ನೋಡಬೇಕಾದರೆ ಈ ಕೆಳಗೆ ಕಂಡ ವಿಷಯವನ್ನು ಗಮನಿಸಿರಿ.

೨. ಶೈವಸನ್ಯಾಸಿ ಅರುಣ ಗಿರಿನಾಥರ್ ಎಂಬವನು ಸಹ ಮೇಲ್ಕಂಡ ವಿಜಯನಗರದ ಸಂಗಮ ವಂಶದ ವೀರಶೈವ ಫ್ರೌಡದೇವರಾಯನ ಕಾಲದವನು. (೧೪೨೯ ರಿಂದ ೧೪೪೬ ರ) ಈತನು ತಿರುಪತಿ ವಿಗ್ರಹವನ್ನು ಸುಬ್ರಂಮಣ್ಯ ಎಂಬುದಾಗಿ ಕರೆದಿದ್ದಾನೆ.

೩. ವೀರಶೈವ ಸನ್ಯಾಸಿ ಚಿಲಕಲವಾಡಿ ಶ್ರೀಮನ್‌ನಿರಂಜನ ನಿಜಮುನಿ ಶಿವಯೋಗಿಗಳೂ ಸಹ ಮೇಲ್ಕಂಡ ವಿಜಯನಗರದ ಸಂಗಮ ವಂಶದ ವೀರಶೈವ ಚಕ್ರವರ್ತಿ ಫ್ರೌಡರಾಯನ ಕಾಲದವನು. (೧೪೨೯ ರಿಂದ ೧೪೪೬ ರ) ಅಂದರೆ ವೈಷ್ಣವ ಅಣ್ಣಮಾಚಾರಿ; ಶೈವ ಅರುಣಗಿರಿಸಾಗರ್ ಮತ್ತು ವೀರಶೈವ ಸನ್ಯಾಸಿ ಚಿಲಕಲವಾಡಿ ನಿಜಮುನಿ ಶಿವಯೋಗಿಗಳೂ ಎಲ್ಲರೂ ಮಕಾಲೀನರು ಈ ಮೂವರು ಕವಿಗಳು ೧೪೨೯ ರಿಂದ ೧೪೪೬ ರ ವರೆಗೆ; ವೀರಶೈವ ಫ್ರೌಡರಾಯನ ಕಾಲದಲ್ಲಿದ್ದವರು. ಈ ವೀರಶೈವ ಸನ್ಯಾಸಿ ನಿಜಮುನಿ ಶಿವಯೋಗಿಗಳು ತಿರುಪತಿವಿಗ್ರಹದ ಬಗ್ಗೆ ಏನು ಹೇಳಿದ್ದಾರೆ ಎಂಬುದಕ್ಕೆ ಚಿತ್ರಗಳು ಅಥವಾ ವಾಲೇಗರಿಗಳು ಇನ್ನೂ ಸಿಕ್ಕಿಲ್ಲ.

## ವಸ್ತು ಶಿಲ್ಪದ ಆಧಾರ.

(೪) ಕ್ರಿ. ಶ. ೧೪೪೬ ರ ವರೆಗೆ ತಿರುಪತಿ ದೇವಸ್ಥಾನದ ಉತ್ತರ ಭಾಗದ ಗೋಡೆಮೇಲೆ ಏನೂ ಬರೆಯುವದಕ್ಕೆ ಅವಕಾಶವಿರಲಿಲ್ಲ. ಅಥವಾ ಕ್ರಿ ಶ ೧೪೪೬ ರ ವರೆಗೆ ತಿರುಪತಿದೇವಸ್ಥಾನದ



ಉತ್ತರ ಭಾಗದ ಗೋಡೆ ಮೇಲೆ ಏನೂ ಬರೆದಿಲ್ಲ. ಅಥವಾ ಏನನ್ನೂ ಕೆತ್ತಿಲ್ಲ ಇದಕ್ಕೆ ಕಾರಣವೇನು ಎಂಬುದು ನನ್ನ ಪ್ರಶ್ನೆಯಾಗಿದೆ?

(೫) ಕ್ರಿ. ಶ. ೧೪೪೪ ರ ವರೆಗೆ ಚಂದ್ರಗಿರಿಯನ್ನು ಆಳುತ್ತಿದ್ದವನು ಶ್ರೀಗಿರಿಭೂಪಾಲ; ಈತನ ಕಾಲದಲ್ಲಿ ಈ ಮೇಲ್ಕಂಡ ದೇವಸ್ಥಾನ ವೈಷ್ಣವ ಧರ್ಮಕ್ಕೆ ತರ್ಜುಮೆ ಅಥವಾ ಬದಲಾವಣೆ ಆಯಿತು.

ಈ ತರಹ ದೇವರು, ವೈಷ್ಣವ ಜಾತಿಗೆ ಮತಾಂತರ ಹೊಂದಲು ಕಾರಣವೇನು. ಈ ತರಹ ಜಾತಿಗೆಡಲು ದೇವರಿಗೆ ಏನುಕಾರಣ? ಎಂಬುದಾಗಿ ನನ್ನ ಪ್ರಶ್ನೆ.

ಈ ಮೇಲ್ಕಂಡ ವಿಚಾರಗಳೆಲ್ಲವೂ ವಿಜಯನಗರದ ಸಂಗಮ ವಂಶದ ವೀರಶೈವ ಚಕ್ರವರ್ತಿಯಾದ ವೀರಶೈವಾಗಮ ಸಾರಸಂಪನ್ನ ಫ್ರೌಢದೇವರಾಯನ (೧೪೨೯ ರಿಂದ ೧೪೪೬ ವರೆಗೆ) ಕಾಲಕ್ಕೆ ಸೇರಿವೆ. ಈ ಏಕೈಕ ಚಕ್ರವರ್ತಿ ಕಾಲದಲ್ಲಿ ತಿರುಪತಿ ವಿಗ್ರಹದ ಬಗ್ಗೆ ವಿಚಿತ್ರವಾದ ಅಭಿಪ್ರಾಯಗಳು ಬರಲು ಕಾರಣವೇನು? ಈ ವೀರಶೈವ ಚಕ್ರವರ್ತಿ ಕಾಲದಲ್ಲಿ ತಿರುಪತಿದೇವರು ವೈಷ್ಣವಧರ್ಮಕ್ಕೆ ಮತಾಂತರ ಹೊಂದಲು ಕಾರಣವೇನು? ಮತಾಂತರವಾಗುವ ಹಿಂದೆ ಈ ದೇವಸ್ಥಾನದ ಪರಿಸ್ಥಿವತಿಯನ್ನು ವೀರಶೈವ ಚಕ್ರವರ್ತಿಯಾದ ಫ್ರೌಢದೇವರಾಯನು ತಿರುಪತಿ ದೇವಸ್ಥಾನವನ್ನು ವೈಷ್ಣವ ಧರ್ಮಕ್ಕೆ ಮತಾಂತರ ಹೊಂದಲು ಯಾವ ಕಾರಣದಿಂದ ಅವಕಾಶವನ್ನು ಕೊಟ್ಟನು? ಮತಾಂತರ ಹೊಂದಲು ಕಾರಣಗಳೇನು? ಇದಕ್ಕೆ ಸಾರ್ವಜನಿಕರ ಅಭಿಪ್ರಾಯವನ್ನು ನಾನು ಕೋರಿದ್ದೇನೆ.

ಮುಕ್ತಾಯಃ— ಈ ಮೇಲ್ಕಂಡ ತಿರುಪತಿದೇವರ ಸಂಶೋಧನ ಲೇಖನವನ್ನು ಓದಿದವರು ತಮ್ಮ ಅಭಿಪ್ರಾಯವನ್ನು ಬರೆದು ಕಳಿಸಿ ನಮ್ಮದೇ ಆದ ಯೋಗ್ಯವಾದ ಅಭಿಪ್ರಾಯಕ್ಕೆ ಬರುತ್ತಾರೆ. ನಾನು ಒಬ್ಬ ಯುವಕ ಸಂಶೋಧಕ ನನ್ನ ಮುಂದಿನ ಸಂಶೋಧನೆಗಳಿಗೆ ಸಾರ್ವಜನಿಕರ ಆಶೀರ್ವಾದವನ್ನು ಕೋರುವೆ. ಸಮಸ್ತರಿಗೂ ತಿರುಪತಿ ಶ್ರೀ ಶ್ರೀನಿವಾಸನ ಅನುಗ್ರಹ ಇರಲಿ.

# ಅಷ್ಟಾವರಣ

ಲೇಖಕರು,

ಶ್ರೀ ಎಲ್. ಸಿದ್ಧಗಂಗಾದೇವರು,

ಸಂಸ್ಕೃತ ಪಂಡಿತ, ಗವ್ಹರ್ನಮೆಂಟ ಹಾಯಸ್ಕೂಲು, ಮಂಡ್ಯ.

ಪ್ರಥಮಾವರಣ:— **ಗುರು**

ಗುರುವು ತಾನೋರ್ವನೆಯೆ ಲೋಕದಿ
ನನರ ಕರ್ಮಕೆ ಫಲಗಳೆನಿಸಿಹ
ವರಗಳನು ವರಭೋಗ ಮೋಕ್ಷಗಳನ್ನು ಕರುಣಿಪನು ।
ಗುರುವೆ ಲೋಕದಿ ಶಿವನ ರೂಪನು
ಗುರುವಿಗಿಮ್ಮಿಗಿಲಿರದು ಇಳೆಯೊಳು
ಪರಮನವ ಶಮೆದಮೆಗೆ ಮೇಣ್ ಶಾಂತ್ಯಾದಿಗುಣಗಳಿಗೆ ॥೧॥

ದ್ವಿತೀಯಾವರಣ:— **ಲಿಂಗ**

ಲಿಂಗವನು ಗುರು ಶಾಸ್ತ್ರವಿಧಿಯಿಂ
ದಂಗದೊಳು ಸಂಘಟಿಸಿ ಮುದದೊಳು
ಲಿಂಗದೇಹಿಯ ಮಾಡಿ ಅರಿಪನು ಸ್ಥೂಲ ಸೂಕ್ಷ್ಮಗಳ ।
ಲಿಂಗವದು ಪರತತ್ವವದು ಸಲೆ
ಜಂಗಮದ ನೆಲೆಗಾಣಿಪುದು ಚಿ-
ಲ್ಲಿಂಗಧಾರಣ ಪರಮಶೈವದ ನೆಲೆಗೆ ಆವರಣ ॥೨॥

ತೃತೀಯಾವರಣ:— **ಜಂಗಮ**

ಜಂಗಮರು ಅನವರತ ಜಗದೊಳು
ತುಂಗ ಮಹಿಮೆಯ. ಮೆರೆದಪರು ಜನ
ಜಂಗುಳಿಗೆ ಸಿಲುಕರು ಮಲತ್ರಯ ರಹಿತರಮಲಗುಣರ್ ।

* ಗುರು ಸಾರ್ವಭೌಮ *



ಶ್ರೀ ಬಂಧನಾಳ ಶಿವಯೋಗಿಗಳವರು

ಲಿಂಗನಿಷ್ಠಾಜ್ಞಾನ ಕ್ರಿಯೆಯ
ಲಿಂಗಯೋಗವನಳವಡಿಸಿ ಮಿಗೆ
ಜಂಗಮರು ಭಕುತರನು ಪೊರೆಯುತ ಇಳೆಯೊಳಗೆ ಚರಿಸರ್ ||೩||

ಚತುರ್ಥಾವರಣಃ— **ಪಾದೋದಕ**

ಪಾದಶಬ್ದವು ಪರಮನಂದವು
ಪಾದದುದಕವು ಜ್ಞಾನದವು ನಿ
ರ್ಭೋದ ತತ್ವದ ದೀಕ್ಷೆ ದಿಕ್ಷಾಜ್ಞಾನ ಸಮರಸವು ।
ಸಾಧಕನು। ಗುರುಲಿಂಗ ಜಂಗಮ
ಪಾದದುದಕವ ನೋಜೆಯಿಂದಲಿ
ಸಾಧಿಸುತ ತಾಸ್ವಾದಿಸುತ ತ್ರೈಮಲವ ವರ್ಜಿಪನು ||೪||

ಪಂಚಮಾವರಣಃ— **ಪ್ರಸಾದ**

ಪರಮಗುರು ಶಿವಶರಣ ಲಿಂಗಕೆ
ಇರದೆಮಾಡುನ ಅರ್ಪಣವೆ ತಾ
ಪರಕು ಇಹಕದು ಸುಪ್ರಸಾವವೆ ಶ್ರೇಷ್ಠಸಾಧನವು ।
ಗುರುಜನಂಗಳು ಬಿಕ್ಕು ಮಿಕ್ಕುದ
ನರಿದು ಸೇವಿಪ ಜನುಮ ಪಾವನ
ಪರಮ ಪಾವನ ಮನದಭಾವನ ವಿನತರಾಗಿಹರ ||೫||

ಷಷ್ಠಾವರಣಃ— **ಭಸಿತ**

ಭಸಿತಮದ ಭಾಸಿಫುದು ವಿಲಸಿತ
ಸಸಿಯ ಪೋಲ್ ಧರಿಸುವನ ಭಾಳದಿ
ವಸುಮತಿಯೊಳವ ಕಳೆವ ತನುಮನ ಭವದ ದೋಷಗಳ ।
ಭಸಿತಧಾರಿಯೆ ಪಾಪದೂರನು
ವಸುಧೆಯೊಳು ಶಾಶ್ವತನು ಶಾಂತನು
ಭಸಿತವಣೆಮಾದಿಗಳ ದೊರಕಿಪ ಶೈವದಾವರಣ ||೬||

ಸಪ್ತಮಾವರಣಃ— **ರುದ್ರಾಕ್ಷಿ**

ಅಂಗಜಾರಿಯ ಅಕ್ಷಪನಿಗಳು
ಸಂಗಲಿತು ಸಂಗಳಿತ ಫಲ ಬೀ-
ಜಂಗಳವು ರುದ್ರಾಕ್ಷಿಗಳು ವಿಟ ಶೈವ ಲಾಂಛನಗಳ್ ।

ಲಿಂಗಧಾರಿಯು ಅಕ್ಷಮಾಲೆಯ
ನಂಗದಲಿ ಧರಿಸುತಲಿ ಮುದದೊಳು
ಲಿಂಗ ಪೂಜೆಯ ನಿರದೆ ಮಾಳ್ಪುದು ನಿಷ್ಠೆಯೊಳು ನಿರತಂ ||೭||

ಅಷ್ಟಮಾವರಣ:— ಮಂತ್ರ

ಪರಮ ಪಾವನ ಶೈವಮಂತ್ರವ
ನಿರದೆ ಜಪಿಸುವ ಪರಮಶೈವರು
ಗುರುವನುಗ್ರಹ ವಿಡಿದುಪಾಸಿಸೆ ತ್ರೈಮಲಾಪಹರು ।
ವರಮಹಾ ಶಿವತತ್ವ ಮಂತ್ರವು
ಸರುವಶೃತಿಗಳ ಶಿರದೊಳಾಂತುಂದು
ಅರಿಯಲದುತಾ ಮುಕ್ತಿ ಬೀಜವು ವರಷಡಕ್ಷರವು ||೮||

ಫಲಶೃತಿಃ—

ತನು ಮನವನಾವರಣವೆಂಟರ
ಅನುವನರಿದನುಭಾವಿಗಳು ತವೆ
ಘನತೆಯಲಿ ಶೈವೋಕ್ತರೀತಿಯೊಳಳವಡಿಸಿಕೊಳುವರ್ ।
ಅನವರತಮೀ ಆವರಣವಿದು
ಜನರಪೊರೆಯುವ ರಕ್ಷಕವಚವು
ಮನುಮುನಿಗಳನುಮತವು ಜನತೆಗೆ ಭೋಧಿಸಿದಕ್ರಮುವು ||೯||

## ಸ್ವಾಮಿಗಳವರ ವೇಷಭೂಷಣ

ಲೇ:- ಶ್ರೀ ಗುರುಪುತ್ರ ಫ. ಹಳಕಟ್ಟಿ,
ವಿಜಾಪುರ.

ಭಾರತೀಯ ಧರ್ಮಧ್ವಜ ವರ್ಣ ಕಾವಿ ವರ್ಣ, ನಾವು ಆ ವರ್ಣವನ್ನು ಪಾವಿತ್ರ್ಯತೆಯಿಂದ ಎಂದಿನಿಂದಲೂ ಕಾಣುತ್ತ ಬಂದಿದ್ದೇವೆ. ಇತ್ತಿತ್ತಲಾಗಿ ಆ ಕಾವಿ ವರ್ಣದ ಬಟ್ಟೆ ಧರಿಸಿದವರಾದ ಹಲವರ ಬಗ್ಗೆ ಸಂಶಯ ತಾಳುವವರಾಗಲು ಕಾರಣವೇನಂದರೆ, ಸ್ವಾಮಿವರ್ಯರ ಬಗ್ಗೆ ನಮ್ಮ ಭಾರತೀಯರು ಎಷ್ಟೊಂದು ಆಸಕ್ತರಾಗಿದ್ದಾರೆಂಬುದನ್ನು ತಿಳಿದು ಹಲವು ಹೀನ ಮನೋವೃತ್ತಿಯವರೂ ಕೂಡ "ಉದರ ನಿಮಿತ್ತಂ ಬಹುಕೃತವೇಷಂ" ಎಂಬ ಉಕ್ತಿಗೆ ತಕ್ಕಂತೆ ಉದರ ಪೋಷಣೆಗಾಗಿ ಈ ಕಾವಿಯನ್ನು ಧರಿಸುತ್ತಿರುವುದು ಹೇಯವಾದುದು.

ನಾವು ಯಾವುದಕ್ಕೆ ಪಾವಿತ್ರ್ಯವೆಂದು ಬಗೆಯುವೆವೋ ಆ ಪವಿತ್ರವನ್ನು ಅಪವಿತ್ರರು ಧರಿಸುವದರಿಂದ ನಾವು ಆ ಬಟ್ಟೆಗೆ ದ್ರೋಹ ಬಗೆದಂತೆಯೇ ಸರಿ. ಕಾರಣ ಉದರನಿಮಿತ್ತಕಾಗಿ ಈ ಕಾವಿಯನ್ನು ಧರಿಸಿದರೆ, ಪಾವಿತ್ರ್ಯತೆಗಾಗಿ ಬಳಿಸಿದರೆ ತಪ್ಪೇನಲ್ಲ. ಹೀಗೆ ಉದರನಿಮಿತ್ತಕ್ಕಾಗಿಯಲ್ಲದೆ ನಮ್ಮ ಸಮಾಜದಲ್ಲಿ ಇನ್ನೊಂದು ಬೇರೆ ರೀತಿಯಿಂದ ಹಲವು ಸ್ವಾಮಿಗಳವರು (ಜಂಗಮರು) ಉದರ ಪೋಷಣೆ ಮಾಡುತ್ತಿರುವದನ್ನು ಕಂಡರೆ ಅತೀ ಕೆಳಮಟ್ಟಗಿಳಿದಿದ್ದಾರೆಂಬುದಕ್ಕೆ ಸಂಶಯವೇ ಇಲ್ಲ. ಅವುಗೆಯ ಮೇಲೆ ನಿಂತು, ಇಂತಿಷ್ಟು ಹಣ ಕೊಟ್ಟರೆ ಇಳಿಯುವದಾಗಿ ಹಟತೊಡುವದು, ಹಾಗೂ ಕಾಲಜ್ಞಾನ ಸಾರುತ್ತ ಬೆರಳು ಸಂಕೇತದಿಂದ ಆಯಾ ಜನರಿಗೆ ಬೆರಗುಗೊಳಿಸುವಂಥ ಹೆಸರು ಹೇಳುವಿಕೆ ವಗೈರೆ ಮಾಡಿ ಉದರಪೋಷಣೆ ಮಾಡಿಕೊಳ್ಳುವದು, ಇದಲ್ಲದೆ ಪ್ರಾತಃಕಾಲ ಭೀಕ್ಷೆ ಬೇಡುವದು ವಗೈರೆ ಕಂಡರೆ ಇವೆಲ್ಲವೂ ನಮ್ಮ ಸಮಾಜದಲ್ಲಿ ಹೇಗೆ ಉತ್ಪನ್ನವಾದವೆಂಬುದೇ ತಿಳಿಯದಂತಾಗಿದೆ. ಹಟ ಹಿಡಿದು ಹಣಗಳಿಸುವುದೇ ಹಟಯೋಗವೆಂದು ಈ ಜನ ತಿಳಿದಂತಿದೆ. ಹೀಗೆ ತಿಳಿದಿದ್ದರೆ ಅದು ಶುದ್ಧ ತಪ್ಪು. ಪರಮಾತ್ಮನನ್ನು ಕಾಣಲು ಹಟ ಹಿಡಿಯುವದು ಹಟಯೋಗವೆಂಬುದನ್ನು ಅವರು ಅರಿತುಕೊಳ್ಳಬೇಕು. ಶ್ರೀ ಸಿದ್ಧರಾಮೇಶ್ವರನು ಮಲ್ಲಿಕಾರ್ಜುನನನ್ನು ಪ್ರತ್ಯಕ್ಷಿಸಿಕೊಳ್ಳಲು ಹಟತೊಟ್ಟು ಹುಡುಕಿ ಹುಡುಕಿ ಸಿಗದಿರಲು ಶ್ರೀಶೈಲದ ಕಮರೀಕೊಳ್ಳದಲ್ಲಿ ಪ್ರಾಣತ್ಯಾಗ ಮಾಡಲು ಸಾಗಿ, ಹಾರಿಕೊಳ್ಳುವಷ್ಟರಲ್ಲಿ ಶ್ರೀಮಲ್ಲಿಕಾರ್ಜುನನು ಕೈಹಿಡಿದೆಳೆದುಕೊಂಡು ಬಲವಾಗಿ ಆತನನ್ನು ಅಪ್ಪಿಕೊಳ್ಳುವನು. ಇದಕ್ಕೆ ಹಠಯೋಗವೆಂದರೆ ತಪ್ಪಲ್ಲ. ಇದೆಲ್ಲವನ್ನು ಬಿಟ್ಟು ಉದರನಿಮಿತ್ತಕ್ಕಾಗಿ ಹಟಹಿಡಿಯುವದೆಂದರೆ ನಮ್ಮ ಸಮಾಜಕ್ಕೆ ದ್ರೋಹ ಬಗೆದಂತೆಯೇ ಸರಿ. ಉಳಿದ ಧರ್ಮದವರು ನಮ್ಮ ಈ ವರ್ತನೆ ಕಂಡು ಗಹಗಹಿಸಿ ನಗಲಿಕ್ಕಿಲ್ಲವೇ? ಇಂಥ ಸ್ವಾಮಿಗಳು ಆ ನಮ್ಮ ಪಾವಿತ್ರ್ಯತೆಯ ವಸ್ತ್ರಧರಿಸುವದು ಭೂಷಣವೇ?

ಮಹಾತ್ಮ ಬಸವೇಶ್ವರನು ಅನಂತ ಜಂಗಮರಿಗೆ ದಿನಾಲು ಭೋಜನ ಮಾಡಿಸುತ್ತಿದ್ದನೆಂದು ಹೇಳಿ ಹಲವರ ಮನೆಯಲ್ಲಿ ಭೋಜನಕ್ಕೆ ಹೋಗುವ ಸ್ವಾಮಿಗಳವರು (ಜಂಗಮರು) ಮಿತಿಮೀರಿದ್ದಾರೆ.

ಆದರೆ ಬಸವೇಶ್ವರನು ಈ ರೀತಿ ಭೋಜನ ಮಾಡಿಸುತ್ತಿದ್ದಿಲ್ಲ. "ಕಾಯಕವೇ ಕೈಲಾಸ"ವೆಂದು ಸಾರಿದ ಅವನು ಇಂಥ ಜಂಗಮರಿಗೆ ಊಟಕ್ಕೆ ನೀಡದೆ, ಕಾಯಕ ಮಾಡಿಕೊಂಡು ಬಂದು ಅವರವರು ತಂದ ಹಣದಿಂದ ಇಲ್ಲವೆ ಧಾನ್ಯಧನಸುಗಳಿಂದ ಊಟಕ್ಕೆ ನೀಡುತ್ತಿದ್ದನೆಂಬುದನ್ನು ಇಂದಿನ ಜಂಗಮರು ಅವಶ್ಯ ತಿಳಿದುಕೊಳ್ಳಬೇಕು.

ನಮ್ಮ ಸಮಾಜದವರು ಸಮಾಜದ ನೀತಿ ನಿಯಮಗಳನ್ನು ಬಹಳಷ್ಟು ಜನ ತಿಳಿದುಕೊಂಡಿಲ್ಲ. ಮೇಲಾಗಿ ಇಂಥ ಸುಯೋಗವನ್ನು ಕಲ್ಪಿಸಿಕೊಂಡು ಉದರನಿಮಿತ್ತಕ್ಕಾಗಿ ವೇಷಭೂಷಣರಾದ ಸ್ವಾಮಿಗಳವರು ಇಲ್ಲದ್ದೊಂದನ್ನು ಜನರಿಗೆ ತಿ?ಹೇಳಿ ಉದರಪೋಷಣೆ ಮಾಡಿಕೊಳ್ಳುವದೆಂದರೆ ಇದು ನಿಜವಾಗಿಯೂ ಹೇಯವಾದುದು. ಕಾರಣ ಯಾವದೇ ಹೇಳಬೇಕಾದರೂ ಒಂದು ಹೆಜ್ಜೆ ಮುಂದಿಡಲು ಕೂಡ ವಿಚಾರಿಸದೇ ಇಡಬಾರದು ಹಿಂದಿನಿಂದಲೂ ಹೀಗೆ ಉದರಪೋಷಣೆ ಮಾಡುತ್ತ ಬಂದ ಸ್ವಾಮಿಗಳವರು ಇಂದು ಸುಶಿಕ್ಷಿತ ಸಮಾಜದೆದುರು ಹೀಯಾಳಿಸಿಕೊಳ್ಳುವವರಾಗಿದ್ದಾರೆ. ಕಾರಣ ಅಶಿಕ್ಷಿತರ ನೆಲವೀಡಾದ ಹಳ್ಳಿಗಳ ವಾಸಿಗರಾಗಿ ಬಹುಜನ ಸ್ವಾಮಿಗಳವರು ಉಪಜೀವನ ಸಾಗಿಸಿದ್ದಾರೆ. ಹೀಗೆ ಸಂಧಿಸಾಧಕರಾಗಿ ಬಾಳದೆ ಬಸವಣ್ಣನವರು ನುಡಿದಂತೆ "ಕಾಯಕವೇ ಕೈಲಾಸ"ವೆಂಬುವದನ್ನಾದರೂ ಮೇಲಿಂದಮೇಲೆ ಅರಿತು ಜನರಿಗೆ ಉಪದೇಶಿಸಿ ಸಾಗಿದಲ್ಲಿ ನಮ್ಮ ಭಾರತದೇಶವು ಅಮೇರಿಕಾ ರಶ್ಯಾ ಮುಂತಾದ ಸುಖೀ ರಾಷ್ಟ್ರಗಳಿಗಿಂತಲೂ ಸೌಖ್ಯವಾಗಿ ಬಾಳುವದರಲ್ಲಿ ಸಂದೇಹವಿಲ್ಲ.



# ಮಕ್ಕಳಿಗೆ ಭಯನಿರಸನವಾಗಬೇಕು.

## ಬರ್ಟ್ರಾಂಡ ರಸೆಲ್‌ರ ವಿಚಾರಗಳು

ಲೇಖಕರು,
**ವೆಂಕಟೇಶ ಕುಲಕರ್ಣಿ, ಬಿ. ಎ.**
ಸಂಪಾದಕ "ಜಾಗೃತ ಭಾರತ"
**ವಿಜಾಪುರ.**

ಪೂಜ್ಯ ಬಂಥನಾಳ ಶಿವಯೋಗಿಗಳು ನಮ್ಮ ಜಿಲ್ಹೆಗೆ ಮಾಡಿದ ಅಜರಾಮರ ಸೇವೆಯೆಂದರೆ ವಿದ್ಯಾಮಂದಿರಗಳನ್ನು ಸ್ಥಾಪಿಸಿದ್ದು. ಈ ಶುಭಸಂದರ್ಭದಲ್ಲಿ ಅವರಿಗೆ ಪ್ರೀಯವಾದ ಶಿಕ್ಷಣ ಸಮಸ್ಯೆಗಳನ್ನು ಕುರಿತು ಎರಡು ಮಾತು ಬರೆಯುವುದು ಯಥಾಯೋಗ್ಯವಾದೀತೆಂದು ಭಾವನೆ.

ಬರ್ಟ್ರಾಂಡ್ ರಸೆಲ್‌ರು ಜಗತ್ಪ್ರಸಿದ್ಧ ತತ್ವಜ್ಞಾನಿ, ಶಿಕ್ಷಣ ತಜ್ಞ, ಮಾನವತಾವಾದಿ. ನಮ್ಮ ವಿದ್ಯಾಸಂಸ್ಥೆಗಳು ಹೇಗಿರಬೇಕು ? ಅದರಲ್ಲಿ ಪಾಲಕರ, ಚಾಲಕರ, ಬಾಲಕರ ಕರ್ತವ್ಯವೇನು ಇದನ್ನು ಕುರಿತು ತಮ್ಮ ಗಂಭೀರ ವಿಚಾರಗಳನ್ನು ಪ್ರತಿಪಾದಿಸಿದ್ದಾರೆ. ನಮ್ಮ ವಿದ್ಯಾಸಂಸ್ಥೆಗಳಲ್ಲಿ ಆಗಲಿ, ಶಿಕ್ಷಣದಲ್ಲಾಗಲಿ ತಪ್ಪು ಪಾಲಕರದೇ ಆಗಿದೆ. ಶಿಕ್ಷಣ ಕೊಡಿಸಬೇಕೆಂದು ನಿರ್ಧರಿಸಿದರೆ, ಅದು ಸಾಧ್ಯವಿದೆ.

೧೮ನೇ ಶತಮಾನದ ಮೊದಲು ಶೈಕ್ಷಣಿಕ ರಂಗದಲ್ಲಿ ಕ್ರಾಂತಿ ಎಬ್ಬಿಸಿದವರು ಲಾಕ್ ಮತ್ತು ರೂಸೋ. ಇವರಿಬ್ಬರಲ್ಲಿಯ ದೋಷವೆಂದರೆ, ಧನಿಕರ ಮಕ್ಕಳ ಶಿಕ್ಷಣವಿಚಾರವನ್ನೇ ಯೋಚಿಸಿದರು. ಅವನಿಗೆ ಜೀವನದ ಪ್ರತಿ ಕ್ಷಣವನ್ನು ಅಭ್ಯಾಸಕ್ಕಾಗಿ ವ್ಯಯಮಾಡುವುದು ಸಾಧ್ಯ ಸರ್ವೇಸಾಮಾನ್ಯನಿಗೆ ಅದು ಸಾಧ್ಯವಿಲ್ಲ. ಶ್ರೀಮಂತಿಕೆಯಲ್ಲಿ ನಂಬಿಕೆಯಿಲ್ಲದ ರೂಸೋ ಈ ಒಂದು ವಿಚಾರದಲ್ಲಿ ಮಾತ್ರ ತನ್ನ ನಿಯಮವನ್ನು ಅನುಸರಿಸಲಿಲ್ಲ

ಮ್ಯಾಡಮ್ ಮಾಂಟೆಸರಿ ಕೊಳಚೆ ಪ್ರದೇಶಗಳಲ್ಲಿ ತನ್ನ ಮಹತ್ಕಾರ್ಯ ಪ್ರಾರಂಭಿಸಿದಳು. ಪ್ರಜಾಪ್ರಭುತ್ವದಲ್ಲಿ ಶಿಕ್ಷಣ ಭೂಷಣವಾಗಿ ಉಳಿಯದೆ, ಅದೊಂದು ಜೀವನಕ್ಕೆ ಅತ್ಯಾವಶ್ಯಕವಾದದ್ದಾಗಬೇಕಾಗುವದು.

ಜಪಾನಿನಲ್ಲಿ, ಶಿಕ್ಷಣದ ಪರಮೋಚ್ಚ ಉದ್ದೇಶ, ರಾಷ್ಟ್ರೀಯ ಹಿರಿಮೇ ಹೆಚ್ಚಿಸುವುದಕಾಗಿದೆ. ಅಲ್ಲಿ ರಾಷ್ಟ್ರಕ್ಕೆ ವಿಧೇಯರಾಗಿರುವ ನಾಗರಿಕರನ್ನು ಸಿದ್ಧಗೊಳಿಸುವುದಾಗಿದೆ.

ಅದೆಲ್ಲ ಏನೇ ಇರಲಿ, ಇಲ್ಲಿ ಚರ್ಚಿಸಬೇಕೆಂದಿರುವ ವಿಷಯ "ಮಕ್ಕಳಿಗೆ ಭ್ರಮನಿರಸನವಾಗಬೇಕು" ಎಂದು ಅದು ಎಳೇ ಮಕ್ಕಳ ಸಂಬಂಧವಾಗಿ. ಮಗು ಎರಡನೇ ವರ್ಷದಲ್ಲಿ ಕಾಲಿಡುವದು. ಮಾತಾಡುವದು, ನಡೆದಾಡುವದು ಇವೆರಡೂ ಹೊಸದಾಗಿ ಅದಕ್ಕೆ ಬರುವವು. ಅದರೊಂದಿಗೆ ಸ್ವಾತಂತ್ರ್ಯ

ಶಕ್ತಿ ಇವೆರಡರ ಕಲ್ಪನೆ ಬರತೊಡಗುವುದು. ಪ್ರಪಂಚವನ್ನು ಬೆದಕಿ, ಕೆದಕಿ ನೋಡುವ ಕಾಲ ಅದು ಪಚನಶಕ್ತಿ ಹೆಚ್ಚಾಗುವುದು ಈ ಸಮಯದಲ್ಲಿ, ಅದರ ಬೆಳವಣಿಗೆ ಸರಿಯಾಗಿ ಆಗುವಂತೆ ನೋಡಿಕೊಂಡು, ಅದು ಸದೃಢವಾಗುವಂತೆ ವ್ಯವಸ್ಥೆ ಇದ್ದರೆ, ಅದರ ಮುಂದಿನ ಜೀವನ "ರುಚಿಕರ" ವಾಗುವುದು. ಜೀವನ ಕೆಲವರಿಗೆ ಸಪ್ಪೆಯಾಗಬಹುದು; ಕೆಲವರಿಗೆ, ಹುಳಿಯಾಗಬಹುದು. ಚಿಕ್ಕಂದಿನಲ್ಲಿ ಸಿಗಬೇಕಾದ ಲಾಲನೆ ಪೋಷಣೆ ಆಗದ್ದಕ್ಕೆ-ಜೀವನ ಮುಂದೆ "ರುಚಿಕರ" ವಾಗದು.

೨ನೇ ವರ್ಷದಲ್ಲಿಯೇ ಹೆದರಿಕೆ ಪ್ರಾರಂಭವಾಗುವುದು. ಎಳೆ ಮಗುವನ್ನು ಸುಲಭವಾಗಿ ಅಂಜಿಸಬಹುದು. ಡಾ. ವ್ಯಾಟ್ಸನ್‌ರ ಅಭಿಪ್ರಾಯದಂತೆ, ಭಾರೀ ಸಪ್ಪಳಕ್ಕೆ ಮಕ್ಕಳು ಬಲುಬೇಗ ಹೆದರುತ್ತವೆ. ೩ನೇ ವರ್ಷದಲ್ಲಿ ಹೊಸ ಹೆದರಿಕೆಗಳು ಬರುತ್ತವೆ. ಅವು "ಸೂಚನೆ"ಯಿಂದ ಬರುವವು. ಈ ಭಯ ಹುಟ್ಟುಗುಣವೇ? ಸೂಚನೆಯಿಂದ "ಹೆದರಿಕೆ" ಹುಟ್ಟುತ್ತಿದ್ದರೆ, ಮಕ್ಕಳೆದುರಿಗೆ "ಭಯದ" "ಸೂಚನೆ"ಯನ್ನೇ ಮಾಡಬಾರದು.

ಭಾರತದಲ್ಲಿ ಈ ರೀತಿ ಯಾವಾಗಲೂ ಆಗುವುದು ತಾಯಿ ತನ್ನ ಚಿಕ್ಕಮಕ್ಕಳಿಗೆ "ಗಪ್ಪಾಗು ಬಾವಾ ಹಿಡಕೊಂಡು ಹೋಗ್ತಾನ" "ಪೋಲೀಸರು ಬಂದರು" ಹೀಗೆಂದರೆ ಆ ಎಳೇ ಜೀವಕ್ಕೆ ಪೋಲೀಸರೆಂದರೆ, ಎಳೇ ಮಕ್ಕಳನ್ನು ಎಳೆದೊಯ್ಯುವ, ಪೂತನಿಯರೆಂದೇ ಭಾವನೆ ಬೆಳೆಯುವುದು. ಇದು ಭಯದ ಸೂಚನೆ, ಇಲ್ಲವಾದರೆ "ಭಾಳ ತಿನ್ನಬಾರದು, ದೇವರು ಮೂಗ ಕೊಯ್ಯುವನು" ಎನ್ನುವುದು ತೀರ ಅಸಂಗತ ವಿಚಾರಗಳು.

ಅಂದ ಮೇಲೆ ಒಂದು ಮಾತು ನಿರ್ಧಾರವಾದಂತಾಯಿತು. ಮಕ್ಕಳ ಪಾಲಕರು, ಅದರಲ್ಲೂ ಹೆಂಗಸರು ಮೊದಲು ನಿರ್ಭೀತರಾಗಬೇಕು ಮಕ್ಕಳು ಹೇಡಿಗಳಂತೆ ವರ್ತಿಸಿದಾಗ, ಅದರ ವರ್ತನೆಯಿಂದ ನಮಗೆ ಅಸಮಾಧಾನವಾಗಿದೆಯೆಂದು ತೋರಿಸಿ ಕೊಡಬೇಕು. ಅವರು ತಮ್ಮ ವಯಸ್ಸಿಗೆ ಅನುಗುಣವಾದ, ಯಾವುದೇ ಚಿಕ್ಕ ಸಾಹಸ ಮಾಡಿದಾಗ, ಅವನನ್ನು ಬೆನ್ನುತಟ್ಟಿ ಹೊಗಳುವುದರಿಂದ ಅವನಿಗೆ ಅದೆಷ್ಟೋ ಉತ್ಸಾಹ. ರಸೆಲ್‌ರು "Familiarity Kills Fear" ಎನ್ನುತ್ತಾರೆ. ಮಗುವಿನ ಅಭಿಮಾನವನ್ನು ಜಾಗೃತಿಗೊಳಿಸಬೇಕು.

ಈ ಧೈರ್ಯ ಇತರ ಸವಾಸಿಗಳಿಂದಲೂ ಬರಬಹುದು. ಆ ಮಗುವಿನ ಅಣ್ಣ-ಅಕ್ಕಂದಿರು ಸ್ನೇಹಿತರು-ಅವನ ಭಯವನ್ನು ಹೆಚ್ಚಿಸುವುದರಲ್ಲಿ, ಕಡಿಮೇ ಮಾಡುವುದರಲ್ಲಿ ಸಹಾಯಕರಾಗುವರು. "ಇರುವೆ ಕಂಡು ಓಡಿ" ಹೋಗಿ ಅವನ ತೆಕ್ಕೆಗೆಬೀಳುವ ಅಣ್ಣನಿದ್ದರೆ ಈ ತಮ್ಮ ಎಂಥ ನೆಪೋಲಿಯನ್ ಶಿವಾಜಿಯಾಗಬಲ್ಲ? A man is Courageous when he does things wich others might fail to do owing to fear- ಎಂದು ರಸೆಲ್‌ರು ಹೇಳಿದ ಮಾತು ಅಕ್ಷರಶ: ಸತ್ಯ.



ನಮ್ಮ ಮಕ್ಕಳಿಗೆ, ಒಂದು ಸ್ವಲ್ಪು, ಒಂದು ಹನಿ ರಕ್ತಬಂದರೆ, ಮಹಾಯುದ್ಧ ನಡೆದಾಗ ಗಾಬರಿಯಾಗುವಂತೆ ಆಗಿ, ಪಟ್ಟಿ, ಕೊಬ್ಬರಿ ಎಂಣೆ, ಅವನನ್ನು ಶಾಲೆಯಿಂದ ನಾಲ್ಕು ದಿನ ಬಿಡಿಸುವುದು, ಹಾಸಿಗೆ ಹಾಸಿ ಬಲವಂತದಿಂದ ಮಲಗಿಸಿ, ಹಾಲು ಕುಡಿಸುವುದು, ಇವೆಲ್ಲ ಪ್ರೀತಿಯ ಲಕ್ಷಣಗಳಲ್ಲ. ಆತನನ್ನು ನಿರ್ಬಲನನ್ನಾಗಿ, ಹೇಡಿಯನ್ನಾಗಿ ಮಾಡುವ ಸುಲಭ ಉಪಾಯಗಳು. ಆಗ ಅದಕ್ಕೆ ಎಷ್ಟು ಮಹತ್ವ ಕೊಡಬೇಕೋ ಅಷ್ಟೇ ಕೊಡಬೇಕು. ಅಂದರೆ, ಅವನಿಗೆ ದೈಹಿಕ ಕಷ್ಟಗಳನ್ನು ಸಹಿಸುವ ಗುಣ ತನ್ನಿಂದ ತಾನೇ ಬೆಳೆಯುವುದು. ತನಗೆ ವಿಶೇಷ ಆರೈಕೆ ಸಿಗಲೆಂದು, ಕೆಲವರು ಬೇಕೆಂತಲೇ ಜಡ್ಡಿನಸೋಗುಹಾಕಿ, ನರಳುತ್ತ ಮಲಗಿ ಸಾಬೂದಾಣೆ ಕುಡಿಯುವುದನ್ನು ಕಂಡಿದ್ದೇನೆ.

ಮಕ್ಕಳಿಗೆ ಕೆಲವು ವಿಷಯಗಳಲ್ಲಿ ತಪ್ಪು ತಿಳುವಳಿಕೆ ಮಾಡಿಕೊಟ್ಟು, ಏನೋ-ವಿಸ್ಮಯಕಾರಕ ಗೂಢ ಕಾರಣ ತೋರಿಸಿದರೆ, ಭಯ ಹೆಚ್ಚಾಗುವುದು ಚಂದ್ರಗ್ರಹಣವಾದಾಗ ರಾಹು, ಕೇತು ಅವನ ಕುತ್ತಿಗೆ ಹಿಚುಕಿದ್ದಾರೆನ್ನುವುದು ಮನೆಯಲ್ಲಿ ಯಾರಾದರೂ ತೀರಿಕೊಂಡಾಗ ಅವರಿಗೆ ನಿದ್ರೆಹತ್ತಿದೆಯೆಂದು ಹೇಳುವುದು ಅನಿಷ್ಟಕರವಾದವುಗಳು. ಅವರಿಗಿದ್ದ ಭಯವು ವೈಜ್ಞಾನಿಕ ಕುತೂಹಲವಾಗಿ ಮಾರ್ಪಡುವಂತೆ ನಾವು ತಿಳುವಳಿಕೆ ಕೊಡಬೇಕು. ಹೀಗೆ ಮಾಡದಿದ್ದರೆ, ಮೂಢ ನಂಬಿಕೆಗಳು ಬೆಳೆಯುವವು.

ಮಕ್ಕಳು ಎಳೇ ವಯಸ್ಸಿನಲ್ಲಿ ನೆರೆಮನೆಯವರನ್ನು ಕಂಡು ಗಾಬರಿಯಾಗುವುದನ್ನು ತಪ್ಪಿಸಬೇಕು.

ಕೊನೆಯದಾಗಿ, ಮಕ್ಕಳಲ್ಲಿದ್ದ ಭಯವನ್ನು ನಿವಾರಿಸಬೇಕಾದರೆ ಸ್ವತ: ನಾವು ನಿರ್ಭಯರಾಗಬೇಕು ಚೇಳನ್ನು ಕಂಡು ಓಡುವ ತಂದೆ, ಮಗನಿಗೆ, ಇರುವೆ ಕಂಡು ಹೆದರಬೇಡವೆಂದರೆ ನಡೆಯದು. If you wish to dispel fear in your children, be fearless yourself ಎನ್ನುತ್ತಾರೆ ರಸೆಲ್.

ಜೀವನದ ತುಂಬೆಲ್ಲ, ದುರ್ಘಟನೆಗಳಿವೆ. ತಪ್ಪಿಸಲಿಕ್ಕೆ ಕೆಲವು ಸಾಧ್ಯವೇ ಇಲ್ಲ. ಅಂಥದಕ್ಕಾಗಿ ಹೆದರಿ, ಮುಂಚೆಯೇ ಕೊರಗುವುದೇಕೆ? ಎಂಬ ಭಾವನೆ ಮಗುವಿನಲ್ಲಿ ಬೆಳೆಯಿಸಬೇಕು. ಆಗ ಅಂಥ ಬಾಲಕರಿಂದ ದೇಶಕ್ಕೆ, ಸಮಾಜಕ್ಕೆ, ಪ್ರಪಂಚಕ್ಕೆ ಹಿತವಾಗುವುದು. ನಮ್ಮ ಭಾರತದ ಎಳೇ ಮಕ್ಕಳು ಹಾಗಾಗುವಂತಹ ಶಿಕ್ಷಣ ಎಳೇ ವಯಸ್ಸಿನಲ್ಲಿ ಸಿಕ್ಕು, ಅವರು ಪುರುಷ ಸಿಂಹರಾಗಿ ಬೆಳೆದು. ವಿವೇಕಾನಂದರು ಕನಸು ಕಂಡ, "ಉಕ್ಕಿನ ನರದ, ಕಬ್ಬಿಣದ ಸ್ನಾಯುಗಳ" ಮನುಷ್ಯರಾಗಲಿ.

# ಕರ್ನಾಟಕ ಸಂಸ್ಕೃತಿ.

ಲೇ.-ಪ್ರೊ. ಎಂ. ಯಾಮುನಾಚಾರ್ಯ ಎಂ. ಎ

'ಸಂಸ್ಕೃತಿ' ಎಂಬ ಪದದ ಅರ್ಥ ವಿವರಣೆಯು ಬಹು ಕಷ್ಟವಾದುದು ಮ್ಯಾಥ್ಯು ಅರ್ನಾಲ್ಡ್ ಅವರು ಕೊಟ್ಟಿರುವ ಅರ್ಥ ವಿವರಣೆಯು ಸಮಂಜವಾಗಿದೆ. ಅವರ ಪ್ರಕಾರ ಸಂಸ್ಕೃತಿಯ "ಮಾಧುರ್ಯ ಮತ್ತು ಪ್ರಭೆ" ಆಗಿದೆ 'ಪ್ರಭೆ' ಎಂದರೆ ಜ್ಞಾನದಿಂದ ಮನಸ್ಸನ್ನು ಬೆಳಗಿಸುವುದೆಂದೂ, 'ಮಾಧುರ್ಯ' ಎಂದರೆ ನೀತಿತತ್ವ ಮತ್ತು ಸೌಂದರ್ಯ ಗ್ರಹಣ ಅನ್ವೇಷಣಗಳಿಂದ ಹೊರಹೊಮ್ಮುವ ಮತ್ತು ಜೀವನ ಸೌಂದರ್ಯ ಮತ್ತು ಒಳ್ಳೆಯತನಗಳನ್ನು ವೃದ್ಧಿಸುವ ಜೀವನದ ಅಮೂಲ್ಯವಾದ ವರ್ಚಸ್ಸು ಎಂದೂ ಅರ್ಥ. ನಮ್ಮ ಕರ್ನಾಟಕದಲ್ಲಿ ಜ್ಞಾನಾನ್ವೇಷಣವು ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ, ಶ್ರೀ ಮಧ್ವಾಚಾರ್ಯರಿಂದ ಶಿಖರಕ್ಕೆ ಮುಟ್ಟಿತು. ಜೈನ ಸನ್ಯಾಸಿಗಳೂ, ವೀರಶೈವ ಶರಣರೂ ವೈಷ್ಣವ ಹರಿದಾಸರೂ ತಮ್ಮ ವಚನ ಕೀರ್ತನೆಗಳಿಂದಲೂ, ಜೈನರು ಆದರ್ಶ ಜೀವನದ ಪ್ರತೀಕವಾದ ಮೂರ್ತಿಗಳಿಂದಲೂ, ದೇವಾಲಯಗಳಿಂದಲೂ ಹಳ್ಳಿಗರ ಜೀವನಕ್ಕೆ ಸಂಸ್ಕೃತಿಯ ಮಾಧುರ್ಯವನ್ನು ಒದಗಿಸಿದ್ದಾರೆ.

ಇಡೀ ಭಾರತದ ಸಂಸ್ಕೃತಿಯ ವಿಶಾಲ ಸಂಸ್ಕೃತಿಯ ಸಂಯೋಜನೆಯ ಸ್ವಭಾವವನ್ನು ಕರ್ನಾಟಕವು ಪ್ರತಿನಿಧಿಸುತ್ತದೆ. ಮಾನವ ಸಂಸ್ಕೃತಿಗಳ ಸಂಯೋಜನೆ ಮತ್ತು ಆಧ್ಯಾತ್ಮಿಕ ಪುನರುಜ್ಜೀವನಗಳು ಕರ್ನಾಟಕದ ಎರಡು ಧ್ರುವ ತಾರೆಗಳು. ಈ ತಾರೆಗಳು ನಮ್ಮ ಸರ್ವಸ್ವಗಳನ್ನೂ ತುಂಬಿಕೊಂಡಿವೆ. ಚಾರಿತ್ರಿಕ ಮತ್ತು ಇತರ ಕಾರಣಗಳಿಂದ ನಾವು ನಡೆಯಲೇಬೇಕಾಗುವ, ನಾವೇ ಆರಿಸಿಕೊಂಡಿರುವ ದಾರಿಯಲ್ಲಿ ಪರಮಾತ್ಮನು ನಮ್ಮನ್ನು ಸರಿಯಾಗಿ ನಡೆಸಲಿ.

ಯುಗಯುಗಾಂತರಗಳಿಂದಲೂ ನಮ್ಮ ಗುಣ ಲಕ್ಷಣಗಳಾಗಿರುವ ವರ್ಚಸ್ಸು ಘನತೆ, ಮಾಧುರ್ಯ ಮತ್ತು ಶಕ್ತಿಗಳನ್ನು ಹಾಳುಮಾಡಲೆತ್ನಿಸುವ ಕೆಲವು ಅನಪೇಕ್ಷ ಶಕ್ತಿಗಳಿಗೆ ಬಲಿಯಾಗದೆ ಈ ಅಮೂಲ್ಯ ಸಾಂಸ್ಕೃತಿಕ ಪಿತ್ರಾರ್ಜಿತವನ್ನು ಕರ್ನಾಕದ ಜನತೆ ಉಳಿಸಿಕೊಂಡು ಬರಲಿ.

## ಋಷಿಗಳ ಸಂದೇಶ

"ಸತ್ಯಂ, ಶಿವಂ, ಸಂದರಂ"-ಇವು ನಮ್ಮ ಪುರಾತನ ಋಷಿಗಳ ಸಂದೇಶವಾಗಿ ಪರಿಗಣಿಸಲ್ಪಟ್ಟು ನಮ್ಮ ಜೀವನದ ಧ್ಯೇಯವಾಗಿ ಮುಂದುವರಿಯಲಿ"

ಭಾರತದ ಇತರ ಭಾಗಗಳ ಸಂಸ್ಕೃತಿಯಂತೆಯೇ ಕರ್ನಾಟಕದ ಸಂಸ್ಕೃತಿಯೂ ಮಾನವನ ತಿಳಿವಳಿಕೆ ಮತ್ತು ಸೌಂದರ್ಯ ಗುಣಗ್ರಹಗಳ ಮತ್ತು ಧರ್ಮ ಭೀತಿಯ ಏಕೀಕಣವೇ ಆಗಿದೆ; ಹಬ್ಬ



ಹರಿದಿನಗಳಲ್ಲಿ ವ್ಯಕ್ತಪಡುವ ಸಂಸ್ಕೃತಿಯಾಗಿದೆ. ರವೀಂದ್ರನಾಥ ಟಾಕೂರರು ಇದರ ಬಗೆಗೆ ಹೀಗೆ ಹೇಳಿದ್ದಾರೆ— "ಭಾರತದಲ್ಲಿ ನಮ್ಮ ಸಾಹಿತ್ಯದ ಬಲು ಭಾಗ ಧಾರ್ಮಿಕವಾಗಿದೆ, ಏಕೆಂದರೆ ನಮ್ಮ ದೇವರು ದೂರದಲ್ಲಿರುವ ದೇವರಲ್ಲೂ ಅವನು ನಮ್ಮ ಮನೆಗಳಿಗೂ ಹಾಗೂ ನಮ್ಮ ದೇವಾಲಯಗಳಿಗೂ ಸೇರಿದವನು ಎಲ್ಲ ಮಾನವ ಸಂಬಂಧವಾದ ಪ್ರೀತಿ ಪ್ರೇಮಗಳಲ್ಲೂ ಮತ್ತು ಹಬ್ಬಗಳ ಆಚರಣೆಯಲ್ಲೂ ಅವನು ನಮ್ಮ ಬಳಿ ಇರುತ್ತಾನೆಂದು ನಾವು ಭಾವಿಸುತ್ತೇವೆ. ಅವನು ನಮ್ಮ ಗೌರವಕ್ಕೆ ಪಾತ್ರನಾದ ಮುಖ್ಯ ಅತಿಥಿ ಹೂವು ಹಣ್ಣುಗಳ ಕಾಲದಲ್ಲೂ, ಮಳೆ ಸುರಿಯುವುದರಲ್ಲೂ, ತುಂಬಿದ ವಸಂತ ಋತುವಿನಲ್ಲೂ ಅವನ ಕವಚದ ಅಂಚನ್ನು ನಾವು ಕಾಣುತ್ತೇವೆ ಮತ್ತು ಅವನ ಪಾದರವವನ್ನು ಕೇಳುತ್ತೇವೆ. ನಮ್ಮ ಎಲ್ಲ ಸತ್ಯ ಸಂಕಲ್ಪವಾದ ಪೂಜಾ ಉದ್ದೇಶಗಳಲ್ಲಿ ಅವನನ್ನು ಪೂಜಿಸುತ್ತೇವೆ ಮತ್ತು ನಮ್ಮ ಪ್ರೀತಿ ಸತ್ಯವಾಗಿರುವಾಗಲೆಲ್ಲಾ ಅವನನ್ನು ಪ್ರೀತಿಸುತ್ತೇವೆ ಗುಣವತಿಯಾದ ಸ್ತ್ರೀಯಲ್ಲಿ ನಾವು ಅವನನ್ನು ಕಾಣುತ್ತೇವೆ ಪ್ರಾಮಾಣಿಕವಾದ ಪುರುಷನಲ್ಲಿ ನಾವು ಅವನನ್ನು ಅರಿಯುತ್ತೇವೆ ನಮ್ಮ ಮಕ್ಕಳಲ್ಲಿ ಅವನು ಪದೇ ಪದೇ ಹುಟ್ಟುತ್ತಲೇ ಇರುತ್ತಾನೆ. ಅವನು ಅನಂತ ಶಿಶು"

## ಭಕ್ತಿ ಸಾಹಿತ್ಯ.

ಕರ್ನಾಟಕದ ಭಕ್ತಿಸಾಹಿತ್ಯದಿಂದ ಕೆಲವು ಉದಾಹರಣೆಗಳನ್ನು ಈಗ ಕೊಡಬಹುದಾಗಿದೆ. ಸಂತರ ಬಾಯಿಂದಲೇ ಹೊರಟಿರುವ ಹಾಗೆ ಪವಿತ್ರತೆಯ ಸೌಂದರ್ಯವನ್ನು ಒಂದು ಮುಖ್ಯ ಅಂಶವನ್ನಾಗುಳ್ಳ ಕರ್ನಾಟಕವ ಸಂಸ್ಕೃತಿಯ ಆತ್ಮವನ್ನು ಅವು ಎತ್ತಿ ಹಿಡಿಯುತ್ತವೆ. ಕ್ರಿಸ್ತಶಕ ಹದಿನೇಳನೆಯ ಶತಮಾನದಲ್ಲಿದ್ದ "ಸರ್ವಜ್ಞ"ನು ಆತ್ಮಕ್ಕೆ ಜಾತೀಯತೆ ಇಲ್ಲವೆಂದು ಹೇಳುತ್ತಾನೆ

ಉತ್ತಮ ನಡತೆಯೇ ಮೇಲುಜಾತಿ ಅಧಮ ನಡತೆಯೇ ಕೀಳು ಜಾತಿ ಎಲ್ಲ ಪ್ರಾಣಿಗಳಲ್ಲೂ ಒಳ್ಳೆಯದನ್ನು ಕಾಣುವವನೇ ಮೇಲುಜಾತಿ. ತಂದೆ ತಾಯಿಗಳನ್ನು ಅಪಾರ ಕಷ್ಟಕ್ಕೆ ಸಿಕ್ಕಿಸುವವನೇ ಅಸ್ಪೃಶ್ಯ. ಜನರ ದಾರಿಗೆ ಮುಳ್ಳು ಹಾಕುವವನು, ಐಶ್ವರ್ಯಾಭಿಲಾಷೆಯಿಂದ ಮತ್ತೊಬ್ಬನನ್ನು ಕೊಲ್ಲುವವನು ಸ್ತ್ರೀಯರನ್ನು ಕಾಮದ ಕಣ್ಣುಗಳಿಂದ ನೋಡುವವನು ಅಸ್ಪೃಶ್ಯ. ಅಂತಹ ಪಂಚಮರು ಎಲ್ಲ ನಗರಗಳಲ್ಲೂ ಹೇರಳವಾಗಿದ್ದಾರೆ ಅವರು ಅವುಗಳನ್ನು ನಗರದ ಹೊರವಲಯಗಳಲ್ಲಿ ಅರಸುತ್ತಾರೆ.

ಸರ್ವಜ್ಞನ ವಿಶ್ವಬಾಂಧುತ್ವವನ್ನು ಇಲ್ಲಿ ಸೂಚಿಸಲಾಗಿದೆ.

ಇಡೀ ಪಟ್ಟಣವೇ ಬಂಧು ಇಡೀ ಬೀದಿಯೇ? ನನ್ನ ನೆರೆಯುವ ಇಡೀ ವಿಶ್ವವೇ ನನ್ನ ಕುಲದೇವತೆ ನಿನ್ನದಾಗಿರುವ ಯಾವುದನ್ನು ತಾನೇ ನನ್ನದಲ್ಲವೆಂದು ಹೇಳಲಿ !

ಅವನು ಈ ಸಣ್ಣ ಪದ್ಯದಲ್ಲಿ ದೇವರ ಕಲಾಕೌಶಲ್ಯ ಮತ್ತು ಕಸಬುದಾರಿಕೆಗಳನ್ನು ವಿವರಿಸುತ್ತಾನೆ.

ನವಿಲಿನ ಗರಿಗಳಿಗೆ ಬಣ್ಣ ಬಳಿದವರು ಯಾರು,

ವಿವಿಧ ಬಣ್ಣಗಳ ಎಲೆಗಳನ್ನೂ, ಹೂವುಗಳನ್ನೂ ಸೃಷ್ಟಿಸಿದವರು ಯಾರು ?

ಸಂಬಾರ ವಸ್ತುಗಳಲ್ಲಿ ಘಾಟನ್ನು ತುಂಬಿದವರು ಮತ್ತು ಎಳೆಯ ತೆಂಗಿನ ಕಾಯಿಯಲ್ಲಿ ನಿರ್ಮಿತ ಜಲವನ್ನು ತುಂಬಿದವರು ಯಾರು ?

ಝೇಂಕರಿಸುವ ಜೇನಿನಲ್ಲಿ ಝೇಂಕಾರವನ್ನು ಮತ್ತು ಕೋಗಿಲೆಯ ಕಂಠದಲ್ಲಿ ಮಧುರ ರಾಗವನ್ನೂ ಹಾಡಿಸುವವರು ಯಾರು ?

## ಬಸವೇಶ್ವರರ ಬೋಧೆ.

ಕ್ರಿಸ್ತಶಕ ೧೨ ನೆಯ ಶತಮಾನದಲ್ಲಿದ್ದ ಬಸವೇಶ್ವರರು ಕರ್ನಾಟಕದ ಸಂಸ್ಕೃತಿಯ ಧಾರ್ಮಿಕ ತತ್ವಬೋಧೆಯನ್ನು ಹೀಗೆ ಮಾಡಿದ್ದಾರೆಃ—

"ಕಳ್ಳತನ ಮಾಡಬೇಡ ಕೊಲೆ ಮಾಡಬೇಡ; ನಿನ್ನ ಬಾಯಿಂದ ಎಂದಿಗೂ ಅಸತ್ಯ ನುಡಿಯಬೇಡ;" ಇತರರೊಡನೆ ತಾಳ್ಮೆಗೆಡಬೇಡ; ಇದೇ ಬಹಿರಂಗ ಶುದ್ಧಿ ; ಇದೇ ಅಂತರಂಗ ಶುದ್ಧಿ ; ಇದೇ ಪರಮಾತ್ಮನನ್ನು ಒಲಿಸುವ ಪರಿ.

ಬಸವೇಶ್ವರರ ಪ್ರಕಾರಃ—

"ದಯೆಯೇ ಧರ್ಮದ ಮೂಲ ; ದಯೆಇಲ್ಲದ ಧರ್ಮವಾವುದು ! "

ಈ ವಿಶ್ವವು ಕರ್ತಾರನ-ಕಮ್ಮಟ (ಇಹಲೋಕ) ಅಚ್ಚಾದ ನಾಣ್ಯದ ಸದ್ದು ಸರಿಯಾಗಿದ್ದರೆ ಅದು ಅಲ್ಲೂ (ಪರಲೋಕ) ಸರಿಯಾಗಿಯೇ ಸದ್ದು ಮಾಡುವುದು ಖಂಡಿತ.

ಅವರು ಮತ್ತೆ ಹೀಗೆನ್ನುತ್ತಾರೆಃ—

"ದೇವನೊಬ್ಬ ನಾಮ ಹಲವು ವೀರಶೈವ ತತ್ವದ ಗುಪ್ತ ಮಾಧುರ್ಯದಂತಿರುವ ಅಕ್ಕ ಮಹಾದೇವಿ ದೇವರ ಬಗೆಗೆ ತನಗಿದ್ದ ಹಂಬಲವನ್ನು ಈ ಪದ್ಯದಲ್ಲಿ ವ್ಯಕ್ತಪಡಿಸಿದ್ದಾಳೆ:—

'ಯಾರ ಪ್ರಭೆಯು ಏಳು ಲೋಕಗಳನ್ನು ಬೆಳಗಿದೆಯೋ, ಅವರ ದಿವ್ಯ ತೇಜಸ್ಸನ್ನು ನಾನು ನೋಡಿದ್ದೇನೆ. ಯಾರು ಅಮರನೂ, ನಿರ್ವ್ಯಸನನೂ, ನಿರ್ಭಯನೂ ಮತ್ತು ಅಕಳಂಕನೂ ಆಗಿರುವನೋ ಆ ಸುಂದರ ಮೂರ್ತಿಯನ್ನು ನಾನು ಪ್ರೇಮಯಾಚನೆ ಮಾಡಿ ಒಲಿಸಿಕೊಂಡಿದ್ದೇನೆ.

'ಕಾಯಕವೇ ಕೈವಲ್ಯ ಎಂಬುದು ವೀರಶೈವ ಶರಣರ ಬೋಧೆಗಳಲ್ಲಿ ಒಂದಾಗಿದೆ.

ಹೃದಯದ ಆಂತರಿಕ ಶುದ್ಧಿಯ ಬಗೆಗೆ ಸರ್ವಜ್ಞನು ಇಲ್ಲಿ ಒತ್ತಿ ಹೇಳಿದ್ದಾನೆ.

" ಬೂದಿಯಲ್ಲಿ ಹೊರಳಾಡಿದ ಮಾತ್ರಕ್ಕೆ ಕತ್ತೆಯು ಜ್ಞಾನಿಯಾಗುತ್ತದೆಯೇ ? ಉನ್ನತ ಸತ್ಯದ ಅರಿವಿಲ್ಲದೆ, ಬೂದಿಯನ್ನು ಬಳಿದುಕೊಳ್ಳುವವನು ಬೂದಿ ಬಳಿದುಕೊಂಡು ಕತ್ತೆಗಿಂತ ಜಾಣನೇನಲ್ಲ."



ಆತನ ವಿಶಾಲ ಮನೋಭಾವವು ಹೀಗಿದೆಃ—

"ಕೀಳುಜಾತಿಯವನ ಮನೆಯಲ್ಲಿ ಉರಿದ ಮಾತ್ರಕ್ಕೆ ದೀಪದ ಪ್ರಕಾಶವು ಕಡಿಮೆಯಾಗಿರುತ್ತದೆಯೇ ?

"ದೇವರನ್ನು ಪ್ರೀತಿಸುವವನು ಮಾತ್ರ ಉತ್ತಮನಾಗಿರುವುದರಿಂದ "ಉತ್ತಮ ಅಥವಾ ಅಧಮ ಎಂದು ಹೇಳಬೇಡ."

"ನಾಲಿಗೆಗೆ ಮೂಳೆ ಇಲ್ಲ, ಬಡವನಿಗೆ ಪ್ರಭಾವವಿಲ್ಲ, ಆಕಾಶಕ್ಕೆ ಆಧಾರಸ್ತಂಭಗಳಿಲ್ಲ ಮತ್ತು ದೇವರಿಗೆ ಜಾತಿ ಇಲ್ಲ"

## ಹರಿದಾಸರ ಉಪದೇಶ

ಕರ್ನಾಟಕ ಹರಿದಾಸರ ಪಲ್ಲವಿ ಇದು. ಹರಿನಾಮ ಕೀರ್ತನ ಮಾಡು, ಅವನಲ್ಲಿಗೆ ಹೋಗುವ ದಾರಿ ಸುಲಭವಾಗಿದೆ ನಿನ್ನ ಹೃದಯದ ತುಂಬಾ ಅವನ ನಾಮ ಕೀರ್ತನ ಮಾಡು, ಪವಿತ್ರ ನದಿಯಲ್ಲಿ ಮಿಂದಲ್ಲ. ಉಪವಾಸಮಾಡಿಲ್ಲ ಅಥವಾ ಜಾಗರಣೆಯನ್ನು ಮಾಡಿಲ್ಲ

ಮತಧರ್ಮ ರೀತಿಯ ಪೂಜೆಯನಾನರಿಯೆ, ಜನರು ನಿನ್ನನ್ನು ಒಲಿಸುವ ಹಲವಾರು ಮಾರ್ಗಗಳನ್ನೂ ನಾನರಿಯೆ. ಜಪವ ನಾನರಿಯೆ ತಪವ ನಾನರಿಯೆ ಆದರೆ ನಿನ್ನ ಮಧುರ ಮತ್ತು ಪವಿತ್ರ ನಾಮ ಸ್ಮರಣೆಯನ್ನು ಮಾತ್ರ ನನ್ನ ಹೃದಯ ಬಲ್ಲದು ಇನ್ನೊಂದು ಪದ್ಯದಲ್ಲಿ,

ನಾನು ನನ್ನ ದೇವರ ಪ್ರತಿಮೆಯನ್ನು ನನ್ನ ಹೃದಯದಲ್ಲಿ ಪೂಜಿಸುತ್ತೇನೆ. ನನ್ನ ಶರೀರ ಅವನ ಗುಡಿ ಮತ್ತು ನನ್ನ ಹೃದಯ ಗರ್ಭಗುಡಿ. ನನ್ನ ಕಣ್ಣುಗಳು ಅವನಿಗಾಗಿ ಹಚ್ಚಿದ ದೀಪಗಳು ನನ್ನ ಕೈಗಳು ಭಕ್ತಿಯಿಂದ ಗಾಳಿಹಾಕುವ ಪವಿತ್ರ ಬೀಸಣಿಗೆಗಳು. ನಾನು ತಿರುಗಾಡುವದೇ ಪ್ರದಕ್ಷಿಣೆ, ನಾನು ಮಲಗುವದೇ ಭಗವಂತನಿಗೆ ದೀರ್ಘ ನಮಸ್ಕಾರ ಹೀಗಿರುವಾಗ ಅವನಲ್ಲಿಗೆ ಹೋಗಲು ಇತರ ಮಾರ್ಗಗಳನ್ನೂ ಇತರ ಮೂರ್ತಿಗಳನ್ನೂ ಏಕೆ ಹುಡುಕಬೇಕು ? ಮತ್ತೆ ಮಂತ್ರ ಹೇಳುವದೇಕೆ,ಮತು ಕರ್ಮ ನಡೆಸುವುದೇಕೆ?

ಎಲ್ಲ ಪೂಜಾ ಸಾಮಗ್ರಿಗಳೂ ನನ್ನಲ್ಲಿ ಇರುವದರಿಂದ, ನನ್ನ ದೇವರನ್ನು ನನ್ನಲ್ಲಿಯೇ ಚನ್ನಾಗಿ ಮನಃಪೂರ್ವಕವಾಗಿ ಪೂಜಿಸುತ್ತೇನೆ.

ಪ್ರಪಂಚದಲ್ಲಿ ನಾವು ಹೇಗೆ ಬಾಳಬೇಕು. ಎಂದು ಪುರಂದರದಾಸರು ಪ್ರಶ್ನಿಸಿ, ಅದಕ್ಕೆ ಈ ಉತ್ತರ ಕೊಡುತ್ತಾರೆ

ಭಗವಂತನ ಪಾದಕಮಲಗಳ ಭಜನೆಯಲ್ಲಿ ನನ್ನ ಸುಖವನ್ನು ನಾನು ಕಂಡೆನಾದ್ದರಿಂದ, ನಾನು ಭಾಗ್ಯಶಾಲಿ ಜೀವನದ ಹುಚ್ಚು ಹೊಳೆಯಲ್ಲಿ ಅಚಲವಾಗಿ ನಿಂತಿರುವ ಕಲ್ಲಿನ ಚೂರಿ ಸಂತರಾ ಜ್ಞಾನಿ

ಗಳ ಬೋಧೆಯನ್ನು ಕೇಳುವಾಗ ಬಾಣದಷ್ಟು ಚುರುಕಾಗಿರು. ನಿಧಾನ ಮತ್ತು ನಿಶ್ಚಿತವಾದರೀತಿಯಲ್ಲಿ ನಿನ್ನ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸು. ನಿನ್ನ ಬಂಧುಗಳಲ್ಲಿ ಸಕ್ಕರೆಯಷ್ಟು ಸಿಹಿಯಾಗಿರು. ಜ್ಞಾನಾರ್ಜನೆಯಿಂದ ನಿನ್ನ ತನು ಮನಗಳನ್ನು ಸರಿಪಡಿಸಿಕೊ. ಭಗವದ್ಭಕ್ತರ ಪ್ರೀತಿಗೆ ಪಾತ್ರನಾಗು. ಭಕ್ತಿಸಾಗರದಲ್ಲಿ ಮೀನಿನಂತೆ ಈಜು, ನಿನ್ನ ಇಂದ್ರಿಯಗಳನ್ನು ಪರಿಶುದ್ಧವಾಗಿಟ್ಟುಕೊಂಡು ವಿಷಯಾಸಕ್ತಿಗಳನ್ನು ಬೆಂಕಿ ಒಣ ಹಲ್ಲನ್ನು ಸುಡುವಂತೆ ಸುಡಲು ಪ್ರಯತ್ನಿಸು ಹಗಲೂ ರಾತ್ರಿ ದೇವರ ಧ್ಯಾನ ಮಾಡು. ಪುರಂದರ ವಿಠಲನ ನಿಜವಾದ ಭಕ್ತರ ಸೇವೆ ಮಾಡು.

### ಉತ್ತಮಕುಲ ಪ್ರಸೂತನಾರು ?

ಉತ್ತಮ ಕುಲ ಪ್ರಸೂತವೆಂದರೇನು ಎಂಬುದರ ಬಗೆಗೆ ಕನಕದಾಸರು ಹೀಗೆ ಹೇಳುತ್ತಾರೆ—

ಒಳ್ಳೆಯ ಗುಣಕ್ಕೆ ಉತ್ತಮ ಕುಲದಲ್ಲಿ ಹುಟ್ಟಿದರೇನು! ಅಧಮ ಕುಲದಲ್ಲಿ ಹುಟ್ಟಿದರೇನು! ಕಮಲವು ಕೆಸರಲ್ಲಿ ಹುಟ್ಟಿದರೂ ಅದನ್ನು ದೇವರಿಗೆ ಅರ್ಪಿಸುವುದಿಲ್ಲವೆ ?

ಹಾಲು ಹಸುವಿನ ಮಾಂಸದ ಕೆಚ್ಚಲಿನಲ್ಲಿ ಶೇಖರಣೆಯಾಗುತ್ತದೆ, ಆದರೆ ಅದನ್ನು ಪ್ರಪಂಚದಲ್ಲಿ ಅತ್ಯುತ್ತಮ ಕುಲದಲ್ಲಿ ಹುಟ್ಟಿದವರು ಕುಡಿಯುವುದಿಲ್ಲವೆ!

ಕಸ್ತೂರಿಯು ಕಸ್ತೂರಿ ಮೃಗದ ಬೆವರು, ಆದರೆ ಅತ್ಯುತ್ತಮ ಕುಲದಲ್ಲಿ ಹುಟ್ಟಿದವರು ಅದನ್ನು ತಮ್ಮ ಮೈಗೆ ಹಚ್ಚಿಕೊಳ್ಳುವುದಿಲ್ಲವೆ!

ಪಾರ್ವತಿ ಪತಿ ಯಾವ ಜಾತಿಗೆ ಸೇರಿದನೆಂದು ನನಗೆ ಹೇಳಿ ಆತ್ಮದ ಜಾತಿ ಯಾವುದು? ಜೀವನದ ಪ್ರೀತಿಯ ಮತ್ತು ಪರಿಚೇಂದ್ರಿಯಗಳ ಕುಲವಾವುದು ನಿನ್ನ ಆತ್ಮ ಕೇಶವನಲ್ಲಿ ಸೇರಿಕೊಂಡಿರುವಾಗ ಜಾತಿಯ ಮಾತೇಕೆ?

ದೇವರ ಪಾಪವಿಮೋಚನಾ ಕೃಪಾಳುತನದ ಮಹಾ ವಿಶ್ವಾಸವನ್ನು ಈ ಹಾಡಿನಲ್ಲಿ ವ್ಯಕ್ತಪಡಿಸಲಾಗಿದೆ.

ಓ ಮನಸ್ಸೇ, ಶಾಂತತೆಯನ್ನು ತಳೆ. ಆತಂಕ ಪಡಬೇಡ. ದೇವರು ಎಲ್ಲರನ್ನೂ ಒಂದೇ ಸಮನಾದ ಎಚ್ಚರಿಕೆಯಿಂದ ಸಲಹುವನೆಂಬುದರಲ್ಲಿ ಸಂದೇಹ ಬೇಡ. ಬೆಟ್ಟದ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ ಕಟ್ಟೆಯನು ಕಟ್ಟಿ ನೀರೆರೆದವರು ಯಾರು? ನಮ್ಮನ್ನು ಸೃಷ್ಟಿಸಿದವನೇ ಮತ್ತು ನಮ್ಮ ಯೋಗ ಕ್ಷೇಮದ ಹೊಣೆಯನ್ನು ಹೊತ್ತಿರುವವನೇ ಅವನು ನಮ್ಮನ್ನು ಖಂಡಿತವಾಗಿಯೂ ಸಲಹುವನು ಇದಕ್ಕೆ ಸಂಶಯವಿಲ್ಲ.

ಕಾಡಿನಲ್ಲಿರುವ ಮೃಗಗಳಿಗೂ, ಗಾಳಿಯಲ್ಲಿರುವ ಪಕ್ಷಿಗಳಿಗೂ ಸಕಾಲದಲ್ಲಿ ಆಹಾರವನ್ನೊದಗಿಸುವವನು ಯಾರು? ತನ್ನ ಮಗುವನ್ನು ಪೋಷಿಸುವ ತಾಯಂತೆ, ನಮ್ಮ ಪೋಷಣೆಯ ಹೊರೆ



ಯನ್ನು ಪರಮಾತ್ಮನೇ ಹೊತ್ತಿದ್ದಾನೆ ಖಂಡಿತವಾಗಿಯೂ ಅವನು ನಮ್ಮನ್ನು ರಕ್ಷಿಸುತ್ತಾನೆ. ಸಂಶಯ ಪಡಬೇಡ. ಬಂಡೆಗಳ ಸಂದಿನಲ್ಲಿ ಒಟಗುಟ್ಟುವ ಕಪ್ಪೆಗಳಿಗೆ ಯಾರು ಆಹಾವನ್ನು ತಿನ್ನಿಸುತ್ತಾರೆ? ಕೇಶವನಿಗೆ ನಮ್ಮ ಅವಶ್ಯಕತೆಗಳು ಗೊತ್ತು ಅವನು ನಮ್ಮೆಲ್ಲರನ್ನೂ ಸಲಹುತ್ತಾನೆ ಸಂದೇಹಬೇಡ.

ಕರ್ನಾಟಕದ ಸಂಸ್ಕೃತಿಯ ಪೂರ್ವ ಚಿಹ್ನಗಳ ಚೇತನದ ಆಳವಾದ ನಂಬಿಕೆ ಪ್ರಸನ್ನಚಿತ್ತತೆ ಮತ್ತು ಶಾಂತತೆಗಳಿವು ಹಳೆಯದಾದರೂ ನಿರಂತರ ಹೊಸದಾಗಿಯೇ ಉಳಿಯುವ ಈ ಬಾಳ ಸ್ಫೂರ್ತಿಯ ಚಿಲುಮೆಯನ್ನು ಆಧುನಿಕ ವಿಶ್ವವು ಈ ಕೂಡಲೇ ಪುನರ್‌ಸ್ಮರಣೆ ಮಾಡಿಕೊಳ್ಳುವಂತೆ ಭಗವದನುಗ್ರಹವಾಗಲಿ.

ನಮ್ಮ ಕರ್ನಾಟಕ ಸಂಸ್ಕೃತಿಯ ಪರಂಪರೆಯನ್ನು ಜ್ಞಾಪಕದಲ್ಲಿಟ್ಟುಕೊಂಡು, ಎಲ್ಲ ದೇಶಗಳ ಸಂಸ್ಕೃತಿಗಳ ಬಗೆಗೆ ನಾವು ಯಾವ ರೀತಿ ವರ್ತಿಸಬೇಕೆಂಬ ವಿಚಾರವಾಗಿ ಗಾಂಧೀಜಿಯವರು ಹೇಳಿರುವುದನ್ನು ನಾವು ಸ್ಮರಿಸಿಕೊಳ್ಳೋಣ. ನಮ್ಮ ಮನೆಗೆ ಎಲ್ಲ ಪಾರ್ಶ್ವಗಳಲ್ಲೂ ಗೋಡೆಗಳನ್ನು ಹಾಕುವುದಾಗಲೀ ನನ್ನ ಮನೆಯ ಕಿಟಕಿಗಳನ್ನು ಮುಚ್ಚುವದಾಗಲೀ ನನಗೆ ಇಷ್ಟವಿಲ್ಲ. ಎಲ್ಲ ದೇಶಗಳ ಸಂಸ್ಕೃತಿಗಳೂ ಸಾಧ್ಯವಾದಮಟ್ಟಿಗೂ ಅಡ್ಡಿ ಆತಂಕಗಳಿಲ್ಲದೆ ನನ್ನ ಮನೆಯ ಸುತ್ತಲೂ ಸುಳಿದಾಡಬೇಕೆಂಬುದೇ ನನ್ನ ಆಕಾಂಕ್ಷೆ ಆದರೆ ಅವುಗಳಾವುದರಿಂದಲೇ ಆಗಲಿ ನನ್ನ ಬುಡವೇ ಕಿತ್ತುಕೊಂಡು ಹೋಗುವದನ್ನು ನಾನು ನಿರಾಕರಿಸುತ್ತೇನೆ ಎಂದು ಅವರು ಹೇಳಿದ್ದಾರೆ.



ಮಹಾ ಕವಿ ಚಾಮರಸ ವಿರಚಿತ

# ★ ಪ್ರಭುಲಿಂಗ ಲೀಲೆ ★

ಲೇಖಕರು:- **ಶ್ರೀ ಈಶ್ವರಚಂದ್ರ ಚಿಂತಾಮಣಿ,** ಮುಖ್ಯ ಗುರುಗಳು,
ಜೀವನ ಶಿಕ್ಷಣ ಶಾಲೆ, ಜೈನಾಪೂರ.

ಸಾವಿರಾರು ವರುಷಗಳಿಂದ ಒಂದೇ ಸವನೆ ಹೊನಲಾಗಿ ಹರಿಯುತ್ತ ಬಂದಿರುವ ನಮ್ಮ ಕನ್ನಡ ಸಾಹಿತ್ಯ ಸಮುದ್ರದಲ್ಲಿ ಮಹಾನ್ ಕವಿಪುಂಗವರು ಅವತರಿಸಿ ಕನ್ನಡನಾಡನ್ನು, ಕನ್ನಡ ನುಡಿಯನ್ನು ಜಗತ್ತಿಗೇನೇ ಆದರ್ಶವಾಗುವಂತೆ ಮಾಡುತ್ತ ಬಂದಿದ್ದಾರೆ. ಆ ಮಹಾನುಭಾವರ ಪುಣ್ಯ ಪರಿಪಾಕದಿಂದ, ಅವರ ಅಮೃತವಾಣಿಯಿಂದ, ಕಾವ್ಯ ದುಂಧುಭಿಯಿಂದ ನಾವು-ನಾವಿರುವನಾಡು-ನಮ್ಮ ನುಡಿ ಇಂದು ಆದರ್ಶಮಯ.

ಕನ್ನಡ ತಾಯಿಯ ಭಾಷಾ ಸೇವಕರು ಒಬ್ಬರೇ, ಇಬ್ಬರೇ, ಬಹುಜನ ಕುಮಾರವ್ಯಾಸನಾದ; ಪಂಪನಾದ; ರನ್ನನಾದ; ಲಕ್ಷ್ಮೀಶನಾದ; ಹರಿಹರನಾದ; ರಾಘವಾಂಕನಾದ; ಚಾಮರಸನಾದ; ಷಡಕ್ಷರಿಯಾದ. ಇನ್ನೂ ಸಾವಿರಾರು ಜನ ಶರಣರಾದರು. ಕವಿರಾಯರ ಅಪಾರ ಸಮುದ್ರವೇ ಕನ್ನಡ ಸಾಹಿತ್ಯ ಭಾಂಡಾರ ನಿಜ.

ನಮ್ಮ ಕವಿವರ್ಯರ ಪ್ರಭೆ-ಓಜಸ್ಸುಗಳೇ ಬೇರೆ; ಅವರ ಶೈಲಿಯೇ ಬೇರೆ; ಅವರ ಕಾವ್ಯ ಕಥನಗಳೇ ಬೇರೆ ಒಬ್ಬೊಬ್ಬರ ಹಾದಿ ಒಂದೊಂದು ತೆರನಾದದ್ದು. ಸಕಲ ಧರ್ಮದ ಕವಿವರ್ಯರಿವರು, ಸಕಲಶಾಸ್ತ್ರಪಾರಂಗತರಿರುವರು. ಒಬ್ಬೊಬ್ಬರ ವಿಷಯವಾಗಿ, ಅವರವರ ಕಾವ್ಯ ಪರಿಶೀಲನೆಗಾಗಿ, ಅವರ ಜಾಣ್ಮೆಯ ವಿಷಯವಾಗಿ ವಿಚಾರಪರವಶರಾದಾಗ ನಾವು ನಿಜವಾಗಿಯೂ ಮೈಮರೆಯುತ್ತೇವೆ; ಬೆಪ್ಪಾಗುತ್ತೇವೆ; ಮೆಚ್ಚುತ್ತೇವೆ; ಧನ್ಯರಾಗುತ್ತೇವೆ. ಅವರ ನಾಮಸ್ಮರಣೆಯಲ್ಲಿ-ಅವರ ಕಾವ್ಯ ಭಾಂಡಾರದಲ್ಲೇ ದಿನಕಳೆಯುತ್ತೇವೆ.

ಕವಿ ಕುಮಾರವ್ಯಾಸನು ತನ್ನ ಕಾವ್ಯ ಪ್ರಾರಂಭಿಸಿದ ಅವನ ಸ್ತುತಿ ಇದು.

ಶ್ರೀ ವನಿತೆಯರಸನೆ ವಿಮಲರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರದಾತಾರ
ರಾವಣಾಸುರ ಮಥನ ಶ್ರವಣ ಸು



ಧಾವಿನೂತನ ಕಥನ ಕಾರಣ
ಕಾವುದಾತನ ಜನವ ಗದುಗಿನ ವೀರನಾರಾಯಣ.

ಕವಿಯು ತನ್ನ ಮೇಲ್ಮೆ ಆತ್ಮಬಲವನ್ನೂ ಹೇಳಿಕೊಂಡಿದ್ದಾನೆ. ಅದು.

ಹಲಗೆ ಬಳಪವ ಹಿಡಿಯದೊಂದ
ಗ್ಗಳಿಕೆ ಪದವಿಟ್ಟಳಿಸದೊಂದ
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ
ಬಳಸಿ ಬರೆಯಲು ಕಂಡ ಪತ್ರದ
ಉಲುಹುಗೆಡದಗ್ಗಳಿಕೆ-ಯೆಂಬೀ
ಬಲುಹು ಸಲುವುದು ವೀರನಾರಾಯಣನ ಕಿಂಕರಣೆ.

ಅಲ್ಲದೆ ತನ್ನ ಕಾವ್ಯದ ಹಿರಿಮೆಯನ್ನು ಕೊಂಡಾಡಿದ್ದಾನೆ. ಅದು ಸರ್ವರಿಗೂ ಜ್ಞಾನ ನೀಡಬಲ್ಲುದೆಂದು ಹೇಳುತ್ತಾನೆ. ಇದೇ ಅದರ ಗುರಿ.

ಅರಸುಗಳಿಗಿದು ವೀರದ್ವಿಜರಿಗೆ
ಪರಮವೇದದ ಸಾರ ಯೋಗಿ
ಶ್ವರರ ತತ್ವ ವಿಚಾರ ಮಂತ್ರಿ ಜನಕ್ಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರ ವ್ಯಾಸ ಭಾರತವ.

ಒಟ್ಟಿನಲ್ಲಿ ಕವಿ ಕುಮಾರವ್ಯಾಸನು ಸಾಮಾನ್ಯ ಕವಿಯಲ್ಲ. ಅವನ ಕೀರ್ತಿಯು ಚಿರಸ್ಥಾಯಿಯಾದದ್ದು. ಕನ್ನಡ ನುಡಿ ಇರುವವರೆಗೆ ಅವನನಾಮ-ಪ್ರಕಾಶಮಾನವಾಗುವದು ನಿಜ.

ನಾವೀಗ ಈ ಲೇಖನಕ್ಕೆ ಆಣಿಮಾಡಿರುವದು, ಕನ್ನಡ ಕಾವ್ಯಭಾಂಡಾರಕ್ಕೆ ತನ್ನ ಅಮೌಲ್ಯ ಕಾಣಿಕೆಯಾದ "ಪ್ರಭುಲಿಂಗ ಲೀಲೆ"ಯನ್ನು ಬರೆದು ಕನ್ನಡ ಕವಿರಾಯರ ಹಿರಿಮಣಿಯೆಂದು ಹೆಸರಾದ ಕವಿ ಚಾಮರಸನನ್ನು.

ನಮ್ಮ ಕವಿ ಚಾಮರಸನು ಸಾಮಾನ್ಯ ಪುರುಷನಲ್ಲ. ಕುಮಾರವ್ಯಾಸನ ಸರಿಸಮಾನನಾದವ. ಕುಮಾರ ಭಾರತಕ್ಕೂ ಚಾಮರಸನ ಪ್ರಭುಲಿಂಗ ಲೀಲೆಗೂ ಕನ್ನಡ ಜನತೆಯ ಆದರ ಅಷ್ಟಷ್ಟೇ ಇದೆ. ಪ್ರಭುಲಿಂಗಲೀಲೆ ರಸಮಯ-ಮನಮೋಹಕ ಕಾವ್ಯ ಕುಮಾರವ್ಯಾಸನ ಭಾರತಶೈಲಿ 'ಗಂಡು' ಶೈಲಿ. ಚಾಮರಸನ ಪ್ರಭುಲಿಂಗ ಲೀಲೆಯ ಶೈಲಿ ಶಾಂತಿ-ರಸ ಪ್ರಧಾನವಾದ ಪ್ರಭು ಚರಿತ್ರೆಗೆ ಅನುರೂಪದಾಗುವಂತೆ ಮೃದು-ಮಧುರವಾಗಿಯೂ ಸರಸಗಂಭೀರವಾಗಿಯೂ, ತುಂಬಿದ ಹೊನಲಂತೆ ಪುರಾತನವಾಗಿಯೂ ಪ್ರವಹಿಸುತ್ತದೆ.

ಚಾಮರಸನ ಪ್ರಭುಲಿಂಗ ಲೀಲೆಯ ಕಥಾಸರಣಿ, ಪಾತ್ರರಚನೆ, ತರುಣರಸ, ಆಧ್ಯಾತ್ಮಪ್ರಭಾವ, ಓಜಸ್ಸುಗಳಿಗೆ ಬಹು ಭಾಷಾ ವಿಶಾರದರಿಂದ ಮೆಚ್ಚುತ್ತಿದ್ದಾರೆ. ಅಂತೆಯೇ ಮಾನ್ಯ ಕವಿಚಾಪುರಸನ ಪ್ರಭುಲಿಂಗ ಲೀಲೆ ತೆಲಗು, ತಮಿಳು, ಸಂಸ್ಕೃತ, ಮರಾಠಿ ಈ ನಾಲ್ಕು ಭಾಷೆಗಳಲ್ಲಿ ಪರಿವರ್ತನವಾಗಿರುವದು ಕನ್ನಡಿಗರಿಗೆಲ್ಲ ಅಭಿಮಾನದ ಸಂಗತಿಯಾಗಿರುವದಲ್ಲದೆ ಪರಭಾಷಾ ಸಾಹಿತ್ಯದಲ್ಲಿ ಈ ನಮ್ಮ ಕವಿಗಿರುವ ಆದರ-ಗೌರವಗಳೂ ವ್ಯಕ್ತವಾಗುತ್ತವೆ.

ಪ್ರಭುಲಿಂಗ ಲೀಲೆಯನ್ನು ತೆಲುಗಿನಲ್ಲಿ 'ಪಿಡುಪರ್ತಿ ಸೋಮನಾಥ' ಕವಿಯು ದ್ವಿಪದಿಯಲ್ಲಿ ಬರೆದಿದ್ದಾನೆ. ಮತ್ತೂ ಅದೇ ಭಾಷೆಯಲ್ಲಿ 'ಪಿಡುಪರ್ತಿ ಬಸವ' ಕವಿಯು ಚಂಪೂ ಕಾವ್ಯದಲ್ಲಿ ಬರೆದಿದ್ದಾನೆ ತಮಿಳಿನಲ್ಲಿ 'ತಿರುವಣ್ಣಾಮಲೆಯ ಶಿವಪ್ರಕಾಶಸ್ವಾಮಿ' ಎಂಬ ಮಹಾನ್‌ಕವಿಯು ಬರೆದ ಸಂಸ್ಕೃತದಲ್ಲಿ ಕನ್ನಡ ಕವಿ 'ವಿರುಪಾಕ್ಷ ಪಂಡಿತ' ಕವಿಯು ರಚಿಸಿದನೆಂದು ಹೇಳಬಹುದಾಗಿದೆ ಮರಾಠಿಯಲ್ಲಿ 'ಬ್ರಹ್ಮದಾಸ'ನೆಂಬ ಕವಿಯು 'ಲೀಲಾ ವಿಶ್ವ.ಬರ'ವೆಂಬ ಹೆಸರಿನಿಂದ ಪ್ರವರ್ತಿಸಿ ಕೀರ್ತಿಶೇಷನಾಗಿದ್ದಾನೆ ಈ ಎಲ್ಲ ಕವಿವರ್ಯರು ಚಾಮರಸನ ಕಾವ್ಯವನ್ನೇ ತಮ್ಮ ಕಾವ್ಯದ ಕಥಾ ವಸ್ತುವನ್ನು ಮಾಡಿಕೊಂಡು ಧನ್ಯರಾಗಿದ್ದಾರೆ. ಒಟ್ಟಿನಲ್ಲಿ ಪರಭಾಷೆಗಳಲ್ಲಿ ಕನ್ನಡ ಕವಿಯ ಮಾನ್ಯಕವಿ ಚಾಮರಸನ ಆದರ ಹೆಚ್ಚೆಚ್ಚಾಗಿದೆ. ಎಂದು ಕೇಳಲು ನಮಗೆ ತುಂಬಾ ಅಭಿಮಾನವಾಗುತ್ತದೆ. ಈ ಬಗೆಯ ಪರಭಾಷಾ ಸಾಹಿತ್ಯದಲ್ಲಿ ಗೌರವಪಡೆದ ಇನ್ನಾವಕವಿಯೂ ಕನ್ನಡದಲ್ಲಿ ವಿರಳ ಚಾಮರಸನೊಬ್ಬನು ಈ ವಿಷಯದಲ್ಲಿ ಹೆಸರುವಾಸಿಯಾಗಿದ್ದಾನೆ.

ಕನ್ನಡತಾಯಿಯ ಹೆಸರನ್ನು, ತನ್ನ ಕಾವ್ಯ ಕಥನವನ್ನು ನಾಡು ನಾಡುಗಳ ಭಾಷೆಯಲ್ಲಿ ಮೆರೆಯಿಸಲು ಕಾರಣನಾದ ನಮ್ಮ ಚಾಮರಸನನ್ನು ಕನ್ನಡಿಗರೆಲ್ಲರೂ ಅಭಿಮಾನದಿಂದ ಪೂಜಿಸಬೇಕು. ಅವನ ಅನಂತವಾದ ಮನಮೋಹಕವಾದ, ಹೃದಯವಾಣಿಯು ಇನ್ನೂ ಹೆಚ್ಚು ಹೆಚ್ಚಾಗಿ ಪ್ರಕಾಶಮಾನವಾಗುವಂತೆ ಮಾಡುವದು ಅವನ ನಾಡಿನ ಸಾಹಿತ್ಯ ವಿದ್ವನ್ಮಣಿಗಳನ್ನೆ ಸೇರಿದೆ. ಕನ್ನಡ ತಾಯಿಯ ಬೆಲೆಬಾಳ್ವ ಆಭರಣದಂತಿರುವ ಪ್ರಭುಲಿಂಗ ಲೀಲೆ ಕಥೆಯನ್ನು ಕನ್ನಡ ಕಲೋಪಾಸಕರು, ವಾಗ್ಮಿಗಳು, ನಾಟ್ಯಾಚಾರ್ಯರು ರಜತ ಪರದೆಯ ಮೇಲೆ ತರಲು ಮುಂದಾಗಬೇಕು ! ಅಂದರೇನೇ ಚಾಮರಸನ ಕೃತಿ ಸಾರ್ಥಕ.

ನಮ್ಮ ಕವಿ ಚಾಮರಸನು ೧೫ ನೇಯ ಶತಮಾನದಲ್ಲಿಯವ; ಅವನು ೧೪೩೦ ರಲ್ಲಿ ಇದ್ದನೆಂದು ಖಡಾಖಂಡಿತವಾಗಿ ಕವಿ ಚರಿತೆಗಾರರು ಊಹಿಸಿದ್ದುದು ಸತ್ಯ ಸಂಗತಿಯಾಗಿದೆ.

ವೀರಶೈವ ಮಹಾನ್ ಪುರುಷರಲ್ಲಿ, ವೀರಶೈವ ಮತ ಪ್ರಚಾರಕರಲ್ಲಿ ಹನ್ನೆರಡನೆಯ ಶತಮಾನದ ವೀರಶೈವ ವಚನಕಾರರ ಕ್ರಾಂತಿಯಲ್ಲಿ, ಸತ್ಯ ಜ್ಞಾನವನ್ನು ಭೋಧಿಸುವದು ಮಹಾಪುರುಷರಲ್ಲಿ, ಅಗ್ರಗಣ್ಯ-ಧೃವತಾರೆಯೆಂದು ಹೆಸರು ವಾಸಿಯಾದ ಆತ್ಮಜ್ಞಾನಿ ಅಲ್ಲಮ ಪ್ರಭುವಿನ ದಿವ್ಯ ಚರಿತ್ರೆಯೇ ನಮ್ಮ ಕವಿಯು ರಚಿಸಿದ ಪ್ರಭುಲಿಂಗ ಲೀಲೆ.



ಅಲ್ಲಮಪ್ರಭು ಸಾಮಾನ್ಯ ಶರಣನಲ್ಲ; ಸೀಮಾತೀತ ಜ್ಞಾನಯೋಗಿ, ಅಮರಜ್ಞಾನಿ, ಸಮಾಜ ಸುಧಾರಕ; ತತ್ವಭೋದಕ; ಶಿವಕಳೆಯುಳ್ಳ ಶಿವಯೋಗಿ; ಜನ ಕಲ್ಯಾಣದ ವೈರಾಗ್ಯ ಮೂರ್ತಿ.

ಪ್ರಭುವಿನವಾಣಿ ಅನಂತವಾದುದು. ಅಮರವಾದುದು; ನೀತಿಯುತವಾದುದು; ಸತ್ಯವಾದುದು; ಜ್ಞಾನಮಯವಾದುದು; ಸಕಲ ಶಾಸ್ತ್ರಮಯವಾದುದು.

ಪ್ರಭುವಿನ ಜೀವನವೆಂದರೆ ಮಾಯಾನಿರಸನ; ಕಾಮರಹಿತ; ಕ್ರೋಧರಹಿತ; ಅವನ ಜೀವನವು ಶಾಂತಿಸಾಗರವಿದ್ದಂತೆ. ಈ ವೀರಯೋಗಿಯ, ಜ್ಞಾನದಾನಿಯ, ಶಿವ ಸ್ವರೂಪನ ಜೀವನ ಚರಿತ್ರೆಯನ್ನು ತನ್ನ ಕಾವ್ಯದ ಅಮೌಲ್ಯ ಕಥೆಯನ್ನಾಗಿ ಮಾಡಿಕೊಂಡ ನಮ್ಮ ಕವಿ ಚಾಮರಸನು ಅಭಿನಂದನೀಯನು.

ಈ ಅಮೌಲ್ಯಕಾವ್ಯದಲ್ಲಿಬರುವ ಮಾಯಾದೇವಿಯ ಮೋಹಜಾಲ, ಕಾಮದ ಕಾಳಗ, ಅವಳ ಶೃಂಗಾರಮಯ ಜೀವನವು ಓದುಗರನ್ನು, ಕವಿಗಳನ್ನು ಮುಗ್ಧಗೊಳಿಸುತ್ತದೆ. ಮಾಯಾದೇವಿಯ ಮೋಹದಿಂದ ಸಿಡಿದು ಚಿಮ್ಮುವ, ಅವಳನ್ನು ಹೀಯಾಳಿಸುವ ರೀತಿ ನೀತಿ, ಸಂಭಾಷಣೆಯ ಸ್ವರೂಪದಲ್ಲಿ ಅಲ್ಲಮನು ನಮಗೆ ಜ್ಞಾನವೈರಾಗ್ಯ ನೀಡುತ್ತಾನೆ. ತನ್ನ ಸಖಿಯಳ ಬಯಕೆಯನ್ನು ಈಡೇರಿಸಲು ವಿಮಲೆಯು ಅಲ್ಲಮನಿಗೆ ಮೊರೆಹೋಗುವಿಕೆ, ಅಲ್ಲಮನು ಅವಳನ್ನೂ ತಿರಸ್ಕಾರದಿಂದಲ್ಲದೆ ತತ್ವಜ್ಞಾನದಿಂದ ಹೀಯಾಳಿಸಿ ಸೋಲಿಸುವ ಬಗೆ ನಮಗೆ ಚೇತನ ಅಚ್ಚರಿಯನ್ನುಂಟುಮಾಡುತ್ತದೆ.

ಮುಂದೆ ಕನ್ನಡ ಮಹಿಳೆಯರಿಗೆಂದು ಬಾಳಿನಕೈದೀವಿಗೆಯಾದ ಅಕಮಹಾದೇವಿಯ ಜನನ, ಬಾಲ್ಯಜೀವನ, ಅವಳ ವೈರಾಗ್ಯ, ಮಾಯಾನಿರಸನ, ಅವಳನ್ನು ಬೆಂಬಿಡದ ಮಾಯೆಯಕಾಟ, ಅವಳುಪಡುವ ಕಷ್ಟಪರಂಪರೆ ಕೌಶಿಕ ರಾಜನು ಅವಳಿಗೆ ಮೋಹಗೊಂಡು ಅವಳನ್ನು ಬಯಸಿ ಘಾಸಿಯಾದುದೆಲ್ಲ ಒಳ್ಳೆಯ ರಸವತ್ತಾಗಿ ಚಾಮರಸನ ಕಾವ್ಯದಲ್ಲಿ ತುಂಬಿಬಂದಿದೆ.

ಹನ್ನೆರಡನೆಯ ಶತಮಾನದ ಕ್ರಾಂತಿಯ ವೀರಶೈವ ಮಹಾನ್ ಮಣಿಗಳಲ್ಲಿ ಹೆಸರಾದ ಬಸವಣ್ಣ, ಸಿದ್ಧರಾಮರ ಅವತಾರ, ಗೊಗ್ಗಯ್ಯನಗತಿ, ಪ್ರಭುವಿನ ನಾಡಸೇವೆ ಅವನ ಸಂಚಾರ, ಜ್ಞಾನ ಬೋಧನೆ ಹೊನಲಾಗಿ ಹರಿದಿದೆ.

ಒಟ್ಟಿನಲ್ಲಿ ಚಾಮರಸನು ಮನಮೆಚ್ಚುವಂತೆ. ಈ ಕಥೆಯನ್ನು ತನ್ನ ಸರಳ ರಮ್ಯ ಶೈಲಿಯಲ್ಲಿ ರಚಿಸಿದ್ದಾನೆ ದಿನಕ್ಕೆ ೧೦೧ ಪದ್ಯಗಳಂತೆ ಈ ಅಖಂಡ ಗ್ರಂಥವನ್ನು ಕೇವಲ ೧೧ ದಿನಗಳಲ್ಲಿ ೧೧೧೧ ಪದ್ಯಗಳುಳ್ಳ ಪಭುಲಿಂಗ ಲೀಲೆಯನ್ನು ರಚಿಸಿದನು.

ಈ ಕಾವ್ಯವನ್ನು ಚಾಮರಸನು ಬರೆಯಲು ಒಂದು ಮುಖ್ಯ ಕಾರಣವಿದೆಯೆಂದು ನಾವು ತರ್ಕಿಸಬಹುದು ಈ ತರ್ಕವನ್ನು ಬಹುಜನ ಕವಿಚರಿತೆಗಾರರು ತಮ್ಮ ಆಳವಾದ ಅಭ್ಯಾಸದ ಬಲದಿಂದ ಒಪ್ಪಿಕೊಂಡಿದ್ದಾರೆ

ಅದು ಹೀಗೆ:

"ಕುಮಾರವ್ಯಾಸನು ಚಾಮರಸನ ತಂಗಿಯ ಗಂಡನೆಂದು ಕೆಲವು ಗ್ರಂಥಗಳಲ್ಲಿ ಹೇಳಿದೆ"

"ವಿಜಯನಗರದ ಪ್ರೌಢದೇವರಾಯರು ಭಾರತವನ್ನು ಕನ್ನಡದಲ್ಲಿ ಬರೆಯಲಿಕ್ಕೆ ಚಾಮರಸನಿಗೂ ಕುಮಾರವ್ಯಾಸನಿಗೂ ಹೇಳಿದನು. ಅದರಂತೆ ಇವರಿಬ್ಬರೂ ಬರೆದ ಕಥೆಗಳನ್ನು ವಿದ್ವಾಂಸರು ಪರೀಕ್ಷಿಸಿ ಚಾಮರಸನ ಕೃತಿಯು ಹೆಚ್ಚು ರಸವತ್ತಾದುದೆಂದು ಅಭಿಪ್ರಾಯಪಡಲು ಕುಮಾರವ್ಯಾಸನು ಖಿನ್ನನಾಗಿ ತನ್ನ ಹೆಂಡತಿಯಕಡೆಯಿಂದ ಚಾಮರಸನ ಕೃತಿಯನ್ನು ಸುಡಿಸಿದನು."

"ತನ್ನ ಕಾವ್ಯವು ನಾಶವಾದುದಕ್ಕಾಗಿ ಚಾಮರಸನು ಚಿಂತೆಯಲ್ಲಿದ್ದಾಗ ಆತನ ಕನಸಿನಲ್ಲಿ ಈಶ್ವರನು ಬಂದು ಅನ್ಯದೈವವನ್ನು ಕೀರ್ತಿಸಿದ ಫಲವಾಯಿತೆಂದು ಹೇಳಿದುದರಿಂದ ಚಾಮರಸನು ಎಚ್ಚತ್ತು ದೀಕ್ಷೆಗೊಂಡು ಹಂಪೆಯಲ್ಲಿ ವಾಸಿಸತೊಡಗಿದನು. ಇತ್ತ ಕುಮಾರವ್ಯಾಸನ ಕೃತಿಗೆ ರಾಜ ಮನ್ನಣೆದೊರೆತು. ಆತನಿಗೆ ಕನಕ ಸ್ನಾನವನ್ನು ಮಾಡಿಸುವ ವ್ಯವಸ್ಥೆ ನಡೆದಾಗ ನೂರೊಂದು ವಿರಕ್ತರಲ್ಲಿ ಮುಖ್ಯರಾದ ಜಕ್ಕಣಾರ್ಯರ ಮೊದಲಾದವರು ಸತ್ತವರ ಕಥೆಗೆ ಈ ಮನ್ನಣೆಯು ಸಲ್ಲದೆಂದು ತಡೆದರು. ಆಗ ಅವರಿಗೂ ಮುಕುಂದ ಪೆದ್ದಿ ಮೊದಲಾದವರಿಗೂ ವಾಗ್ವಾದವಾಗಿ ಸತ್ತವರಲ್ಲದ ಕಥೆಯನ್ನು ತರಿಸುವೆವೆಂದು ಹೇಳಿ ಜಕ್ಕಣಾದಿಗಳು ಚಾಮರಸನಿಂದ ದಿನವೊಂದಕ್ಕೆ ೧೦೧ ಪದ್ಯಗಳಂತೆ ೧೧ ದಿನಗಳಲ್ಲಿ ೧೧೧೧ ಪದ್ಯಗಳುಳ್ಳ ಪ್ರಭುಲಿಂಗ ಲೀಲೆಯನ್ನು ಬರೆಯಿಸಿ ಅದನ್ನು ಪ್ರೌಢರಾಯನ ಸಭೆಯಲ್ಲಿ ಓದಿಸಿ ಅದಕ್ಕೆ ಉಚಿತ ಮನ್ನಣೆಗಳನ್ನು ಗಳಿಸಿದರು. ಪ್ರೌಢರಾಯನು ವೀರಶೈವ ದೀಕ್ಷೆಯನ್ನು ಸ್ವೀಕರಿಸಿದನು. ಜಕ್ಕಣಾರ್ಯನು ಮಂತ್ರಿಪದದಿಂದ ನಿವೃತ್ತನಾಗಿ ಚಾಮರಸನಿಗೆ ಕೊಡಿಸಿದನು."

........ಒಟ್ಟಿನಲ್ಲಿ ಕುಮಾರವ್ಯಾಸನು ರಾಜಮನ್ನಣೆ ಪಡೆಯಲು ತನ್ನ ಕೀರ್ತಿಗಾಗಿ ಚಾಮರಸನ ಕಾವ್ಯಭಾರತವನ್ನು ತನ್ನ ಹೆಂಡತಿಯ ಕೈಯಿಂದ ಸುಡಿಸಿದನೆಂದು ತಿಳಿಯಲು ಯಾವ ಕನ್ನಡಿಗನು ತಾನೆ ಕುಮಾರವ್ಯಾಸನನ್ನು ಹೀಯಾಳಿಸಲಾರ? ಈ ಊಹೆ ನಿಜವಿದ್ದರೆ,........ಕುಮಾರವ್ಯಾಸನ ಚಾಳಿ ಕನ್ನಡ ಕವಿರಾಯರಿಗೆ. ಕನ್ನಡ ಕವಿ ಕುಲಕ್ಕೆ ಕಳಂಕ ಪ್ರಾಯವೆಂದು ನಾವು ಅನಿವಾರ್ಯವಾಗಿ ಉಸುರಲೇಬೇಕಾಗುತ್ತದೆ! ಇರಲಿ.

ಚಾಮರಸನು ತನ್ನ ಕಾವ್ಯವನ್ನು ಪ್ರಾರಂಭಿಸುತ್ತ "ಅರಸುಗಳಿಗಿದು ವೀರ"! ಎಂದು ಕುಮಾರವ್ಯಾಸನಂತೆ ತನ್ನ ಆತ್ಮಸ್ತುತಿ ಗಾಳಿಗೆ ಸಿಲುಕದೆ,

ತನ್ನ ಕಾವ್ಯನಾಯಕನ ಭಕ್ತಿಜ್ಞಾನವನ್ನು ಸರ್ವರು ಅರಿವಂತೆ ಹೇಳುವೆನೆಂದು:—

ಅಲ್ಲಮಪ್ರಭು ಸಾಂಪ್ರದಾಯದ ।
ಸಲ್ಲಲಿತ ಸನ್ಮಾರ್ಗವನು ನಾ ।
ನೆಲ್ಲರರಿವಂದದಲೆ ಪೇಳುವೆನುಚಿತ ವಚನದಲಿ ॥



ಸೊಲ್ಲಿನೊಳಗಣ ಸೊಂಪನಿಂಪನು ।
ಬಲ್ಲವರು ಭಾವಕರು ಭಕ್ತಿಯ ।
ಬಲ್ಲಿದರು ಲಾಲಿಸುವುದೀ ಪ್ರಭುಲಿಂಗ ಲೀಲೆಯಲಿ ॥

ಅಲ್ಲಮನು ಆಶ್ವಾಸನ ಕೊಡುತ್ತಾನೆ.

ಕೆಳಗಿನ ಮಾತಿನಿಂದ ಕುಮಾರವ್ಯಾಸ ಕವಿಯು ಚಾಮರಸನ ಭಾರತವನ್ನು ನಾಶಮಾಡಿರಬೇಕೆಂಬುದು ಸೂಕ್ಷ್ಮವಾಗಿ ವ್ಯಕ್ತವಾಗದೆ ಇರಲಾರದು. ಕುಮಾರವ್ಯಾಸನಂತೆ ತಾನು ಸತ್ತವರ ಕಥೆಯನ್ನು ಬರೆದಿಲ್ಲವೆಂದು ಸಾರಿ ಹೇಳುತ್ತಾನೆ. ಸತ್ಯ ಶರಣರು ಆಲಿಸಬೇಕು:—

ಸತ್ತವರ ಕಥೆಯಲ್ಲಿ ಜನನದ ।
ಕುತ್ತದಲಿ ಕುದಿಕುದಿದು ಕರ್ಮದ ।
ಕತ್ತಲೆಗೆ ಸಿಲ್ಕುವರ ಹೊಲಬು ತಾನಲ್ಲಿ ॥
ಹೊತ್ತುಹೋಗದೆ ಪುಂಡರಾಲಿಪ ।
ಮುತ್ತು ಮತಿಗಳ ಗೋಷ್ಠಿಯಲ್ಲಿದು ।
ಸತ್ಯಶರಣರು ತಿಳಿವುದೀ ಪ್ರಭುಲಿಂಗ ಲೀಲೆಯನು ॥

ಚಾಮರಸನ ವಾಣಿ, ಕಥೆ ಪುಂಡರಾಲಿಪ ಮಾತಲ್ಲ. ಸತ್ಯ ಜ್ಞಾನವಂತರಾದ ಶರಣರಿಗೆ ಯೋಗ್ಯವಾದ ತಿಳಿವಿನೆರಕ ನೀಡಲು ಹುಟ್ಟಿದ ಕಥೆ ಇವನ ಮಾತಿನಲ್ಲಿ ಯಾವ ಬಗೆಯ ಒಣ ಆಡಂಬರದ ಜಂಬದ ಮಾತುಗಳಿಲ್ಲ.

ಬನವಸೆಯ ನಾಡಿನ ಅರಸನಾದ ಮಮಕಾರನ ಗುಣಗಾನ ಮಾಡುವಾಗ, ನಾಡಿನ ಸೊಬಗು ವರ್ಣಿಸುವಾಗ ಚಾಮರಸನು ತನ್ನ ಕೈಚಳಕ ಮಾರ್ಮಿಕಥೆಯನ್ನು ತೋರಿಸಿದ್ದಾನೆ. ವಿಷಯ ಗೌರವಗಳಿಗೆ ತಕ್ಕ ವರ್ಣನೆಯನ್ನು ರೂಪಿಸಿ ಚಿತ್ರಿಸುವದರಲ್ಲಿ ಚಾಮರಸನು ಹಿರಿಯನೆಂದು ಒಪ್ಪಲೇಬೇಕು.

ಬನವಸೆ ನಾಡಿನ ವರ್ಣನೆಯನ್ನು ಕಾಣುವಾಗ ನಾವು ಧನ್ಯರಾಗುತ್ತೇವೆ. ನಾಡಿನ ಸೊಬಗು ಸೌಭಾಗ್ಯಗಳನ್ನು ನೆನೆದು ತೃಪ್ತರಾಗುತ್ತೇವೆ.

'ಆವ ಕಾಲದಲಾದೊಡೆಯು ಫಲ ।
ವೀವುತಿಹ ಫಲತೆರದನೇ ಛೆಲು'

ಎಂದು ಅಲ್ಲಿಯ ಉದ್ಯಾನದ ವರ್ಣನೆಯನ್ನು ಮನಮುಟ್ಟುವಂತೆ ವರ್ಣಿಸಿದ್ದಾನೆ.

ಬನವಸೆಯ ನಾಡಿನ-ಊರಿನ ಬಗೆಯನ್ನು :

ಕೇರಿಕೇರಿಯ ತಳರಿಡಿದ ಗುಡಿ ।
ತೋರಣಂಗಳ ಪರಿಮಳಿಸುತಿಹ ।
ಸಾರಣೆಯ ಕಾರಣೆಯ ಗಂಧೋದಕದ ಚಳಿಯರ್ಗೆ ॥

ಸೌರಭದ ಪೂವಳಿಗಳಲಿ ಶ್ರೃಂ ।
ಗರಿಸಿದ ಬೀದಿಗಳ ಸೊಬಗಿನ ।
ಸಾರದಲಿ ಸಮುದಿಸಿದುದತಿ ಸೌರಂಭ ಬನವಸೆಯ ॥

ಬನವಸೆಯ ನಾಡು-ಊರುಗಳ ಸುಂದರ ದೃಶ್ಯ ನಮ್ಮ ಕಣ್ಮುಂದೆ ಕಟ್ಟಿ ನಿಂತಂತಾಗುತ್ತದೆ. ಲಗ್ನದ ಕಾಲದಲ್ಲಿ ನಾವು ನಮ್ಮ ಮನೆಯನ್ನು ಬಣ್ಣದ ಜೋಡು ತಳಿರು-ತೋರಣ-ಸಾರಣೆ ಕಾರಣೆಗಳಿಂದ ಅಲಂಕಾರ ಮಾಡುವಂತೆ ಅಂದು ಬನವಸೆಯ ನಾಡಿಗರು ಸದಾ ತಮ್ಮ ನಾಡನ್ನು 'ಮದುವೆಯ ಮನೆ'ಯಂತೆ ಶೃಂಗರಿಸಿ-ಕನ್ನಡ ನಾಡಿಗೆ ಭೂಷಣ ತಂದಿರಲು ಸಾಕು.

ಆ ನಾಡಿನಲ್ಲಿಯ ಜನತೆಯ ವಿದ್ಯಾಬುದ್ಧಿಗಳು ಆದರ್ಶಮಯ 'ನುಡಿದು ಜಾಣರು ಸಕಲ ಶಬ್ದವ ನಡೆದು ಜಾಣರು ನಿಖಿಳ ರೀತಿಯ ಕುಡಲು ಜಾಣರು ಕುಂದದಂತಿರಲರ್ಥಿಗರ್ಥವನು' ಎಂದು ಚಾಮರಸ ಬಣ್ಣಿಸಿದ್ದಾನೆ. ಈ ಬಗೆಯ ಜನತೆಯಿಂದ ಆ ಕಾಡು ಕಿಕ್ಕಿರಿದು ತುಂಬಿಕೊಂಡಿತ್ತು. ಅಂದರೆ ಈ ಸೊಬಗಿನ-ಸಮಾನದ-ವೈಭವಯುತ, ವಿದ್ಯಾಪರಿಣಿತರ ನಾಡಿನ ಒಡೆಯನು ಎಂಥ ಮಹಿಮಾಶಾಲಿಯಾಗಿರಬೇಕು? ಅವನ ಸತಿಯಳು ಎಂಥ ಭಾಗ್ಯಶಾಲಿನಿ ತಾನೆ? ಅದನ್ನು ನಾವು ನಮ್ಮ ಚಾಮರಸನ ಬಾಯಿಂದಲೇ ಕೇಳಬೇಕು. ಆ ಅರಸು ಅರಸಿಯರನ್ನು ತನ್ನ ಶಕ್ತಿಮೀರಿ ಬಣ್ಣಿಸಿದ್ದಾನೆ. ಆ ದಂಪತಿಗಳ ಜೀವನನುಟ್ಟವನ್ನು ಒಳಹೊಕ್ಕು ಪೂರ್ಣ ಅಳೆದು ನೋಡಿದ್ದಾನೆ. ತನ್ನ ಮನಮೋಹಕವಾದ ರಮ್ಯವಾದ, ಸರಳವಾದ-ಇಕ್ಕರೆಯ-ಸಕ್ಕರೆಯಂಥಹ ಕನ್ನಡ ಶೈಲಿಯಲ್ಲಿ ಕಾಣಿಸಿದ್ದಾನೆ.

ಕುಸುಮ ಬಾಣನೊ ರತಿಯಾ ಮೇಣಾ ।
ಶಶಿಯೋ ರೋಹಿಣಿ ದೇವಿಯೋ ಮೆ ।
ಣೆಸೆವ ಸುರಪನೋಶಚಿಯೋ ಮೇಣ್ಪುರುಷೋತ್ತಮನೋ ಸಿರಿಯೋ ॥

ಹೆಸರಿಡಲು ಹವಣಲ್ಲವೆಂಬೊಂ ।
ದಸಮ ಸಮ್ಮೇಳದ ಸಗಾಢದ ।
ಬೆಸುಗೆಯಲಿ ಮಮಕಾರ ನೃಪ ಮೋಹಿನಿಯರೆಸೆದಿಹರು ॥

ಮಮಕಾರ ನೃಪನು ಮನ್ಮಥನಂತೆ, ಮೋಹಿನಿದೇವಿಯು ಅವನ ಹೆಂಡತಿಯಂತೆ, ಚಂದ್ರನ ಸತಿ-ರೋಹಿಣಿಯಂತೆ, ಇಂದ್ರ-ಇಂದ್ರಾಣಿಯರಂತೆ, ಅವರು ಕಾಣಿಸುವರು, ಅವರ ಸರಿಸಮಾನರು; ಈ ದಂಪತಿಗಳಿಗೆ ಹೆಸರಿಡಲು ಸರಿಸಮಾನದಾವುದಿದೆ? ಕವಿಯ ವರ್ಣನೆ ಅಭಿನಂದನೀಯ.

ಈ ದಂಪತಿಗಳು 'ಮಕ್ಕಳ ಬಯಸಿ ಭರದಲಿ ವಿವಿಧ ಗೌರೀ ವೃತವು ಮೊದಲಾದವನು ನಾನಾ ಶಕ್ತಿ ದೇವತೆಗಳ ಸಮೂಹವನು' ಅರ್ಚಿಸಿದರು ಆಯಾ ದೇವ-ದೇವತೆಗಳನ್ನು ಅನನ್ಯಭಕ್ತಿಯಿಂದ, ನಿಷ್ಠೆಯಿಂದ ಪೂಜಿಸಿ ಕೃತಾರ್ಥರಾದರು.



ಮಕ್ಕಳ ಬಯಕೆಯಿಂದ ಬಾಯಾರಿ ಬೆಂಡಾದ ಈ ದಂಪತಿಗಳಿಗೆ ಅಮೌಲ್ಯ ಫಲ ದೊರೆಯದಿರಲಾರದೇ? ಅವರ ಅನನ್ಯ ಭಕ್ತಿ-ಪ್ರೇಮಗಳಿಗೆ ತಕ್ಕುದಾಗಿ 'ವರರಾಜೀವ ಲೋಚನೆ ರಜಿತ ರಂಜನೆ ಸಕಲ ಸಂಪನ್ನೆಯಾದ ಮತ್ತು 'ದೇವದಾನವ ಮಾನವರುಗಳ ಡಾವಣಿಯ ದನವಾಗಿ ಕಟ್ಟುವ ಭಾವೆ ಮಾಯಾದೇವಿ ಹುಟ್ಟಿದಳಖಿಳ ವಿಭವದಲಿ'— ಈ ಹೆಣ್ಣು ಶಿಸುವನ್ನು ಹೆತ್ತು ಮೋಹಿನಿ- ಮಕಾರರು ಹರ್ಷಭರಿತರಾದರು

ಈ ದಂಪತಿಗಳು ಮಹಾ ಗೌರೀ ವೃತದಿಂದ ಎಂಥ ಹೆಣ್ಣು ಹೆತ್ತರೆಂಬುದನ್ನು ಚಾಮರಸನು ಹೀಗೆ ಹೇಳಿದ್ದಾನೆ:—

'ಹಲವು ಕಾಲಕೆ ಹರಸಿಹೆತ್ತರು ಲಲಿತ-ಗಾತ್ರೆಯ ವಿಮಳ ನೇತ್ರೆಯ ವಿಕಸಿತ ವ್ಯಾಮೋಹ ನವರಸಭರಿತ ಪಾತ್ರೆಯನು' ಅವರು ಹಡೆದರು ಶಿಸುವಿನ ಕಣ್ಣು, ಮೂಗು, ಮೈಸೊಬಗು ನೋಡಿ ಹರುಷಿತರಾಗಿ ಸಕಲ ದಾನ-ಧರ್ಮಗಳನ್ನು ಮಾಡಿದರು. ಈ ಭಾವೆ ಮಾಯಾದೇವಿಯ ದಿವ್ಯ ಜನನದಿಂದ ಎಂಥೆಂಥಾ ಭೋಗಿಗಳ ಚಿತ್ತ ಕಾಮವಿಕಾರತೆಯಿಂದ ಪಲ್ಲಟಿಸಿತಂತೆ! ಅವಳ ಪ್ರಭಾವವೇ ಅಂಥಹದು ಯಾಕಂದರೆ ಪಾರ್ವತಿಯು ತನ್ನ ಮಾಯಶಕ್ತಿಯನ್ನೇ ಇಹಕ್ಕೆ ಕಳಿಸಿದಳಲ್ಲವೇ? ತಾಮಸ ಕಳೆಯನ್ನೇ ಮಾಯಾದೇವಿಯನ್ನಾಗಿ ನಿರ್ಮಾಣಮಾಡಿದವಳಲ್ಲವೇ? ಕಾಮಾವತಾರ ಇಲ್ಲವೆ ಕಾಮದ-ತಾಮಸದ, ಭಯಂಕರ ಭೂಕಂಪ ಪ್ರಳಯವಾಯಿತೆನ್ನಬಹುದುಃ— ಈ ಮಾಯಾದೇವಿಯ ಜನನದಿಂದ ಚಿತ್ತಪಲ್ಲಟವಾದ ಮಹಾನ್ ಯೋಗೀಶ್ವರರು ಬಾಯಾರಿ ಬೆಂಡಾದಾಗ ದುರ್ವಾಸ ಮುನಿಯು ಮಾಯೆಯ ಜನನ ವೃತ್ತಾಂತ ಹೇಳುವನುಃ— "ಪಾರ್ವತಿ ಪರಮೇಶ್ವರರ ವಾಗ್ವಾದವಾಗಿ 'ಭೂಲೋಕದಲ್ಲಿ ನಿಜವನ್ನು ಬೋಧಿಸುವ ಗುರು ಯಾರು? ಎಂದು ಪಾರ್ವತಿಯು ಕೇಳಲು 'ಸುಜ್ಞಾನಿ' ನಿರಹಂಕಾರಕ ಮಗ ಅಲ್ಲಮ'ನೆಂದು ಈಶ್ವರನು ನುಡಿಯುವನು. ಕಾರಣ ಪಾರ್ವತಿಯು 'ಅಲ್ಲಮನಿಂದ ನಿಜವನ್ನು ಸಹಜವಾಗಿ ಒಲಿಸಿಕೊಂಡು ತಿಳಿಯುವೆನೆಂದು ತನ್ನ ತಾಮಸ ಕಳೆಯನ್ನು ಇಳೆಗೆ ಕಳುಹಿಸಿದಳು" ಎಂಬುದನ್ನು ಯೋಗಿವರ್ಯರು ಅರಿತುಕೊಳ್ಳುವರು.

ಮೋಹದ ಮುದ್ದೆಯಾದ ಮಾಯಾದೇವಿಯನ್ನು 'ಹಲಗೆ ಮಾಣಿಕದೊಟ್ಟಿಲಲಿ' ಮಲಗಿಸುವರು. ಅವಳ 'ವಿಲಿನಗೆಜ್ಜೆಯ ಕಾಲಕಡಗದ ಫಲ ಫಲಿಸುವಂದುಗೆಯನ್ನು' ಕಣ್ಣಾರೆ ಕಂಡು ಆನಂದ ಪಡುವರು. ಬೀರುತಿರ್ದಳು ಮುದ್ದುತನವನು ತೋರುತಿರ್ದಳು ಸಕಲ ಚೆಲುವನು ಜಗದ ಜೀವಿಗಳಿಗೆ ಆಡುವ ಬಗೆಯನ್ನು ಕಲಿಸುವ ಶಿಸುವೇ ಆ ಮಾಯಾದೇವಿ. ಸರವಿಡಲು ಕಲಿಸಿದಳಾಕೆ, ತನ್ನರಮನೆಯ ಕೋಗಿಲೆಗೆ ಎಂದು ಓದುವಾಗ ಕವಿಯ ಲಹರಿ ಮನ ತುಂಬಿಕೊಳ್ಳುತ್ತದೆ.

ಇಂತು ಮುದ್ದುತೆ ೞರುವ ಮಾಯಾದೇವಿಯು ದಿನ-ದಿನಕ್ಕೆ ಬೆಳೆದ ಅಂಗಾಂಗಗಳ ಬಗೆಯನ್ನು ಚಾಮರಸನೇ ಬಣ್ಣಿಸಬಲ್ಲ. ಇನ್ನಾರಿಂದಲೂ ಅದು ಅಸಾಧ್ಯವೇ ಸರಿ.

ಮನದ ಮಾತಿನ ರೀತಿಗಳು ಕ ।
ಣ್ಣಿನಲಿ ಕೈಗಳ ಸಂಜ್ಞೆಗಳು ಹು ।
ಬ್ಬಿನಲಿ ಸೊಬಗಿನ ಸೌಮ್ಯತೆಯ ಸಂಗ್ರಹವು ಮೊಲೆಗಳಲಿ ॥

ಅನುಕರಿಸಿ ಮೊನೆದೋರುತಿರ್ದುವು ।
ದಿನದಿನಕೆ ಹೆಚ್ಚುತಲಿ ಮಾಯಾ ।
ವನಿತೆ ಗಂಕುರಿಸಿತ್ತು ಜವ್ವನ ಜಗವ ಝೋಂಪಿಸುತ ॥

ಅವಳ ಜವ್ವನದ ಹೊಸ್ತಿಲವನ್ನು ಹೇಳುತ್ತ ಚಾಮರಸನು ಅವಳ ನೌಕ, ವಯ್ಯಾರ, ಅವುಗಳ ಸ್ವಾಭಾವಿಕತೆಯಕಡೆ ದೃಷ್ಟಿಬೀರುತ್ತಾ ಮುಂದೆ ಹೇಳಿದ್ದಾನೆ.

ಆ ನಡೆಯಾ ರೀಯಾ ನಿಲ ।
ವಾ ನಡೆವಗತಿ ಗಮಕವಾತೊಡೆ ।
ಯಾನಿತಂಬಗಳಾ ನಡುವಿನ ಸದಾಮೂಲೆಯ ಚೆಲುವು ॥
ಆ ನಯದತೋಳಾ ಮುಖಾಂಬುಜ ।
ವಾ ನಯನವಾ ನೋಟವಾ ತುರು ।
ಬಾ ನವೀನತೆ-ಯುಡಿಗೆಯೇಂನೆಲೆಸಿದವೊ ಮಾಯೆಯಲಿ ॥

ಈ ಸುಪುತ್ರಿ ಮಾಯಾದೇವಿಯು ಜವ್ವನ ಭರಿತೆಯಾಗಲು ಮಮಕಾರನು ಮಗಳಿಗೆ ಮದುವೆಯನ್ನು ಮನದಲ್ಲಿಯೇ ಬಯಸಿದನು.

·ಲಾಳ, ಗುಜ್ಜರ, ಬೋ·ಟ ಕರಹಟ. ಚೋಳ, ಪಾಂಡ್ಯ, ಕಳಿಂಗ, ಚೀನ, ಕರಾಳ, ಕೊಂಕಣ ಮಲಹ, ಮಗದ, ಮರಾಠ, ನೇಪಾಳ, ಮಾಳವರು, ಮೊದಲಾದ ಹದಿನಾರು ನಾಡಿನ ಅರಸರೊಬ್ಬರಾರಾದರೂ ತನ್ನ ಕುವರಿಯನ್ನು ವರಿಸಬಹುದು ಇಲ್ಲವೆ ಅವರಾರೂ ಮಗಳಿಗೆ ಸರಿಬರಬಹುದೇ? ಎಂದು ಮಮಕಾ=ನು ಚಿಂತಿಸಿರಬೇಕು.

ಈ ಸಮಯದಲ್ಲಿ ಮಮಕಾರ ನೃಪವರ್ಯನು ಚಿಂತೆಯಲ್ಲಿರುವಾಗ ಅಹಂಕಾರನೆಂಬ ಆಚಾರ್ಯನು-ಮಮಕಾರ ಅವನೀಶನ ಗುರುವು ಬಂದು ಕುಶಲವಾರ್ತೆ ಕೇಳಿ ಅವನ ಮಗಳಿಗೆ ತಕ್ಕವರನು ಯಾರೆಂಬುದನ್ನು ಹೇಳುವನು. ಅವಳಿಗೆ ತಕ್ಕವರನು ಶಿವನೇ ಎಂದು ತಿಳಿಯಲು ಮಮಕಾರ ಅತಿ ಚಿಂತೆಗೊ·ಗಾಗುವನು. ಗುರುವರ್ಯನು ಹೇಳಿದ ಬಗೆ

ಫಲಿತ ಚೂತದ ದುರನ ಸಿರಿ ಕೋ ।
ಗಿಲಿಗೆ ನೆಟ್ಟನೆ ಹಾಲು ಹಂಸೆಗೆ ।
ಲಲಿತ ಕುಸುಮದ ತಂಪು ತುಂಬಿಗೆ ಸವಿಯನೀವಂತೆ ॥
ಉಳಿದ ಖಗ ಕಡುದುರುಗಳಿಗೆ ಸುಖ ।
ವಳವಡುವುದೇ ಸದಾಶಿವಂಗೀ ।
ಲಲನೆಯಲ್ಲದೆ ನರರಿಗುಚಿತವೆ ಭೂಪಕೇಳೆಂದ ॥



ಆಗ ಮಮಕಾರನು ಗಾಬರಿಯಾಗುವನು. 'ಶಿವನು ದಿಟವಮಾನವ ಶರೀರಗಳಿಗೆ ಸುಸಾಧ್ಯನೆ ದೇವಪೇಳೆನಲು' ಆಗ ಗುರುವರ್ಯನು 'ಶಿವನು ಶಿವಭಕ್ತಿಯನು ಮಿಗೆ ಮಾಡುವರೀಗವರವರಿಚ್ಛೆಯನು ಸಲ್ಲಿಸುವನು ಸತ್ಯವಿದೆಂದು" ಹೇಳಲು ರಾಜನು ಗುರುವರ್ಯನಿಗೆ ನಮಸ್ಕರಿಸಿ ಅವನನ್ನು ಬೀಳ್ಕೊಡುವನು.

ತುಂಬು ಜವ್ವನದಿಂದ ಮೈಯ್ಯುಬ್ಬಿನಿಂತ ಮಾಯಾದೇವಿಯು ತನ್ನ ಬಲವಾದ ಬಯಕೆಗಾಗಿ ಗುರುವರ್ಯರ ಉಪದೇಶದಂತೆ ದಿನವೂ ಮಧುಕನಾಥನನ್ನು ಪೂಜಿಸುತ್ತ ಬಂದಳು. ಬಾಲೆಯ ಬಯಕೆ ಪೂಜೆಗಾಹುತಿಯಾಯ್ತು? ಪ್ರೀಯನಿಗಾಗಿ ಇದೆಂಥ ಪವಿತ್ರ ಧ್ಯಾನ ತಾನೇ! ಅವಳು ಅನುದಿನವೂ ತನ್ನಿಣಿಯನಿಗಾಗಿ ಅವನ ಬರುವಿಗಾಗಿ ದೇವರನಲ್ಲಿ ಮೊರೆಯಿಡುವಳು. ನಾನಾಬಗೆಯಲ್ಲಿ ಅಲಂಕೃತಳಾಗಿ ನೂರಾರು ದಾಸಿಯರೊಂದಿಗೆ ಮಧುಕನಾಥನಗುಡಿಗೆ ಹೋಗುವಳು. ಮನಮೋಹಕ ವಸ್ತ್ರಧರಿಸುವಳು ಅವಳು ಮೊದಲೇ ತ್ರಿಲೋಕ ಸುಂದರಿ. ತಾಮಸಾಂಗನೆ, ಮಾಯಾ ಮೋಹಿನಿ, ಐಶ್ವರ್ಯ ಉಡಿಗೆ ತೊಡಿಗೆಗಳಿಂದಲೂ, ಅವಳಿಗೆ ಯಾರು ತಾನೇ ಸರಿಸಮಾನರು? ಅವಳಬಯಕೆ ಈಡೇರಿದರೆ ಅವಳಿಗೆಷ್ಟು ಹಿಗ್ಗಾಗಬಹುದು ತಾನೇ? ಇ=ಲಿ.

ಅವಳನ್ನು ಸಿಂಗರಿಸುವರೆಷ್ಟುಜನ! ಒಬ್ಬಳು ಕಾಡಿಗೆ ಹಚ್ಚುವಳು. ಇನ್ನೊಬ್ಬಳು ತಲೆ ಬಾಚುವಳು! ಮತ್ತೊಬ್ಬಳು ಆಭರಣತೊಡಿಸುವಳು. ಮಗದೊಬ್ಬಳು ಸೀರೆ ಉಡಿಸುವ=ು ಹೀಗೆ ಸಾವಿರಾರು ಜನರ ಸೇವೆ; ಶೃಂಗಾರ; ದಾಸಿಯರ ತಂಡವೇ ತಂಡ ಈ ದೃಶ್ಯವ ವರ್ಣನೆಯನ್ನು ನಮ್ಮಿಂದ ನಿರೀಕ್ಷಿಸದೆ ಚಾಮರಸನ ಕಾವ್ಯವನ್ನೇ ಕೈಯ್ಯಲ್ಲಿ ಹಿಡಿದರೆ ಅವರೇ........ಧನ್ಯರು; ವಟ್ಟನಲ್ಲಿ "ಕಾಮನ ಗೆಲುವಿನ ಬಾವುಟ" ದಂತಿದ್ದ·ು ಮಾಯಾದೇವಿ ಮಾಯಾದೇವಿಯ ದಾಸಿಯರೆಂತಹರೆಂಬುದನ್ನು ಚಾಮರಸನು.

ಕಾಮರೇಖೆ ಕಳಾವಿಳಾಸಿ ।
ಪ್ರೇಮಕಾರಿಣಿರಾಗಿ ಲೋಭಿಣಿ ।
ನಾಮನಿರ್ಮಿತೆ ಸಕಳ ಸಂಪದೆ ಭೋಗಿ ಮದಮಾನಿ ॥
ಹೇಮಹೆಕ್ಕಳೆಯೆನಿಪ ನಾನಾ ।
ನಾಮುಗಳ ಹೆಗ್ಗಡಿತಿ-ದಾದಿಯ ।
ರಾ ಮಹಾ ವಿನಿಯೋಗದ ಬಲೆಯರೈದಿದರು ಕೂಡಿ ॥

ತನ್ನ ಶೈಲಿಯಲ್ಲೇ-ಒಂದು ಗಮಕಿನಲ್ಲಿಯೇ ಅವರನ್ನು ಪೋಣಿಸಿದ್ದಾನೆ. ಅವರು 'ಕಾಮಕಳಾ ವಿಳಾಸಿನಿ'ಯರೆಂದು ಉಸುರಿದ್ದುದು ಮಾಯೆಯ ಶೃಂಗಾರಕ್ಕೆ ಭೂಷಣ ಪ್ರಾಯವೇ ಸರಿ ಅವರು:—

ಗತಿಯ ಗಮಕದಲಿಂದ್ರನನು ವಾಕ್ ।
ಚತುರತೆಯಲಿ ವಿರಿಂಚಿಯನು ಪೂ ।
ರಿತ ಕುಚಸ್ತನದುಬ್ಬಿನಲಿ ಖಗರಾಜವಾಹನನ ॥

ನುತ ಕಟಾಕ್ಷುಕಳಾ ವಿಳಾಸೋ ।
ನ್ನತಿಯಲೀರನ ಮರುಳು ಮಾಡುವ ।
ಸತಿಯರೆಯ್ದಿದರಂದು ಮಾಯಾಂಗನೆಯ ಬಳಸಿನಲಿ ॥

ಅಂದರೆ ಆ ದಾಸಿಯರು ತಮ್ಮ ನಡಿಗೆಯಲ್ಲಿ, ಠೀವಿಯಲ್ಲಿ ಮಾತಿನಲ್ಲಿ, ನೋಟದಲ್ಲಿ, ಸೊಬಗಿನಲ್ಲಿ, ಮಾಯಾವೃತ್ತಿಯಲ್ಲಿ ನಾನಾ ಅನ್ನುವ ಬ್ರಹ್ಮಾದಿಗಳನ್ನು ಸಹ ಸೋಲಿಸುವರೆಂದು ಕಂಡಾಯಿತು.

ಈ ಸೊಬಗಿನ ನಾರಿಯರು ಓಣಿ ಓಣಿಗಳಲ್ಲಿ ಹಾಯ್ದು ಹೋಗುವಾಗ ತುಂಬಿಗಳು ಅವರ ಪರಿಮಳ ಹೀರಲು ಹಾರಿ ಹಾರಿ ಬರುತ್ತಿದ್ದುವಂತೆ ಈ ನಾರಿಯರನ್ನು ಕಣ್ತುಂಬ ಕಂಡು ಹೊಗಳುವವರ, ಪಾಡುವವರ ತಂಡವೊಂದು ಬೇರೆಯೇ. 'ಇದು ಮನೋಜ ಬ್ರಹ್ಮತಾಮಾಡಿದ ನವೀನದ ಸೃಷ್ಟಿಯೋ ಮೇಣಿದು ರತೀವಲ್ಲಭನ 'ಜಂಗಮ ಲತೆಗಳೋ' ಎಂದು ಬಣ್ಣಿಸುವಷ್ಟು ಸುಂದರನುಯವಾಗಿತ್ತು. ಅಂದಿನ ಆ ನಾರಿಯರ ಮನೋಹರ ದೃಶ್ಯ.

ಕಾಮಾಂಗನೆ ಮಾಯಾದೇವಿ ಮಧುಕೇಶ್ವರನನ್ನು ಅತಿ ಭಕ್ತಿಪ್ರೇಮದಿಂದ ಪೂಜಿಸಿದ ಭಂಗಿಯನ್ನು ಚಾಮರಸನು ಬಹು ರಮ್ಯವಾಗಿ ಬರೆದಿದ್ದಾನೆ:

ಹಾಡುತಿರ್ದಳು ಹಾರವಿಸೆ ನೆರೆ ।
ನೋಡುತಿರ್ದಳು ಮಿಕ್ಕು ಮೋಹಿಸಿ ।
ಬೇಡುತಿರ್ದಳು ಮಾಯೆ ಮನದೊಳಗಿಷ್ಟಸಿದ್ಧಿಯನು ॥
ಕೂಡುತಿರ್ದಳು ನೆರೆದುನಿಂದೀತು ।
ಕೂಡೆ ಕೇಳುವ ನೋಟಕರ ಮೆ ।
ಯ್ಗಾಡಿನಲಿ ಕಾಮಾಗ್ನಿಯನು ಸಂಗೀತ ಕೇಳಿಯಲಿ ॥

ಹಾಡುಗಾರಿಕೆಯೊಂದಿಗೆ-ಇಷ್ಟಸಿದ್ಧಿಯೊಂದಿಗೆ ಅನನ್ಯಭಕ್ತಿಯಿಂದ ಮಾಯಾದೇವಿಯು ಮಧುರನಾಥನ ಪೂಜೆಯನ್ನು ಪ್ರಾರಂಭಿಸಿದಳು.

ಆಗ ಅಲ್ಲಮನು ಮದ್ದಳೆಕಾರನಾಗಿ ಮಧುರೇಶ್ವರ ದೇವಾಲಯದ ಸುತ್ತುತಿರುಗಿ ಮದ್ದಳೆ ಬಾರಿಸುವನು. ಅವನ ಮದ್ದಳೆಯ ನಿಜ ಭಂಗಿ.ಬೆಡಗು-ಬಿನ್ನಾಣಗಳಿಗೆ ಮಾಯಾದೇವಿ ಮನಸೋತು ಅವನನ್ನು ತನ್ನ ಸಖಿಯರಿಂದ ಕರೆಯಿಸುವಳು.

'ಕಂಗಳು ನಡೆ ನೋಡಿದೊಡೆ ಪೆರೆಹಿಂಗ ಬಾರದ ಚೆಲುವು ಮುಖದ ಸುರಂಗಸೂಸುವ ದಂತ ಪಂಕ್ತಿಯ ತೊಳಪ ಕಣ್ಣುಗಳ' ಚೆಲುವನಾಗಿದ್ದ ಅಲ್ಲಮಪ್ರಭು. ಅವನ ರೂಪಕ್ಕೆ ಮರುಳಾಗದೆ ಬಿಡಳೇ ಮಾಯೆ?!



'ಕಾರ ಮುಗಿಲಿನ ಗರ್ಜನೆಯ ಕಿವಿಯಾರೆ ಕೇಳುವ ಸೋಗೆ'ಯಂತೆ ಅಲ್ಲಮನ ಮದ್ದಳೆಯ ವಾಣಿ ಮಾಯೆಗೆ ಮೋಹವಾಯ್ತು; ದಾಸಿಯರ ಕರೆಗೆ ಓಗೊಟ್ಟು ಬಂದ ಅಲ್ಲಮನನ್ನು ಕಣ್ತುಂಬ ಕಣ್ದಣಿ ನೋಡಲು ಮಾಯಾದೇವಿಗೆ ಏನಾಗಿರಬೇಡ.ಃ—

ಕಾಮುಬಾಣದ ಹಿಳುಕುಗಳು ಹಿರಿದಾಗಿ ಚಿತ್ತಜನಳವಿಯಲಿ ಸಿಲ್ಕಿದಳು ಮಾಯೇ ಮಹಾನುರಾಗದಲಿ ಅಲ್ಲಮನನ್ನು ಕಂಡಾಕ್ಷಣವೇ ಮಾಯಾದೇವಿಯ ಮೈ ಬೆವರೇಸದಿ೦ಬೇಕು; ಕಾಮವಾಸನೆಯ ಹಿಳುಕುಗಳು (ಬಂಕೆ) ಹೆಚ್ಚಾದವು.

ಭಾಮೆಯರೆಲ್ಲರು ಅಲ್ಲಮನ ಊರು, ದೇಶ, ಹೆಸರುಗಳನ್ನು ಕುಶಲರೀತಿಯಿಂದ ನಯವಿನಯ ಆತುರ-ಕಾತುರತೆಗಳೊಂದಿಗೆ ಕೇಳುವರು ಆಗ ಅಲ್ಲಮನು.

ದೇಶವೆಮ್ಮದು ಹೇಳುವೊಡೆಪರ ।
ದೇಶ ಬಿರಿದಿನ ಬಿಂಕ ಕಾರರ ।
ವಾಸಿಗರನಲ್ಲೆನಿಸುದಲ್ಲದುನೆಂಬ ಹೆಸರೆನಗೆ ॥

ಲೇಸು ಮಾಡುವ ರಾವುಗಳ ಅಭಿ ।
ಲಾಷೆಯಿಲ್ಲದೆ ಹೊದ್ದುವೆವು ಸುಖ ।
ವಾಸಿಗಳು ನಾವೆಂದನಲ್ಲಮನೊಲಿದು ಸತಿಯರಿಗೆ ॥

ಆ ಸುದತಿಯರಿಗೆ ಮರುಳಾಗಿ ತನ್ನ ಇರುವಿಕೆಯನ್ನು ತಿಳಿಸುವನು. ದಾಸಿಯರು ಅದನ್ನು ಮಾಯಾದೇವಿಗೆ ಅರುಹಲು ಅವನನ್ನು ತನ್ನ ನಾಟ್ಯಾಚಾರ್ಯನನ್ನಾಗಿ ಮಾಡಿಕೊಳ್ಳಲು ಅವಳು ಬಯಸಿದಳು. ಆದರಂತೆ ಅವರು ಅಲ್ಲಮನನ್ನು ತಮ್ಮ ಅರಮನೆಗೆ ಕರೆದೊಯ್ಯುವರು: ಈ ಪೂರ್ವದಲ್ಲಿ ಅಲ್ಲಮನೊಡನೆ ಮಾಯಾದೇವಿ ಸಕಲ ವಿದ್ಯೆಗಳ ಚರ್ಚೆಯ ಕಾರಣ ಮಾಡಿಕೊಂಡು ತನ್ನ ಮನದ ಹಂಬಲವನ್ನು ತನ್ನ ಮಾತಿನಲ್ಲಿ ವ್ಯಕ್ತಮಾಡುವಳು. ಅಲ್ಲಮನು ಅದನ್ನೆಲ್ಲ ಅರಿತು ನಿಜತನ ತೋರದೇ ಇರುವನು. ಅಲ್ಲಮನು ಸಾನಿಧ್ಯದಲ್ಲಿ ಮಾಯೆಗಾರ ಬಲವಾದ ಭಾವೋದ್ರೇಕವನ್ನು ಚಾಮರಸನು ಹೃದಯಂಗಮವಾಗಿ ಹೇಳಿದ್ದಾನೆ.

ಮನದಲಾತುರವಿಹುದು ಬುದ್ಧಿಯ ।
ಮೊನೆಗೆ ನಾಚಿಕೆ ಬಹುದು ನಗೆಗ ।
ಣ್ಣಿನಲಿ ಕಳವಳವಿಹುದು ಕಾಯದಲಿಹುದು ನಸುಭೀತಿ ॥

ವಿನಯವಿಹುದೆರಕದಲಿ ಜಿಹ್ವೆಯ ।
ಕೊನೆಯ ಭಿಹುದನ್ಯ ಪ್ರಸಂಗತೆ ।
ಯಿನಿತು ಮಾಯೆಯಲಿರ್ದುದಂದಲ್ಲಮನ ಬೇಟದಲಿ ॥

ಪಾಪ ಅವಳಿಗೆಷ್ಟು ಅಭಿಲಾಷೆ ಆಸೆಗಳು ! ಅವಳ ಆತುರತೆ ಅಲ್ಲಮನಿಗೆ ತಿಳಿಯದೆ ಇರಲಿಲ್ಲ!

ಅಲ್ಲಮನು ಅರಮನೆಯ ನಾಟ್ಯಾಚಾರ್ಯನಾಗುವನು. ಆಗಾಗ ಮಾಯಾದೇವಿಯು ಅವನಿರುವ ಪರಸ್ಪರ ಕೋಣೆಗೆ ಸಖಿಯರನ್ನು ಅಗಲಿ ತಾನೊರ್ವಳೇ ಹೋಗಿ ಏನನ್ನೊ ಬಯಸಿ ಮಾತನಾಡಲು ಇಚ್ಛಿಸುವಳು. ಆದರೆ ಬೆದರುವಳು. ಅಲ್ಲಮನನ್ನು ಕಾಣದೆ-ಅಗಲಿರುವದು ಅವಳಿಗೆ ಅಸಾಧ್ಯವಾಯಿತು.

ಅವಳ ಇಚ್ಛೆಯೇ ತಮ್ಮ ಹೆಬ್ಬಯಕೆಯೆಂದು ಬಗೆದ ಬಹುಜನ ಸಖಿಯರು, ದಾಶಿಯರು ಒಡತಿಯ ಅಂದರೆ ಮಾಯಾದೇವಿಯ ಮನದ ದುಗುಡ ಅರಿತು ಅದರ ಪರಿಹಾರೋಪಾಯಕ್ಕಾಗಿ ಮಾಯೆಯನ್ನು ಕೋರುವರು. ಅವನನ್ನು ಪ್ರೀತಿಸುವದಾದರೆ ಯೋಗ್ಯ ಸ್ಥಳವನ್ನು ಅನುಕೂಲಮಾಡಿ ಕೊಡಲು ಅವರು ಸೂಚಿಸಿದರು.

ಆಗ ಮಾಯಾದೇವಿ ಏನೂ ನುಡಿಯದೆ ಮೌನವಾಗಿರುವಳು. ಅವಳ ಮೌನವನ್ನು ಪೂರ್ಣ ಅರಿತುಕೊಂಡ ಚಾಮರಸನು ಹೇಳಿದನು. ಅವಳ ಮೌನಕ್ಕೆ ಸಕಾರಣವಿದು.

........ಕನ್ಯಭಾವಭಂಗಿಯ ।
ಮನದ ನಾಚಿಕೆಯೊಂದು ನೆಟ್ಟನೆ ।
ಜನಪತಿಯ ಮಗಳೆಂಬ ಹೆಕ್ಕಳಹೆಮ್ಮೆ ತಾನೆರಡು ॥
ತನಗೆ ಸಮಸಂಪ್ರಾಪ್ತನಲ್ಲದ ।
ಮನುಜಗಳುಪಿದೆನೆಂಬ ಮರವೆಯು ।
ಘನತೆ-ಮುರಿವಕಳುಕಿ-ನಾಚುತಲಿರ್ದಳಾ ಮಾಯೆ ॥

ಪಾಪ........ಮುದ್ದು 'ಕರ್ಣ' ನನ್ನು ಹೊಳೆಯ ಕಾಣಿಸಿದ ಕುಂತಿದೇವಿಯ ಮನದ ಭೀತಿಗೆ ಜನಾಪವಾದವೇ ಕಾರಣವಾಗಲಿಲ್ಲವೇ ? ಮಾಯೆಯಾದರೂ ತಾನು ಅರಸುಗುವರಿ, ಮೇಲೆ ಶಿವನೇ ಅವಳಿಗೆ ಪತಿಯಾಗಬಲ್ಲನೆಂಬ ಗುರುವಿನ ವಾಣಿ, ಒಂದು ಬಗೆಯ ಸ್ವಾಭಾವಿಕ ನಾಚಿಕೆ, ಈ ಎಲ್ಲ ಕಾರಣಗಳಿಂದ ಅವಳು ಮನದಲ್ಲಿ ಮರುಗಿ ಮೌನವಾಗಿರಲು ಸಾಕು.

ಕೊನೆಗೆ ಸಖಿಯರು ಅಲ್ಲಮನಿಗೆ ಮೊರೆಹೋಗಲು ಅವನು ಅವರಿಗೆ:- 'ನಾವು ಪರದೇಶಿಗಳು, ಬಡವರು, ನೀವು ದೊರೆಗಳು, ನಿಮ್ಮಯ ದೇವಿ ರಾಜಕುಮಾರಿ, ನಾವೇ ಪುರುಷವೇಷಿಗಳು.' ಎಂದು ನುಡಿಯುವನು. ಸೇವಕರನ್ನು ಪ್ರೀತಿಸುವ ಮಾತಿಗೆ ಅಲ್ಲಮನು ಹಾಸ್ಯದನಿಯಿಂದ ನಗುವನು. ಅವನ ಹಾಶ್ಯ ನಗೆಯು ಸಖಿಯರಿಗೆಲ್ಲ ವಿಷಾದಮಯವಾಗುವದು. ಮತ್ತೆ, ಮತ್ತೆ ಅಲ್ಲಮನಿಗೆ ಸೌಮ್ಯ ರೀತಿಯಲ್ಲಿ, ಗುಪ್ತರೀತಿಯಲ್ಲಿ ಗುಟ್ಟು-ಮುಚ್ಚುಮರೆ ಮಾತಿನಲ್ಲಿ ದೈನ್ಯದಿಂದ ಹೇಳಿ ನೋಡುವರು. ಆದರೂ ಅಲ್ಲಮನು ತನ್ನ ಹಟ ಬಿಡಲಿಲ್ಲ! ಆಗ ಮದಮಾನಿಯೆಂಬವಳು ಸಿಡುಕುಸಿಟ್ಟಿನಿಂದ ತಾಳ್ಮೆಯ ಮೇರೆ ಮೀರಿ, ಗುಟ್ಟಾಗಿ ಹೇಳದೆ, ನಯವಾಗಿ ಹೇಳದೆ ಎಚ್ಚರ ರೀತಿಯಲ್ಲಿ ಹೃದಯದ ಹಂಬಲವನ್ನು ಬಾಯ್ಬಿಚ್ಚಿ ಹೇಳುವಳು.



ಸಾಕು ಜಾಣೆನ ಮಾತು ಮೆರೆಯಿ ।
ನ್ನೇಕೆ ನಿನ್ನೊಳು ಮಾಯೆ ಕಾಮೋ ।
ದ್ರೇಕದಲಿ ನೆರೆನಿನಗೆ ಸೋತಳು ಹಲವು ಮಾತೇನು ।
ಲೋಕದೊಳು ನರ ದಿವಿಜದನುಜರ ।
ನೇಕರನು ಬಗೆಗೊಂಡ ಲೆಕ್ಕಿಸ ।
ದಾಕೆ ತಾನೇಸೋತಳ್ವೆ ನಿನಗೆಂದಳಲ್ಲಮನೆ ॥

ಎಂದು ಮೃದುವಾಗಿ ನುಡಿಯಲು ಅಲ್ಲಮನು ಮರುಗಲಿಲ್ಲ ಕರಗಲಿಲ್ಲ ಅವನು ಕುಪಿತನಾದ. ನೀವೆ ಬಲ್ಲಿರಿ ನಿಮ್ಮ ಮಾಯಾದೇವಿಯಂತಸ್ಥವನು. ಹೊಸಬರು ನಾವ ಬಲ್ಲೆವೆಂತು ಕಾರಣ ಮನಸು ಬಂದಂತೆ; ಎಂದ ಅಲ್ಲಮನು ಮದಮಾನಿಗೆ ಮರುನುಡಿಯುವನು.

ಆಗ ಮದಮಾನಿಯು ಹೆಂಗಸಿನ ಸ್ವಭಾವಕ್ಕೆ ಸರಿಯಾಗಿ ಸೇವೆ ಸೇವೆಂದು ಅಯ್ಯೋ ಮಹಾರಾಯಾ ನೀನಾರು ಬಂದೆ! ನೀನು ಚಾಡಿಗಾರನೋ ಏನೋ ನಾಕಾಣೆ! ನಮ್ಮ ಒಡತಿಗೆ ನೀನಾವ ಬಲೆಯನ್ನು ಬೀಸಿದೆ ಮಹಾರಾಯಾ ? ಎಂದು ವಟವಟಸುತ್ತಾ ತನ್ನ ಒಡತಿಗೆ ಆದನ್ನು ಉಸುರಲು ಹೋಗುವಳು, ಮಾಯಾದೇವಿಯ ಮಂತ್ರಿಯಾಗಿ ಹೋದ ಮದಮಾನಿಯು ಅಲ್ಲಮನನ್ನು ಒಲಿಸಿಕೊಂಡು ಬರುವಳೆಂಬ ಭರವಸೆ ಮಾಯೆಗೆ ಇದ್ದೇ ಇತ್ತು. ಆದುದರಿಂದಲೇ ಅವಳು ಕಾಮತೀಖದಿಂದ ಬಳಲಿ ಬೆಂಡಾಗಿದ್ದಳು.

ಕೊನೆಗೆ ಸಖಿಯರೆಲ್ಲರೂಕೂಡಿ ಒಂದು ರಾತ್ರಿ ಅಲ್ಲಮನಿದ್ದಲ್ಲಿಗೆ ಮಾಯಾದೇವಿಯನ್ನು ಕಳಿಸಲು ನಿರ್ಧರಿಸುವರು ಅಲ್ಲಮ ಮಾಯೆರನ್ನು ಒಂದು ಮಾಡುವೆವೆಂಬ ಮಂಕುಬುದ್ಧಿ ವಿಶ್ವಾಸ ಅವರಿಗಿತ್ತು; ಆದುಕಾರಣ ಅಲ್ಲಮನು ಸಾಮಾನ್ಯ ಪುರುಷನೆಂಬ ಭರವಸೆ ಅವರಿಗೆ ಇತ್ತು. ಅವರ ಭರವಸೆ ವಿಶ್ವಾಸಗಳು ಹೆಣ್ಣಿನ ಗುಣಗಳಿಗೆ ಹೊಂದಿಕೊಂಡಿದ್ದವು.

ಹಿಂದಿನದಿನ ರಾತ್ರಿ ಮಾಯೆ ಕನಸುಕಂಡಳು. ಅದು:- 'ನೋಡಿದೊಡೆ ರೂಪಾಗಿರಲು ಮೈಗೂಡಲಿಕ್ಕೆ. ಸೋಂಕಿಲ್ಲದಿರ್ದೊಡೆ' ಮಾಯೆಬೆರಗಾದಳು ಮತ್ತು ಕೂಡು ವಂತಿರಲೆನಗೆ ಮೋಹವ ಮಾಡುವಂತಿರೆ ಕಂಡ ಕನಸನು ನೋಡಿದರೆ ಯಲ್ಲಮನ ನಟನೆಯ ಎಂದು ಮಾಯೆ ಸಖಿಯರಿಗೆ ಹೇಳಿದಳು

ಇದಿರುಗನಸಿದು ಲೇಸು ನಿನಗ ।
ಭ್ಯುದಯವನು ಸೂಚಿಸುವದೆನುತಲೀ ।
ಸುದತಿಯರು ಮಿಗೆ ಕನಸಮುರಿದರು ಮನಸುಬಂದತೆ ॥
ಅದನುಕೇಳುತ ಮತ್ತೆ ಮರುಕಳಿ ।
ಸಿದುದು ನೆರೆಯಲ್ಲಮನ ಬೆಟ್ಟದ ।
ತುದಿಹ ಮಾಯೆಯ ತನುನುನಂಗಳ ಕಂದಿಕುಂದಿಸುತ ॥

ಆಗ ಆ ಸಖಿಯರೆಲ್ಲರೊಟ್ಟಾಗಿ ತಮತಮಗೆ ತೋಚಿದಂತೆ ಕನಸಿನ ಅರ್ಥ ಮಾಡಿ ಮಾಯಾಂಗನೆಗೆ ಆದ ಶುಭಚಿನ್ಹವೆಂದೂ ತೀರ್ಮಾನಿಸಿದರು. ಆಗ ಆ ಭವಿಷ್ಯದನ್ನು, ಶುಭಚಿನ್ಹವನ್ನು ಕೇಳಿ ಮಾಯಾದೇವಿಗೆ ಯಾಕೆ ಕಾಮವಾಸನೆ ಹಂಬಲ ಹೆಚ್ಚಾಗಬೇಡ ? ಅವಳು ಅತಿಯಾಸೆಯಿಂದ ಧೃತಿಗೆಟ್ಟು ಬಾಡಿ ಬೆಂಡಾದಳು.

ಈ ವಾರ್ತೆಯನ್ನು ಮೋಹಿನಿದೇವಿಗೆ ಕೆಲ ಹೆಂಗಳೆಯರು ಮುಟ್ಟಿಸಲು ಆ ತಾಯಿ ಮಗಳ ನಡತೆಗೆ ಬೆಕ್ಕಸ ಬೆರಗಾಗಿ ಚಿಂತಿಸಿದಳು. ತನ್ನ ಮಗಳು ಹಾಗೆ ಮಾಡಿರಲಿಕ್ಕಿಲ್ಲ. ಈ ಕೃತ್ಯ-ಸೋಗು ಮೋ.ರಿ ಈ ದಾಸಿ-ಕೆಳದಿಯರಿಂದಲೇ ಉಂಟಾಗಿರಲು ಸಾಕೆಂದು ಮೋಹಿನಿದೇವಿಯು ಬಾಯ್ತುಂಬ ಅವರನ್ನು ಬಯ್ದಳು. ಆಗ ಆ ಸಖಿಜನರೆಲ್ಲರು:-ನಮ್ರವಾಗಿ ಸ್ವಲ್ಪ ನಿರ್ದಾಕ್ಷಿಣ್ಯತನದಿಂದ ಅರಸಿಗೆ.

ಅರಸಿ ನುಡಿದೊಡೆ ನಾವು ಪ್ರತ್ಯು ।
ತ್ತರವ ಬಿನ್ನಹ ಮಾಡಬಾರದು ।
ತರುಣಿ ತಾನಲ್ಲಮನ ಕಾಣುತ ಕಾದು ತಾಪದಲಿ ॥
ಮರುಳುಗೊಂಡಾತಂಗೆ ಮೋಹಿಸಿ ।
ಹರಣ ಮಾತ್ರವನುಳುಹಿಕೊಂಡಳು ।
ಹಿರಿದು ಮಾತಿನ್ನೇಕೆಂದು ಕೂಡೆ ಕೆಳದಿಯರು ॥

ಕೆಳದಿಯರ ನಿರ್ದಾಕ್ಷಿಣ್ಯ ನುಡಿಯನ್ನು ಕೇಳಿ ಅರಸಿಗೆ ಸಿಡಿಲು ಬಡಿದಂತಾಯಿತು. ಅವಳು ಮರಮರನೆ ಮರಗಿದಳು. ಮಗಳಿಗೆ ಇದಾವ ಪೀಡೆ ಲಭಿಸಿತೆಂದು ಅತ್ತಳು. ಅಲ್ಲಮನು ಒಳ್ಳೆಯ ಮನುಷ್ಯ. ಆತನನ್ನು ನಾನು ಚನ್ನಾಗಿ ಬಲ್ಲೆನೆಂದಳು. ಮಗಳೇ ಮೋಹಿತಳಾಗಿರಬೇಕೆಂದು ಆಕೆ ಕಂಡುಕೊಂಡಳು.

ಕೊನೆಯಲ್ಲಿ ಮಾಯಾದೇವಿ ಸಖಿಯರಿಗೂ ವಾಗ್ದಾನವಾಗುವದು ಮತ್ತು ಈ ವಾರ್ತೆ ಅರಸನಿಗೆ ತಿಳಿದರೆ ನಮ್ಮ ಪಾಡೇನೆಂದು ಸಖಿಯರೆಲ್ಲರೂ ಚಿಂತಿಸಿದರು. ಆಗ ಅವರು ಅಲ್ಲಮನಿಗೆ ಊರ ಹೊರಗೆ ಬಿಡಾರ ಮಾಡಿಕೊಂಡಿರಲು ಹೇಳುವರು. ಆಗ ಅಲ್ಲಮನು:

ಮಾಯೆಯಗಲಿದ ಬಳಿಕ ಭಾವಿಸೆ ।
ಕಾಯವುಂಟೇ ಪ್ರಾಣವಾಗಿದ ।
ವಾಯುನಡೆವುದೆ ಕಾಲುಕೈಕಣ್ಣುಗಳು ಮಿಡುಕುವದೇ ॥
ಬಾಯನುಡಿ ಬೆನಹಾರ ಬೆಸನಗ ।
ಳಾಯತವು ಬಳಿಕುಂಟೆ ಕೇಳಾ ।
ಸಾಯದಂತಿರೆ ಸತ್ತೆ ನಾನಕಟೆಂದನಲ್ಲಮನು ॥



ನುಡಿಯಲು ಮಬ್ಬು-ಕೊಬ್ಬಿನ ಹೆಣ್ಣಾದ ಸೊಕ್ಕಿನ ಸರಳೆಯು ಅಲ್ಲಮನಿಗೆ 'ನಿನ್ನ ರಿಣ ಸಂಬಂಧವುಳ್ಳೊಡೆ ತಾನೇ ಕೂಡಿತೆಂದು ಮೆಲ್ಲನೆ ಜಾರಿನುಡಿದಳು' ಆಗ ಅಲ್ಲಮನು: ತಾನೊಲಿದ ಭಕ್ತಿಯ ಕಾರಣವನ್ನು ತಿಳಿಸುವನು.

ಮಾಯೆ ತನ್ನ ಕಾರ್ಯವನ್ನು ಬೇಗ ಸಾಧಿಸಲಿಲ್ಲವೆಂದು ಕೈಲಾಸದಲ್ಲಿ ಪಾರ್ವತಿಗೆ ಚಿಂತೆ ಬಲವಾಗಿ ಅವಳು 'ವಿಮಳೆ' ಎಂಬ ಸ್ತ್ರೀಯನ್ನು ಭೂಲೋಕಕ್ಕೆ ಮಾಯೆ ಇದ್ದೆಡೆ ಕಳಿಸುವಳು. ಪಾರ್ವತಿಯ ಆತುರದ ಸಂದೇಶದೊಂದಿಗೆ ವಿಮಳೆಯು ಧರೆಗೆ ಬಂದು ಮಾಯಾದೇವಿಯನ್ನು ಕಾಣುವಳು ಅವಳ ಹಿಂದಣ ಹಿನ್ನೆಲೆಯನ್ನೂ, ಅವಳು ಮಾಡಬೇಕಾದ ಕಾರ್ಯವನ್ನೂ, ಅಲ್ಲಮನ ನಿಜ ಸ್ಥಿತಿಯನ್ನು ವಿಮಲೆ ಮಾಯಾದೇವಿಗೆ ವಿವರಿಸಿ ಹೇಳುವಳು.

ಈ ಸಂದರ್ಭದಲ್ಲಿ ವಿಮಳೆಯು ಅಲ್ಲಮನ ಜೀವನವನ್ನು ಅವನನ್ನು ಪಡೆಯಲು ಅವನ ತಾಯ್ತಂದೆಗಳಿಗಾದ ಸಂಕಟವನ್ನು ಬಣ್ಣಿಸುವಳು. ಸುಜ್ಞಾನಿ ನಿರಹಂಕಾರ ದಂಪತಿಗಳಿಗೆ ಬಹುದಿನ ಮಕ್ಕಳಾಗಿರಲಿಲ್ಲ ಕಾರಣ ನಿರಹಂಕಾರನು.

ದಾನವಿಲ್ಲದ ಧರ್ಮ ವಿಷಯ ।
ಧ್ಯಾನವಿಲ್ಲದ ತಪವು ಜೀವು ।
ಸ್ಥಾನದನು ಸಂಧಾನವಿಲ್ಲದ ಯೋಗದಭ್ಯಾಸ ॥
ಜ್ಞಾನವಿಲ್ಲದ ಸಿದ್ಧಿ ವರ ಸಂ ।
ತಾನವಿಲ್ಲದ ಬಾಳ್ವೆಯಲಿ ಸುಖ ।
ವೇನುದೊರಕುವುದೆನುತ-ನಿರಹಂಕಾರ ಚಿಂತಿಸಿದ ॥

ಚಿಂತಿಸಿದ ಬಗೆಯನ್ನು ಉಪಮಾನ ಉಪಮೇಯಗಳೊಂದಿಗೆ ಚಾಮರಸನು ಬಹು ರಸವತ್ತಾಗಿ ಬಣ್ಣಿಸಿದ್ದಾನೆ. ಒಟ್ಟಿನಲ್ಲಿ ನಿರಹಂಕಾರನಿಗೆ ವರಕುಮಾರನು ಬೇಕೇಬೇಕು. ಅವರ ಬಲವಾದ ಆಸೆಗೆ ತಕ್ಕ ಮಗ ಅಲ್ಲಮನು ಕಣ್ತೆರೆಯುವನು. ಆಗ ಅವರಿಗೆ ಅಪಾರ ಆನಂದ, ಅಲ್ಲಮನ ಜನನ ಜೀವನ, ಅವನು ಮಾಡತಕ್ಕ ಮಹತ್ಕಾರ್ಯ, ಅವನ ವೀರತನ, ಅವನ ಶಿವಸ್ವರೂಪಗಳನ್ನು ವಿಮಳೆ ಬಣ್ಣಿಸಲು ಮಾಯೆ ಅಚ್ಚರಿ ಆನಂದಗಳಿಂದ ಕೇಳಿ ಕೇಳಿ ಹರುಷಿತಳಾದಳು. ಈ ವಿಮಳೆಯು ಮಾಯೆಗೆ ಕಥೆ ಹೇಳುವ ರೀತಿ ಬೆಡಗುಗಳನ್ನು ಕವಿಯು ಹೃದಯಂಗಮವಾಗಿ ಚಿತ್ರಿಸಿದ್ದಾನೆ

ಇನ್ನೊಂದು ಸಂದರ್ಭದಲ್ಲಿ ವಿಮಳೆಯು ಮಾಯಾದೇವಿಗೆ ನಿಜವಾದ ಶಿವಾರ್ಚನೆ, ನಿಷ್ಕಪಟ ಭಕ್ತಿಜ್ಞಾನಗಳ ಬಗ್ಗೆ ಹೇಳುವಳು. ಅಲ್ಲಮನನ್ನು ಒಲಿಸಬೇಕಾದರೆ ನೀನು ಅನನ್ಯ ಭಕ್ತಿಯಿಂದ ಈಶ್ವರನನ್ನು ಪೂಜಿಸೆಂದು ಹೇಳುವಳು. ಆಗ ಮಾಯೆಯು ಸೋತ ಕಣ್ಣುಳ್ಳವಳಾಗಿ 'ನಾನು ಪೂಜಿಸಿ ನೋಡಿದೆ' ಎನ್ನುವಳು; ಮರುಗುವಳು. ಆಗ ವಿಮಳೆ ಮಾಯೆಗೆ ಕೇಳುವಳು :

ವನಿತೆ ನಾನಿನ್ನೊಂದು ಕೇಳುವೆ ।
ನೆನಗೆ ಮುಚ್ಚದೆ ಹೇಳು ಹುಸಿದೊಡೆ ।
ನಿನಗೆ ಪಾರ್ವತಿಯಾಣೆ ನಿನ್ನಯ ಕೋಮಲಾಂಗದಲಿ ॥
ಮನಸಿಜನ ಕೈಮುಸಕ-ಮಿಗೆ ವೇ ।
ದನಿಸಿ ನೋಯಿಸುತಿರ್ದುವೆಂದೆಂ ।
ಬನಿತು ಕುರುಹಿರಲೇನು ಕಾರಣವೆಂದಳಾ ವಿಮಳೆ ॥

ವಿಮಳೆಯ ಪ್ರಶ್ನೆಗೆ ನಸುನಾಚದೆ ಮಾಯೆಯು ತನ್ನ ಒಡಲದಾಹದ ಪರಿಯನ್ನು ವಿವರಿಸಿ ಹೇಳುವಳು :

ಆಣೆಗಂಜುವೆನವ್ವ ಕಾಮನ ।
ಬಾಣದಲಿ ಭಯಬಟ್ಟು ಬಳಿಕಾ ।
ಪ್ರಾಣಪರಿಯಂತರ ದಶಾವಸ್ಥೆಯಲಿ ನೆರೆನೊಂದು ॥
ಮಾಣದುತ್ತಮ ವಾದ್ಯ ವಿದ್ಯಾ ।
ಜಾಣನಲ್ಲಮನೆಂಬ ಚೆಲುವನ ।
ಕಾಣುತಲಿ ಕಂಗೆಟ್ಟು ಕರಗಿದೆನೆಂದಳಾ ಮಾಯೆ ॥

ಅವನ ವಿದ್ಯಾಬುದ್ಧಿಗೆ ಬಲಿಯಾಗಿ ಅವನ ರೂಪಿಗೆ ಬಲಿಯಾದೆನೆಂದು ಮಾಯೆ ತಿಳಿಸುವಳು. ಮಾಯೆಯು ಯಾವುದನ್ನು ಮರೆಮಾಚದೆ ಆಡಿದ್ದುದು ಅವಳ ದಿಟ್ಟತನವನ್ನು ವ್ಯಕ್ತಮಾಡುತ್ತಿಲ್ಲ. ಅವಳು ಅಲ್ಲಮನಿಗೆ ಮರುಳಾಗಿ ನಿಜವಾಗಿ ಅವಳು ಕೊರಗಿದ-ಮರುಗಿದ ಮನದ್ಯೋತಕವಾಗಿದೆ.

ದಿನದಂತೆ ಯಾಯೆ ವಿಮಳೆಯ ಬಲವಂತದಿಂದ ಮಧುಕನಾಥನ ದೇವಾಲಯಕ್ಕೆ ಐತಂದು ಪುಷ್ಪ ಪರಿಮಳದಿಂದ ಶೃಂಗರಿಸಿ ತನ್ನ ಕುಣಿತ-ನರ್ತನ-ಗಾನಗಳನ್ನು ಪ್ರಾರಂಭಿಸುವಳು. ಅಲ್ಲಮನು ಅಲ್ಲಿಯೇ ಇರುವನು. ಅಲ್ಲಮನನ್ನು ವಿಮಲೆ ಕಾಣುವಳು ಕಂಡು ಬೆರಗಾಗುವ ು.

ಅಲ್ಲಮನು ಅಲ್ಲಿಂದ ತನ್ನ ಮದ್ದಳೆಯೊಂದಿಗೆ ಹೊರಡಲು ಬರೆಬಿದ್ದು ಮೋಹಗೊಂಡ ಮಾಯೆ ಅವನನ್ನು ಹಿಂಬಾಲಿಸುವಳು. ಸಖಿಜನರೆಲ್ಲ ತಮ್ಮ ಮಾಯೆಯನ್ನು ಹಿಂಬಾಲಿಸುವರು. ಪುರದ ಬೀದಿ ಬೀದಿಗಳಲ್ಲಿ ಜನಸ್ತೋಮ ನೆರೆನೆರೆದು ಅರಸುಗುವರಿ 'ಮದ್ದಳೆಕಾರನ ಬೆಂಬತ್ತಿ ಸಾಗಿದಳೆಂದು ಹಾಹಾಕಾರ ಮಾಡುವರು.

ಅಲ್ಲಮನು ಮಾಯವಿಕಾರ ಪುರುಷನು ಅವನಿಗೆ ಎಲ್ಲಿದ್ದರೂ ಅಷ್ಟೇ! ಕಲ್ಲು-ಮುಳ್ಳು-ಗುಡ್ಡು-ಬೆಟ್ಟ-ಕಾಡಡವಿಯನೆ ತುಳಿಯುತ್ತ ದಾರಿಕಂಡೆಡೆ ಅಲೆಯುತ್ತ ಹೋಗುವನು. ಅವನ ರೂಪಿಗೆ-ಅವನ ವಿದ್ಯಾಲಂಕಾರಗಳಿಗೆ ಮರುಳಾದ ಮಾಯೆ ಅವನನ್ನು ಅರಸುತ್ತ ಹಿಂಬಾಲಿಸಿದ ಅನುಪಮ ದೃಶ್ಯವನ್ನು ಚಾಮರಸನು ರಸವತ್ತಾಗಿ ಹೇಳುತ್ತಾನೆ:

## ಶ್ರೀ. ಶ್ರೀ. ೭೭೦ ಮಂಟಪ ಸಮಾರಂಭದ ಸಂದೇಶ.



ಆತ್ಮಾನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ
ತನಗೆ ಪ್ರತಿಕೂಲವಾದುದನ್ನು ತಾನು ಪರರಿಗೆ ಮಾಡದಿರುವದೇ ಸನಾತನ ಧರ್ಮ
ಶ್ರೀ ಬಂಥನಾಳ ಶಿವಯೋಗೀಶ್ವರರು.

ಕಲ್ಲುಕೊರಡುಗಳುರಿವ ಹುಡಿಜಡಿ ।
ಮುಳ್ಳುಗಿಡುಮುಡು ತೆವರು ಮಳೆಗಳು ।
ಹಳ್ಳಹಾವಸಿ ಹಾವು ಹುಲಿ ಕಾಡಾನೆ ಕೋಣಗಳು ॥
ಕೊಳ್ಳ ಕುತ್ತುರಿ ಹೆಮ್ಮರಂಗಳು ।
ಪಲ್ಲವಿಸಿ ಬೇರೆಂಬ ಕಾನನ ।
ದಲ್ಲಿಯರಸುತ ಬರುತಲಿರ್ದಳು ಮಾಯೆಯಲ್ಲಮನ ॥

ಬಿಸಿಲು ಸುಟ್ಟುರು ಗಾಳಿ ದೆಸೆಗಳಂ ॥
ನುಸುಗುತಿಹ ಕೆಂದೂಳಿ ಕಾಳ್ಗಿ ।
ಚ್ಚೆಸೆವ ನಟ್ಟಡವಿಯಲಿ ನಡೆದೈ ತರುತ ಕಾಲೊಡೆದು ॥
ಬಸವಳಿದು ಬೀಳುತ್ತಲೇಳುತ ।
ಹಸಿವು ತೃಷೆ ಬ ಲಿಕೆಗಳಲಿ ಥೂ ।
ಪಿಸಿತು ಬಂದಳು ಮಾಯೆ ತಾನಲ್ಲಮನನರಸುತಲಿ ॥

ಆಯ್ಯೋ........ಗಿರಿಗಹ್ವರಂಗಗಳಲ್ಲಿಯ ಸನ್ಯಾಶಿ-ಯೋಗಿಗಳ ಪಾಡೇನಾಯಿತು ಬಲ್ಲಿರಾ ? !

ಸೂಡುತಲಿ ಬಿಡು ಜಡೆಗಳನು ಕೈ ।
ಗೂಡುತಲಿ ತಡವಸ ವಿಭೂತಿಯ ।
ಗೂಡು ಸಂವರಿಸುತ್ತಲಾಕುಳ ಯೋಗವಟ್ಟಗೆಯ ॥
ಜೋಡಿಸುತ-ಜಪ-ತಪ ಸಮಾಧಿಯ ।
ಮಾಡುವವರಾ ಮಾಯೆ ಬರಲೆ ।
ದ್ದೋಡಿದವು ಹುಲಿಗಂಡ ಹುಲ್ಲೆಗಳಂತೆ-ದೆಸೆದೆಸೆಗೆ ।

ಪಾಪ ರಾಜಗುವರಿ ನೆಲದ ಮೇಲಡಿ ಇಡದ ಮಾಯೆ ತಾನೊಲಿದ ಪುರುಷನ ಬೆಂಬತ್ತಿ ಕಲ್ಲು-ಮುಳ್ಳು ತುಳಿದಳು ಬಲವಾರೆ ಓಡಿದಳು. ಅಲ್ಲಮನನ್ನು ಅರಸಿದಳು. ಬಿಸಿಲಿನ ಬೇಗೆಗೆ ಬೆಂದು ಬೆಂಡಾದಳು, ಗಾಳಿ ಮಳೆಯನ್ನದಲೆ ಒಲವಿನ ಬೆಂಬತ್ತಿ ಸಾಗಿದಳು. 'ಒಲಿದರೆ ನಾರಿ ಮುನಿದರೆ ಮಾರಿ' ಎಂಬ ಗಾದೆಯ ನುಡಿ ಕಟುಸತ್ಯವಾದುದು; ಸರಿ.

ಹಸಿವೆ ನೀರಡಿಕೆಗಳನು ಮರೆತು, ಬಾಯಾರಿ ಬೆಂಡಾಗಿ ಒಸುವ ಮಾಯೆಯನ್ನು ಅವಳ ಸಖಿಯರನ್ನೂ ಕಂಡು ಅಲ್ಲಲ್ಲಿಯ ಜಟ್ಟಿಗಳು, ಯೋಧರು, ಸನ್ಯಾಸಿಗಳು, ತಪಸಿಗರು, ಹಾಹಾರಿದರು. ಬೆದರಿದರು, ದಿಕ್ಕುಪಾಲಾಗಿ ಮೈಮೇಲಿನ ಪರಿವೆ ಮರೆತು ಓಡಿದರು. ದಿಕ್ಕುದಿಕ್ಕಿಗೆ ಹುಲಿಗಂಡರಂತ ಹರು ಓಡುವ ಬಗೆಯನ್ನು ಚಿತ್ರಿಸಿದ ಚಾಮರಸನ ಮಾತಿಗೆ ಹೊಟ್ಟೆ ನೋಯುವ ನಗುಬರುತ್ತದೆ! ಮಾಯೆಯ ಸಂಕಷ್ಟು ಕಂಡು ಮರುಕಬರುತ್ತದೆ.

ಇಂತು ಸಖಿಯರೆಲ್ಲರನ್ನೊಳಗೊಂಡು ಬೆಂಬತ್ತಿದ ಮಾಯೆಯನ್ನು ಕಂಡು ಭಯದಿಂದ ಬೆರಗಾದ ಯೋಗಿವರ್ಯರ ಜಟ್ಟಿಗಳ ಸಂಕಟ ಪರಿಹಾರಕ್ಕಾಗಿ ಅಲ್ಲಮನು ತನ್ನ ರೂಪು ತೋರಿಸಿ ತಿಳಿವೆ ಹೇಳಲೇಬೇಕಾಯಿತು. ಆಗ ಅಲ್ಲಮನು ಕಾಣಿಸಿಕೊಳ್ಳಲು ಮಾಯೆ-ಸಖಿಯರೆಲ್ಲರು ಅಲ್ಲಮನನ್ನು ಸುತ್ತುವರು. ಅವರವರ ಮುಖ ಅರಳುವದು ಮಾಯೆಗಾದ ಆಯಾಸ ಮಾಯವಾಗುವದು ಅಂದಳು ವಿರಹ ವ್ಯಥೆಯಿಂದ ಬಳಲುವಳು. ಬಾಲಿಕೆಯ ಬಾಯಾರಿಕೆಯಾಗಿ ಅವಳು ನಸುಗಣ್ದೆರೆದು ಪ್ರೇಮ ಪೂರಕ ದೃಷ್ಟಿಯಿಂದ ಅಲ್ಲಮನನ್ನು ಕಾಣುವಳು. ಅವಳಿಗಾದ ಆನಂದ ಅಪಾರವಾದದ್ದು.

ಆಗ ಅಲ್ಲಮನನ್ನು ಬಳಸಿನಿಂತ ಸಖಿಯರು. 'ಲೇಸು ಮಾಡಿದೆಯಯ್ಯ, ಮಾಯೆಯನೀಸು ದಿನ ಮನವೊಲಿಸಿ ಕಡೆಯಲಿ ಘಾಸಿ ಮಾಡುವದುಚಿತವೇ ?'

ಆಗ ಅಲ್ಲಮನು :

'ಆರು ಮೊದಲಲಿ ಬಯಸಿ ಹೇಳಿದರಾರು, ಕಾಣುತ ಕರೆಸ ಹೇಳಿದರಾರು, ತನ್ನನು ಬಳಿಕು ದಾಹಿಸ ಹೇಳಿದವರಾರು ? ನಾರಿಯರಿಗಿದು ಸಹಜ ಸಂಚು ಕಾರಣಿಕತನ ತನ್ನ ತಾನೇ ದೂರಿಸಿದೊಡಾನೇನ ಮಾಡುವೆ ? ಎಂದು ನುಡಿಯಲು:— ಸಖಿಯರೆಲ್ಲ ಬಂದ ಬಂದಂತೆ ಮಾತನಾಡುವರು; ಮಾಯೆಯು ಯಾವ ತಪ್ಪು ಮಾಡಿಲ್ಲವೆಂದು ವಾದಿಸುವರು, ಎಲ್ಲ ವಿಕಾರ-ಕುಹಕತನ ನಿನ್ನದೇ ಎಂದು ಅವರು ಗುಡುಗುವರು. ಅವರ ಮಾತು ಹೆಣ್ತನಕ್ಕೆ ಸಹಜ.

ಮಾಯೆಗೂ ಅಲ್ಲಮನಿಗೂ ಸಾಕಷ್ಟು ವಾಗ್ವಾದವಾಗುವದು ಮಾಯೆಗೆ. ನಿಜದ ಅರಿವನ್ನು ತಂದು ಕೊಡುವುದೇ ಈಗ ಪ್ರಭುವಿನ ಕರ್ತವ್ಯ 'ನೀನು ನಿನ್ನ ಮನೆಗೆ ಮರಳಿಹೋಗು' ಎಂದು ಪ್ರಭು ನುಡಿಯಲು ಮಾಯೆ ನಿಬ್ಬೆರಗಾಗಿ.

'ಭಾಷೆ ಸಲ್ಲದೆ ಹೋಯಿತೇ ? ಎನ್ನಯ ವಾಸಿ ವರ್ಧಿಸಿ ಹೊತ್ತುತಿದೆ ಕೈಲಾಸದವರಿದಕೇಳಿ ನಗುವಂತಾಯಿತೇ ಎನಗೆ ? ಈ ಸುದಾವತಿಯಿಂದೆ ನಾಕಡು ಘಾಸಿಯಾದೆನು ಬೆಂದ ಹುಣ್ಣನ್ನು ಕಾಸುವರೆ ಕಂಬಿಯುಲಿ ? ಎಂದ ಮಾಯೆ ಮರ ಮರ ಮರುಗಿ, ಹಟವಾದಿಯಾಗಿ ಕಂಬನಿ ಸುರಿಸಿರಬೇಕು ವಿರಹದೆದೆಯ ಬೆಂದಸುಡಿಗಳಿಂತು ಬರುವದು ಸಹಜಿಕವೇ ಸರಿ. ಆದರೆ ಅಲ್ಲಮನಿಗೆ ಕರಗಲಿಲ್ಲ !

'ಅಯ್ಯಾ, ನಿಜವಾಗಿಯೂ ನಾನು ದೇವನನ್ನು ಅನನ್ಯ ಭಕ್ತಿಯಿಂದ ಪೂಜಿಸಿ ನಿತ್ಯ ಕರ್ಮಗಳನ್ನು ಗೈಯ್ದೆ ! ಘಾಸಿಯಾದೆ........ ಏನು ಮಾಡಿತಾನೇ ಯಾವುದು ನಿನಗೆ ಹಿತವಾಯಿತು ? ಎಂದು

ಮಾನಿನಿಯೆ. ನೀನು ಅನನ್ಯ ಭಕ್ತಿಯಿಂದಲ್ಲದೆ-ಕಾಮವಿಕಾರದಿಂದ ಪೀಡಿತಳಾಗಿ........ ಅಶುದ್ಧ ಮನಸ್ಸಿನಿಂದ ಯಾವ ಪ್ರಾರ್ಥನೆ ಮಾಡಿದರೆ ಏನು ತಾನೇ ಸಾರ್ಥಕ ? ವೆಂದು ವಿಮುಳೆಯು ಮುರುಸವಾಳು.



ನಾನು ನಿನನ್ನನ್ನೇನಂಬಿ, ನಿನ್ನಿಂದ ಶಿವತತ್ವ ಅರಿತು ಶಿವನನ್ನೇ ಕೂಡುವೆನೆಂಬ ಬಲವಾದ ಆಸೆ-ವಿಶ್ವಾಸದಲ್ಲಿ ಲೀನಳಾಗಿದ್ದೆನಲ್ಲ !, ವೆಂದು ಮಾಯೆ ವಿಮಳೆಗೆ ನುಡಿವಳು.

ಆಗ ವಿಮಳೆಯು :

'ಹಡೆದ ಸೂಳೆ ಆನಂದಪಡದೆ ಕೂಸನ್ನು ಗೂಡಿಯಲ್ಲಿ ಸುಟ್ಟು ಬರುವಂತೆ. ನೀನು ನಿಜವಾದ ಭಕ್ತಿಯಿಂದ ಪೂಜಿಸದೆ ಬಿರನುಡಿಗಳಿಂದ ಒಡಲು ಬೇಯಿಸಿದರೆ ನಿನಗೆ ಅಲ್ಲಮನ ತತ್ವ ದುರ್ಲಭ' ವೆನ್ನುವಳು. ವಿಮಲೆಯ ನುಡಿಗೆ ಅಲ್ಲಮನ ನುಡಿಗೆ ಅಂಜಿ ಕಳವಳಗೊಂಡ ಮಾಯೆಯ ದೀನ ಮುಖ ಕಮಲ ಕಂಡು ಯಾರು ತಾನೇ ಮರುಗಲಾರರು ?

ಆಗ ವಿಮಳೆ ಮತ್ತೆ ಅಲ್ಲಮನಿಗೆ;

'ಶರಣಜನ ಕ್ಷಾಮಣಿಯೆ, ಕಿಂಕರಚಕೋರ ಸುಧಾರಕನೇ, ಭಾಸುರ ದಯಾಂಭೋನಿಧಿಯೇ ನೀನೀಸ್ತ್ರೀಯ !.ತನುಮನವ ಒರಿಸಿ ನೋಡಿದೊಡಲ್ಲಿ ಭಾವಿಸೆ ಹುರುಳು ಬಳಿಕೇನುಂಟು ನಿನ್ನಯ ಕರುಣವಾಕೆಯ ಹರಣ'ವೆಂದು ನಿರ್ದಾಕ್ಷಿಣ್ಯವಾಗಿ ನುಡಿವಳು. ವಿಮಳೆಯ ಮಧ್ಯಸ್ಥಿಕೆಯ ವಿನಯ ದೀನ ವಾಣಿಗೆ ಅಲ್ಲಮನು ನೊಂದು ಸೋತು ಹೋಗಬಲ್ಲನೇ ? ಅಸಾಧ್ಯ.

ಪಾಪ ವಿಮಳೆಯ ದೀನವಾಣಿಗೆ ಅಲ್ಲಮನು ಕಟುತರವಾಗಿ ನುಡಿದ ಬಗೆ :

ಬಾಲೆ ನೀರಿಗೆ ಹೆಪ್ಪನೆರೆದರೆ ।  
ಹಾಲಿನಂತಿರೆ ಹೆತ್ತು ಭುಂಜಿಸಿ ।  
ಬಾಳಿದವರಾರುಂಟು ಭಾವಿಸಲಾಪ್ರಕಾರದಲಿ ॥  
ಕಾಳು ಮತಿಗಳಿಗಿನಿತು ಬುದ್ಧಿಯ ।  
ಹೇಳಿದರೆ ಫಲವೇನು ಸಾಕೀ ।  
ಖೂಳೆಗಾನಿನ್ನೇನ ಮಾಡುವೆ ವಿಮಳೆ ಕೇಳೆಂದ ॥

ಯನ್ನು ಕಂಡರೆ ನಮಗೆ ಭಯವುಂಟಾಗಲಾರದೆ ಇರಲಾರದು. ಅಲ್ಲಮನ ಧೃಡತರ ಮನಸ್ಸು, ಆವನ ಓಜಸ್ಸು, ಹಟ-ಮಾಯಾ ನಿರಸಗಳನ್ನು ಪರಿಶೀಲಿಸಿದರೆ ಭಯ ಮರೆಯಾಗಿ ನಮ್ಮ ಹೃದಯ ಧನ್ಯತೆಯ ಭಕ್ತಿ ಭಾವನೆಯಿಂದ ಪುನೀತವಾಗಿ ಬಿಡುತ್ತದೆ. ಚಾಮರಸನ ಕಲಾ-ಕುಶಲತೆ ಮನದಲ್ಲಿ ನರ್ತನ ಮಾಡಿ ಕಣ್ಮುಂದೆ ಕಟ್ಟಿ ನಿಲ್ಲುತ್ತದೆ. ಮತ್ತೆ ಅಲ್ಲಮನು ನಿಧಾನವಾಗಿ ಮಾಯೆ ವಿಮಳೆಯರಿಗೆ :

ಕಾಮವೆತ್ತಲು ಪರಮತತ್ವದ ।  
ಸೀಮೆವೆತ್ತಲು ತಿಮಿರವೆತ್ತಲು ।  
ತಾಮರಸ ಸಖನೆತ್ತಲರಿನವನೆತ್ತ ಬಿಸಿಲೆತ್ತ ॥  
ಭ್ರಾಮಕದ ನುಡಿಸಾಕು ನೀನೆ ।  
ತ್ತಾ ಮಹಾಘನನೆತ್ತ ಮರುಳೇ ।  
ಕ್ಷೇಮದಲಿ ನೀಬಂದ ಬಟ್ಟೆಯಲಬಲೆ ಹೋಗೆಂದ ।

ಕರುಣೆ-ದಯಾ ದಾಕ್ಷಿಣ್ಯೆಗಳ ಸೀಮೆಯನ್ನು ಮೀರಿನಿಂತ ಅಲ್ಲಮನು ಮಾಯೆಗೆ ಎಂತು ನುಡಿದರೇನು ? ಇಬ್ಬರೂ ಪಟವಾದಿಗಳು. ಪ್ರಭುಮಾಯೆಯನ್ನು ಹೊಡೆದಟ್ಟಿದ ವೀರಯೋಧ; ಮಾಯೆ ಕಾಮುಗಳಲ್ಲಿ ಲೀನಳಾದ, ಸೋತ-ಹೆಣ್ಣು ಮಾಯಾದೇವಿ, ಇಬ್ಬರೂ ವಿರಹಿಗಳು. ಅವರವರ ದಾರಿ ಬೇರೆ, ಸೋಲು ಒಬ್ಬರಿಗಂತೂ ನಿಜ. ವಿರಹಿಣಿಯಾದ, ಕಾಮಾತುರಣಿಯಾದ, ಅಲ್ಲಮನಿಗೆ ಸೋತ ಹೆಣ್ಣಾದ ಮಾಯೆ:—

ಕನಸು ಮನಸಿನೊಳಾಗಲೆನ್ನಯ ತನುವಿನಲಿ ನೀ ಸುಳಿದು ಮೆಚ್ಚಿಸಿಯಿನಿತು ಧಾವತಿಗೊಳಿಸಿ ನಿಷ್ಕರುಣದಲಿ ನೀನೆನ್ನ ಕನಲಿ ನುಡಿದೊಡೆ ನಾನು ಬೇಡುವೆನು. ತನಗೆ ತತ್ತಡೆ ಭಾವಿಸಲು ಸಾವನಿತು ಬಂದೊಡೆ ಬರಲಿ ಬಿಡೆನಾ ಎಂದು ಮಾಯೆ ಅಲ್ಲಮನಿಗೆ ಧೀರವಾಣಿಯಿಂದ, ವಿರಹದೆದೆಯಿಂದ ನುಡಿಯುವಳು.

ಆಗ ಅಲ್ಲಮನು :—

'ಕನಸಿನಲಿ ಚೇಳೂರಿದೊಡೆ ವೇದನಿಸಿ ತೆಂದಿರದೆದ್ದು ನರಳುವ ಮನುಜರುಂಟೇ ಮರುಳೆ ! ನಿನ್ನ ಮನೋ ವಿಕಾರಗಳು ನಿನಗೆ ತೋರಿದೊಡೆಮ್ಮೊಳೇತಕೆ ಮನಕತವ ನೀ ಮಾಡುತಿಹೆ! ನಾವಿನಿತು ಗಸಣಿಯ ಗೊಡೆವೆಗಾರೆವು' ಎಂದು ಗುಡುಗುವನು.

ಹಾಯ್! ನೋಡಿರಿಲ್ಲ; ಮಾಯೆಯ ಕೊನೆಯ ಹಟದವಾಣಿ ಅವಳ ಬೆದರಿಕೆಯ ಗುಂಡಲ್ಲ ಏನು; ಅವಳ ಮನದ ದುಮ್ಮಾನ.

'ವಾಸಿ ಹುಟ್ಟಿದ ಬಳಿಕ ನಾನಿನ್ನೇಸುದಿನವಿದ್ದಾದೊಡೆನ್ನಯ ಭಾಷೆಯನು ನಾನುತ್ತರಿಸ ಬೇಕಲ್ಲದುಳಿದಂತೆ........ ಆಸೆಯಿಲ್ಲದೆ ತಿರುಗಿದೊಡೆ ಹೆಂಗಸತನಕದು ಹಾನಿ ಎಂದು ಚಿಂತಿಸಿ ನಾನು ಕೈಲಾಸಕೆಂತೆಯ್ದೆನು' ಎಂದು ಕೇಳುವಳು; ಚೀರಿಡುವಳು ಬೋರಾಡುತ್ತ ಅಳುವಳು. ಅವಳಿಗೆ ಅಪಮಾನವಾಗಿದೆ ಅಪಕೀರ್ತಿ ಬಂದಿದೆ ಅದನ್ನು ತುಂಬಿಕೊಡುವ ಬಗೆ ಹೇಗೆ ತಾನೇ ಸಾಧ್ಯ ?

ಕಡಲ ನೀರುಗಳೆಲ್ಲ ಅಮೃತದ ಮಡುಗಳಲ್ಲ ಮತ್ತು ಗಿಡಗಳೆಲ್ಲ ಕಲ್ಪತರವಲ್ಲ ವೆಂದುನುಡಿಯುವನು. ಅಲ್ಲಮನು ಕಾರಣ ಮಾಯೆಗೆ ತತ್ವಜ್ಞಾನವಿಲ್ಲಂದ. ಸಾರುವನು.

ಅಯ್ಯೋ ಕೊನೆಯಲ್ಲಿ ಹಾಹಾಕಾರ ।
ಮಾಯೆ ಅಲ್ಲಮನಿಗೆ ।
ನುಡಿದು ನುಣ್ಣ ನೀನು ಮೆಲ್ಲನೆ ।
ಸಡಿಲಿಹೋದರೆ ನಾನು ನಿನ್ನನು ।
ಬಿಡುವನೇ ಕೇಳೆನ್ನ ಪೂಜೆಯ ಸಲಿಸಿದನ್ನಬರ ।



ಒಡಲು ನಿನಗಿಲ್ಲೆಂಬ ಬಿಂಕದ ।
ಬೆಡಗು ಬೇಡಿನೇನ ಮಾಡಿಯು ।
ತುಡುಕಿದಲ್ಲದೆ ಮಾಣೆನೆಂದು ಗೈಸಿದಳು ಮಾಯೆ ॥

ಈಗ ಮಾಯೆಯ ಪ್ರಳಾಪ-ಕೂಗಾಟ ನಮಗೆ ಹರಿಶ್ಚಂದ್ರ ಮತ್ತು ವಿಶ್ವಾಮಿತ್ರ ಸೃಷ್ಟಿಯ ಮಾಯದಬಲೆಯರ ಕೂಗಾಟ, ಪ್ರಲಾಪಗಳನ್ನು ಕಣ್ಮುಂದೆ ತಂದು ನಿಲ್ಲಿಸುತ್ತವೆ. ಸತ್ಯ ಹರಿಶ್ಚಂದ್ರನು ಮಾಯೆಯಬಲೆಯರ ಬಲೆಗೆ ಬೀಳದೆಹೋದ ಅವನು ವಾದಿಸಿದ ಮಾಯದಬಲೆಯರ ಹರಿಶ್ಚಂದ್ರನ ವಾದದ ಸರಣಿ, ರಾಘವಾಂಕನ ಕೈಯ್ಯಲ್ಲಿ ಜನಪ್ರೀತಿ ಗಳಿಸಿದಂತೆ ಚಾಮರಸನ ಈ ಭಾಗವಾದರೂ ಹೆಚ್ಚಿನ ಪ್ರೀತಿ ಗಳಿಸಿದೆ. ಇರಲಿ......ಮುಂದೆ ಅಲ್ಲಮನು ಮಾಯೆಗೆ ಸಿಕ್ಕದೆ ಹೋಗುವನು. ಮಾಯೆಗೆ ಮರುನುಡಿದ ಅಲ್ಲಮನ ಮಾತು:

ಬಯಲ ಬಂಧಿಸಲೆಂದು ಕೃತನಿ ।
ಶ್ಚಯವ ಮಾಡಲು ಸಿಕ್ಕಬಲ್ಲುದೆ ।
ನಿಯತವೆನ್ನನು ಹಿಡಿದುಕೊಂಬೊಡೆ ನೋಡು ನೀನೆನುತ ॥
ಪ್ರಿಯದಳಾಗಳೆ ತನ್ನ ನಿಜ ನಿ ।
ರ್ಣಯವ ನಿರ್ವಿಸಿ ನಿಮಿಷದಲಿ ನಿ ।
ರ್ವಯಲ ಜಾಲವ ಬೀಸಿ ಹೋದನು ಮಾಯೆಗಲ್ಲಮನು ॥

ಅಲ್ಲಮನು ಮಾಯವಾಗಿ ಹೋಗಲು ಮಾಯಾದೇವಿಯ ಪಾಡೇನಾಗಿರಬೇಡ ! ಪಾಪ ಅವಳ ಹೃದಯ ಹರಿದುಬಿದ್ದಿರಬಹುದು, ಅವಳ ಅಂತಃಕರುಣ ಕಲಕಿರಬೇಕು, ಆಶಾವದನೆಯಾದ ಅವಳ ಮನದಲ್ಲಿ ನಿರಾಶೆಯ-ದುಃಖದ ಹೊನಲು ತುಂಬಿ ಹರಿದಿರಬೇಕು.

ಆಗ ಸಖಿಜನಸ್ತೋಮವೆಲ್ಲ ತಮ್ಮ ಮಾಯಾದೇವಿಯನ್ನು ನಾನಾತೆರನಾಗಿ ಸಂತೈಸುವರು. ಅವಳಿಗೆ ಧೈರ್ಯ ಹೇಳುವರು. ಯಾರು ಎಷ್ಟು ಹೇಳಿದರೇನು ?.......ಪಾಪ ಮಾಯೆಯ ಮನದ ಆಸೆ ಹೇಗೆ ತಾನೇ ಚಿಗುರೊಡೆಯಬೇಕು ? ಅವಳ ಜೀವನವು ನಿರಾಶೆಯ ವಿರಹದುರಿಯಲ್ಲಿ ಬೇಯಬೇಕಲ್ಲವೇ ?

ಚಾಮರಸನು ಚಿತ್ರಿಸಿರುವ ಅಲ್ಲಮನ ವಿಮಳೆಯರ ಅಲ್ಲಮ ಮಾಯಾದೇವಿಯರ ಸಂಭಾಷಣೆಯ ಬೆಡಗನ್ನು, ಲಯವನ್ನು, ಒನಪನ್ನು, ಶೃಂಗಾರವನ್ನು, ವಿರಹದುರಿಯ ಆಗುಹೋಗುಗಳನ್ನು, ವರ್ಣನೆಯ ಕೈವಾಡವನ್ನು ಇನ್ನಾವ ಕವಿಯೂ ಇವನಂತೆ ಚಿತ್ರಿಸಲಾರ. ಅಲ್ಲಮನ ಕೈಲಿಯೇ ಒಂದು ಹೊಸ ಹುಟ್ಟು, ಹೊಸ ಸೃಷ್ಟಿ, ನವಚೇತನವೆಂದರೂ ಸರಿಯೇ.

ಮಾಯೆಗೆ ಅಲ್ಲಮನು ಸಿಕ್ಕದೇ ಹೋದ ಗತಿಯಿಂದ ಚಾಮರಸನು ಮುಂದೆ ಸಾಗಿದ್ದಾನೆ. ಅಲ್ಲಮನ ಶಿವತತ್ವ ಅರಿಯರು, ಮಹಾನ್ ಶಿವಶರಣರು. ಪ್ರಮಥರು, ಶಿವಶರಣೆಯರು ಧರೆಗಿಳಿದು ಬಂದ ಗತಿಯ ವರ್ಣನೆ ಬಹು ರಮಣೀಯವಾಗಿ ಚಿತ್ರಿತವಾಗಿದೆ. ಈತನ ಕಾವ್ಯದಲ್ಲಿ ಪ್ರಾರಂಭವಾದ ರಮ್ಯ ಶೈಲಿಯು ಕೊನೆಯವರಿಗೆ ಹೊನಲಾಗಿ ಹರಿದಿದೆ. ನಡುವೆ ಎಲ್ಲಿಯೂ ನಿರಸವಿಲ್ಲ; ಎಲ್ಲವೂ ಆದರ್ಶಮಯ ದಾರಿ.

ಈ ಲೇಖನವು ಪ್ರಭುಲಿಂಗ ಲೀಲೆಯ ಪೂರ್ಣ ಕಥೆಯನ್ನು ಹೇಳುವ ಸಾಮರ್ಥ್ಯದ್ದಲ್ಲ, ಪ್ರಭುಲಿಂಗಲೀಲೆಯು ಮಾಯಾದೇವಿಯ ಜೀವನವನ್ನು, ಅವಳ ಬಾಲ್ಯ. ಯೌವನ, ಕಾಮರೂಪಗಳನ್ನು ಅಲ್ಲಮನ ವೈರಾಗ್ಯ ಸಂಪನ್ನತೆಯನ್ನು ಮಾತ್ರ ತೋರಿಸಬಲ್ಲುದು.

ಇನ್ನು ಮುಂದಿನ ಎಲ್ಲ ಕಥೆಯನ್ನು ಹೆಣೆಯತ್ತ ಹೋದರೆ ಇದೊಂದು ದೊಡ್ಡ ಲೇಖನವಾಗಬಹುದು.

ಮಹಾತ್ಮಾ ಬಸವಣ್ಣ, ವೈರಾಗ್ಯನಿಧಿ ಅಕ್ಕ ಮಹಾದೇವಿ, ಕರ್ಮಯೋಗಿ ಸಿದ್ಧರಾಮ, ಮಹಾಮುನಿ ಗೊಗ್ಗಯ್ಯ, ಮುಕ್ತಾಯಕ್ಕ, ಮರುಳುಶಂಕರದೇವ ಮೊದಲಾದವರ ಜನನ, ಧ್ಯೇಯ, ಅವರ ತಿಳಿಮೆಯ ಮೆಟ್ಟಲುಗಳನ್ನು ಚಾಮರಸನು ಮುಂದಿನ 'ಗತಿ'ಗಳಲ್ಲಿ ಚಿತ್ರಿಸಿದ್ದಾನೆ ಈ ಮಹಾ ವಿಭೂತಿಗಳೆಲ್ಲರಿಗೂ ಅಲ್ಲಮನು ತನ್ನಲ್ಲಿರುವ ತನ್ನ ಕರ್ತವ್ಯವಾಗಿರುವ ಶಿವತತ್ವ ಜ್ಞಾನವನ್ನು ಬೋಧಿಸುತ್ತಾನೆ ಅಲ್ಲಮನ ಪುಣ್ಯ ಪರಿಪಾಕದಿಂದ ಈ ಮಹಾ ಜನರು ಧನ್ಯರಾಗುತ್ತಾರೆ.

ಅಲ್ಲಮ ಪ್ರಭುವಿನ ಜೀವನಯಾತ್ರೆ ಮಹಾ ದೊಡ್ಡ ಮಹತ್ಕಾರ್ಯದ್ದು. ನಾಡಿನ ಮೂಲೆ ಮೂಲೆಗಳನ್ನು ತಿರುಗುತ್ತ ಕಂಡವರಿಗೆಲ್ಲ ಪರಮಾರ್ಥ, ಸಾಧನೆಯ ಮಾರ್ಗ ತೋರಿಸುತ್ತ ಜನಸಾಮಾನ್ಯರ ಕಲ್ಯಾಣ ಕರ್ತನೇ ನಮ್ಮ ಅಲ್ಲಮಪ್ರಭು. ಚಾಮರಸನ ಕಾವ್ಯದ ನಾಯಕನಾದ ಅಲ್ಲಮನು ಸಾಮಾನ್ಯ ಪುರುಷನಲ್ಲ. ಕವಿಯು ಪ್ರಭುವನ್ನು ಒಬ್ಬ ಮನುಷ್ಯಮಾತ್ರನೆಂದೂ, ಬಹು ಪ್ರಯಾಸಪಟ್ಟು ವೈರಾಗ, ವನ್ನು ಸಾಧಿಸಿದ ಮಹಾಪುರುಷನೆಂದು ಭಾವಿಸಿಲ್ಲ, ಚಿತ್ರಿಸಿಲ್ಲ, ಶಿವನ ಸಾನಿಧ್ಯದಲ್ಲಿ ಮೊದಲು ಇದ್ದುಕೊಂಡು ಶಾಪಗ್ರಸ್ತನಾಗಿಯೋ ನಿಜತತ್ವವನ್ನರಿಯಲೆಂದು ಶಿವನಿಂದ ಪ್ರೇರಿತನಾಗಿಯೋ ಮನುಜ ಕಾರ್ಯವನ್ನು ಹೊದ್ದಿ ಉಚಿತ ಕರ್ಮ-ಭಕ್ತಿ ಮೊದಲಾದವುಗಳಿಂದ ಆತ್ಮೋದ್ಧಾರ ಮಾಡಿಕೊಂಡ ಶಿವಶರಣನೆಂದಾಗಲೀ ಆತನನ್ನು ಗ್ರಹಿಸಿಲ್ಲ. ಇಲ್ಲವೇ ಯುಗ ಯುಗದಲ್ಲಿ ಬೇರೆ ಬೇರೆ ರೂಪಗಳಿಂದ ಅವತಾರ ಮಾಡಿ ಭವದಲ್ಲಿ ಬಂದ. ವಿಷ್ಣು ಮುಂತಾದವರಂತೆ ಅಮರ ವರ್ಗಕ್ಕೆ ಸೇರಿದವನೆಂದಾಗಲೀ ಅಲ್ಲಮನನ್ನು ಕವಿಯು ತಿಳಿದಿಲ್ಲ. ಭಕ್ತಜನ ಹಿತಾರ್ಥವಾಗಿ ಪರಶಿವನೇ ಅಲ್ಲಮನ ರೂಪಿನಲ್ಲಿದ್ದಾನೆಂದು ಕವಿಯ ಕಲ್ಪನೆಯಾಗಿರಲು ಸಾಕು.

ಪ್ರಭುಚರಿತೆಗೆ ಮುಖ್ಯವಾದವು ಮತ್ತು ಧ್ಯೇಯವಾದವುಗಳೆಂದರೆ ಪ್ರಭುವಿನ ನೈಜ ವೈರಾಗ್ಯ ಮಾಯಾ ತಿರಸ್ಕಾರ, ಬಸವಾದಿ ಪ್ರಮಥರ ಉದ್ಧಾರ, ಆಧ್ಯಾತ್ಮಿಕ ತತ್ವಗಳ ತಿಳಿಯದ ಸೂಕ್ಷ್ಮವಾದ ವಿಚಾರ, ಇವೆಲ್ಲ ಸನ್ನಿವೇಶಗಳನು ಚಾಮರಸನು ಹೃದಯಂಗಮವಾಗಿ ವಿವರಿಸಿದ್ದಾನೆ



ಒಟ್ಟಿನಲ್ಲಿ ನಮ್ಮ ಕವಿ ಚಾಮರಸನು ಚಿತ್ರಿಸಿದ ಕಾವ್ಯ ಪ್ರಭು ಚರಿತೆಯು ನಾಡುನಾಡುಗಳ ವಿದ್ವನ್ಮಣಿಗಳ ಅಭ್ಯಾಸದ, ಓದಿನ ಅಮೌಲ್ಯ ಗ್ರಂಥವಾಗಿದೆ. ನಾಲ್ಕು ಭಾಷೆಗಳಲ್ಲಿ ಇಂದು ಪ್ರಜ್ವಲಿಸುತ್ತಲಿದೆ. ಕನ್ನಡಿಗರ ಜೀವನದ ಜೀವಾಳವಾಗಿ ನಿಂತಿರುತ್ತದೆ. ಕನ್ನಡ ಮಹಾ ಕವಿವರ್ಯರ ಗುಂಪಿನಲ್ಲಿ ನಮ್ಮ ಕವಿ ಚಾಮರಸನು ಅಗ್ರಗಣ್ಯ; ಪ್ರಭಾವಶಾಲಿ ಸತ್ತ್ವರ ಕಥೆ ಬರೆಯದ ಮಹಾ ಜ್ಞಾನಿ ಎಂದು ನಾವು ಧಾರಳವಾಗಿ ಹೇಳಬಹುದು. ಪ್ರಭುಚರಿತೆಯ ಜತೆಯಲ್ಲಿ ಚಾಮರಸನನ್ನೂ ಕನ್ನಡಿಗರು ಪೂಜಿಸಿ ಪುನೀತರಾಗಲೆಂದು ಹಾರೈಸುವಾ. ಈ ಲೇಖನದಲ್ಲಿ ಕಂಡುಬರುವ ಅನೇಕ ದೋಷಗಳು ನಮ್ಮವು; ಕವಿಯ ದೋಷಗಳಲ್ಲ.

**ಕಾವ್ಯಗನ್ನಡಕ್ಕೆ ಕಳೆಯೇರಲಿ.**

# ದಿವ್ಯಜ್ಯೋತಿ ಶ್ರೀ ಬಸವಣ್ಣನವರು.

(ಲೇ:— ಎಸ್. ಡಿ. ಮೋಟಗಿ, B. A.: B. Ed.
ಹೆಡ್ ಮಾಸ್ತರರು, ಎಸ್. ಜೆ ಜೆ ಎಮ್. ಹಾಯಸ್ಕೂಲ, ಮುಳಗುಂದ.)

೧೨ನೇ ಶತಮಾನವೆಂದರೆ ಕನ್ನಡ ಸಾಹಿತ್ಯದ ಸುವರ್ಣಯುಗ. ಈ ಶತಮಾನದ ಪೂರ್ವದಲ್ಲಿದ್ದ ಉದ್ದಾಮಕವಿಗಳಾದ ಪಂಪ,ರನ್ನ ಮೊದಲಾದವರ ಕಾವ್ಯಗಳಲ್ಲಿಯ ಕ್ಲಿಷ್ಟತೆಯು ೧೨ನೇ ಶತಮಾನದ ಶಿವಶರಣರ ವಚನಗಳಲ್ಲಿ ಸರಳ, ಸುಂದರ, ಅರ್ಥಗರ್ಭಿತವಾದ ಹಾಗೂ ನೈತಿಕ ಮಟ್ಟವನ್ನು ಉನ್ನತಕ್ಕೇರಿಸುವ ಸಾಹಿತ್ಯ ನಿರ್ಮಾಣವಾಯಿತು. ಜನಸಾಮಾನ್ಯರೂ ಸುಲಭರೀತಿಯಿಂದ ವಚನಗಳನ್ನು ತಿಳಕೊಳ್ಳಲು ಮಾರ್ಗವಾಯಿತು. ಹೀಗೆ ಸಾಹಿತ್ಯ, ಮಾರ್ಗದಿಂದ ದೇಶಿಯ ಕಡೆಗೆ ತಿರುಗಿತು. ಇದಕ್ಕೆ ೧೨ನೇ ಶತಮಾನದಲ್ಲಿ ಶಿವಶರಣರು ಮಾಡಿದ ಕ್ರಾಂತಿಯೇ ತಳಪದಿಯೆಂದು ಹೇಳಬಹುದು.

ಶ್ರೀ ಸಿದ್ಧರಾಮ, ಶ್ರೀ ಚನ್ನಬಸವಣ್ಣ. ಶಿವಶರಣೆ ಅಕ್ಕಮಹಾದೇವಿ ಮುಂತಾದವರಲ್ಲಿ ಶ್ರೀ ಬಸವಣ್ಣನವರು ಅಗ್ರಗಣ್ಯರು. ಬಸವಣ್ಣವರು ನುಡಿದಂತೆ ನಡೆದು ತೋರಿಸಿದರು. ತಾವು ಬಿಜ್ಜಳನ ಮಂತ್ರಿಯಾದರೂ ತಮ್ಮ ಭಕ್ತಿಮಾರ್ಗದಿಂವ 'ಭಕ್ತಿಭಾಂಡಾರಿ ಬಸವಣ್ಣ'ನೆಂದು ಅನ್ವರ್ಥಕವಾಯಿತು. ತಮ್ಮ ಧರ್ಮದಲ್ಲಿ ನಿಷ್ಠೆ ಸರಧರ್ಮದಲ್ಲಿ ಸಹಿಷ್ಣುತೆ, ಸರ್ವಧರ್ಮಗಳಲ್ಲಿ ಸಮನ್ವತೆಯನ್ನು ಅವರಲ್ಲಿ ಕಾಣಬಹುದು.

ಕಿರಿದರಲ್ಲಿ ಹಿರಿದಾದ ಅರ್ಥವನ್ನು ಪ್ರತಿಪಾದಿಸುವ ಅವರ ವಚನಗಳು ನಿಜವಾಗಿ ಜ್ಞಾನಜ್ಯೋತಿಗಳು ಕೆಳಗಿನ ಕೆಲವು ವಚನಗಳಿಂದ ಅವುಗಳ ಮಹತ್ವವನ್ನೂ ಹಾಗು ಇವರ ಘನತೆಯನ್ನು ಅಳೆಯಬಹುದು,

" ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆನಗಾಯಿತಯ್ಯ
ಅಕಟಕಟಾ ಸಂಸಾರಿ ವೃಥಾ ಹೊಯಿತಲ್ಲಾ
ಕರ್ತೃವ ಕೂಡಲಸಂಗಮದೇವಾ
ಇವತಪ್ಪಿಸು ಎನ್ನನು ರಕ್ಷಿಸಯ್ಯಾ. "

ಹಾವಿನ ನೆರಳಲ್ಲಿ ಕೂತಿರುವ ಕಪ್ಪೆಯಂತೆ ನನ್ನ ಜೀವನವು ಯಾವ ಮಹತ್ವದ ಕಾರ್ಯವನ್ನು ಮಾಡದೆ ವ್ಯರ್ಥಹೋಯಿತಲ್ಲ ಎಂದು ಚಿಂತಿಸುತ್ತಾರೆ. ಸೃಷ್ಟಿಕರ್ತನಾದ ಹೇ ಶಿವನೇ ಈ ಬಂಧನದಿಂದ ಮುಕ್ತಮಾಡು ಎಂದು ಬೇಡಿಕೊಳ್ಳುತ್ತಾರೆ. ಅದರಂತೆ ಇನ್ನೊಂದು ವಚನದಲ್ಲಿ ಹೀಗೆ ಹೇಳಿದ್ದಾರೆ.



ಒಡಲು ನಿನಗಿಲ್ಲೆಂಬ ಬಿಂಕದ ।
ಬೆಡಗು ಬೇಡಿನೇನ ಮಾಡಿಯು ।
ತುಡುಕಿದಲ್ಲದೆ ಮಾಣೆನೆಂದು ಗೈಸಿದಳು ಮಾಯೆ ॥

ಈಗ ಮಾಯೆಯ ಪ್ರಳಾಪ-ಕೂಗಾಟ ನಮಗೆ ಹರಿಶ್ಚಂದ್ರ ಮತ್ತು ವಿಶ್ವಾಮಿತ್ರ ಸೃಷ್ಟಿಯ ಮಾಯದಬಲೆಯರ ಕೂಗಾಟ, ಪ್ರಲಾಪಗಳನ್ನು ಕಣ್ಮುಂದೆ ತಂದು ನಿಲ್ಲಿಸುತ್ತವೆ. ಸತ್ಯ ಹರಿಶ್ಚಂದ್ರನು ಮಾಯೆಮಬಲೆಯರ ಬಲೆಗೆ ಬೀಳದೆಹೋದ ಅವನು ವಾದಿಸಿದ ಮಾಯದಬಲೆಯರ ಹರಿಶ್ಚಂದ್ರನ ವಾದದ ಸರಣಿ, ರಾಘವಾಂಕನ ಕೈಯ್ಯಲ್ಲಿ ಜನಪ್ರೀತಿ ಗಳಿಸಿದಂತೆ ಚಾಮರಸನ ಈ ಭಾಗವಾದರೂ ಹೆಚ್ಚಿನ ಪ್ರೀತಿ ಗಳಿಸಿದೆ. ಇರಲಿ......ಮುಂದೆ ಅಲ್ಲಮನು ಮಾಯೆಗೆ ಸಿಕ್ಕದೆ ಹೋಗುವನು. ಮಾಯೆಗೆ ಮರುನುಡಿದ ಅಲ್ಲಮನ ಮಾತು:

ಬಯಲ ಬಂಧಿಸಲೆಂದು ಕೃತನಿ ।
ಶ್ಚಯವ ಮಾಡಲು ಸಿಕ್ಕಬಲ್ಲುದೆ ।
ನಿಯತವೆನ್ನನು ಹಿಡಿದುಕೊಂಬೊಡೆ ನೋಡು ನೀನೆನುತ ॥
ಪ್ರೀಯದಳಾಗಳೆ ತನ್ನ ನಿಜ ನಿ ।
ರ್ಣಯವ ನಿರ್ವಿಸಿ ನಿಮಿಷದಲಿ ನಿ ।
ರ್ವಯಲ ಜಾಲವ ಬೀಸಿ ಹೋದನು ಮಾಯೆಗಲ್ಲಮನು ॥

ಅಲ್ಲಮನು ಮಾಯವಾಗಿ ಹೋಗಲು ಮಾಯಾದೇವಿಯ,ಪಾಡೇನಾಗಿರಬೇಡ ! ಪಾಪ ಅವಳ ಹೃದಯ ಹರಿದುಬಿದ್ದಿರಬಹುದು, ಅವಳ ಅಂತಃಕರುಣ ಕಲಕಿರಬೇಕು, ಆಶಾವದನೆಯಾದ ಅವಳ ಮನದಲ್ಲಿ ನಿರಾಶೆಯ-ದುಃಖದ ಹೊನಲು ತುಂಬಿ ಹರಿದಿರಬೇಕು.

ಆಗ ಸಖಿಜನಸ್ತೋಮವೆಲ್ಲ ತಮ್ಮ ಮಾಯಾದೇವಿಯನ್ನು ನಾನಾತೆರನಾಗಿ ಸಂತೈಸುವರು. ಅವಳಿಗೆ ಧೈರ್ಯ ಹೇಳುವರು. ಯಾರು ಎಷ್ಟು ಹೇಳಿದರೇನು?......ಪಾಪ ಮಾಯೆಯ ಮನದ ಆಸೆ ಹೇಗೆ ತಾನೇ ಚಿಗುರೊಡೆಯಬೇಕು? ಅವಳ ಜೀವನವು ನಿರಾಶೆಯ ವಿರಹದುರಿಯಲ್ಲಿ ಬೇಯಬೇಕಲ್ಲವೇ?

ಚಾಮರಸನು ಚಿತ್ರಿಸಿರುವ ಅಲ್ಲಮನ ವಿಮಳೆಯರ ಅಲ್ಲಮ ಮಾಯಾದೇವಿಯರ ಸಂಭಾಷಣೆಯ ಬೆಡಗನ್ನು, ಲಯವನ್ನು, ಒನಪನ್ನು, ಶೃಂಗಾರವನ್ನು, ವಿರಹದುರಿಯ ಆಗುಹೋಗುಗಳನ್ನು, ವರ್ಣನೆಯ ಕೈವಾಡವನ್ನು ಇನ್ನಾವ ಕವಿಯೂ ಇವನಂತೆ ಚಿತ್ರಿಸಲಾರ. ಅಲ್ಲಮನ ಕೈಲಿಯೇ ಒಂದು ಹೊಸ ಹುಟ್ಟು, ಹೊಸ ಸೃಷ್ಟಿ, ನವಚೇತನವೆಂದರೂ ಸರಿಯೇ.

ಮಾಯೆಗೆ ಅಲ್ಲಮನು ಸಿಕ್ಕದೇ ಹೋದ ಗತಿಯಿಂದ ಚಾಮರಸನು ಮುಂದೆ ಸಾಗಿದ್ದಾನೆ. ಅಲ್ಲಮನ ಶಿವತತ್ವ ಅರಿಯರು, ಮಹಾನ್ ಶಿವಶರಣರು. ಪ್ರಮಥರು, ಶಿವಶರಣೆಯರು ಧರೆಗಿಳಿದು ಬಂದ ಗತಿಯ ವರ್ಣನೆ ಬಹು ರಮಣೀಯವಾಗಿ ಚಿತ್ರಿತವಾಗಿದೆ. ಈತನ ಕಾವ್ಯದಲ್ಲಿ ಪ್ರಾರಂಭವಾದ ರಮ್ಯ ಶೈಲಿಯು ಕೊನೆಯವರಿಗೆ ಹೊನಲಾಗಿ ಹರಿದಿದೆ. ನಡುವೆ ಎಲ್ಲಿಯೂ ನಿರಸವಿಲ್ಲ; ಎಲ್ಲವೂ ಆದರ್ಶಮಯ ದಾರಿ.

ಈ ಲೇಖನವು ಪ್ರಭುಲಿಂಗ ಲೀಲೆಯ ಪೂರ್ಣ ಕಥೆಯನ್ನು ಹೇಳುವ ಸಾಮರ್ಥ್ಯದ್ದಲ್ಲ, ಪ್ರಭುಲಿಂಗಲೀಲೆಯು ಮಾಯಾದೇವಿಯ ಜೀವನವನ್ನು, ಅವಳ ಬಾಲ್ಯ. ಯೌವನ, ಕಾಮರೂಪಗಳನ್ನು ಅಲ್ಲಮನ ವೈರಾಗ್ಯ ಸಂಪನ್ನತೆಯನ್ನು ಮಾತ್ರ ತೋರಿಸಬಲ್ಲುದು.

ಇನ್ನು ಮುಂದಿನ ಎಲ್ಲ ಕಥೆಯನ್ನು ಹೆಣೆಯುತ್ತ ಹೋದರೆ ಇದೊಂದು ದೊಡ್ಡ ಲೇಖನವಾಗಬಹುದು.

ಮಹಾತ್ಮಾ ಬಸವಣ್ಣ, ವೈರಾಗ್ಯನಿಧಿ ಅಕ್ಕ ಮಹಾದೇವಿ, ಕರ್ಮಯೋಗಿ ಸಿದ್ಧರಾಮ, ಮಹಾಮುನಿ ಗೊಗ್ಗಯ್ಯ, ಮುಕ್ತಾಯಕ್ಕ, ಮರುಳುಶಂಕರದೇವ ಮೊದಲಾದವರ ಜನನ, ಧ್ಯೇಯ, ಅವರ ತಿಳಿವೆಯ ಮೆಟ್ಟಲುಗಳನ್ನು ಚಾಮರಸನು ಮುಂದಿನ 'ಗತಿ'ಗಳಲ್ಲಿ ಚಿತ್ರಿಸಿದ್ದಾನೆ ಈ ಮಹಾ ವಿಭೂತಿಗಳೆಲ್ಲರಿಗೂ ಅಲ್ಲಮನು ತನ್ನಲ್ಲಿರುವ ತನ್ನ ಕರ್ತವ್ಯವಾಗಿರುವ ಶಿವತತ್ವ ಜ್ಞಾನವನ್ನು ಬೋಧಿಸುತ್ತಾನೆ ಅಲ್ಲಮನ ಪುಣ್ಯ ಪರಿಪಾಕದಿಂದ ಈ ಮಹಾ ಜನರು ಧನ್ಯರಾಗುತ್ತಾರೆ.

ಅಲ್ಲಮ ಪ್ರಭುವಿನ ಜೀವನಯಾತ್ರೆ ಮಹಾ ದೊಡ್ಡ ಮಹತ್ಕಾರ್ಯದ್ದು. ನಾಡಿನ ಮೂಲೆ ಮೂಲೆಗಳನ್ನು ತಿರುಗುತ್ತ ಕಂಡವರಿಗೆಲ್ಲ ಪರಮಾರ್ಥ, ಸಾಧನೆಯ ಮಾರ್ಗ ತೋರಿಸುತ್ತ ಜನಸಾಮಾನ್ಯರ ಕಲ್ಯಾಣ ಕರ್ತನೇ ನಮ್ಮ ಅಲ್ಲಮಪ್ರಭು. ಚಾಮರಸನ ಕಾವ್ಯದ ನಾಯಕನಾದ ಅಲ್ಲಮನು ಸಾಮಾನ್ಯ ಪುರುಷನಲ್ಲ. ಕವಿಯು ಪ್ರಭುವನ್ನು ಒಬ್ಬ ಮನುಷ್ಯಮಾತ್ರನೆಂದೂ, ಬಹು ಪ್ರಯಾಸಪಟ್ಟು ವೈರಾಗ,ವನ್ನು ಸಾಧಿಸಿದ ಮಹಾಪುರುಷನೆಂದು ಭಾವಿಸಿಲ್ಲ, ಚಿತ್ರಿಸಿಲ್ಲ, ಶಿವನ ಸಾನಿಧ್ಯದಲ್ಲಿ ಮೊದಲು ಇದ್ದುಕೊಂಡು ಶಾಪಗ್ರಸ್ತನಾಗಿಯೋ ನಿಜತತ್ವವನ್ನರಿಯಲೆಂದು ಶಿವನಿಂದ ಪ್ರೇರಿತನಾಗಿಯೋ ಮನುಜ ಕಾರ್ಯವನ್ನು ಹೊದ್ದಿ ಉಚಿತ ಕರ್ಮ-ಭಕ್ತಿ ಮೊದಲಾದವುಗಳಿಂದ ಆತ್ಮೋದ್ಧಾರ ಮಾಡಿಕೊಂಡ ಶಿವಶರಣನೆಂದಾಗಲೀ ಆತನನ್ನು ಗ್ರಹಿಸಿಲ್ಲ. ಇಲ್ಲವೇ ಯುಗ ಯುಗದಲ್ಲಿ ಬೇರೆ ಬೇರೆ ರೂಪಗಳಿಂದ ಅವತಾರ ಮಾಡಿ ಭವದಲ್ಲಿ ಬಂದ. ವಿಷ್ಣು ಮುಂತಾದವರಂತೆ ಅಮರ ವರ್ಗಕ್ಕೆ ಸೇರಿದವನೆಂದಾಗಲೀ ಅಲ್ಲಮನನ್ನು ಕವಿಯು ತಿಳಿದಿಲ್ಲ. ಭಕ್ತಜನ ಹಿತಾರ್ಥವಾಗಿ ಪರಶಿವನೇ ಅಲ್ಲಮನ ರೂಪಿನಲ್ಲಿದ್ದಾನೆಂದು ಕವಿಯ ಕಲ್ಪನೆಯಾಗಿರಲು ಸಾಕು.

ಪ್ರಭುಚರಿತೆಗೆ ಮುಖ್ಯವಾದವು ಮತ್ತು ಧ್ಯೇಯವಾದವುಗಳೆಂದರೆ ಪ್ರಭುವಿನ ನೈಜ ವೈರಾಗ್ಯ ಮಾಯಾ ತಿರಸ್ಕಾರ, ಬಸವಾದಿ ಪ್ರಮಥರ ಉದ್ಧಾರ, ಅಧ್ಯಾತ್ಮಿಕ ತತ್ವಗಳ ತಿಳಿಯದ ಸೂಕ್ಷ್ಮವಾದ ವಿಚಾರ, ಇವೆಲ್ಲ ಸನ್ನಿವೇಶಗಳನು ಚಾಮರಸನು ಹೃದಯಂಗಮವಾಗಿ ವಿವರಿಸಿದ್ದಾನೆ



ಒಟ್ಟಿನಲ್ಲಿ ನಮ್ಮ ಕವಿ ಚಾಮರಸನು ಚಿತ್ರಿಸಿದ ಕಾವ್ಯ ಪ್ರಭು ಚರಿತೆಯು ನಾಡುನಾಡುಗಳ ವಿದ್ವನ್ಮಣಿಗಳ ಅಭ್ಯಾಸದ, ಓದಿನ ಅಮೌಲ್ಯ ಗ್ರಂಥವಾಗಿದೆ. ನಾಲ್ಕು ಭಾಷೆಗಳಲ್ಲಿ ಇಂದು ಪ್ರಜ್ವಲಿಸುತ್ತಲಿದೆ. ಕನ್ನಡಿಗರ ಜೀವನದ ಜೀವಾಳವಾಗಿ ನಿಂತಿರುತ್ತದೆ. ಕನ್ನಡ ಮಹಾ ಕವಿವರ್ಯರ ಗುಂಪಿನಲ್ಲಿ ನಮ್ಮ ಕವಿ ಚಾಮರಸನು ಅಗ್ರಗಣ್ಯ; ಪ್ರಭಾವಶಾಲಿ ಸತ್ತ್ವರ ಕಥೆ ಬರೆಯದ ಮಹಾ ಜ್ಞಾನಿ ಎಂದು ನಾವು ಧಾರಳವಾಗಿ ಹೇಳಬಹುದು. ಪ್ರಭುಚರಿತೆಯ ಜತೆಯಲ್ಲಿ ಚಾಮರಸನನ್ನೂ ಕನ್ನಡಿಗರು ಪೂಜಿಸಿ ಪುನೀತರಾಗಲೆಂದು ಹಾರೈಸುವಾ. ಈ ಲೇಖನದಲ್ಲಿ ಕಂಡುಬರುವ ಅನೇಕ ದೋಷಗಳು ನಮ್ಮವು; ಕವಿಯ ದೋಷಗಳಲ್ಲ.

**ಕಾವ್ಯಗನ್ನಡಕ್ಕೆ ಕಳೆಯೇರಲಿ.**

# ದಿವ್ಯಜ್ಯೋತಿ ಶ್ರೀ ಬಸವಣ್ಣನವರು.

(ಲೇ:— ಎಸ್. ಡಿ. ಮೋಟಗಿ, B. A.: B. Ed.
ಹೆಡ್ ಮಾಸ್ತರರು, ಎಸ್. ಜೆ ಜೆ ಎಮ್. ಹಾಯಸ್ಕೂಲ, ಮುಳಗುಂದ.)

೧೨ನೇ ಶತಮಾನವೆಂದರೆ ಕನ್ನಡ ಸಾಹಿತ್ಯದ ಸುವರ್ಣಯುಗ. ಈ ಶತಮಾನದ ಪೂರ್ವದಲ್ಲಿದ್ದ ಉದ್ದಾಮಕವಿಗಳಾದ ಪಂಪ,ರನ್ನ ಮೊದಲಾದವರ ಕಾವ್ಯಗಳಲ್ಲಿಯ ಕ್ಲಿಷ್ಟತೆಯು ೧೨ನೇ ಶತಮಾನದ ಶಿವಶರಣರ ವಚನಗಳಲ್ಲಿ ಸರಳ, ಸುಂದರ, ಅರ್ಥಗರ್ಭಿತವಾದ ಹಾಗೂ ನೈತಿಕ ಮಟ್ಟವನ್ನು ಉನ್ನತಕ್ಕೇರಿಸುವ ಸಾಹಿತ್ಯ ನಿರ್ಮಾಣವಾಯಿತು. ಜನಸಾಮಾನ್ಯರೂ ಸುಲಭರೀತಿಯಿಂದ ವಚನಗಳನ್ನು ತಿಳಕೊಳ್ಳಲು ಮಾರ್ಗವಾಯಿತು. ಹೀಗೆ ಸಾಹಿತ್ಯ, ಮಾರ್ಗದಿಂದ ದೇಶಿಯ ಕಡೆಗೆ ತಿರುಗಿತು. ಇದಕ್ಕೆ ೧೨ನೇ ಶತಮಾನದಲ್ಲಿ ಶಿವಶರಣರು ಮಾಡಿದ ಕ್ರಾಂತಿಯೇ ತಳಪದಿಯೆಂದು ಹೇಳಬಹುದು,


ಶ್ರೀ ಸಿದ್ಧರಾಮ, ಶ್ರೀ ಚನ್ನಬಸವಣ್ಣ, ಶಿವಶರಣೆ ಅಕ್ಕಮಹಾದೇವಿ ಮುಂತಾದವರಲ್ಲಿ ಶ್ರೀ ಬಸವಣ್ಣನವರು ಅಗ್ರಗಣ್ಯರು. ಬಸವಣ್ಣವರು ನುಡಿದಂತೆ ನಡೆದು ತೋರಿಸಿದರು. ತಾವು ಬಿಜ್ಜಳನ ಮಂತ್ರಿಯಾದರೂ ತಮ್ಮ ಭಕ್ತಿಮಾರ್ಗದಿಂದ 'ಭಕ್ತಿಭಾಂಡಾರಿ ಬಸವಣ್ಣ'ನೆಂದು ಅನ್ವರ್ಥಕವಾಯಿತು. ತಮ್ಮ ಧರ್ಮದಲ್ಲಿ ನಿಷ್ಠೆ ಸರಧರ್ಮದಲ್ಲಿ ಸಹಿಷ್ಣುತೆ, ಸರ್ವಧರ್ಮಗಳಲ್ಲಿ ಸಮನ್ವತೆಯನ್ನು ಅವರಲ್ಲಿ ಕಾಣಬಹುದು.

ಕಿರಿದರಲ್ಲಿ ಹಿರಿದಾದ ಅರ್ಥವನ್ನು ಪ್ರತಿಪಾದಿಸುವ ಅವರ ವಚನಗಳು ನಿಜವಾಗಿ ಜ್ಞಾನಜ್ಯೋತಿಗಳು ಕೆಳಗಿನ ಕೆಲವು ವಚನಗಳಿಂದ ಅವುಗಳ ಮಹತ್ವವನ್ನೂ ಹಾಗು ಇವರ ಘನತೆಯನ್ನು ಅಳೆಯಬಹುದು,

" ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆನಗಾಯಿತಯ್ಯ
ಅಕಟಕಟಾ ಸಂಸಾರಿ ವೃಥಾ ಹೊಯಿತಲ್ಲಾ
ಕರ್ತೃವ ಕೂಡಲಸಂಗಮದೇವಾ
ಇವತಪ್ಪಿಸು ಎನ್ನನು ರಕ್ಷಿಸಯ್ಯಾ. "

ಹಾವಿನ ನೆರಳಲ್ಲಿ ಕೂತಿರುವ ಕಪ್ಪೆಯಂತೆ ನನ್ನ ಜೀವನವು ಯಾವ ಮಹತ್ವದ ಕಾರ್ಯವನ್ನು ಮಾಡದೆ ವ್ಯರ್ಥಹೋಯಿತಲ್ಲ ಎಂದು ಚಿಂತಿಸುತ್ತಾರೆ. ಸೃಷ್ಟಿಕರ್ತನಾದ ಹೇ ಶಿವನೇ ಈ ಬಂಧನದಿಂದ ಮುಕ್ತಮಾಡು-ಎಂದು ಬೇಡಿಕೊಳ್ಳುತ್ತಾರೆ. ಅದರಂತೆ ಇನ್ನೊಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ಮುಖ್ಯ ಮಂತ್ರಿ ಶ್ರೀ ಎಸ್. ಆರ್. ಕಂಠಿಯವರು ಬಂದಾಗ
ಮೆಡಿಕಲ್ ಸ್ಕೂಲ ಬಗ್ಗೆ ಭಾಷಣ ಮಾಡುತ್ತಿರುವ



ಶ್ರೀ ಬಂಥನಾಳ ಶಿವಯೋಗೀಶ್ವರರು.

# ಜಗದಾಧಾರಕ ಶಿವಯೋಗಿ !!

ಲೇ.:– ಶ್ರೀ ಸ್ವಾಮಿ ದಯಾನಂದದೇವರು ವಿರಕ್ತಮಠ ಎಂ. ಎ. ಯರನಾಳ.

೧೯೨೧ ನೇಯ ಇಸ್ವಿಯ ಸಮಯವದು ರವಿ ತನ್ನ ತಾಯಹೃದಯದಲ್ಲಿ ಅಡಗಿಕೊಳ್ಳಲು ಹೊರಟಿದ್ದನು. ಮುಂದೆ ಸಂಧ್ಯಾದೇವತೆ ಬೆನ್ನುಹತ್ತಿದರಿಂದ ಆತನ ಮುಖ ನಾಚಿಕೆಯಿಂದು ಕೆಂಪಾಗಿ ಲೌಕಿಕ ಜನರ ಹಾಸ್ಯಕ್ಕೆ ಒಳಗಾಗಬಾರದೆಂದು ಪಶ್ಚಿಮಾದ್ರಿಯನ್ನು ಒಳಹೊಕ್ಕನು. ಅವನ ಪ್ರಕಾಶ ಪುತ್ರ ಪಿತನ ಬೆನ್ನುಹತ್ತಿದರಿಂದ ಅವನೂ ಪಶ್ಚಿಮಾದ್ರಿಯಲ್ಲಿ ಹೊರಟಿದ್ದರಿಂದ ಲೋಕ ಬೆಳಕುಕಾಣದೆ ಅಂಧಸ್ಕಂಪದಿಂದ ಆ ಎಂದು ಬಾಯಿತೆರೆದು ನಿಂತ ಪ್ರಾಪಂಚಿಕ ಜನರೆಲ್ಲ ಗಡಿಬಿಡಿ ಇಟ್ಟಿತು. ಎಲ್ಲರೂ ತಮ್ಮ ತಮ್ಮ ಹಗಲುಗೆಲಸಗಳನ್ನು ಮುಗಿಸಲು ಪ್ರಯತ್ನಿಸಿದರು. ಪಕ್ಷಿಗಳು ಗೂಡಿಗೆ ಹೊರಟವು. ಪಶುಗಳು ಹಟ್ಟಿಯನ್ನು ಸೇರಲು ಹೊರಟವು ಅಡವಿಯಲ್ಲಿದ್ದ ಜನರೂ ಕೂಡ ತಮ್ಮ ಮನೆಗಳಿಗೆ ತೆರಳಹತ್ತಿದರು. ಗಟ್ಟಿಗರು, ಬಲಿಷ್ಠರೂ ಕಾಲುವೇಗದಿಂದ ತೆರಳಿದರು. ಚಿಕ್ಕಮಕ್ಕಳು ತಮ್ಮ ಸಹಜ ಚುರುಕುತನದಿಂದ ಹಾರಾಡುತ್ತ ಹೊರಟರು. ಆದರೆ ಬಂಥನಾಳ ಗ್ರಾಮದ ಮುಂದೆ ಎರಡು ಮೈಲಿನ ಮೇಲಿರುವ ಒಂದು ಹೊಲದಲ್ಲಿ ಒಬ್ಬ ಮುದುಕಿ ತನ್ನಲ್ಲಿರುವ ಶಕ್ತಿಯನ್ನೆಲ್ಲ ಯಾವಾಗೂ ತನ್ನ ವಿಧಿಗೆ ಕೊಟ್ಟುಬಿಟ್ಟಿದ್ದಳು. ಅಲ್ಪಸ್ವಲ್ಪ ಉಳಿದುದನ್ನೆಲ್ಲ ಸಂಗ್ರಹಿಸಿಕೊಂಡು ತಲೆಯಮೇಲೆ ಇಟ್ಟುಕೊಂಡು ಹೊರಟಳೋ ಎಂಬಂತೆ ಆಕೆಗೆ ತನ್ನ ಶಕ್ತಿಮೀರಿ ಹೊರುವ ಮೇವಿನ ಹೊರೆ ಒಜ್ಜೆಯಾಗಿ ಉಸ್ಸೆಂದು ಉಸಿರುತ್ತ ಹೊರಡುವಂತಾಯಿತು. ತನ್ನ ಮನಿಯವರಾರಾದರೂ ಬಂದು ಹಗರು ಮಾಡಿ ಯಾರೆಂಬ ಆಸೆಗೆ ಬೆನ್ನುಹತ್ತಿ ನಿರಾಶೆ ಎಂಬ ಒಜ್ಜೆಯನ್ನು ಹೊರಬೇಕಾಯಿತು. ಆದರಿಂದ ಅವಳ ಹಾದಿ ಸಾಗಲಿಲ್ಲ. ಅವಳು ।ಲೋಕದಲ್ಲಿ ಹುಟ್ಟಿಬಂದು ಕಷ್ಟಸುಖಗಳಿಗೆ ನೆಲೆಯಾಗಬೇಕೆಂಬ ಸೂತ್ರವನ್ನೇ ಬಿಟ್ಟು ತಾನು ಈ ಕಷ್ಟದಿಂದ ಪಾರಾಗಬೇಕೆಂಬ ಆರ್ತವನಾದವು ದೇವನನ್ನು ಪ್ರಾರ್ಥಿಸಿತು. ಈ ಎಲ್ಲ ತೊಂದರೆಗಳಿಂದ ಮುದುಕಿ ತನ್ನ ತಲೆಯ ಮೇಲೆ ಹೊತ್ತ ಹೊರೆಯ ಭಾರವು ಹೆಚ್ಚಾಗಿ ಮುಂದೆ ದಾರಿಸಾಗದೆ ದಾರಿಯ ಬದಿಗೆ ಹೊರೆ ಇಳುಹಿ ಕುಳಿತುಬಿಟ್ಟಳು. ಅವಳು ಕತ್ತಲೆ, ದೂರದಾರಿ, ನೆರವು ಇಲ್ಲದೆ ಹೊರಟ ಒಬ್ಬಳೇ ತನ್ನ ಜಂಜಾಟಕ್ಕಾಗಿ ನೆರಳಾಡಿದಳು. ದೇವರನ್ನು ಪ್ರಾರ್ಥಿಸಿದಳು. “ಶಿವಯೋಗಿ ಶರಣ” ಎಂದು ಹೃದಯ ಬಿಚ್ಚಿ ಸ್ವರ ಹೊರಹಾಕಿದಳು. ಅವಳ ಆರ್ತನ ನಾದ ದೇವರಿಗೆ ಮುಟ್ಟಿತೋ ಏನೋ ಎಂಬಂತೆ ಒಬ್ಬ ಯುವಕ ಆ ದಾರಿಯಲ್ಲೇ ಹೊರಟ ಅವಳು ಕಣ್ಣು ಮಂದವಾದರೂ ರವಿ ಮಂದವಾಗಿಲ್ಲ ಹೆಜ್ಜೆಗಳ ಸಪ್ಪಳವು ಅವಳಿಗೆ ಸ್ಪಷ್ಟ ಮಾಡಿಕೊಟ್ಟವು ಆಗ ಆ ಮುದುಕಿ “ತಮ್ಮಾ ಈ ಹೊರೆಯನ್ನಿಷ್ಟು ಹೊರಿಸು” ಎಂದು ಕೇಳಿದಳು. ಆ ಯುವಕ “ತಾಯಿ ಹೊರೆ ಬಹಳ ಬಲುವಾಗಿದೆ ನಾನೇ ಹೊತ್ತುಕೊಂಡು ಬರುತ್ತೇನೆ ನಡೆ” ಎಂದು

ಧೈರ್ಯಕೊಟ್ಟ "ಪುಣ್ಯಬರಲಿ ನಮ್ಮಪ್ಪಾ" ಎಂದು ಉದ್ಗಾರ ತಗೆದು ಮುದುಕಿ ಹೊರೆಹೊತ್ತ ತರುಣ ಮೈ ಮನ ಹಗುರಾಗಿ ಬರುತ್ತಿದ್ದ ಮುದುಕಿಯ ಕರೆದುಕೊಂಡು ಸಾವಕಾಶವಾಗಿ ಊರೆಡೆಗೆ ನಡೆದ. ಹಾದಿಯಲ್ಲಿ ಒಬ್ಬನು ಇಮರಾಗಿ ಗಾಬರಿಯಾದನು. ಮುದುಕಿಯ ಕಡೆಗೆ ನೋಡಿ "ಏನಮ್ಮಾ ಸ್ವಾಮಿಗಳ ಮೇಲೆ ಹೊರೆ ಹೊರಸಿಯಲ್ಲ" ಎಂತಾಕಿ ನೀನು? ಎಂದು ಮುದುಕಿಗೆ ಹೇಳಿ ಸ್ವಾಮಿಗಳ ಹತ್ತರ ಓಡಿಬಂದು "ಬುದ್ಧಿ ನನ್ನ ಮೇಲೆ ಹೊರಿಸಿರಿ; ಆಕೆಯ ಮನೆಗೆ ಮುಟ್ಟಿಸಿಬರುವೆನೆಂದು ಬೇಡಿಕೊಂಡು ಒತ್ತಾಯದಿಂದ ತನ್ನ ತಲೆಯ ಮೇಲೆ ಹೊರೆಹೊತ್ತುಕೊಂಡು ನಡೆದನು. ಮುದುಕಿಯು ಧಾವಿಸಿ ಬಂದು ಗಲ್ಲಗಲ್ಲ ಬಡಿದುಕೊಳ್ಳುತ್ತ ''ಅಪನವರೇ ಗುರುತಾಗಲಿಲ್ಲ. ಕಣ್ಣು ಮುಂದ ನನ್ನ ತಪ್ಪನ್ನು ಹೊಟ್ಟೆಯಲ್ಲಿಹಾಕಿಕೊಳ್ಳಿರಿ." ಎಂದು ಉದ್ದಕ್ಕೆ ಬಿದ್ದು ಹೇಳಿಕೊಂಡಳು. '' ಅಮ್ಮಾ ನೀನೊಬ್ಬಳು ನನ್ನ ಅಜ್ಜಿ. ಅಜ್ಜಿಯ ಸೇವೆಯನ್ನು ಮೊಮ್ಮಗನು ಮಾಡಿದರೆ ತಪ್ಪೇನು? ಏನೂ ಮನಸ್ಸಿಗೆಹಚ್ಚಿಕೊಳ್ಳಬೇಡ. ಅವನು ನಿನಗೆ ಕಲ್ಯಾಣ ಮಾಡಲಿ" ಎಂದು ಹರಿಸಿ ಕೈಹಿಡಿದು ಕರೆದುಕೊಂಡು ಬಂದರು. ಬಳಿಕ ಆಕೆಗೆ ಇನ್ನೊಬ್ಬ ಭಕ್ತನನ್ನು ಜೋಡುಮಾಡಿ ಮನೆಗೆ ಮುಟ್ಟಿಸಿದರು.

ಇವರ್ಯಾರು ಗೊತ್ತೇ ? ಮುದುಕಿಯ ಭಾರವನ್ನೆಲ್ಲ ಭೂಮಾತೆಯೇ ತನ್ನ ವಯೋಮಾನದಿಂದ ವೃದ್ಧಳಾಗಿ ಅಜ್ಞಾನ ಅನ್ಯಾಯ, ಅನಾಚಾರ, ಅಸತ್ಯ ಈ ಮೊದಲಾದ ಭವಣೆಯ ಭಾರವನ್ನೆಲ್ಲ ಹೊತ್ತು ಧರ್ಮಸೂರ್ಯನ ಬೆಳಕಿಲ್ಲದೆ ಅಸಂಸ್ಕೃತಿಯ ಅಂದಕಾರತಿಯಲ್ಲಿ ಮುಳಗಿ ಅವಳು ತೀರ ಕೃಶಳಾಗಿ ಬಿಟ್ಟಿದ್ದಾಳೆ. ಅವಳ ಸ್ಥಿತಿಯೂ ಬಂಥನಾಳ ಮುದುಕೆಯ ಸ್ಥಿತಿಯೂ ಒಂದೇಯಾಗಿತ್ತು. ಬಂಥನಾಳ ಮುದುಕೆಯ ಹೊರೆಯನ್ನು ಹೊತ್ತು ಹಗುರುಮಾಡಿದ ಶಿವಯೇಗಿಗಳು ಜಗದ ಹೊರೆಯನ್ನು ಹೊತ್ತು ಈ ಲೋಕದ ಜನತೆಗೆ ಜ್ಞಾನ, ಧರ್ಮ, ಶಾಂತಿ, ಸತ್ಯ, ನ್ಯಾಯ, ಮೊದಲಾದವುಗಳಿಂದ ಹಗರು ಮಾಡಿಕೊಟ್ಟ ಸಂಗನ ಬಸವ ಶಿವಯೋಗಿಗಳು "ಲೋಕೋಪಕಾರಾಯ ಯೋದೇವ ಪರಮೇಶ್ವರ ಜಗತಿ ಅಥಿತರೂಪೇಣ ಜಂಗಮ:" ಎಂಬ ಆ ಮೊಕ್ತಿಯಂತೆ ಶಿವಯೋಗಿಗಳು ಜಗತ್ ಕಲ್ಯಾಣಕ್ಕಾಗಿ ಶಿವನರಮನೆಯಿಂದ ಈ ಭೂಮಿ ಗುಡಸಲಿಗೆ ಅಥಿತಿಗಳಾಗಿ ಬಂದವರು ಈ ಭೂಮಿಯನ್ನು ಪಾವನವನ್ನಾಗಿಮಾಡಿದವರು.

ಸಾವಿರದಾ ಒಂಬೈನೂರರಲ್ಲಿ ಮಸೂತಿಯ ಜಗದೀಶ್ವರ ಬ್ರಹನ್ಮಠದಲ್ಲಿ ಪರ್ವತಯ್ಯ ಗೌರಾಂಬೆಯರ ಲೌಕಿಕ ನೇಮುದಂತೆ ಹೃದಯದಿಂದ ಹೊರಬಂದರು ಶಿವನ ತೇಜಾಂಶವಿದ್ದ ಮೂಲಕ ಶಿಸುವು ಸಾಮಾನ್ಯರಂತೆ ದುಃಖದಲ್ಲಿ ಒಳಗಾಗಲಿಲ್ಲ. ಸ್ವಶಕ್ತಿಯಿಂದ ಆಯುಷ್ಯ, ಬುದ್ಧಿ ಯೋಗ, ಕರ್ಮ, ಬಲ ಸಿಕೊಂಡು ಯರನಾಳ ವಿರಕ್ತಮಠದ ಶ್ರೀ ಮ. ನಿ ಪ್ರ. ಪೂಜ್ಯ ಪಂಪಾಪತಿ ಶಿವಯೋಗಿಗಳ ಕರುಣೆಗೆ ಪಾತ್ರರಾಗಿ ತನ್ನ ಯೋಗಶಕ್ತಿಯನ್ನು ಬೆಳೆಯಿಸಿಕೊಂಡು ನಿಂತರು.

ಸಾವಿರದಾ ಒಂಬೈನೂರಾ ಹನ್ನೆರಡರಲ್ಲಿ ಬಬಲೇಶ್ವರ ಪಾಠ ಶಾಲೆಯಲ್ಲಿ ಸಂಸ್ಕೃತ ಅಭ್ಯಾಸವನ್ನು ಕಲಿತು ಕೆಲವೇ ತಾಸುಗಳಲ್ಲಿ ನೂರೊಂದು ಶ್ಲೋಕುಗಳನ್ನು ಮುಖ್ಯ ಪಾಠಮಾಡಿ ಪವಾಡ ಪುರುಷರಾಗಿ ಶಿವಯೋಗಿಗಳು ಅಚನಮನ, ಏಕಾಗ್ರ ಚಿತ್ತ, ನಿರ್ಧಾರ ನಿಷ್ಠೆ, ಕಷ್ಟಸಹಿಷ್ಣುತೆ ಧೈರ್ಯ ಆತ್ಮವಿಶ್ವಾಸ ಇನ್ನು ತನ್ನ ಬಾಳಿನಲ್ಲಿ ಅಳವಡಿಸಿಕೊಂಡು ರೂಢಿಮಾಡಿಕೊಂಡು ಶಿವಯೋಗಿಗಳು ಶಿವಯೋಗ



ಸಾಧಕರಾಗಿ ಮಹಾಯೋಗಿಯಾದ ಇಂತಹ ಅಂತಃಶಕ್ತಿಯನ್ನು ಅವಲೋಕಿಸಿ ಯರನಾಳ ಪಂಪಾಪತಿ ಶಿವಯೋಗಿಗಳು ಅವರನ್ನು ತಮ್ಮ ಉತ್ತರಾಧಿಕಾರ ಳನ್ನಾಗಿ ಮಾಡಿಬಿಟ್ಟರು. ಇಷ್ಟರಲ್ಲಿಯೇ ಸುಕ್ಷೇತ್ರ ಬಂಥನಾಳಪೀಠ ಚನ್ನ ಬಸವಣ್ಣಸ್ವಾಮಿಗಳು ತಮ್ಮ ನಿರ್ಧಾರವನ್ನು ಸಂಗನಬಸವ ಸ್ವಾಮಿಗಳಿಗೆ ಒಪ್ಪಿಸಿ ಮಹಾಲಿಂಗದಲ್ಲಿ ಬೆರೆತರು. ಲಚ್ಯಾಣ ಸಿದ್ದಪ್ಪ ಮಹಾರಾಜರು ಪ್ರಾರ್ಥನೆ, ಬಂಥನಾಳಮಠಕ್ಕೆ ಪೀಠಾಧಿಕಾರಿಯನ್ನಾಗಿ ಮಾಡಿಬಿಟ್ಟಿತು. ಡಾ|| ಹಿರೇಮಲ್ಲೂ ಈಶ್ವರನ್‌ರು ಹೇಳುವಂತೆ ಅಧ್ಯಯನ ಮುಂದುವರಿಸುವ ಅವಕಾಶವನ್ನು ಕಸಿದುಕೊಂಡ ಇಷ್ಟದೈವವು ಅವರನ್ನು ನೇರವಾಗಿ ಸನ್ಯಾಸದ ಗದ್ದುಗೆಯ ಮೇಲೆ ತಂದು ಕುಳ್ಳಿರಿಸಿ, ಲೋಕದ ಕಿವಿಯಲ್ಲಿ ಒಂದು ಮಾತು ಹೇಳಿತ್ತು. ಪರವಸ್ತು' ತನ್ನ ವಿನೋದಕ್ಕೆ ತಾನೇ ಗುರುವಾದ, ತಾನೇ ಶಿಷ್ಯನಾದ, ತಾನೇಲಿಂಗವಾದ, ತಾನೇ ಮಂತ್ರವಾದ ! ಶಿವಯೋಗಿಗಳು ಪರಿಪಕ್ವಜೀವನದಿಂದ ಉಳಿದವರಿಗೆ ಆದರ್ಶರಾಗಿಬಿಟ್ಟರು. ಶಿವಯೋಗಿಗಳು ಹರ್ಡೇಕರ ಮಂಜಪ್ಪನವರಿಗೆ ಬೆನ್ನೆಲುವಾಗಿ ನಿಂತು ಆಲೀಮಟ್ಟಿಯಲ್ಲಿ ೧೯೩೬ನೇ ಇಸ್ವಿಯಲ್ಲಿ ವೀರಶೈವ ವಿದ್ಯಾಲಯವನ್ನು ಸ್ಥಾಪಿಸಿ ಉದ್ಯೋಗ, ಶರಣಸಂದೇಶ, ಪತ್ರಿಕೆಗಳನ್ನು ಪ್ರಕಟಿಸಿದರು ಶ್ರೀಗಳು ಮಂಜಪ್ಪನವರೊಡನೆ ಕಲೆತು ಹಳ್ಳಿಹಳ್ಳಿಗೆ ಸಂಚರಿಸಿದರು. ಜನಜಾಗೃತಿ ಮಾಡಿದರು. ಬರೆ ಚಟ್ಟಾ ಸಿಗಾರೇಟು ಸೇದುವದರಿಂದಾಗುವ ಅನಿಷ್ಟವನ್ನು ತಿಳಿಸಿದರು. ತಂಬಾಕು, ನಾಶಿಪುಡಿಗಳ ಚಟಕ್ಕೊಳಗಾಗುವದರಿಂದಾಗುವ ಅನರ್ಥವನ್ನೂ ವಿವರಿಸಿದರು. ಸಿಂದಿ, ಸೆರೆ, ಚಹ-ಕಾಫಿ ಕುಡಿಯುವದರಿಂದಾಗುವ ಕೆಡಕನ್ನು ಹೇಳಿದರು. ಪಕ್ಷ ಪಂಗಡಗಳ ತಿಕ್ಕಾಟದಿಂದಾಗುವ ಅನಾಹುತವನ್ನು ಹೇಳಿಕೊಟ್ಟರು ಧರ್ಮದ ನಿಯುನುವಿರುವವರಿಂದಾಗುವ ಅನಿಷ್ಟವನ್ನು ತಿಳಿಸಿಕೊಟ್ಟರು. ಖಾದೀ ಪ್ರಚಾರ ಅಸ್ಪ್ರ್ಯಶ್ಯತಾ ನಿವಾರಣೆ, ಹಿಂದೂ ಸಂಘಟನೆ, ಶರಣಸಾಹಿತ್ಯ ಪ್ರಸಾರ ಮುಂತಾದ ಪ್ರಸಂಗಗಳು ಅವರ ಉಪದೇಶ ಉಪನ್ಯಾಸಗಳಲ್ಲಿ ಆಗಾಗ ಬರುತ್ತಿದ್ದವು. ಅನೇಕರು ಅವರ ವ್ಯಾಖ್ಯಾನಗಳ ಪ್ರಭಾವದಿಂದ ದುಶ್ಚಟಗಳನ್ನು ಬಿಡಲು ಪ್ರತಿಜ್ಞೆ ಮಾಡಿದರು. ಕೆಲವರು ಅವನ್ನು ಬಿಟ್ಟುಬಿಟ್ಟರು. ಕೆಲವರು ಅವರಂತೆ ಸಮಾಜಸೇವೆಗೆ ಬದ್ಧಕಂಕಣರಾದರು. ಕೆಲವು ಕಡೆ ಬಹುದಿವಸದಿಂದ ಬಡಿದಾಡುತ್ತ ಬಂದಿದ್ದ ಬಣಗಳು ಬಯಲಾದವು. ಅಲ್ಲಲ್ಲಿ "ಭಜನಾಸಂಘ"ಗಳು ಏರ್ಪಟ್ಟವು. 'ತರುಣ ಸಂಘ'ಗಳು ಅಸ್ತಿತ್ವದಲ್ಲಿ ಬಂದವು. ವಾಚನಾಲಯಗಳು ತಲೆದೋರಿದವು.

ಲೋಕೋದ್ಧಾರಕ್ಕಾಗಿ ಲವಲವಕೆಯಲ್ಲಿದ್ದ ಶ್ರೀ ಶಿವಯೋಗಿಗಳು ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದಿದ್ದ ವಿಜಾಪೂರ ಜಿಲ್ಹೆಯಬಗ್ಗೆ ಅವರ ಮನಸ್ಸು ಹಳಹಳಿಸಿತು. ಅವರ ಆಶ್ರಯವನ್ನೇ ವಿಜಾಪೂರ ಜಿಲ್ಹಾ ಲಿಂಗಾಯತ ವಿದ್ಯಾವರ್ಧಕ ಸಂಘವು ಹಂಬಲಿಸಿತು. ೧೯೪೨ ನೇಯ ಇಸ್ವಿಯಲ್ಲಿ ನಿಜವಾದ ತನ್ನ ಉದ್ಧಾರಕನೆಂದು ತಿಳಿದು ಶ್ರೀಗಳನ್ನು ಆಜೀವ ಅಧ್ಯಕ್ಷರನ್ನಾಗಿ ಮಾಡಿಬಿಟ್ಟಿತು. ಶ್ರೀಗಳವರು ಸ್ವತಃ ಜೋಳಿಗೆ ಹಾಕಿ ಬಿಕ್ಕಟ್ಟಿನ ಪ್ರಸಂಗದಲ್ಲೂ ಲಕ್ಷಗಟ್ಟಲೆ ರೂಪಾಯಿಗಳನ್ನು ಕೂಡಿಸಿ ೧೯೪೪ ರಲ್ಲಿ ವಿಜಯ ಕಾಲೇಜನ್ನು ಸ್ಥಾಪಿಸಿದರು. ನಂತರ ಕಾಮರ್ಸಕಾಲೇಜನ್ನು ಸ್ಥಾಪಿಸಿದರು ವಿಜಯಕಾಲೇಜು ವಿಜ್ಞಾನ ಕಲೆಗಳ ಶ್ರೇಷ್ಠ ಶಿಕ್ಷಣ ಶಾಲೆಯಾಗಿದೆ. ಶ್ರೀಗಳು ಲಚ್ಯಾಣದಲ್ಲಿ ಶ್ರೀ ಸಿದ್ಧೇಶ್ವರ ಟ್ರೇನಿಂಗ ಕಾಲೇಜು. ಬಾಗೆವಾಡಿಯಲ್ಲಿ ಬಸವೇಶ್ವರ ಹೈಸ್ಕೂಲು, ಬಸವೇಶ್ವರ ಸಂಸ್ಕೃತ ಪಾಠಶಾಲೆ, ಹುನಗುಂದದಲ್ಲಿ ಮಹಾಂತೇಶ್ವರ ವಿದ್ಯಾದರ್ಥಕ ಸಂಘ ಸ್ಥಾಪಿಸಿ ಅದರ ಕೆಳಗೆ ಮಹಾಂತೇಶ ಹೈಸ್ಕೂಲು, ವಿಜಯ ಮಹಾಂತೇಶ ಪ್ರಸಾದ ನಿಲಯ, ಹಾಗೂ ವಿಜಯ ಮಹಾಂತೇಶ ಪ್ರಾಥಮಿಕ ಶಾಲೆ, ಈಗ ಭರದಿಂದ

ಒಳ್ಳೆಯ ಕೆಲಸ ನಡಿಸುತ್ತಲಿವೆ. ಸಿಂದಗಿಯ ಎಚ್. ಜಿ ಹೈಸ್ಕೂಲು, ಇಂಡಿಯ ಶಾಂತಲಿಂಗೇಶ್ವರ ಹೈಸ್ಕೂಲು, ಮುದ್ದೇಬಿಹಾಳ ಹೈಸ್ಕೂಲು, ಅಮಿನಗಡದ ಸಂಗಮೇಶ್ವರ ಹೈಸ್ಕೂಲು, ಉಕ್ಕಲಿಯ ಸಂಸ್ಕೃತ ಪಾಠಶಾಲೆ, ವೊದಲಾದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ವಿಜಾಪೂರ ಜಿಲ್ಹೆಯ ಹೆಸರನ್ನು ಮುಂದೆ ತರುವಲ್ಲಿ ಅವರು ವಹಿಸಿದ ಶ್ರಮ, ಪ್ರತಿ ಸಾಮಾಜಿಕ ವ್ಯಕ್ತಿಯೂ, ನೋಡಬಹುದಾಗಿದೆ.

ಶ್ರೀಗಳವರು ಪ್ರತಿಹಳ್ಳಿಗೆ ಹೋಗಿ ಕನ್ನಡ ಶಾಲೆಗಳನ್ನು ತೆರೆಯಿಸಿದರು. ಅವರ ಅಮೃತಹಸ್ತದಿಂದ ಉಧಾರಹೃದಯದಿಂದ ಎಷ್ಟೋ ಶಾಲಾಕಟ್ಟಡಗಳೂ, ನಿರ್ಮಿತವಾಗಿವೆ. ಶಿಕ್ಷಣದ ಕ್ಷೇತ್ರದಲ್ಲಿ ವಿಜಾಪೂರ ಜಿಲ್ಹೆಯು ಪ್ರಥಮ ಸ್ಥಾನವನ್ನು ಪಡೆದಿರುವಕೀರ್ತಿ ಪೂಜ್ಯ ಮಹಾಶಿವಯೋಗಿಗಳ ಶ್ರಮದಲ್ಲಿಯೇ ಇದೆಯೆ ವಿನ: ಯಾವ ವ್ಯಕ್ತಿಗೂ ಅದು ಸಂಭಂಧಿಸಿದುದಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು.

ಇದಲ್ಲದೆ ಶ್ರೀಗಳು ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿದ ಕಾರ್ಯವು ಅನುಪಮವಾಗಿದೆ. ಅವರ ಅಹಿಂಸೆ ತತ್ವವು ಅನೇಕ ಹಳ್ಳಿಗಳಲ್ಲಿ ಪ್ರಾಣಹಿಂಸೆಯನ್ನು ನಿರ್ಮೂಲನ ಮಾಡಿತು. ಕನ್ನಳ್ಳಿ ಮತ್ತು ಬೊಮ್ಮನಹಳ್ಳಿಯಲ್ಲಿಯ ಜಾತ್ರೆಗಳು ಶಿವಯೋಗಿಗಳ ಕಾರ್ಯ ಕ್ಷೇತ್ರದಲ್ಲಿ ಮಹತ್ವದ ಹೆಸರು ಗಳಿಸಿಕೊಂಡಿವೆ. ಶ್ರೀಗಳು ತಮ್ಮ ಅಸ್ಖಲಿತ ವಾಣಿಯಿಂದ ಪುರಾಣ, ಪ್ರವಚನ, ಭಾಷಣಗಳಿಂದ ಜನರಲ್ಲಿಯ ಅಜ್ಞಾನಾಂಧಕ್ಕಾರವನ್ನು ಬಹುಮಟ್ಟಿಗೆ ಓಡಿಸಿದ್ದರೆ ಅವರ ಪುರಾಣ, ಪ್ರವಚನವೆಂದರೆ ಹತ್ತೂ ಕೆಲಸಗಳನ್ನು ಹತ್ತಿಕ್ಕಿ ಊರಿಗೆ ಊರೇ ಇದಲ್ಲದೆ ಊರ ಸುತ್ತುಮುತ್ತಲಿನ ನೂರಾರು ಹಳ್ಳಿಗಳು ಕಿತ್ತಿಬರುತ್ತವೆ. ಅವರ ಪುರಾಣವೆಂದರೆ ಒಂದು ಮಹಾ ಜಾತ್ರೆ, ಶ್ರೀಗಳು ವಾಚನಾಲಯ, ಆಸ್ಪತ್ರೆ, ಹೆರಿಗೆಯ ಆಸ್ಪತ್ರೆ, ಸಂತೆ, ಮೊದಲಾದ ಕಾರ್ಯಗಳನ್ನು ಹಾಕಿಕೊಟ್ಟಿದ್ದಾರೆ. ಬಾಗೇವಾಡಿ ಬಸವೇಶ್ವರ ದೇವಾಲಯವು ಅವರ ಸಹಾಯದಿಂದ ಕಟ್ಟಲ್ಪಟ್ಟ ಮಹಾಕಟ್ಟಡವಾಗಿದೆ. ಹೀಗೆ ಶ್ರೀಗಳು ಸಮಾಜದ ಪ್ರತಿಯೊಂದು ಅಂಗದಲ್ಲಿ ಹೊಕ್ಕು ಅದರ ಉದ್ಧರಣೆಗಾಗಿ ಹೋರಾಡಿದ್ದಾರೆ.


ಶ್ರೀಗಳು ೧೯೫೪ ರಲ್ಲಿ ನಡೆಸಿದ ಶ್ರೀ ಶ್ರೀ ೭೭೦ ಅಮರಗಣಾಧೀಶ್ವರರ ಮಂಟಪ ಪೂಜೆಯು ಈ ಯುಗದಲ್ಲಿ ಯಾವ ವ್ಯಕ್ತಿಯೂ ಮರೆಯದ ಸಂಗತಿಯಲ್ಲ. ೧೨ನೇಯ ಶತಮಾನದ ಅದ್ಭುತ ಕ್ರಾಂತಿಯ ಪಡಿನೆಳಲು ಅಲ್ಲಿ ಜಾತಿಯ. ವಯಸ್ಸಿನ. ಸಿರಿವಂತಿಕೆಯ, ಲಿಂಗಭೇದವಿಲ್ಲದೆ ಪ್ರತಿಯೊಬ್ಬನು ಅಮರ ಜೀವಿಯಾಗುವ ಅಮೃತತ್ವದ ಮಹಾಗಳಿಗೆ ಸರ್ವಧರ್ಮ ಸಮ್ಮೇಲನ, ಶಿವಾನುಭವ ಸಮ್ಮೇಲನ, ಅಕ್ಕನಬಳಗಗಳ ಸಮ್ಮೇಲನ, ಪ್ರಭುಲಿಂಗಲೀಲೆಯ ಪ್ರವಚನ, ಮೊದಲಾದ ಕಾರ್ಯಕ್ರಮುಗಳು ವ್ಯಕ್ತಿಯ ವೃತ್ವವನ್ನು ರೂಪಿಸುವ ಅಮೋಘ ಸಾಧನೆಗಳಾಗಿದ್ದವು. ಆ ಕಾರ್ಯಕ್ರಮುದಲ್ಲಿ ಅಖಿಲ ಭಾರತದ ಸಂಸ್ಕೃತಿಯು ಸಮ್ಮಿಲಿತವಾಗಿ ಸುಪ್ರಕಾಶಗೊಂಡವು. ಈ ಪ್ರಚಂಡವಾದ ಕಾರ್ಯಕ್ರಮುದ ನೆನಹು ನಿರಂತರವಾಗಿ ಉಳಿಯಲೆಂದು ೧೯೬೧ ನೇಯ ಜಾನೇವರಿ ತಿಂಗಳಲ್ಲಿ ಶ್ರೀ ಶ್ರೀ ೭೭೦ ಅಮರಗಣೇಶ್ವರರ ಪ್ರತೀಕವಾಗಿ ೭೭೦ ಲಿಂಗಗಳ ಪ್ರತಿಷ್ಠಾಪನೆಯಾಯಿತು. ಈ ಅಮರಗಣೇಶ್ವರ ದೇವಸ್ಥಾನವು ವಿಜಾಪೂರದ ವೈಭವಗಳಲ್ಲಿ ಒಂದಾಗಿ ಮೆರೆಯುತ್ತದೆ.



ಶ್ರೀಗಳವರು ಸಾಹಿತ್ಯದಲ್ಲಿ ತುಂಬಾ ಆಸಕ್ತಉಳ್ಳವರು. ಇದಲ್ಲದೆ ಸ್ವತ ಸಾಹಿತ್ಯನಿರ್ಮಾಪಕರು 'ದೇವರ ಸಂದೇಶ, ವೃಷಭಲಿಂಗೇಶ್ವರ ಭಜನಾವಳಿ, ಸುಭೋದಮಾಲಾ, ಧಾರ್ಮಿಕ ಪಾರ್ಲಿಮೆಂಟ" ಮೊದಲಾದ ಪುಸ್ತಕಗಳನ್ನು ಬರೆದು ಪ್ರಕಟಿಸಿದರಲ್ಲದೆ "ನವಯುಗ" "ಸಂಯುಕ್ತಕರ್ನಾಟಕ" ''ಜಯಕರ್ನಾಟಕ" ''ಸುಕುಮಾರ" "ವಿಶ್ವವಾಣಿ" ಮೊದಲಾದ ಪತ್ರಿಕೆಗಳು ಅವರ ಬಿಡಿಲೇಖನಗಳಿಗೆ ಆಶ್ರಯವಾಗಿವೆ. ಶ್ರೀಗಳವರು ಬರೆಯುವದರಲ್ಲಿ ಪಳಗಿದವರಾಗಿದ್ದಾರೆ. ಅವರು ಯಾವಾಗಲೂ ವಿದ್ವತ್ಕ್ಕಿಂತಲೂ ಅನುಭವಕ್ಕೆ ಹೆಚ್ಚು ಲಕ್ಷಕೊಟ್ಟವರು.

ಶ್ರೀಗಳವರ ಕಾರ್ಯಕ್ಷೇತ್ರ ಅವರ ಹಿರಿಮೆ ಬರೆಯುವದು. "ಸಾಗರದ ನೀರನ್ನು ಸೂಜಿಯ ಮೊನೆಯಿಂದ ಅಳೆಯುವ" ಮೂರ್ಖನಂತೆ ಈ ಲೇಖನವೂ ಆಗಬಹುದು. ಅವರ ಜೀವನ ಪಾಮರರಿಗೆ ಪಾವನ ಯೋಗಿಗಳಿಗೆ ಅನುಕರಣ, ತ್ಯಾಗಿಗಳಿಗೆ ಕರ್ಣಾನುಸಂಧಾನ, ದೇಶಭಕ್ತರಿಗೆ ಸೇವಾಗುಣ, ಸಮಾಜ ಕಾರ್ಯಕರ್ತರಿಗೆ ಕಾರ್ಯಸಂಜೀವಿನಿ, ಒಟ್ಟನಲ್ಲಿ ಕಲ್ಪದ್ರುಮವೆಂದು ಒಂದೇ ಶಬ್ದದಲ್ಲಿಯೇ ಹೇಳಬಹುದು.

ಶ್ರೀಗಳು ಹುಟ್ಟಿ ಬೆಳೆದು ಈ ಭೂಮಿಯನ್ನು ಪಳಗಿಸಿ, ಬೆಳಕಿನಲ್ಲಿ ತಂದಿಟ್ಟರು. ಅವರು ಬಸವಣ್ಣನವರಂತೆ ವಿಶ್ವಪ್ರೇಮಿಯಾಗಿ ಹಳೀ ಮತ್ತು ಹೊಸ ಜಗತ್ತಿನ ವಿಚಾರಗಳನ್ನು ಒಂದೇ ಮಾಪನದಲ್ಲಿ ಅಳೆದಿಟ್ಟರು. ಅವರ ಆದರ್ಶಕತೆ ನಮ್ಮ ನಾಡಿಗೆ ನಮ್ಮ ಜನತೆಗೆ ಸದಾ ಸ್ಫೂರ್ತಿಯಾಗಲು ಶ್ರೀಗಳು ತಮ್ಮ ಸಾಕಾರ ರೂಪವನ್ನು ಜನತೆಯ ಎದುರಿಗೆ ಶಿವನಾಗಿ, ಶಿವಯೋಗಿಯಾಗಿ, ಜಗದಾಧಾರಕನಾಗಿ, ಅಖಂಡ ಆಯುಷ್ಯವನ್ನು ಹೊಂದಿ ಈ ಭೂಮಿಯ ಮೇಲೆ ಕೈಲಾಸ ತಂದಿರಿಸುವಿರೆಂದು ನಂಬುವೆ.



# ಸಮಾಜಸಂಗಿ ಸಂಗನಬಸವ.

ಶ್ರೀ ಮ ನಿ ಪ್ರ. ಶಾಂತಲಿಂಗ ಶಿವಯೋಗಿಗಳು
ಶ್ರೀ ಷಣ್ಮುಖ ಶಿವಯೋಗೀಶ್ವರ ಮಠ, ಜೇವರಗಿ.

ಅಷ್ಟಗೃಹಗಳ ಕೂಟ ಜಕತ್ತಿಗೇ ಕಾಟವಾಗುವದರ ಮೊದಲು ಫೆಬ್ರುವರಿ ದ್ವಿತಿಯ ತೇದಿಯ ಮಧ್ಯ ರಾತ್ರಿಯಲ್ಲಿ ಕುಳಿತು ಈ ಲೇಖನ ಬರೆಯುತ್ತಿದ್ದೇನೆ.

ಮಾನವೀಯ ಶಕ್ತಿಯ ಅಲ್ಪತನವನ್ನು ಮುಂದೂಡಿ ನಿಸರ್ಗದ ಬೆನ್ನೇರಿಬಂಡ ದೈವೀಶಕ್ತಿ ಇಂದು ಹೊಲ್ಲದ ಮಾರ್ಗದಲ್ಲಿ ಲೋಕವನ್ನೇ ಬೆದರಿಸುವದರಲ್ಲಿದೆ, "ಕೈದುವಿಲ್ಲದವನನ್ನು ಕರುಬೆದರಿಸುವಂತೆ."

ಈಗ ದೇಶದ ಮಹಾ ಮಹಾ ಶಿದ್ಧಸಾಧಕರು ಜಗತ್ಪ್ರಳಯ ಸನ್ನಿಹಿತವಾಗಿಬಂದಿರುವ ಅಷ್ಟಗೃಹಗಳ ಸಮ್ಮೇಳವನ್ನು ಏನಾದರೊಂದು ಹೊಂಚಿನಿಂದ ದೂರಿಕರಿಸಲು ಹೋಮ, ಕರ್ಮಗಳನ್ನು ರಚಿಸಿ ಭಜಿಸುತ್ತಿದ್ದಾರೆ. ಕನ್ನಡನಾಡಿನಲ್ಲೂ ಕುಲೋತ್ತುಂಗಗಿರಿನಾರಿಯರಾದ ಕೃಷ್ಣಭೀಮೆಯರು ಕೂಡಲು, ಸಂಗಮವಾಗಿರುವ ಬಸವನ ಸಂಗಮನಲ್ಲಿ ಸಂಗನ ಬಸವರು ಮ. ಡಿ. ಪಿ, ಜಗದ ಜಿವಿಗಳ ಮನಮನಗಳಲ್ಲಿ ಮನೆ ಮಾಡಿಕೊಂಡಿರುವ ಅಷ್ಟಮದಂಗಳ, ಅಷ್ಟಗೃಹಗಳು ಕೂಡುವಕಾಲ ಸಮೀಪಿಸಿರುವದೆಂದು ತಿಳಿದು ಜನತೆಯ ಅಜ್ಞಾನದ ಗ್ರಹಾಚಾರವನ್ನು ತೊಲಗಿಸಿ ಸುಜ್ಞಾನ, ಮಮಕಾರಗಳನ್ನು ತಳೆದು ತಂಗಿಸುವದಕ್ಕಾಗಿ ಕೃಷ್ಣಾತಟಾಕದಲ್ಲಿ ಭಕ್ತಿಯ ಅಲಗನ್ನೇ ಹಿಡಿದು ಹೋರಾಡುತಿದ್ದಾರೆ. ಹೊಸದೊಂದು ಲೋಕವನ್ನೇ ಸೃಜಿಸುತ್ತಿದ್ದಾರೆ.

ನಿಶಿತ ನಿಸ್ತುಲವಾದ ಭಕ್ತಿಯಂಬುಗಳ ಜೇವೊಡೆಗೆ ಜೀವದೊಡೆಯನನ್ನು ಸ್ವಾಧೀನ ಪಡಿಸಿಕೊಳ್ಳುವದೊಂದಚ್ಚರಿಯೇ ಸರಿ ಪಾಪ ! ಈ ಜೀವದೇವರ ತುಮುಲಯುದ್ಧದಲ್ಲಿ "ಭಕ್ತಿಯ ಅಲಗನ್ನೇಹಿಡಿದು ಶಿವಶರಣರು ಗೆಲ್ಲುವ"ರೆಂಬ ಸಮರನೀತಿ ತಕ್ಷಣ ಹೇಗೆ ಗೊತ್ತಾದೀತು ಆ ದೇವನಿಗೆ ?

ಇದು ಶ್ರೀ ಶಿವಯೋಗಿ ಸಂಗನಬಸವರ ಶಿವಯೋಗ ಸಂಚು ಬಾನಂಚವರೆಗೆ ಮೈಚಾಚಿನಿಂತ ಗೆಲುವಿನ ಅಂತರ್‌ದರ್ಶನಕ್ಕೆ ಬಹಿರ್‌ಪ್ರದರ್ಶನ ಸಾಹಸದೊಂದಂಶ. ಅವರದು ಬಹುಮುಖ ಗೆಲುವು ಷ್ಟೇಏಕೆ ಗೆಲುವೆ ಅವರ ಜೀವನದ ಏಕೈಕ ಸಾಧನವಾಗಿದೆ. ಅವರ ಬಾಳಗೆಲುಮೆಗೆ ಕಾರಣವಾಗಿರುವದು ಲೋಕದೊಲುಮೆ. ಲೋಕದೊಲುಮೆಯಲ್ಲಿಯೇ ಅವರ ಗೆಲುಮೆಯ ಗುಟ್ಟು ಅಡಕವಾಗಿದೆ. ಮಾನವೀಯತೆಯ ಬಗೆಗೆ ಅವರಿಗಿರುವ ದೃಷ್ಟಿ ವಿಶಾಲವಾದದು ಅವರ ಅಂತರ್‌ದೃಷ್ಟಿ ಬಹಿರ್ ಸೃಷ್ಟಿಗೆ ಸುಧಾವೃಷ್ಟಿಯಾಗಿರುವದರಿಂದಲೇ ಅವರ ಒಲುಮೆಯ ಹೃದಯ ಹೊಲದಲ್ಲಿ ಅಂಕುರಿಸಿದ ಮಂದಾರವಲ್ಲರಿ ಬಂಥನಾಳದಲ್ಲಿ ಜನಿಸಿ ವಿಜಯಪೂರದಲ್ಲಿ ಬೆಳೆದು ಬಾಗೆವಾಡಿಯಲ್ಲಿ ಬಸವನಾರಾಧೆಯಾಗಿ, ಹುನಗುಂದದಲ್ಲಿ ಚೆಲ್ಲವರಿದು ಲಚ್ಚಾಣದಲ್ಲಿ ನೆಗಳ್ತೆವಡೆದು ತಾಂಬೆಮುಂತಾದ ತಾಣಗಳಲ್ಲಿ ಜಯಗಳಿಸಿಕೊಂಡು ಕನ್ನಡ ತಾಯಿಯ ಕೀರ್ತಿವಧುವಾಗಿದ್ದಾಳೆ.



ವಿಶ್ವದ ಹಿತವನ್ನು ಬಯಸುವವರು ವಿಶ್ವ ವಿಶಾಲಹೃದಯಿಗಳಾಗಿರಬೇಕು. ರಸದಾಳಿಯವಿಂಡಿನಿಂದ ಪಳಂಚಿ ತಗೆಯಲು, ಹೊರಬರುವ ಪದರ ಒಂದರಿಂದ ಇನ್ನೊಂದು ಶುಭ್ರವಾಗಿರುವಂತೆ, ತೊಳೆದ ಮುತ್ತಿನಂತೆ ಶಿತ ವಿಕಶಿತವಾಗಿರಬೇಕು.

ಅವರ 'ಆತ್ಮ, "ಮನದ ಕಾಳಿಕೆಕಳೆದು" ಭ್ರಾಂತುಹೊದ್ದದ ಮುನಿಪ"ನಂತಿರಬೇಕು. ಆಗ "ಜೀವನದಿಯಿದು ದೇವನಂಬುಧಿಯ ಸೇರುವ" ಕಾಲಸನ್ನಿಹಿತವಾಗುತ್ತದೆ. ಇಂತಹ ವೈಶಿಷ್ಟ್ಯ ಉಳ್ಳವರನ್ನೇ ನಾವು ಮಹಾತ್ಮರೆಂದೂ, ಶಿವಯೋಗಿಗಳೆಂದೂ, ಅಲೌಕಿಕರೆಂದೂ ಕರೆಯುವದು. ಶ್ರೀ ಶಿವಯೋಗಿಗಳಾದರೂ ಯಾವ ಜಾತಿ ಪಂಗಡ ಹಿಂದುಳಿದ ವರ್ಗಗಳಿಗೂ ಸೇರದ ಮಹೋನ್ನತ ಪುಣ್ಯಪುರುಷರು ಇಡೀ ಲೋಕವೇ ಅವರ ಮಠವಾಗಿರುವಾಗ ಮೇಲೆ ಹೇಳಿದ ವೈಶಿಷ್ಟ್ಯ ಪಡೆದವರ ಕೋಮುವಾರಿಗೆ ಅವರನ್ನು ನಾವಿಂದು ವರ್ಗಾಯಿಸಬಹುದು.

ಶ್ರೀ ಶಿವಯೋಗಿಗಳು ಅಲೌಕಿಕರಾಗಿ ಲೌಕಿಕವನ್ನು ಬೆಳಗುವವರು. ಆತ್ಮಕಲ್ಯಾಣದೊಡನೆಯೇ ಲೋಕಕಲ್ಯಾಣವನ್ನು ಸಾಧಿಸುತ್ತಿರುವ ಧೀರ ವೀರರವರು.

ಪ್ರಪಂಚವು ಒಂದು ಪಾಠಶಾಲೆ. ಲೋಕಮಾನ್ಯರಾಗಬೇಕಾದವರು ಮೊದಲು ಈ ಪಾಠಶಾಲೆಯಲ್ಲಿ ಅಲೌಕಿಕ ವಿದ್ಯೆಯನ್ನು ಪಾಸು ಮಾಡಿ ಮತ್ತೆ ಅದೇ ಶಾಲೆಗೆ ಶಿಕ್ಷಕರಾಗಿ ಬರಬೇಕು. ಜಗತೀ ಜಂಗಮಕೆಲ್ಲ ಜಗದ ಜಂಗಮರಾಗಿ ಜಗದೋದ್ಧಾರ ಗೈಯಬೇಕು. ಮಹಾತ್ಮರ ಕರ್ಮಯೋಗ ಈ ರೀತಿಯದು. ಅಲೌಕಿಕರಾದವರು ಲೋಕಕಲ್ಯಾಣವನ್ನು ಸಾಧಿಸದೆ ಏಕಾಂತದಲ್ಲಿ ಆತ್ಮ ಕಲ್ಯಾಣವನ್ನು ಸಾಧಿಸಿರುತ್ತಾರೆ. ನೀಹಾರಿಕೆಗಳಾಚೆ ಸಿಡಿದು ನಿಂತರೆ ಲೋಕ ಅಂತಹರನ್ನು ಬಹುಬೇಗ ಮರೆಯುವ ಪ್ರಸಂಗಗಳು ಬರುತ್ತವೆ. ಯಾವ ಮಹಾತ್ಮರು ಐಹಿತ ಜೀವನದಲ್ಲಿ ತೊಳಲಾಡುವವರಿಗೆ ಸಾಮರಸ್ಯ ಜೀವನದ ಮರ್ಮವನ್ನು ಬಿತ್ತರಿಸಲು ಮಾಯೆ ಮುತ್ತಿದ ಮಾನವನು ಮುಂದುಗಾಣದೆ ಇರುವಾಗ "ಪಾಪಮಿದು ಪುಣ್ಯಮಿದು ಹಿತರೂಪ ಮಿದಹಿತ ಪ್ರಕಾರಮಿದು ದುಃಖೋಪಾತ್ತಮಿದೆಂದರಿಪುವ" ಅಲೌಕಿಕ ಶಕ್ತಿಯಾಗಿ ಚೈತನ್ಯ ಮೂರ್ತಿಯಾಗಿ ಕಂಗೊಳಿಸುತ್ತಾರೋ ಅವರೇ ವಿಶ್ವದ ಇತಿಹಾಸದಲ್ಲಿ ಹೆಸರು ನೋಂದಾಯಿಸುವವರು.

ಶ್ರೀ ಸಂಗನಬಸವರು ತಾರೆ ನೀಹಾರಿಕೆಗಳಾಚೆ ನಿಲ್ಲುವ ಶಿವಯೋಗ ವಿದ್ಯೆಯನ್ನು ಕಲಿತುಪ್ರಚ್ಛನ್ನ ವೈರಾಗ್ಯ ದೀಪ್ತಿಗಳಾಗಿದಾಗ್ಯೂ ಅವರ ನೇತ್ರಾಂಜನೆ ಮಾತ್ರ ಲೋಕದ ಹಿತಾಹಿತಗಳನ್ನು ನೋಡುವ ಪುಣ್ಯರೂಪಿಯಾಗಿದ್ದಾಳೆ ವಿಲಿಯಮ್ ವರ್ಡವರ್ಥ (ಕವಿಯ ಮಾನಸಪಕ್ಷಿ ಹಾರುತ್ತ ದಿಗ್ ದಿಗಂತದಾಚೆ ರೆಕ್ಕೆಗಳನ್ನು ಚಾಚಿನಿಂತರೂ ಇಹಪರ ಸಾಮರಸ್ಯವನ್ನು ಸಾಧಿಸಿದೆ. ಶಿವಯೋಗಿಗಳ ದೃಷ್ಟಿಯೂ ಇಂತಹದೇ ಅವರು ಗಳಿಸಿದ ಭಕ್ತಿನಾಡಶಕ್ತಿಗಾಗಿ ಪಡೆದ ಜ್ಞಾನ ಮಾನವರ ಸುಷ್ಟು ಜ್ಞಾನಕ್ಕಾಗಿ ನಡೆಸಿದ ಶಿವಯೋಗ ಲೋಕದ ಸದುಪ ಯೋಗಕ್ಕಾಗಿ ಇದನ್ನರಿತರೆ ಅವರು ಸಂಗಿಗಳಾದರೂ ನಿಸ್ಸಂಗಿಗಳ ನೀರೊಳ ಗಿರ್ದುಂ ಪೈದರ್ದು ನೀರಂ ನೀರೇಜಂ" ಎನ್ನುವಂತೆ ಅಲೌಕಿಕರಾಗಿದ್ದೇ ಲೋಕಹಿತವನ್ನು ಬಯಸು

ವವರು ಕೃಷ್ಣೆಯಲ್ಲಿ ನಡೆಸಿದ. ಐದು ಕೋಟಿ ಜಪಯಜ್ಞ ಕೋಟಿ ಕೋಟಿ ಭಾರತಿಯರ ಮನಮನಗಳಲ್ಲಿ ಮನೆಮಾಡಿಕೊಂಡಿರುವ ಅನೈಕ್ಯತೆ; ಪಕ್ಷಪಂಗಡ. ಸಂಕುಚಿತ ಮನೋವೃತ್ತಿಗಳನ್ನು ತೊಡೆಯುವದ ಕ್ಕಾಗಿ ರಾಜಕೀಯ ವಿಜ್ಞಾನರಂಗದಲ್ಲಿ ನಡೆದ ದುರ್ನೀತಿ ದುರಾಚಾರಗಳ ಕಾರ್ಗಾಲದ ವೈಭವ ಕಾಲಿಟ್ಟು ಮಾನವೀಯ ಸಂಸ್ಕೃತಿಯನ್ನೇ ಪಾಳ್ ಗೈಯುವಂತಹ ಅತಿ ವೃಷ್ಟಿಯರಿಂಗಣ ಗುಣಿತದಿಂದ ಪ್ರಲಾಪಕ್ಕೀಡಾಗಬಾರದೆಂಬುದಕ್ಕಾಗಿ.

ಸಮಾಜಕ್ಕೆ ತನ್ನದೆ ಆದ ಒಂದು ಸಂಸ್ಕೃತಿ ಇರುವಂತೆ ಪ್ರತಿ ವ್ಯಕ್ತಿಗೂ ಒಂದು ಸಂಸ್ಕೃತಿ ಯಿದೆ ಸಾಮಾಜಿಕ ಸಂಸ್ಕೃತಿಯು ಆಯಾ ಸಮಾಜದ ಪದ್ಧತಿ, ಧರ್ಮ, ಸಂಪ್ರದಾಯಗಳ ಹಿನ್ನೆಲೆ ಯಲ್ಲಿ ಮೂರ್ತಿವಡೆದಿದ್ದರೆ ವ್ಯಕ್ತಿಯ ಸಂಸ್ಕೃತಿ ಅವನಿದ್ದ ಪರಿಸರ ಸಂಸ್ಕಾರಗಳ ಮೇಲೆ ನೆಲೆನಿಂತಿ ರುತ್ತದೆ. ವ್ಯಕ್ತಿಯ ಉದಾತ್ತ ಸಂಸ್ಕೃತಿಗೆ ಕಾರಣವಾಗಿರುವದು, ಉದಾತ್ತ ಸಂಸ್ಕಾರ ಶ್ರೀ ಶಿವಯೋಗಿ ಗಳು ಪಡೆದ ಸಂಸ್ಕಾರ, ಪರಿಸರ ಅವರು ನಡೆಸಿದ ಸಂಯಮ ಜೀವನಗಳೇ ಅವರನ್ನು ಇಂದು ನಾಡಿನಾದ್ಯಂತ ಬೆಳಗಿಸುತ್ತಲಿವೆ. ಅಂತಹ ಮಹೋನ್ನತ ಪುರುಷರು ಕಾಲಿಟ್ಟ ಧರೆ ಪಾವನ. ಮಿಂದ ಜಲ ತೀರ್ಥ, ನಾವು ಮಾಡಿದ ಕೋಟಿ ಜನ್ಮದ ಪುಣ್ಯದಿಂದ ಕನ್ನಡನಾಡಿನಲ್ಲಿ ಕುಲದೀಪಕರಾಗಿ ಜನ್ಮ ತಳೆದಿದ್ದಾರೆ. ಒಮ್ಮೆ ಹರಿಶ್ಚಂದ್ರ ನಾಟಕದಲ್ಲಿ ಪಾತ್ರಧಾರಿಯಾದ ಅವರು ಇಂದು ನಾಡಿನ ಸೂತ್ರಧಾರಿಯಂತಿದ್ದಾರೆ. ತಮ್ಮ ತಪಸ್ಸು, ಶಿವಪೂಜೆ, ಬ್ರಹ್ಮಚರ್ಯ, ಅಧಿಕಾರ ಪಾಂಡಿತ್ಯ, ಸಂಗೀತ ಕಲೆ ಸರ್ವಸ್ವವನ್ನೂ ಸಮಾಜದ ಉನ್ನತಿಗಾಗಿ ವಿನಿಯೋಗಿಸುವ ದಾನಶೂರರಾಗಿದ್ದಾರೆ.

ಅವರು ಕಟ್ಟಿದ ಸಂಘ ಸಂಸ್ಥೆಗಳಲ್ಲಿ, ಶಾಲೆ ಕಾಲೇಜಗಳಲ್ಲಿ ಯೋಗಿಯ ಪುಣ್ಯವೇ ರೂಪಾಗಿ ನಿಂತಿದೆ. ಅಂದರೆ ಸಂಜ ಸಂಸ್ಥೆಗಳೆಲ್ಲ ಅವರು ಜೀವನಾದ್ಯಂತ ನಡೆಸಿದ ಶಿವಯೋಗಸಿದ್ಧಿಯ ಪ್ರತೀಕ ವಾಗಿದೆ. ವಿಜಯಪುರದ ವಿಜಯ ಕಾಲೇಜೆಂದರೆ ಶ್ರೀ ಶಿವಯೋಗಿಗಳು. ಶಿವಯೋಗಿಗಳೆಂದರೆ ವಿಜಯ ಕಾಲೇಜ ಎನ್ನುವಷ್ಟು ಅನನ್ಯಯತೆ ಪಡೆದ ಮಹಾ ಸಂಸ್ಥೆಗಳನ್ನು ಅವರು ನಿರ್ಮಿಸಿದ್ದಾರೆ. ಅಷ್ಟೇ ಏಕೆ ಶ್ರೀ ಶಿವಯೋಗಿಗಳೇ ಸಾಕ್ಷಾತ್ ಒಂದು ಸಂಸ್ಥೆಯಾಗಿದ್ದಾರೆ.

ಕನ್ನಡ ತಾಯ್ ಈ ಮೊದಲೇ ನಾಡಿನ ಆಧ್ಯಾತ್ಮಿಕ ಚರಿತ್ರೆಯಲ್ಲಿ ಶಿವಯೋಗಿಗಳ ಹೆಸರನ್ನು ನೋಂದಾಯಿಸಿದ್ದಾಳೆ. ನಾಡಿನ ಪುಣ್ಯದಿ ಜನ್ಮ ತಳೆದ ಶಿವಯೋಗಿ ಲೋಕಹಿತ ಬಂಧುವಾಗಿ, ಪುಣ್ಯ ಸಿಂಧುವಾಗಿ ಬಾಳಿ, ಪರಮಾಗಮವಾಗಲಿ ! ಅನಂತ ಕಾಲ ನಮ್ಮೊಡನೆ ಬಾಳಿ ಬೆಳಗಲಿ !! ಅಖಂಡೇಶ್ವರರು ಶಿವಯೋಗಿಗಳಿಗೆ ಅಖಂಡ ಆಯುಷ್ಯವನ್ನೀಯಲಿ !!!

## ಧರ್ಮದ ಪೆಂಪಿನಲ್ಲಿ ಪಂಪಾಪತಿ ಶಿವಯೋಗಿಗಳು

ಲೇಖಕರುಃ- **ಶ್ರೀ ಸ್ವಾಮಿ ದಯಾನಂದದೇವರು, ವಿರಕ್ತಮಠ, ಕಾಮರ್ಸ ಕಾಲೇಜ, ವಿಜಾಪುರ.**

ಸಾವಿರದಾ ಒಂಬೈನೂರರ ಏಳನೆಯ ವರುಷದ ಕೃಸ್ತಿಶಕ. ಸೋಮವಾರದ ಪ್ರಾತಃಕಾಲದ ಸೂರ್ಯದೇವನ ಹೊಂಗಿರಣಗಳೊಡನೆ ಜ್ಞಾನಕಿರಣದ ಸಮ್ಮಿಲನವೆಂಬಂತೆ ಮಹಾ ಮಹಾಪಂಡಿತರು ಎರ ನಾಳ ವಿರಕ್ತಮಠದಲ್ಲಿ ಸೇರಿದ್ದಾರೆ.

ಬಂಗಾರದಗಟ್ಟಿ ರೇಶಿಮೆಯ ಬಟ್ಟೆಯ ಕಟ್ಟೆನಲ್ಲಿ ಕೂಡುತ್ತಿದ್ದ ಹಮ್ಮಿಣಿಯಕಡೆಗೆ ಜನರ ನಿರೀಕ್ಷಣವಿದ್ದರೂ ಮಹಾಯೋಗಿ ಪಂಪಾಪತಿ ಶಿವಯೋಗಿಶ್ವರರು ನಗುಮುಖದಿಂದ ಜ್ಞಾನಕ್ಕೆ ಗೌರವ ವನ್ನು ನಿಡುತ್ತಿದ್ದರು. ತುಂಬಿದಗಲ್ಲ ವರ್ತುಲಾಕಾರದಮುಖ, ಜರತಾರಿಪೇಟಾ ಉದ್ದನ್ನ ಕಾವಿಯ ಶಾಟ ಗಳಲ್ಲಿ ಎದ್ದುಕಾಣುವ ತೇಜಃಪುಂಜ ನಯನಗಳ ಮದ್ಯೆತೋರುವ ಕೇದಿಗೆಹೊಡೆಯಂತೆ ಕಾಂತಿನೀಡುವ ನಾಶಿಕ ಆಸರಸದವನಕಡೆಗೆ ಸಕಲರ ದೃಷ್ಟಿಸ್ಪರ್ಶನವಾಗುತ್ತಿತ್ತು.

ಭೀಮಕವಿರಚಿಸಿದ ಬಸವಪುರಾಣದ ಮಂಗಲೋತ್ಸವದ ಮುಖ್ಯವ್ಯವಸ್ಥಾಪಕರಾಗಿದ್ದ ಶ್ರೀಮಂತ ಬಸವನಗೌಡರು ಕೇಳಿದರು-'ಅಪ್ಪಗಳೇ ಸಾಕೆ'? ಎಂದು ವಿನಯದಿಂದ

"ಜ್ಞಾನದಬೆಲೆ ಇಷ್ಟೇನಾಗೌಡರೇ, ಜ್ಞಾನಕಾಗಿ ಜೀವನವನ್ನು ಹೊಸೆದು ಆಶಾದಬತ್ತಿಯಂತೆ ತಮ್ಮ ಬಾಳುವೆಯನ್ನು ಬೆಂದಿಸಿ ಸುವಾಸನೆಯನ್ನು ನೀಡುತ್ತಿರುವ ಈ ಪಂಡಿತರಿಗೆ ಇಷ್ಟುಹಣ ಎಷ್ಟರದು" ಎಂದು ಕೇಳಿದ ಆ ಯೋಗಿಗಳು ಯರನಾಳದ ಅವಿಮುಕ್ತ ಸುಕ್ಷೇತ್ರ ವಿರಕ್ತಮಠಾಧಿಪತಿಗಳು.

೧೮೭೩ನೇ ವರುಷದಲ್ಲಿ ಶುಭಮಾಸದಲ್ಲಿ ಒಂದು ಒಳ್ಳೆಯವಂಶದಲ್ಲಿ ಹುಟ್ಟಿದ ಆ ಯೋಗಿಗಳಿಗೆ ಲೌಕಿಕವಾಗಿ ತಂದೆ ಶಂಕರಾಚಾರ್ಯ ತಾಯಿ ನೀಲಾಂಬೆ, ಚಿಕ್ಕವಯಸ್ಸಿನಲ್ಲಿಯೇ ಒಳ್ಳೆಯ ಶರೀರವನ್ನು ಪಡೆದಂತೆ ಒಳ್ಳೆಯಗುಣ, ವಿದ್ಯೆಗಳನ್ನು ಪಡೆದ ಆತ ತಾಯಿತಂದೆಗಳಿಗೆ ಒಬ್ಬ ತಂಗಿಯೊಡನೆ ಎರಡು ಮಕ್ಕಳೆನಿಸಿದ್ದ.

ಕನ್ನಡ ಪ್ರಾಥಮಿಕ ಶಿಕ್ಷಣವನ್ನು ಒಳ್ಳೆಯರೀತಿಯಿಂದ ಉತ್ತೀರ್ಣನಾದ ಆತನಿಗೆ ಯೋಗ್ಯ ರೀತಿಯಲ್ಲಿ ಸಂಸ್ಕೃತ, ಮರಾಠಿ ಭಾಷೆಗಳ ಸಂಸ್ಕಾರದಲ್ಲಿ ಸುಸಂಸ್ಕೃತಿ ವ್ಯಕ್ತಿಯಾಗಿದ್ದ ಇಂತಹ ಈ ತರುಣನಿಗೆ ೧೭ನೇಯ ವಯಸ್ಸಿನಲ್ಲಿಯೇ ಮದುವೆಯನ್ನು ಮಾಡಿ, ಮುಂದಿನಬಾಳುವೆಯನ್ನು ಕಲ್ಲುಸಕ್ಕರೆಯಂತೆ ಸೇವಿಸಬೇಕೆಂದಿದ್ದ ಅವರಪಾಲಿಗೆ ಕೇವಲ ಕಲ್ಲಾಗಿಯೇ ಉಳಿಯಿತು.

ಹೆತ್ತವರಿಗೆ ವಿರಹಾಗ್ನಿಯನ್ನು ಹೊತ್ತಿಸಿದ ಈ ಯುವಕ ಯರನಾಳ ವಿರಕ್ತಮಠದ ಶ್ರೀ ಮುರಿಗೇಂದ್ರ ಸ್ವಾಮಿಗಳ ಕೃಪಾಚಂದ್ರ ಶಿಲೆಗೆ ಚಂದ್ರನಾಗಿ ಅವರ ಸೇವೆಗೆ ನಿಜವಾದ ಶಿಷ್ಯನಾದಂತೆ ಅವರ ಧಾರ್ಮಿಕ ಜೀವನದ ಉತ್ತರಾಧಿಕಾರಿಯಾಗಿ ನಿಂತ.

ಈ ಮಹಾಮಹಿಮಾಶಾಲಿಯೇ ಶ್ರೀ ಪಂಪಾಪತಿ ಶಿವಯೋಗಿಗಳು. ಶ್ರೀಗಳು ತೀರ ಚಿಕ್ಕ ವಯಸ್ಸಿನಲ್ಲಿಯೇ ಅಂದರೆ ೨೦ ನೇಯ ವರುಷದಲ್ಲಿ ಮಠಾಧಿಕಾರವನ್ನು ವಹಿಸಿದಾಗ ಅಂದಿನ ಸಾಮಾಜಿಕ ಶೈಕ್ಷಣಿಕ ಜೀವನವನ್ನು ಅರಿತು ಮಠದಲ್ಲಿಯೇ ಒಂದು ಶಾಲೆಯನ್ನು ತೆರೆದು ಸಮಾಜಕ್ಕೂ ಗುರುವಾದಂತೆ ಶಿಕ್ಷಣಕ್ಕೂ ಗುರುವಾಗಿನಿಂತರು. ಆದರೆ ಅಂದಿನ ಜೀವನದಲ್ಲಿ ನಿಜವಾದ ಶಿಕ್ಷಣದ ಬಗ್ಗೆ ಇದ್ದ ಹಂಬಲ ಜನತೆ ಅರಿಯಲಿಲ್ಲ. ಆದರೆ ಅವರು ಮಠದಿಂದ ಮರುದಿನವೇ ಮರವೆಯಿಂದ ಮರಳಿದರು.

ಶ್ರೀ ಶಿವಯೋಗಿಗಳು ತಮ್ಮ ಕಾಲದಲ್ಲಿ ಹೆಚ್ಚೇನು ಸಾಧಿಸದಿದ್ದರೂ ಜೀವನವನ್ನು ಸುಭದ್ರವಾಗಿಡುವದಕ್ಕೆ ಮುಂದೆ ಓರ್ವ ಸಮರ್ಥ ವ್ಯಕ್ತಿಯನ್ನು ನಿಲ್ಲಿಸಿದರು ಇವರೇ ಇಂದಿನ ಶ್ರೀ ಮ. ನಿ. ಪ್ರ. ಬಂಥನಾಳ ಶಿವಯೋಗಿಗಳು. ಶ್ರೀ ಶಿವಯೋಗಿಗಳಿಗೆ ತಮ್ಮ ಆತ್ಮಬಲವನ್ನಿತ್ತು ರಕ್ಷಿಸಿದರು. ಶ್ರೀ ಪಂಪಾಪತಿ ಶಿವಯೋಗಿಗಳು ಅವರನ್ನು ಚಿಕ್ಕವರಿದ್ದಾಗಲೆ ಅವರ ಭವಿಷ್ಯ ಜೀವನವನ್ನರಿತು ಜನರಿಗೆ ಬಿತ್ತರಿಸಿ, ತಮ್ಮ ಉಡಿಯಲ್ಲಿ ಹಿಡಿದುಕೊಂಡು ಮುಂಬರುವ ಜನಾಂಗಕ್ಕೆ ಮಾರ್ಗ ಜ್ಯೋತಿಯಾಗಲು ಸಿದ್ಧಪಡಿಸಿದ ಶಿವಯೋಗಿಗಳು ಸಮಾಜಕ್ಕೆ ಒಳ್ಳೆಯ ಗುರುಗಳಾಗಿದ್ದಾರೆ.

ಶ್ರೀಗಳು ಸಾಮಾಜಿಕ ಜೀವನದಲ್ಲಿ ಒಳ್ಳೆಯ ನುರಿತವರಾಗಿದ್ದರೂ ಅವರ ತಪಸ್ಸಿನಲ್ಲಿ ಒಂದು ಕಿದವರಲ್ಲ. ಅವರ ತಪಸ್ಸಿನ ಪ್ರಭಾವದಿಂದ ಆದ ಘಟನೆಗಳು ಮಾನವನ ಜೀವನದಲ್ಲಿ ಹಂತ ಹಂತಿಗೂ ಒಂದೊಂದು ಒಳ್ಳೆಯ ಪಾಠವನ್ನು ಕಲಿಸುವಂತಹದಾಗಿದೆ.

ಗಾಣಿಗ ಸಂಗಪ್ಪನೆಂಬವನೊಬ್ಬ ಭಕ್ತನು ಯರನಾಳ ಗ್ರಾಮದ ಮುಂದಿನ ಮಠದಲ್ಲಿಯ ಒಂದು ಪಾರಿವಾಳವನ್ನು ವಿನಾಕಾರಣವಾಗಿ ಪ್ರಾಣಹಿಂಸೆಯನ್ನು ಮಾಡುತ್ತಿದ್ದ. ಅವನನ್ನು ಬಿಡಿಸಿ ಅದಕ್ಕೆ ಪ್ರಾಣದಾನ ಮಾಡಬೇಕೆಂದು ಹವಣಿಸಿದರೂ ಸಂಗಪ್ಪನಿಂದ ಅದು ಮರಣಕ್ಕೀಡಾಯಿತು. ಶ್ರೀಗಳು ಆರ್ತಕೋಪಾವಿಷ್ಟದಿಂದ ಸಂಗಪ್ಪನ ವಂಶವು ವಿಚ್ಛಿನ್ನವಾಗಿಹೋಯಿತು. ಇದರಂತೆ ಶ್ರೀಗಳು ದಾಸೋಹದ ಮೇಲೆ ಒಲುಮೆ, ಸತ್ಯ ನಿರ್ವಂಚನ ಸ್ವಭಾವಗಳು ಇಂದಿಗೂ ಜನರ ಮುಖದಲ್ಲಿ ನುಗ್ಗಿ ಬರುತ್ತವೆ. ಅವರು ಅಲಗಿನ ಮಂಟಪದಲ್ಲಿ ಆರೋಹಣ ಮಾಡಿದ್ದಂತೂ ಮೈ ಜುಮ್ಮೆನ್ನುವದಲ್ಲದೆ ಅವರ ಯೋಗಶಕ್ತಿಯನ್ನು ಅಳೆಯಬಹುದಾಗಿದೆ. ಇವರಿಂದ ಮೂರನೆಯ ಹಿಂದಿನ ಪೀಠಾಧಿಪತಿಗಳಾದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಜೀವನವನ್ನು ನೆನಪಿಗೆತರುತ್ತದೆ.



ಶ್ರೀಗಳು ತಮ್ಮ ಜೀವನವನ್ನು ೩೬ ವರುಷದವರೆಗೆ ನಡೆಸುವಾಗ ಸಮಾಜದ ಬಗ್ಗೆ ಕಳಕಳಿ ತುಂಬಿತ್ತು. ಸರ್ವಧರ್ಮದೊಡನೆ ವೀರಶೈವ ಧರ್ಮವು ಹೊಂದಿಕೊಂಡು ಅದರ ಸಂದೇಶ ಸುಗಂಧವನ್ನು ನೀಡಬೇಕೆಂಬ ಇಚ್ಛೆ ತುಂಬಿತ್ತು. ಆದರೆ ಸಾವಿರದಾ ಒಂಬೈನೂರರ ಹನ್ನೆರಡನೆಯ ವರುಷದ ಮಾಹೆ ಜಾನೇವಾರಿಯ ಮೂರನೇಯ ದಿನದ ಮುಂಜಾನೆ ಹತ್ತುವರುಷದ ಚಿಕ್ಕಮಗು ಸಂಗನಬಸವಣ್ಣನನ್ನು (ಇಂದಿನ ಬಂಥನಾಳ ಶಿವಯೋಗಿಗಳು) ಮುಂದೆ ಕೂಡ್ರಿಸಿಕೊಂಡು ಸಮಾಜದ ಭಕ್ತಭಾಂದವರಿಗೆ ಆ ಮಗುವಿಗೆ ಮುಂದಿನ ಕಾಲಗತಿಯನ್ನು ತಿಳಿಸಿ, ತನ್ನ ಆತ್ಮಶಕ್ತಿ ನಿಜವಾಗಿ ಸಂಗನಬಸವಣ್ಣನನ್ನು ಕೂಡಿ ಕೆಲಸ ಮಾಡಿತೋರಿಸುತ್ತದೆ! ನೋಡಿ" ಎಂದು ಅಪ್ಪಣೆಯನ್ನಿತ್ತು ಘನಲಿಂಗದಲ್ಲಿ ಅಡಗಿದರು.

ಅಂದಿನಿಂದಲೂ ಇಂದಿನ ವರೆಗೆ ಶ್ರೀ ಪಂಪಾಪತಿ ಶಿವಯೋಗಿಗಳೊಡನೆ ಕೂಡಿದವರಿದ್ದಾರೆ ಆ ಯೋಗಿಯ ಇಚ್ಛೆ ಹಾಗೂ ಕಾರ್ಯಕ್ಕೆ ತಿರುಗಿದ ಸಂಗತಿಯ ಪರಿಣಾಮವನ್ನು ಬಹು ಭಕ್ತಿಯಿಂದ ಕಾಣುತ್ತಿದ್ದಾರೆ.

ಯಾರ ಹಂಬಲವು ಸಮಾಜಕ್ಕೆ ಕಲ್ಯಾಣ ಬಯಸುತ್ತಿತ್ತೋ, ಯಾರ ಜೀವನವು ಪಾವನಮಯವಾಗಿ ಜಗತ್ತಿನ ಸುಖಶಾಂತಿಗೆ ಪರಿತಪಿಸುತ್ತಿತ್ತೊ ಅಂತಹ ತಪಃ ಕಂಪಿನ ಪೆಂಪಿನಲ್ಲಿ ನಿಜವಾಗಿಯೂ ಮೆರೆಯುತ್ತಿದ್ದಾರೆ ಶ್ರೀ ಪಂಪಾಪತಿ ಶಿವಯೋಗಿಗಳು.

## ಪಂಚಾಂಗ

ಲೇ:- ಲೀಲಾವತಿ ಹೊಳೀಕಟ್ಟಿ, ನೈಂದರ್ಗಿ.

ಆಲಿಸಿರಿ ನೀವು ಶರಣರ ನುಡಿಯ ।
ಹೋಲಿಸಿರಿ ಅದಕೆ ನಿಮ್ಮಯ ನಡೆಯ ಽ ಽ ॥ಪ॥

ಪಂಚಾಂಗ ಎಂಬರ್ಥ ಅರಿಯದೆ ನೀವು ।
ಪಂಚ ಹೊತ್ತಿಗೆ ತಂದು ಪಂಚೆಂಬೋ ನಾಣ್ಯವಿಟ್ಟು ॥
ಪಾವನರಾಗುವೆವೆಂದು ಪೇಳುವ ಮನುಜರೆ ॥೧॥

ಪರಧನ, ಪರಸತಿ, ಪರಭೂಮಿ, ಪರದೈವ, ।
ಪರಹಿಂಸೆಗಳೆಂಬ ಪಂಚ ಆಸೆಗಳನ್ನು ॥
ಅಳಿಯುವದೆ ಽಽ ಪಂಚಾಂಗವು ॥೨॥

ಪಂಚಾಂಗವೆಂಬುದು ಬೇರೊಂದಿರದೆ ।
ಪಂಚ ಅಂಗಗಳಿಂದ ಕೂಡಿರುವುದೇ ಅದು ॥
ಪಂಚಾಂಗವೆಂದು ಪ್ರಸಿದ್ಧಿ ಪಡೆದಿರುವುದು ॥೩॥

ಜೋತಿಷ್ಯ ಎಂಬುದು ಜೀವ ಕಂಟಕವೆಂದು ।
ಜ್ಯೋತಿ ಪರಮಜ್ಯೋತಿ ಬಸವಾದಿ ಪ್ರಮಥರು ॥
ಪೇಳಿದ ನುಡಿಗಳ ಪಾಲಿಸಿರಿ ನೀವು ॥೪॥

ಲಾಲಿಸಿರಿ ನೀವು ಶರಣರ ನುಡಿವ ।
ಹೋಲಿಸಿರಿ ಅದಕ್ಕಾ ನಿಮ್ಮಯ ನಡೆಯ ಽ ಽ ॥

## ವಕ್ತೃತ್ವ

ಲೇಖಕರು:—ಮ. ಮಲ್ಲಪ್ಪ ಜ್ಞಾನಮಂದಿರ,
ಹಲಗೂರು.

ನಮ್ಮ ಕೆಲಸದ ಜಯಾಪಜಯಗಳು ನಮ್ಮ ಮಾತನ್ನೇ ಅವಲಂಬಿಸಿಕೊಂಡಿರುತ್ತವೆ. ಮಾತು ಮಾನವನ ಉಸಿರು, ಜೀವನದ ಜೀವಾಳ, ಜನತೆಯ ಜೀವ, ಸಭ್ಯತೆಯ ಸ್ವರ್ಣ ಮಕುಟ, ಸಿದ್ಧಿಯ ಪಂಚಾಂಗ.

ಮಾತಿನಿಂ ನಗೆನುಡಿಯು ಮಾತಿನಿಂ ಹಗೆ ಕೊಲೆಯು ।
ಮಾತಿನಿಂ ಸರ್ವಸಂಪದವು ಲೋಕಕ್ಕೆ ।
ಮಾತೆ ಮಾಣಿಕವು ಸರ್ವಜ್ಞ ॥ —ಸರ್ವಜ್ಞ.

ಮಾತಿನೊಳಗಣ ಮಾತು ಜ್ಞಾನಿಯ ಮಾತೆ ಮಾಣಿಕವೆನಿಸುದು ।
ಮಾತು ಪರರೊಳ್ ಬಿಚ್ಚುವಜ್ಞರ ಮಾತು ತೂತೆಂದೆನಿಸುದು ।
ಮಾತು ಹೃದಯದೊಳಗಡಗಲಾತ್ಮ ಜ್ಯೋತಿ ತನ್ನೊಳು ಪೊಳೆವುದು ।
ಮಾತ ಗುರುಮುಖದಿಂದ ತಿಳಿಯೆ ಖ್ಯಾತಿ ಮುಕ್ತಿಯುಲಭಿಸುದು ॥

—ಕೈವಲ್ಯ ನವನೀತಿ

ಮಾತು ತನ್ನ ಪ್ರಗತಿಯನ್ನು ತೋರಿಸುತ್ತ ತನ್ನ ಪರಮಸೀಮೆಯನ್ನು ಮುಟ್ಟುವುದಾದರೆ ಮಾತುಗನು ತನ್ನೊಳಗೆ ಪ್ರಗತಿಹೊಂದಬೇಕು, ಪರಿಣತಪ್ರಜ್ಞನಾಗಬೇಕು - ಮಾತೆಂಬುದು ಜ್ಯೋತಿರ್ಲಿಂಗ, ಮಾತರಿತವ ಮಾಣಿಕ್ಯತಂದ, ಮಾತರಿಯದವ ಜಗಳವತಂದ. ಇದು ಬಹಳ ಬೆಲೆಯಿರುವ ನಾಣ್ಣುಡಿಯು. ವಾಕ್ಶಕ್ತಿಯ ಪ್ರಭಾವವು ಮಹತ್ಪರಿಣಾಮಕಾರಿಯಾಗಿದೆ.

" ಭಾವನಾಪರವಶರಾಗಿ ಮಾತನಾಡುವುದು ಎಂದರೆ ವಿಚಾರದ ಅಂಗಾಂಗಗಳೆಲ್ಲವನ್ನು ಮರೆತು ಬಿಡುವುದು ಭಾವಪರವಶನಾಗಿ, ವಾದದಿಂದ ಎದುರಿಸಿ, ಜಗಳ ಹೂಡಲು ಬಂದ ಎಂತಹ ವ್ಯಕ್ತಿಯೇ ಆಗಲಿ ಆತನ ಸಂಗಡ ಸಹನೆಯಿಂದ ವರ್ತಿಸಿದರೆ ಜಯವು ನಿಶ್ಚಯವು. " —ಜಾರ್ಜಬರ್ನಾಡ್‌ಷಾ.

ಪ್ರಸಂಚದಲ್ಲಿ ಚಮತ್ಕಾರದಿಂದ ಮಾತನಾಡುವುದೂ ಕೂಡ ಶ್ರೇಷ್ಠ ಕಲೆ. ಪ್ರೇಕ್ಷಕರ ಹೃದಯವನ್ನು ಹೊಕ್ಕು ಅವುಗಳನ್ನು ಅಲುಗಿಸಿ ನಮ್ಮಲ್ಲಿಯೇ ಅಳವಡಿಸಿ ಆನಂದತುಲ್ಯರನ್ನಾಗಿ ಮಾಡುವ ಅದ್ಭುತ ಚಮತ್ಕಾರವು ಜಾಣತನದಿಂದ ಮಾತನಾಡುವವನ ಶೈಲಿ ಇದೆ. ಅರಸಿಕರನ್ನು ರಸಿಕತೆಯಲ್ಲಿ ತಲ್ಲೀನರಾಗುವಂತೆ ಮಾಡಬಲ್ಲ ಇಂದ್ರಜಾಲವೂ ಸಹ ಆತನಲ್ಲಿ ಅಡಗಿರುತ್ತದೆ ಪ್ರಪಂಚ ಸಮಾಜದಲ್ಲಿ ಗಣ್ಯಸ್ಥಾನವನ್ನು ಅಪೇಕ್ಷಿಸುವಾತನು ಮಾತಿನ ಕಲಾರಹಸ್ಯವನ್ನು ಅರಿತಿರಬೇಕು. ಮಾತುಬಲ್ಲವನಿಗೆ ಜಗಳವಿಲ್ಲ, ಊಟಬಲ್ಲವನಿಗೆ ರೋಗವಿಲ್ಲ ಎಂಬುದೇ ಮಾತಿನ ಮಹತ್ವದ ಕುರುಹಾಗಿದೆ. ಮಾನವನ ಬಾಳು ಒಳ್ಳೆಯ ಮಾತುಗಳಿಂದ ಶಾಂತಿಯ ವಾತಾವರಣವನ್ನು ಪಡೆಯುತ್ತದೆ. ಮೃದುವಾದ

ಮಾತು ಮನುಜನ ಕಾಠಿಣ್ಯವನ್ನು ಕರಗಿಸಿ ನಯವನ್ನಾಗಿ ಮಾಡಿ ನವನೀತದಂತೆ ಕರಗಿಸಬಲ್ಲದು, ಮೃದುವಚನವೇ ಸಕಲ ಜಪತಪಂಗಳಯ್ಯಾ. ಸದಾಶಿವನ ಒಲುಮೆಯಯ್ಯ '' ಎಂದು ಬಸವಣ್ಣನವರು ಈ ಕಾರಣದಿಂದಲೇ ನುಡಿದಿದ್ದಾರೆ. ಪ್ರತಿಯೊಬ್ಬರೂ ಒಳ್ಳೆಯ ಮಾತುಗಳನ್ನು ಬಳಸುವಂತಾಗಬೇಕು. ಮಾತಿನ ಚಮತ್ಕಾರವು ಪುಣ್ಯ ವಿಶೇಷವೇ ಸರಿಯು. ಮಾತಿನ ಸದ್ವಿನಿಯೋಗದಿಂದಲೇ ಸಕಲ ಸಾರ ಸಿದ್ಧಿಯು. ಮಾತಿಗೆಮಾತು ಮಥಿಸಿ ಏಧಿಬಂದು ಆತುಕೊಳ್ಳುವಂತೆ ಎಚ್ಚರಗೊಂಡು ನುಡಿಯಬೇಕು. ಸಟೆ, ಠಕ್ಕು, ಮೋಸ, ಚಾಡಿ ಇತ್ಯಾದಿಗಳನ್ನು ನುಡಿಯದೆ ಒಳ್ಳೆಯದನೇ ಮಾತನಾಡಬೇಕು. ರೀತಿ ನೀತಿಯನ್ನು ತಿಳಿದು ಮಾತನಾಡುವುದು ಶ್ರೇಯಸ್ಕರ ಅಲ್ಲಮಪ್ರಭುದೇವರು "ಮಾತೆಂಬುದು ಜ್ಯೋತಿರ್ಲಿಂಗ" ಎಂದಿದ್ದಾರೆ. ಮಾತಿನ ರೀತಿನೀತಿಯ ವೈಪುಲ್ಯಕ್ಕೆ ವೈಖರಿಯೆಂದು ಹೆಸರು. ಹಿರಿದಾದ ಬಲವನ್ನು ಬೀರುವ ಶಕ್ತಿಯು ಮಾತಿಗೆ ಇದೆ

ನುಡಿದರೆ ಮುತ್ತಿನ ಹಾರದಂತಿರಬೇಕು.
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು.
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು.
ನುಡಿದರೆ ಕೂಡಲ ಸಂಗಮದೇವನ್ನೈ ಎಂದು ಅಪ್ಪಿ
ಕೊಳ್ಳುವಂತಿರಬೇಕು. —ಬಸವೇಶ್ವರ.

ಕೇಳುವರ ಚಿತ್ತದಲ್ಲಿ ಚೆನ್ನಾಗಿ ಬಿಂಬಿಸುವಂತೆ ಮಾತನಾಡುವ ಶಕ್ತಿಗೆ ವಕ್ತೃತ್ವವೆಂದು ಹೆಸರು ಶಬ್ದವೈಖರಿಯ ವಿವರಣೆಯೇ ವಕ್ತೃತ್ವವು. ಇದೂ ಸಹ ಒಂದು ಕಲೆಯು. ಆನಂದದ ಸಲೆನೆಲೆಯು ಹೃದಯ. ಮನುಜನ ಆನಂದಭಾವವೇ ಕಲೆಯಾಗಲ್ಪಡುವುದರಿಂದ ವಕ್ತೃತ್ವ ಕಲೆಗೆ ಸಲೆನೆಲೆಯು ಹೃದಯವು. ಹೃದಯವೆ ಅಂತರಾಳದಿಂದ ಬೆಳೆದುಬಂದ ಮಾತೇ ಸಬಲವೂ, ಸರಳವೂ, ಸುಲಲಿತವೂ, ಸುಬೋಧವೂ ಆಗುತ್ತದೆ ಮಾತಿನ ಮಹತ್ವವನ್ನರಿತು ಮಥನಗೈಯ್ಯುವುದರಲ್ಲಿ ಕಲಾ ಚಾತುರ್ಯವಿರುತ್ತದೆ. ವಕ್ತಾರನಿಗೆ ವಿವರಣೆ ಶಕ್ತಿಯೂ, ವಾದವೈಖರಿಯೂ ಅತ್ಯಾವಶ್ಯಕವಾಗಿರುತ್ತದೆ ವಿಷಯವನ್ನು ಚೆನ್ನಾಗಿ ಸಂಪಾದಿಸಿದ ತರುವಾಯ ಸಹಜವಾಗಿಯೂ, ನಿರ್ಯೋಚನೆಯಾಗಿಯೂ ಮಾತನಾಡುವುದೇ ವಕ್ತೃತ್ವದ ಪರಮರಹಸ್ಯವು. ಶಬ್ದವೈಖರಿಯೆಂಬ ಇಂದ್ರಜಾಲದಿಂದ ಮನುಜರನ್ನು ಮೈಮರೆಯಿಸಿ ಕೈವಶಮಾಡಿಕೊಳ್ಳುವ ಮಾಯಾಶಕ್ತಿಯಿದು. ನರನು ನುಡಿಯನ್ನು ಅಭ್ಯಾಸ ಮಾಡಿದುದರಿಂದ ಲಕ್ಷ್ಯವಾಗಿಟ್ಟುಕೊಂಡ ಹೆಗ್ಗುರಿಯಿದು. ಕವಿಗಳ ಕೈಯ್ಯಲ್ಲಿ ಕುಸುಮವಾಗಿಯೂ, ಕ್ರಾಂತಿಕಾರರ ಕೈಯ್ಯಲ್ಲಿ ಕತ್ತಿಯಾಗಿಯೂ ಮೆರೆದಿದೆ ಇದನ್ನು ಪ್ರೇಮಿಸದ ಪ್ರಾಣಿಯಿಲ್ಲವು. ಇದಕ್ಕೆ ಸರಿಸಮಾನವಾದದ್ದು ಜಗತ್ತಿನಲ್ಲಿ ಇನ್ನಿಲ್ಲವು.

ಮಾತು ಬಲ್ಲಾತಂಗೆ ಯಾತವದು ಸುರಿವಂತೆ ।
ಮಾತಾಡಲರಿಯದಾತಂಗೆ ಬರಿಯಾತ ।
ನೇತ್ತಾಡಿದಂತೆ ಸರ್ವಜ್ಞ ॥ —ಸರ್ವಜ್ಞ



ಈ ಶಕ್ತಿಯು ಪ್ರತಿಯೊಂದು ಉದ್ಯೋಗ ಮಾಡುವವರಲ್ಲಿಯೂ ಇರುತ್ತದೆ. ರಾಜಸಭೆಯೊಳಗೆ ಮತ್ತು ನ್ಯಾಯಸ್ಥಾನದಲ್ಲಿ ಮಾತನಾಡುವವರಲ್ಲಿಯೂ, ಧರ್ಮಪೀಠದ ಮೇಲೆ ಕುಳಿತು ಉಪದೇಶ ಮಾಡುವ ಮಂದಿಯಲ್ಲಿಯೂ, ಕೀರ್ತನಕಾರರಲ್ಲಿಯೂ, ನಾಟಕಕಾರರಲ್ಲಿಯೂ ಇದು ಅಡಗಿದೆ. ಮಧುರವಾದ ಶಬ್ದಗಳನ್ನೂ. ಪರಿಶುದ್ಧವಾದ ನುಡಿಗಳನ್ನೂ ಇದಕ್ಕೆ ಉಪಯೋಗಿಸುವುದು ಅವಶ್ಯಕವಾಗಿದೆ. ಕೇಳುವವರ ಮನಸ್ಸನ್ನು ಸೆಳೆಯುವುದಾಗಿರುತ್ತದೆ.


ಜನಸಮುದಾಯದಲ್ಲಿ ಭಾಷಣ ಕೊಡುವವರು ಶ್ರೋತೃಗಳನ್ನು ಸಂತೋಷಪಡಿಸಿ ಅವರ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವುದಕ್ಕೆ ಸಾಧನವು ವಕ್ತೃತ್ವವು ಆಗಿದೆ. ಉಪನ್ಯಾಸಕಾರನ ಹೃದಯಾಂತರಾಳದಿಂದ ಮಾತುಗಳು ಚಿಮ್ಮುತ್ತಿರಬೇಕು. ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸುತ್ತಿರಬೇಕು. ಉಗ್ರವಾದ ಮಾತುಗಳು ಹರಿತವಾದ ಆಯುಧಗಳಂತೆ ಆಗಾಗ್ಗೆ ಅಪಾಯಕಾರಿಯಾದಾವು! ಮಾತಿನ ಮೊಂಡರ ಮಾತು ಒಣ ಹರಟೆಯೇ ಹೊರತು ಮಾತಿನ ಕಲೆಯ ಕೈವಾಡವಲ್ಲ. ಆ ಬಗೆಯಲ್ಲಿ ಮಾತನಾಡಿ ಜನಗಳನ್ನು ಎಂದೆಂದಿಗೂ ಸಂತೋಷಪಡಿಸಲಾರರು. ಅಕಸ್ಮಾತ ಮಾತನಾಡಲು ತೊಡಗಿದರೆ ತಬ್ಬಿಬ್ಬಾಗಿ ಜನಗಳ ಅಪಹಾಸ್ಯಕ್ಕೆ ಪಾತ್ರವಾಗಬೇಕಾಗುತ್ತದೆ. ಮತ್ತೆ ಕೆಲವರು ಅಹಂಕಾರದಿಂದಲೋ ಏನೋ ಉತ್ತಮ ಉಪನ್ಯಾಸಕಾರರಂತೆ ಸಭೆಯ ಗದ್ದುಗೆಯನ್ನು ಏರುತ್ತಾರೆ. ಹಿಡಿದ ವಿಷಯವನ್ನು ಮರೆತು ಬೇರೆ ವಿಷಯಕ್ಕೆ ಪ್ರವೇಶಿಸಿ ಪೇಚಾಡುತ್ತಾರೆ. ಮತ್ತೆ ಕೆಲವರು ಮಾರ್ಗ ಹಿಡಿದಿದ್ದರೂ ಪ್ರೇಕ್ಷಕರಿಗೆ ರುಚಿಸುವಂತೆ ಮಾತನಾಡಲಾರರು. ಸರ್ವಸಾಮಾನ್ಯವಾಗಿ ಸ್ವಾಭಾವಿಕವಾಗಿಯೇ ವಕ್ತೃತ್ವ ಕಲೆಯು ಕೆಲವರಿಗೆ ಬಂದಿರುತ್ತದೆ. ಇನ್ನು ಕೆಲವರಿಗೆ ಅಭ್ಯಾಸಬಲದಿಂದ ಬಂದಿರುತ್ತದೆ. ಮತ್ತೆ ಕೆಲವರಿಗೆ ವ್ಯವಹಾರ ತಂತ್ರದಿಂದ ಬಂದಿರುತ್ತದೆ. ನುಡಿಯ ಮಾತು ಫಲಪ್ರದಾಯಕವಾಗಬೇಕಾದರೆ ಅಲ್ಲಿ ಭಾವದ ಹೊನಲು ಹೊರಳಿ ಬುದ್ಧಿಯ ಬೆಳಕು ಭಾವದ ತುಳುಕನ್ನು ತೂರಿಸಬೇಕು, ಭಾವದಿಂದ ವಿಷಯವನ್ನು ಕಲಿತು ಗ್ರಹಿಸುವಂತಾದರೆ ಇದಾಗುತ್ತದೆ. ಸುಪ್ರಸಿದ್ಧ ಮಾತುಗಾರರು ಅಥೆನ್ಸಿನ ಡೆಮಾಸ್ಥಿನೀಸ್. ಇಂಗ್ಲಂಡಿನ ಬರ್ಕ, ಭಾರತದ ಸುರೇಂದ್ರನಾಥ ಬ್ಯಾನರ್ಜಿ ತನ್ನ ವಾಕ್ಚಾತುರ್ಯದಿಂದ ಜನರಲ್ಲಿ ಭೀತಿಯ ಮೊಳಕೆಯನ್ನು ಬಿತ್ತಿ ಅವರನ್ನು ತನ್ನ ಕಡೆಗೆ ಸೀಸರನು ಸೆಳೆಯುತ್ತಿದ್ದನು. ಈ ಮಹಾಪ್ರತಿಭಾಶಾಲಿಗಳ ಮಾತುಗಾರಿಕೆಯಲ್ಲಿ ಭಾವ, ಭಾಷೆ, ಬುದ್ಧಿಯ ಕೂಡಲಸಂಗಮವಿದ್ದಿತು ಭಾವ ಶುದ್ಧವಾಗಿ ವಿಚಾರಿಸಿ ಭಾವಬದ್ಧವಾಗಿ ಅವುಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳುವ ಅಭ್ಯಾಸವು ಕರ್ನಾಟಕದ ಆಧ್ಯಾತ್ಮಿಕ ಸಂಸ್ಥೆಯಾದ ಅನುಭವಮಂಟಪದಲ್ಲಿ ರಾರಾಜಿಸುತ್ತಿತ್ತು.

ಸಂಗೀತವು ಗಾಯನ ಕಲೆಗೆ ಸಂಬಂಧಿಸಿದಂತೆಯೇ ವಕ್ತೃತ್ವವು ಸಂಭಾಷಣೆಗೆ ಸಂಬಂಧಿಸಿದೆ. ಮಾತನಾಡಲು ಮಾನವರನ್ನು ಯೋಗ್ಯರನ್ನಾಗಿರಿಸಿದಂತೆಯೇ ಇದು ವಿಚಾರವಂತರನ್ನಾಗಿ ಮಾಡುತ್ತದೆ. ಇವರ ಸಂಪೂರ್ಣ ಕರ್ತೃತ್ವವೂ, ಶಕ್ತಿಯೂ ಭಾಷಣದಲ್ಲಿ ಅಡಗಿರುತ್ತದೆ. ಇವರ ಆತ್ಮಸ್ವರೂಪವು ಸಂಭಾಷಣೆಯೂ ಮನುಜನ ಸರ್ವ ಶ್ರೇಷ್ಠ ಮತ್ತು ಅತ್ಯುತ್ತಮ ವ್ಯವಹಾರಗಳ ವಿಷಯ

ವಾಗಿ ಇದು ಸಿದ್ಧಿಯನ್ನು ಪಡೆದಿರುತ್ತದೆ ತತ್ಫಲವಾಗಿ ಒಲ್ಮೆಯು. ಈ ಒಲ್ಮೆಯು ನ್ಯಾಯಾನ್ಯಾಯಗಳ ಸಂಬಂಧವಾಗಿ ನಂಬಿಕೆಯನ್ನು ಪುಟ್ಟಿಸುತ್ತದೆ. ಜನಸಂದಣಿಯನ್ನು ಒಲಿಸುವಂತೆಯೇ ಬೇಡುವ ವಿಷಯದ ಮೇಲೆ ಸರ್ವರ ಎದುರಿಗೆ ನುಡಿಯಲು ವಕ್ತಾರನು ಶಕ್ತನು ಆದರೂ ತನ್ನಲ್ಲಿ ಶಕ್ತಿಯಿದ್ದುದರ ಫಲವಾಗಿ ವೈದ್ಯ, ಶಿಲ್ಪಿ ಮೊದಲಾದವರಿಗೆ ಬರತಕ್ಕ ಹೆಸರನು ಕದಿಯಬಾರದು. ಇನ್ನಿತರ ಶಕ್ತಿಗಳಂತೆಯೇ ವಕ್ತೃತ್ವವನ್ನು ಕೂಡ ಈತನು ನ್ಯಾಯ ರೀತಿಯಲ್ಲಿ ಉಪಯೋಗಿಸಬೇಕು. ಒಂದು ಸಮಯ ಅನ್ಯಾಯವಾಗಿ ತನ್ನ ಸಾಮರ್ಥ್ಯವನ್ನು ಕಲಾಪ್ರತಿಭೆಯನ್ನು ಉಪಯೋಗಿಸಿದುದು ಕಂಡುಬಂದರೆ ಒಳ್ಳೆಯ ಬುದ್ಧಿಯಿಂದ ಪಾಠ ಕಲಿತ ಗುರುವನ್ನು ಗಡೀಪಾರುಮಾಡಿದಂತಾಗುತ್ತದೆ ಕಲೆಯನ್ನು ಅಡ್ಡದಾರಿಗೆ ಎಳೆಯದೆ ಸತತವೂ ಸತ್ಯಾನ್ವೇಷಣದ ಹುರುಪಿನಿಂದ ವಕ್ತಾರನು ಸಾಗುತ್ತಿರಬೇಕು

ಕನ್ನಡವು ಗಿಳಿವಾತು ಆಗಿರುವಲ್ಲಿ ಕನ್ನಡಮಾತುಗಾರಿಕೆಯೂ ಕೂಡ ಅದಕ್ಕೆ ಅನುಗುಣವಾಗಿರಬೇಕು. ಕನ್ನಡ ಮಾತುಗಾರಿಕೆಯು ಕನ್ನಡ ರೂಪವಿರುವ ಬಗೆಯಾಗಿಲ್ಲವು. ಹದಬದೆಯ ಮಾತನ್ನು ಉಪಯೋಗಿಸುವದರಲ್ಲಿ ಮಾತಿನ ಮಾಧುರ್ಯವು ಮೊಳಗುವುದನ್ನು ಕಾಣುತ್ತೇವೆ ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು ಎಂಬ ಗಾದೆಯು ಮಾತಿನ ಬಳಕೆಯ ಬೆಂಡಿನಿಂದ ಜನಿಸಿದೆ. ಮಾತುಗಾರಿಕೆಗೆ ಮಿತಿಯಿರುವುದು ಸುಲಭ. ದೂರದಲ್ಲಿ ಮಿತಿಮೀರುವುದು ಬೇಗನೆ ಮಿತಿಮೀರಿದಾಗ ಕಾಣುವುದು ತೇಜಗೆಯ ಅಸಹ್ಯವು. ರೂಪಮಾತ್ರದಿಂದ ಮಾತುಗಾರಿಕೆಯ ಸ್ವಾರಸ್ಯವು ಪುಟ್ಟಲಾರದೆಂದಾಗ ರೂಪರಾಶಿಯಲ್ಲಿ ಶಬ್ದಸ್ವರೂಪವನ್ನಲ್ಲದೆ ಸ್ವರ ಮತ್ತು ರಾಗಗಳನ್ನು ಸೇರಿಸಬೇಕು. ಪ್ರಯೋಗವು ಪರಿಶುದ್ಧವಾಗಿದ್ದು ಸಂದರ್ಭಕ್ಕೆ ಒಪ್ಪುವಂತಿದ್ದರೆ ಮಾತಿನ ಮಾರ್ಯಾದೆ ಉಂಟು. ಯಾವ ಭಾಷೆಯಲ್ಲಾದರೂ ಸರಿಯೆ ಕ್ರಮಕ್ರಮವಾಗಿ ಹಲವು ಪ್ರಯೋಗಗಳು ಪಟುತ್ವಗೊಂಡು ರೂಢಿಗೊಳ್ಳುತ್ತವೆ. ನಮ್ಮ ನಮ್ಮ ಮನೋಗತವನ್ನು ತಿಳಿಯಪಡಿಸುವಾಗ ಪಟುತ್ವದಿಂದ ನಿರ್ವಹಿಸಲು ಈ ಪ್ರಯೋಗರೂಢಿಯು ಬಹಳ ಸಹಾಯಕಾರಿಯು. ಅರ್ಥವತ್ತಾದ ಶಬ್ದಗಳ ಜೋಡಣೆಯಲ್ಲಿ ವಿಶೇಷವನ್ನು ತೋರಿ ನಮ್ಮ ಮನದಲ್ಲಿದ್ದುದನ್ನು ಪ್ರಭಾವಪರಿಪುಲ್ಲಿತವಾಗಿ ಹೊರಗೆಡಬಹುದು. ಪರಭಾಷೆಯ ಅಭಿಪ್ರಾಯವನ್ನು ಕನ್ನಡದಲ್ಲಿ ಹೊರಗೆಡಹುವಾಗ ಪ್ರಯೋಗ ಶುದ್ಧಿಯನ್ನು ತಿಳಿದುಕೊಂಡು ಅದರಂತೆ ಆಚರಿಸಬೇಕು ಇಲ್ಲವೆ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ. ನಿನ್ನ ದಾರಿಯನ್ನು ಬಿಡಿಸಿಕೊಂಡು ಹೊರಡು ಎಂಬುವುದರ ಬದಲು ನಿನ್ನ ದಾರಿಯನ್ನು ಕತ್ತರಿಸಿಕೊಂಡು ಹೊರಡು ಎಂದು ಹೇಳಿದರೆ ಪ್ರಯೋಗಶುದ್ಧಿಯು ಚನ್ನಾಗಿ ತಿಳಿದಿದೆಯೇ ಎನ್ನಬೇಕಾಗುತ್ತದೆ. ಭಾಷಾ ಪ್ರಯೋಗ ರೂಢಿಯನ್ನು ತಪ್ಪಿ ಮಾತನಾಡಿದಾಗ ಮಾತಿಗೆ ಸೊಗಸಿಲ್ಲ ಪ್ರಯೋಗಾಭ್ಯಾಸವಿಲ್ಲದಂತೆ ಮಾತನಾಡಿದರೆ ಕನ್ನಡಕ್ಕೆ ಕಳೆಗಟ್ಟುತ್ತದೆ. ಮಾತಿನ ಜ್ಯೋತಿರ್ಲಿಂಗವು ಒಂದು ಉಚ್ಛ ಸಿದ್ಧಿಯು ಉಗ್ರ ತಪಸ್ಸು ಕೈಗೊಂಡು ಸಹಜ ನೇತ್ರದಿಂದ ನೋಡಿದಾಗ ಮಾತ್ರ ಇದರ ಅಂತರಾಳವು ಅರಿದಾಗುತ್ತದೆ. ಈ ಆದರ್ಶವನ್ನು ನಮ್ಮ ಕಣ್ಣ ಮುಂದಿಟ್ಟರೆ ನಮ್ಮ ಮಾತು ಸಾರ್ಥಕವಾಗುತ್ತದೆ. ಮಾತಿನ ಮಟ್ಟವು ಹೆಚ್ಚಿದಂತೆಲ್ಲ ಸಂಸ್ಕೃತಿಯ ಮಟ್ಟವು ಏರುತ್ತದೆ ಎಂಬ ಅಂಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಮಾತಿನ ಪರಮ ಸಿದ್ಧಿಯ ಮಂತ್ರಪದವಿಗೆ ಏರಿದ್ದನ್ನು ತಿಳಿಸುತ್ತದೆ.

ಯುಗಪ್ರವರ್ತಕ ಯೋಗಿ
ಶ್ರೀ ಬಂಥನಾಳ ಶಿವಯೋಗಿಗಳವರು



ಶ್ರೀ ಶ್ರೀ ೭೭೦ ಲಿಂಗಪ್ರತಿಷ್ಠಾಪನೆಯ ಸಮಾರಂಭದಲ್ಲಿ
ಶ್ರೀ ಬಂಥನಾಳ ಶಿವಯೋಗೀಶ್ವರರು
ಭಾಷಣ ಮಾಡುತ್ತಿರುವರು.

---

"ಮಾತೆಂಬುದು ಜೋತಿರ್ಲಿಂಗ, ಸ್ವಯವೆಂಬುದು ಪರತತ್ವ, ತಾಳೋಷ್ಟ ಸಂಪುಟವೆಂಬುದು
ನಾದಬಿಂದು ಕಳಾತೀತ, ಗುಹೇಶ್ವರನ ಶರಣರು ನುಡಿದು ಸೂತಕಗಳಲ್ಲಾ."

ಮಾತೆಂಬುದು ಜ್ಯೋತಿರ್ಲಿಂಗ ಎಂಬುದೇ ಅಲ್ಲ ಮತ್ತು ಪ್ರಭುವಿನ ದಿವ್ಯ ಸೂತ್ರ ಪರಮೇಶ್ವರನು ಜ್ಯೋತಿಸ್ವರೂಪನೆಂದು ಅನುಭಾವಿಗಳ ಅಭಿಪ್ರಾಯ, ಮಾತು ಎಂಬುದು ಜ್ಯೋತಿರೂಪವಾದ ಲಿಂಗ ಎಂದರೆ ಈಶ್ವರನು. ಬೆಳಕಿನ ರೂಪದಲ್ಲಿದ್ದ ದೇವರೇ ಮಾತು. ಮಾನವ ಜೀವಿಗೆ ಆತ್ಮ ಅಭಿವ್ಯಕ್ತಿಗೆ ಸಿಕ್ಕಿದ ಸಾಧನ ಮಾತಿನ ಪರಿಣತಿ. ತನಗೆ ತೊಡರಿಕೊಂಡ ಮಾಯೆಯಲತೆಯನ್ನು ಕಿತ್ತೊಗೆದು ನಿರ್ಮೋಹಿಯಾಗಿ ಆತ್ಮವು ಆನಂದಮಯವಾಗಬೇಕು. ಮಾತಿಗೂ ಜ್ಯೋತಿರ್ಲಿಂಗಕ್ಕೂ ಆಗ ಅಭೇದವಾಗುತ್ತದೆ. ಮಾತಿಂದ ಬರ್ಕು ಭವಭಾರಘೋರ ಎಂದು ಬಸವಣ್ಣನವರು ನುಡಿದಿರುವುದು ನ್ಯಾಯವೇ ಆಗಿದೆ. ರೂಢಿಯಮಾತು ಕೆಡದೆ ಉಳಿದರೆ ಸಂಸಾರ ಭಾರವಾಗುತ್ತದೆ, ಘೋರವಾಗುತ್ತದೆ. ಆದಕಾರಣ ರೂಢಿಯ ಮಾತು ಕೆಟ್ಟರೆ ಮಾತ್ರ ಜ್ಞಾನಪ್ರಾಪ್ತಿಯಾಗುತ್ತದೆ. ಇದು ಆ ಮುಷ್ಮಿಕ ಸಾಧಕರ ಭಾವದಲ್ಲಿ ಬೆಳೆದು ಬಂದಿರುತ್ತದೆ. ಮಾತಿನ ಮರ್ಮವನ್ನು ಅರಿಯದೆ ಮಾತಿನ ಮಿತಿಮರ್ಯಾದೆಯನ್ನು ತಿಳಿಯದೆ ತಟ್ಟನೆ ಮಾತನಾಡುವವರು ತೊಂದರೆಗೆ ಸಿಲುಕುತ್ತಾರೆ. ಇದಕ್ಕೆ ಅವಕಾಶಕೊಡದೆ ಮಾತುಬಂದರೂ ಬರದಂತೆ ಕೆಲವು ಸಮಯದಲ್ಲಿ ಇಂಬೇಕಾಗುತ್ತದೆ. ಲೌಕಿಕರಿಗೆ ಮೆಚ್ಚಾಗದಿದ್ದರೆ ಪಾರಮಾರ್ಥಕರಿಗೆ ಪರಮ.

ಮನಸ್ಸಿಗೆ ವ್ಯವಸ್ಥೆ, ಸಂಸ್ಕರಣ, ನಿಗ್ರಹಗಳು ಬಂದರೇನೇ ಮಾತು ಪರಿಸ್ಪಷ್ಟವಾದ ಪುಟತ್ವವನ್ನು ಒಳಗೊಂಡಿರುತ್ತದೆ ಮಾತಿನ ಮಧ್ಯೆ ಮಧ್ಯೆ ಚೇಷ್ಟೆಯಿರಬಾರದು, ಅಭ್ಯಾಸ ಬಲದಿಂದ ಇದು ವಿಕಾರವಾಗಿ ಪರಿಣಮಿಸುತ್ತದೆ. ಇದು, ತತ್ರಾಪಿ, ಆದರೆ ಅಲ್ಲಿ ಅಸಪ್ರಮೊವಿಭಕ್ತಿ ಪ್ರತ್ಯಯ, ನೂನೂವೇ, ಅಂತಂತೆ, ತಂತಂ ಇತ್ಯಾದಿ ಪದಗಳನ್ನು ತನ್ನ ಯಾವುದೋ ಪಾರ್ಬಲ್ಯದಿಂದ ಉಪಯೋಗಿಸಿ ಸಭಿಕರಿಗೆ ಬೇಸರಗೊಳಿಸುವುದು ಈ ಚೇಷ್ಟೆಗೆ ನಿದರ್ಶನವಾಗಿದೆ. ವಿಶಾಲ ರಾಜ್ಯದಲ್ಲಿ ನುಗ್ಗಿನುಸುಳಿ ಅಲ್ಲಲ್ಲಿರುವ ಸೊಗಸುಸೊಂಪನ್ನೂ. ಬಿಂಕುಬಿನ್ನಾಣವನ್ನೂ, ವಿತರಣೆ ವಿಜೃಂಭಣೆಯನ್ನೂ ಚನ್ನಾಗಿ ಅರಿತುಕೊಂಡು ಸಮಯ ಸಂದರ್ಭಾನುಸಾರ ಅದನ್ನು ಹೊರಸೂಸುವ ಜಾಣ್ಮೆಯನ್ನೇ ಅಡಿಗಲ್ಲನ್ನಾಗಿ ಇರಿಸಿಕೊಂಡರೆ ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡದ ಕ್ಲಿಷ್ಟ್ಯತೆಯು

ನಿರಂತರ ಯತ್ನವು ಸಾಗಿದರೆ ಪ್ರತಿಯೊಬ್ಬನಿಗೂ ಮಾತುಗಾರಿಕೆಯು ಬಂದೇಬರುತ್ತದೆ. ಆದರೆ ಆದರಲ್ಲಿ ಚತುರತೆಯನ್ನು ಕೋರಲು ಬಲು ಜಾಗರೂಕತೆಯೂ, ಲಕ್ಷ್ಯವೂ ಬೇಕಾಗುತ್ತದೆ. ಕರ್ಣಕಠೋರವಾದ ಶಬ್ದಗಳನ್ನು ಉಪಯೋಗಿಸದೆ ಮಧುರವಾದ ಶಬ್ದಗಳನ್ನು ಉಪಯೋಗಿಸುವುದು. ವಿನಯದಿಂದ ಮಾತನಾಡುವುದು, ತಮ್ಮ ಮನೋಗತಗಳನ್ನು ವ್ಯಕ್ತಪಡಿಸುವುದು, ಇವುಗಳನ್ನು ಮಾತುಗಾರಿಕೆಯು ಅವಲಂಬಿಸಿ ಅವುಗಳಿಗೆ ಅನುಗುಣವಾಗಿ ಪ್ರತಿಬಿಂಬಿಸುತ್ತದೆ. ತಮ್ಮ ತಮ್ಮ ಮಾತುಗಾರಿಕೆಯ ಕೌಶಲ್ಯದ ಕುಸುರು ಕೆಲವು ವೇಳೆ ಮುಖಭಾವಗಳಲ್ಲಿಯೂ ವ್ಯಕ್ತವಾಗುತ್ತದೆ. ಮಾತುಗಾರಿಕೆಯನ್ನು ಯಥಾಯೋಗ್ಯವಾಗಿ ಸಂಪಾದಿಸಲು ತಮ್ಮ ವೇಳೆಯನ್ನು ಉಪಯೋಗಿಸುವುದು ಉಚಿತವಾಗಿದೆ. ಗ್ರೀಸ ದೇಶದ ಅಥೆನ್ಸ "ಪಟ್ಟಣದಲ್ಲಿ ಡೆಮಾಸ್ತನೀಸ್ ಎಂಬಾತನು ಸುಪ್ರಸಿದ್ಧ ವಾಗ್ಮಿಯು

ಚಿಕ್ಕಲಿಸದೆ ನಾಲ್ಕಾರು ಶಬಗಳನ್ನೂ ಕೂಡ ಮೊದಮೊದಲು ಮಾತನಾಡಲು ಈತನಿಗೆ ಬರುತ್ತಿರಲಿಲ್ಲ. ಈತನ ಧ್ವನಿಯೂ ಕೂಡ ಬಲು ಸಣ್ಣವಾಗಿತ್ತು; ಆದರೆ ದಿನವೂ ಯತ್ನಿಸಿ ತನ್ನ ನೈಸರ್ಗಿಕ ದೌರ್ಬಲ್ಯವನ್ನು ತಿಳಿದುಕೊಂಡನು. ದಿನವೂ ಊರನ್ನು ಬಿಟ್ಟು ದೂರದ ಬೆಟ್ಟಗುಡ್ಡಗಳ ನಿರ್ಜನವಾದ ಅರಣ್ಯದಲ್ಲಿ ನಿಂತು ಬಾಯಿಯಲ್ಲಿ ಸಣ್ಣಸಣ್ಣ ಹವಳನ್ನಿಟ್ಟುಕೊಂಡು ಬಹಳ ಹೊತ್ತು ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದುದರ ಫಲವಾಗಿಯೇ ತನ್ನ ದೌರ್ಬಲ್ಯವನ್ನು ದಹನಮಾಡಿಕೊಂಡನು. ಬರಬರುತ್ತ ಸಭೆಯಲ್ಲಿ ಸಮೂಹದಲ್ಲಿ ನಿಂತು ಮಾತನಾಡಲು ಪ್ರಾರಂಭಿಸಿದನು. ಈ ಅಸಾಧಾರಣ ಯತ್ನದಿಂದ ಮತ್ತು ಉತ್ತಮೋತ್ತಮವಾದ ಗ್ರಂಥಗಳ ವಾಚನದಿಂದ ಈತನು ಇಡೀ ಜಗತ್ತಿನಲ್ಲಿಯೇ ಸುಪ್ರಸಿದ್ಧ ವಾಗ್ಮಿಯಾದನು. ಗ್ರೀಕರ ತತ್ತ್ವಾಗ್ರೇಸರರಾದ ಸಾಕ್ರೇಟೀಸ್, ಪ್ಲೇಟೋ, ಜಾರ್ಜಿಯಸ್, ಪೋಲಸ್, ಈ ಶ್ರೇಷ್ಠ ವಾಗ್ಮಿಗಳು ಅಭ್ಯಾಸ ಆಚರಣೆಯಿಂದ ವೆಗ್ಗಳ ಆತ್ಮೀಯತೆಯನ್ನು ಪಡೆದರು. ಕವಿಗೆ ಕಲ್ಪನೆಯು ಎಂತು ಬೇಕೋ ಅಂತೆಯೇ ವಾಗ್ಮಿಗೆ ವಿದ್ವಾಂಸರ ಗ್ರಂಥಗಳನ್ನು ಹೆಚ್ಚಿಗೆ ಗಮನದಿಂದ ಓದು ರೂಢಿಯು ರಕ್ತಗತವಾಗಬೇಕು ಎಂದು ಲಾರ್ಡ್ ಚೆಸ್ಟರ್ ವೆಲ್ಲಲ್ಡ್ ಹೇಳಿರುವುದು ಎಲ್ಲರ ಗಮನಕ್ಕೆ ಬರಲಿ

ಶ್ರೀ ಬಂಥನಾಳ ಶಿವಯೋಗಿ ಸ್ವಾಮಿಜೀ ಸತ್ಕಾರ ಸಮಿತಿ ಕುರ್ಲಾ
ಇವರು
ಶ್ರೀ ಬಂಥನಾಳ ಶಿವಯೋಗಿಗಳಿಗೆ ಅರ್ಪಿಸಿದ

# ಬಿನ್ನವತ್ತಳೆ

ಮುಂಬಯಿ ಮಹಾನಗರಿಯಲ್ಲಿ ವಸಂತಾಗಮನದ ಹರ್ಷೋತ್ಸಾಹದ ಸಂಧಿಕಾಲದಲ್ಲಿ
ಪಾದಾರ್ಪಣ ಮಾಡಿರುವ ಪುಣ್ಯಕ್ಷೇತ್ರ ಬಂಥನಾಳದ
ಶ್ರೀ ಮನ್ನಿರಂಜನ ಪ್ರಣವಸ್ವರೂಪ

ಶ್ರೀ ಶ್ರೀ ಸಂಗನಬಸವ ಶಿವಯೋಗಿಗಳ

**ಅಡಿದಾವರೆಗಳಲ್ಲಿ ಕುರ್ಲಾ ವಿಭಾಗದ ಭಕ್ತಗಣದ ಪ್ರೇಮಾದರದ ಅನಂತ ಪ್ರಣಾಮಗಳು.**

**ಯತಿವರ್ಯರೆ,**

ಪುಣ್ಯ ಭೂಮಿ, ಕರ್ಮ ಭೂಮಿ ಎನ್ನಿಸಿ ಅನೇಕ ವಿಭೂತಿಗಳ ತಾಯ್ನಾಡಾದ ಕರ್ನಾಟಕ ಮಾತೆಯ ಕುಲಪುತ್ರರಾಗಿ ಧರ್ಮಮಾರ್ಗಕ್ಕೂ ಕರ್ಮಮಾರ್ಗಕ್ಕೂ ದಿವಟಿಗೆಯಂತಿರುವ ತಮ್ಮನ್ನು, ಭಕ್ತ ಜನರಾದ ನಾವೆಲ್ಲರೂ ಈ ಮಹಾನಗರಿಗೆ ಅತ್ಯಂತ ಭಕ್ತಿ ಪುರಸ್ಸರವಾಗಿ, ಸಂಭ್ರಮಪೂರ್ವಕವಾಗಿ ಸ್ವಾಗತಿಸುತ್ತೇವೆ. ತಮ್ಮೀ ಬರುವಿಕೆಯಿಂದ ನಮ್ಮೀ ಭೂಮಿ ಪಾವನವಾಗಿದೆ; ನಾವೆಲ್ಲರೂ ಪುನೀತರಾಗಿದ್ದೇವೆ. ಭಾರತದ ಆಚಾರ್ಯ-ಶ್ರೇಷ್ಠರೆನಿಸಿದ ಶಂಕರ, ರಾಮಾನುಜ, ಬಸವ, ಮಧ್ವ, ವಿದ್ಯಾರಣ್ಯರೇ ಮೊದಲಾದ ವಿಭೂತಿಗಳು, ಅಲ್ಲಮ, ಚೆನ್ನಬಸವ, ಅಕ್ಕಮಹಾದೇವಿ, ಕನಕ-ಪುರಂಧರ ವ್ಯಾಸರಾಯ ಸರ್ವಜ್ಞರೇ ಮೊದಲಾದ ದಾರ್ಶನಿಕರು ಕರ್ನಾಟಕಕ್ಕಷ್ಟೇ ಅಲ್ಲ, ಇಡೀ ಭಾರತದ ಜನಜೀವನದಲ್ಲೇ ಹೊಸದೃಷ್ಟಿ, ಹೊಸಕ್ರಾಂತಿಗಳನ್ನುಂಟು ಮಾಡಿ ಕರ್ನಾಟಕವು ಕಾರಣಪುರುಷರ ತವರುಮನೆಯೆನ್ನಿಸಿದರು. ಭಾರತವು ಪಾರತಂತ್ರ್ಯದಲ್ಲಿ ಮುಳುಗಿದಂದಿನಿಂದೀಚೆಗೆ ಅಂತಹ ಕಾರಣ ಪುರುಷರ ಅಭಾವವಾಗಿದೆ; ಜಗಜ್ಯೋತಿಗಳ ಜನ್ಮಭೂಮಿಯಾದ ಕರ್ನಾಟಕದಲ್ಲಿಯೇ ಇಂದು ಧಾರ್ಮಿಕ ಗ್ಲಾನಿ ಸಾಂಸ್ಕೃತಿಕ ಕತ್ತಲೆ ಮುಸುಕಿದೆ. ಇಂತಹ ಸಂಧಿಸಮಯದಲ್ಲಿ ಶಿವಶರಣರ ಗಂಡುಮೆಟ್ಟಾದ ವಿಜಯಪುರ ಜಿಲ್ಹೆಯಲ್ಲಿಯೇ ತಾವು ಅವತರಿಸಿ ಕರ್ಮಯೋಗದಲ್ಲಿ ನಿರತರಾಗಿ ಜನತೆಯನ್ನೂ ಕರ್ಮಯೋಗಿಗಳನ್ನಾಗಿಸಲು ಹೆಣಗುತ್ತ ಜನಜಾಗೃತಿಯ ಹೊಸಬೆಳಕನ್ನು ಹರವುತ್ತ ಒಂದು ಸಂವತ್ಸರ ಮಂಡಲವನ್ನು ಸುತ್ತಿ ಷಷ್ಟ್ಯಬ್ಧಿಯನ್ನು ಪೂರ್ತಿ ಮಾಡಿದ್ದೀರಿ. ತಮ್ಮ ಕಾರ್ಯ ವಿವಿಧಮುಖವಾಗಿ ಜನತೆಯಲ್ಲಿ ಹೊಸ ಚೈತನ್ಯವನ್ನುಂಟುಮಾಡಿದೆ. ಅಖಿಲಭಾರತ ವೀರಶೈವ ಮಹಾ ಸಭೆಯ ಅಧ್ಯಕ್ಷರಾಗಿ ವೀರಶೈವ ಸಮಾಜಕ್ಕೆ ಮಾರ್ಗದರ್ಶಕರಾಗಿ ಕರ್ನಾಟಕದ ಒಂದು ಬಹುಸಂಖ್ಯಾಕ ಸಮಾಜವನ್ನು ಚೇತರಿಸಲು ಅಖಂಡವಾಗಿ ಹೆಣಗಿದ್ದೀರಿ. ತಮ್ಮ ಲೋಕಕಲ್ಯಾಣ ಜನಿಕರಿಗೆಲ್ಲ

ಉಪಯೋಗವಾಗುವಂತೆ ವಿಶಾಲ ದೃಷ್ಟಿಯ ಸಮಾಜೋದ್ಧಾರವನ್ನೂ ಕೈಕೊಂಡು ನಮ್ಮ ನಾಡಿನ ಎಲ್ಲ ಸಮಾಜಗಳ ಹಾಗೂ ಎಲ್ಲ ಜನಾಂಗಗಳ ಪ್ರೇಮ ಭಕ್ತಿ ಹಾಗೂ ಆದರಗಳನ್ನು ಗಳಿಸಿದ್ದೀರಿ. ಹದಿನಾಲ್ಕು ವರುಷದ ಚಿಕ್ಕ ವಯಸ್ಸಿನಲ್ಲಿ ಸನ್ಯಾಸವನ್ನು ಅಪ್ಪಿಕೊಂಡ ತಾವು ನಾಲ್ವತ್ತಾರು ವರ್ಷಗಳ ವಸುಧೈವ ಕುಟುಂಬಕದ ವ್ರತವನ್ನು ಪಾಲಿಸಿದ್ದೀರಿ. ಈ ಶತಮಾನದ ಕರ್ನಾಟಕ ಆಧ್ಯಾತ್ಮಿಕ ಜೀವನದಲ್ಲಿ ಮುಖ್ಯತಃ ಶರಣಮಂಡಲವೆನ್ನಿಸುವ ಸೊನ್ನಲಿಗೆ, ವಿಜಾಪುರ, ಬಾಗೇವಾಡಿ ಭಾಗಗಳಲ್ಲಿ ತಮ್ಮ ಕರ್ಮಯೋಗದ ಪ್ರಭಾವ ವಿಶೇಷವಾಗಿದೆ. ಹುಬ್ಬಳ್ಳಿ, ನವಿಲಗುಂದ, ನಿಂಬಾಳ; ಲಚ್ಯಾಣ, ಯರನಾಳ ಹಾಗು ಬಂಥನಾಳಗಳ ಮಠಗಳು ಇದರ ನಿದರ್ಶನವಾಗಿವೆ. ೧೯೫೫ರಲ್ಲಿ ವಿಜಯಪುರದಲ್ಲಿ ತಾವು ನಡೆಯಿಸಿದ ೭೭೦ ಅಮರ ಗಣಗಳ ಮಹಾ ಪೂಜೋತ್ಸವವು ತಮ್ಮ ಲೋಕಕಲ್ಯಾಣದ ದೃಷ್ಟಿಯನ್ನು, ಕಾರ್ಯಕ್ಷಮತೆಯನ್ನು, ಸಂಯೋಜಕ ಶಕ್ತಿಯನ್ನು ನಾಡಿಗೆಲ್ಲ ಮನದಟ್ಟಾಗಿಸಿತು. ಯರನಾಳ-ಬಂಥನಾಳ ಮಠದ್ವಯದ ಹಿರಿದಾದ ಗುರುಪರಂಪರೆಯ ಪದ್ಧತಿಗೆ ತಮ್ಮ ಆ ಕಾರ್ಯ ಕಳಸವೆನ್ನಿಸಿತು.

ಅಧ್ಯಾತ್ಮಿಕ ಜಾಗೃತಿಗೆ ಅವಶ್ಯಕವಾದ ವಿದ್ಯೆ-ಶಿಕ್ಷಣಗಳ ಮಹತ್ವವನ್ನೂ ವಿದ್ಯಾಸಂಸ್ಥೆಗಳು ಆಧುನಿಕ ಯುಗದಲ್ಲಿ ಸಾಧಿಸುತ್ತಿರುವ ಸಮಾಜ ಸಮನ್ವಯದ ಪರಿಯನ್ನೂ ಅರಿತು ತಾವು ವಿಜಯಪುರದಲ್ಲಿ ಒಂದು ಮಹಾ ವಿದ್ಯಾಲಯವನ್ನೂ ಲಚ್ಯಾಣದಲ್ಲಿ ಹೈಸ್ಕೂಲು, ಟ್ರೇನಿಂಗ ಕಾಲೇಜುಗಳನ್ನೂ ಸ್ಥಾಪಿಸಿದ್ದೀರಿ. ಹರಕೆಯ ಪವಿತ್ರ ಯಾತ್ರೆಯೆಂದು ತಾವು ಕರ್ನಾಟಕವನ್ನೆಲ್ಲಾ ಸಂಚರಿಸಿ, ಕಾಯಕವೇ ಕೈಲಾಸವೆಂಬ ಮಂತ್ರದೀಕ್ಷೆಯನ್ನು ಕನ್ನಡಿಗರಿಗೆಲ್ಲಾ ಬಿತ್ತರಿಸಿದ್ದೀರಿ. ತಮ್ಮ ಯೋಗನಿಷ್ಠೆ ಅಪೂರ್ವವ್ಯಕ್ತಿತ್ವ ಹಾಗು ಕಾರ್ಯಪ್ರಿಯತೆಗಳಿಗೆ ಜನಮನವೆಲ್ಲ ಮೆಚ್ಚಿದೆ. ಜಾತೀಯತೆಯ ಸಂಕುಚಿತ ಭಾವನೆಗಳು ಸಮಾಜವನ್ನೆಲ್ಲ ತುಕ್ಕಿಮುತ್ತುತ್ತಿರುವ ಈ ಕಾಲದಲ್ಲಿ ತಾವು ವಿಶಾಲದಾರ್ಶನಿಕತೆಯ ಧ್ವಜವನ್ನೂ ಎತ್ತಿ ಹಿಡಿದಿದ್ದೀರಿ. ಅದಕ್ಕಾಗಿ ಜಾತಿಮತಾತೀತವಾಗಿ ಕನ್ನಡ ಜನತೆಯು ತಮ್ಮೆಡೆಗೆ ಹೊಸದೃಷ್ಟಿಗಾಗಿ ಹಾರೈಸಿ ಬರುತ್ತಿದೆ. ತಮ್ಮ ಪ್ರಚ್ಛನ್ನ ವೈರಾಗ್ಯ ದೀಪ್ತಿ, ವಿಶಾಲವಾದ ಅಧ್ಯಾತ್ಮಿಕ ಹಿನ್ನೆಲೆಯ ಸಾಂಸ್ಕೃತಿಕ ದೃಷ್ಟಿ, ಧರ್ಮ ಕರ್ಮಯೋಗದ ಸಮನ್ವಯಗಳು, ಅದಕ್ಕೂ ಹೆಚ್ಚಾಗಿ ಕರ್ನಾಟಕ ಮಾತೆಯ ಸುಪುತ್ರನಿಗೆ ಅತ್ಯಂತವಾಗಿ ಸಲ್ಲುವಂತೆ ತಾವು ಗಳಿಸಿರುವ ಕಾರ್ಯಸಿದ್ಧಿಯು ನಮ್ಮನ್ನೆಲ್ಲಾ ತಮ್ಮೆಡೆಗೆ ಬಲವಾಗಿ ಸೆಳೆಯುತ್ತಿವೆ. ನಾಲ್ವತ್ತು ವರುಷ ಪೀಠಾರೂಢರಾಗಿ ತಾವು ಮಾಡಿರುವ ಈ ಮಹತ್ಕಾರ್ಯಗಳಿಂದ ಬಂಥನಾಳ ಗದ್ದುಗೆಯ ಪರಂಪರೆ ಇಂದು ವಿಶೇಷ ಮೇಲ್ಮೆ ಪಡೆದಿದೆ. ಸನ್ಯಾಸಬದ್ಧರಾಗಿಯೂ ಲೋಕಕಲ್ಯಾಣಬದ್ಧರೂ ಆಗಿರುವ ತಮ್ಮಲ್ಲಿ 'ಅಭಿನವ ವಿದ್ಯಾರಣ್ಯ' ವಿನೂತನ ಕಾರಣ ಪುರುಷ"ನೊಬ್ಬ ಒಡಮೂಡಲಿದ್ದಾನೆಂಬಾಸೆಯಿಂದ ನಾವೆಲ್ಲ ತಮ್ಮ ಮಾರ್ಗದರ್ಶಕತೆಗಾಗಿ ಕಾಯ್ದಿದ್ದೇವೆ

ಆ ಹಾರೈಕೆಯಿಂದಲೇ ನಾವು ಈ ಬಿನ್ನವತ್ತಳಿಕೆಯನ್ನು ತಮ್ಮ ಸನ್ನಿಧಾನಕ್ಕೆ ಅರ್ಪಿಸುತ್ತಿದ್ದೇವೆ. ಪ್ರತಿಯೊಂದು ಬಿನ್ನವತ್ತಳಿಕೆಯಲ್ಲೂ ಬೇಡಿಕೆಗಳಿರುತ್ತವೆ ಧಾರ್ಮಿಕ ತೇಜವಳಿದು ಸಾಂಸ್ಕೃತಿಕ ಗ್ಲಾನಿ ಮುಸುಕಿ ಆಧ್ಯಾತ್ಮಿಕ ದೃಷ್ಟಿ ಮುಸಳಿಸಿ ನಿಷ್ಕ್ರಿಯರೂ ಕ್ಲೈಬ್ಬ-ಹೃದಯ ದೌರ್ಬಲ್ಯ



ಗಳಿಂದ ಆವೃತರೂ ಆಗಿರುವ ಕರ್ನಾಟಕ ಜನತೆಗೆ ತಮ್ಮಿಂದಾಗಿ ಹೊಸ ಚೈತನ್ಯವುಂಟಾಗಲಿ, ಅವರು ಮತ್ತೊಮ್ಮೆ ಹೊಸ ಹುಟ್ಟು ತಾಳಿ ಭಾರತದ ನಾಯಕರಾಗುವಂತಾಗಲಿ ಎಂಬುದೇ ತಮ್ಮಡಿಗಳಲ್ಲಿ ನಮ್ಮ ಹಿರಿ ಬೇಡಿಕೆ. ಕರ್ನಾಟಕವು ತನ್ನ ಕಾರಣಪುರುಷನನ್ನು ಮತ್ತೆ ಕಂಡುಕೊಳ್ಳಲಿ ಎಂಬುದೇ ನಮ್ಮ ಹಿರಿಯಾಸೆ. ಇದು ತಮ್ಮಲ್ಲಿ ನಾವು ಸಲ್ಲಿಸುವ ಬಿನ್ನವತ್ತಳಿಕೆ; ನಮಗಿದು ಮಾನಪತ್ರ; ತಮಗೆ ಮಾನಪತ್ರ ಸಲ್ಲಿಸುವ ಯೋಗ್ಯತೆ ನಮಗಿಲ್ಲ; ತಮ್ಮನ್ನು ಗೌರವಿಸಿ ತಮ್ಮ ಹರಿಕೆಗಳನ್ನು ಪಡೆಯುವದೇ ನಮಗೆಲ್ಲಾ ಹಿರಿದಾದ ಮಾನಪತ್ರ.

ಇಂತು ಮುಂಬಯಿ ಕನ್ನಡಿಗರ ಪರವಾಗಿ, ಕುರ್ಲಾ ಸತ್ಕಾರ ಸಮಿತಿಯ ಪರವಾಗಿ, ಆಧ್ಯಾತ್ಮಿಕ ಮಾರ್ಗದರ್ಶಕತೆಗಾಗಿ ಕಾದಿರುವ ಎಲ್ಲ ಜನತೆಯ ಪರವಾಗಿ ವಿನಯ, ಭಕ್ತಿ ಪ್ರೇಮ ಆದರ, ಹಾಗೂ ವಿಧೇಯತೆಗಳ ಕುರುಹಾಗಿ ಈ ಬಿನ್ನವತ್ತಳಿಕಿಯನ್ನು ಸಲ್ಲಿಸುತ್ತಿರುವ,

ಕುರ್ಲಾ ಮುಂಬಯಿ,
೧೮೮೨, ಫಾಲ್ಗುಣ ಶುಕ್ಲ ತ್ರಯೋದಶಿ,
೧-೧-೧೯೬೨

ತಮ್ಮ ಆಜ್ಞಾಧಾರಕರಾದ
**ಶ್ರೀ ಬಂಥನಾಳ ಶಿವಯೋಗಿ ಸ್ವಾಮಿಜಿ**
ಸತ್ಕಾರ ಸಮಿತಿಯ ಸದಸ್ಯರು

266.4 — 9539

—॥ ಶ್ರೀ ಓಂ ನಮಃಶಿವಾಯ ॥—

ಶ್ರೀ ಶ್ರೀ ಶ್ರೀ ಮ. ಪ್ರ. ಸ್ವ. ಪರಮಪೂಜ್ಯ

## ಶ್ರೀ ಸಂಗನಬಸವ ಮಹಾಶಿವಯೋಗಿಗಳು ಬಂಥನಾಳ,

— ಇವರ ದಿವ್ಯ ಪಾದ ಪಂಕೇಜಗಳಲ್ಲಿ—

ಮುದ್ದೇಬಿಹಾಳ ಗ್ರಾಮದ ಸಮಸ್ತ ಸದ್ಭಕ್ತ ದೈವಮಂಡಳಿಯು ಭಕ್ತಿಪೂರ್ವಕವಾಗಿ ಸಮರ್ಪಿಸುವ

# ಬಿನ್ನವತ್ತಳೆ

**ಪರಮಪೂಜ್ಯ ಜಗದ್ವಂದ್ಯ ಮಹಾ ಶಿವಯೋಗಿಗಳೇ,**

ನಮ್ಮ ಆಮಂತ್ರಣದ ಕರೆಗೆ ಓಗೊಟ್ಟು ಇಲ್ಲಿಯವರೆಗೆ ಆಗಮಿಸಿ, ೩೦ ದಿವಸಗಳ ಪರ್ಯಂತ ಶಿವಸಭೆಯಲ್ಲಿ ಶಿವನ ಸಾಕ್ಷಾತ್ ಸ್ವರೂಪವನ್ನು ಹೊಂದಿ, ಶಿವಾನುಭವವನ್ನು ಶಿವಶರಣರ ಆಳವಾದ ತತ್ವಗಳ ಮಾಹಿತಿಯನ್ನೂ, ಶ್ರೇಷ್ಠತೆಯನ್ನೂ, ಅಧ್ಯಾತ್ಮದ ಅಪಾರವಾದ ಅನುಭವವನ್ನೂ, ಪಂಡಿತರಿಂದ ಪಾಮರರಿಗೆ ತಿಳಿಯುವವಂತೆ ಬೋಧಿಸಿ ಉಪದೇಶಿಸಿ ನಮೆಲ್ಲರನ್ನು ಪಾವನಗೊಳಿಸಿದ್ದು ತಮ್ಮ ದಿವ್ಯಶಕ್ತಿಯನ್ನೂ, ತಪಸ್ಸಿನ ಮಹಿಮೆಯನ್ನೂ, ಆಗಾಧವಾದ ಸಂಗ್ರಹಕ ಶಕ್ತಿಯನ್ನೂ ಕಂಡು, ನೋಡಿ, ತಿಳಿದು ನಾವೆಲ್ಲರೂ ಮೆಚ್ಚಿದ್ದೇವೆ. ತಮ್ಮ ಆಗಮನ ದಿವ್ಯ ಅನುಭವಾಮೃತ ಹಾಗೂ ತಪಸ್ಸಿನ ಲೀಲೆ ನಮಗೆಲ್ಲ ನವಚೇತನವನ್ನು ಕೊಟ್ಟಿದೆ. ಕಳೆದು ಹೋದ ಹುಮ್ಮಸ, ಉತ್ಸಾಹಗಳನ್ನು ತಮ್ಮ ಅಮೋಘವಾದ ಅಮೃತವಾಣಿಯಿಂದ ಪುನಃ ಪಡೆದಿದ್ದೇವೆ ಎಂದು ಹೇಳುತ್ತೇವೆ.

**ಸರ್ವಧರ್ಮ ಸಮನ್ವಯಾಚಾರ್ಯರೆ,**

ವೈರಾಗ್ಯ, ಬ್ರಹ್ಮಚರ್ಯ, ತಪಸ್ಸು, ಸೇವೆಗಳೇ ನವಸನ್ಯಾಸದ ಧ್ಯೇಯ ಧೋರಣೆಗಳು ಎಂದು ಡಂಗುರ ಹೊಡೆದ ಮಹಾವಿಭೂತಿ ಜೀವನ ಸಿದ್ಧಿ ಹೊಂದಿದ ಮಹಾವ್ಯಕ್ತಿ ಸ್ವಾಮಿ ವಿವೇಕಾನಂದರು ವಿಶ್ವಾತ್ಮದಲ್ಲಿ ಲೀನ ಹೊಂದಿದ ಸಮಯದಲ್ಲಿ ತಾವು ಇಳೆಗೆ ವೀರಶೈವ ಧರ್ಮದ ಉನ್ನತಿಗಾಗಿ, ಸಮಾಜದ ಐಕ್ಯತೆಗಾಗಿ, ವಾಙ್ಮಯದ ಅಭಿವೃದ್ಧಿಗಾಗಿ, ಜನ್ಮ ತಾಳಿದ್ದೀರಿ. ಶಿವನ ಸಾಕ್ಷಾತ್ ಶಕ್ತಿಯನ್ನೂ, ಮಹಿಮೆಯನ್ನು ಶಿವಶರಣರು ಕೈಕೊಂಡಿದ್ದ ಪ್ರತಿಜ್ಞೆಯನ್ನೂ, ಪೂರ್ಣಮಾಡಿ, ದ್ವೇಷ, ಅಸೂಯೆ,ಅನಾಚಾರ ಪಂಗಡಗಳ ನಿರ್ಮೂಲನ ಮಾಡಿ ಸುಖ ಶಾಂತಿಗಳನ್ನು ನೆಲಿಸಿ, ವಿವೇಕವನ್ನು ತಂದುಕೊಟ್ಟು, ನಾಡನ್ನು ಉದ್ಧರಿಸುವ ಹಿರಿದಾದ ಉದಾತ್ತವಾದ ಉದ್ದೇಶವನ್ನು ತಾವು ಹೊತ್ತುಕೊಂಡು ಬಂದು ಹಿಡಿದ ಮಹತ್ತರವಾದ ಕಾರ್ಯದಲ್ಲಿ ಈಗಾಗಲೇ ಸಾಕಷ್ಟು ಸಿದ್ಧಿಯನ್ನು ಜಯಸಿದ್ದೀರಿ. ಎಂದು ಹೇಳಲು ನಮಗೆ ತುಂಬಾ ಹೆಮ್ಮೆಯಾಗುತ್ತದೆ. ಧಾರ್ಮಿಕ, ಅನೈಕ್ಯತೆ, ಜಾತಿ ಪಂಗಡಗಳು, ಇವೇ ಇಂದು ದೇಶಕ್ಕೆ ಹಿಡಿದಿರುವ ಜಾಡ್ಯಗಳು. ಇಂಥ ಸಾಮಾಜಿಕ ದೋಷಪರಿಹಾರಕ್ಕಾಗಿ ಅನೇಕ ಸರ್ವಧರ್ಮ ಪರಿಷತ್ತುಗಳನ್ನು, ಸಭೆಗಳನ್ನು ಸೇರಿಸಿ ಧರ್ಮ ಜಾತಿಗಳಲ್ಲಿಯ ಅಂತರವನ್ನು ತಿಳಿಸಿ ನಮಗೆಲ್ಲ ಮಾರ್ಗದರ್ಶನಮಾಡಿದ್ದೀರಿ.

ಗ್ರಂಥಾಲಯ